ಪುಸ್ತಕ ಪ್ರಪಂಚ

ಸಂಪುಟ ೫೧ ಡಿಸೆಂಬರ್ ೨೦೦೦ ಸಂಚಿಕೆ ೨



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖ ಚಿತ್ರ: ಡಾ. ರಾಜ್‌ಕುಮಾರ್

ಒಳಪುಟದ ಚಿತ್ರಗಳು: ಪ್ರೊ. ಎಸ್. ವಿ. ಪರಮೇಶ್ವರ ಭಟ್ಟ

ಡಾ. ಹಾ. ಮಾ. ನಾಯಕ

ಚಿತ್ರಗಳ ನೆರವು : ಆರ್ಕೇಶ್

PUSTAKA PRAPANCHA: Monthly

Published and printed by Karnataka State Adult Education Council,Mysore-6.
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ರಾಜ್ ಅಪಹರಣ, ವೀರಪ್ಪನ್ ಹಗರಣ

೨೦೦೦ ನೆಯ ಸಂವತ್ಸರದ ಜುಲೈ ೩೧ರಂದು ಭೀಮನಮಾವಾಸ್ಯೆ. ಅಂದು ಕರ್ನಾಟಕದ ಇತಿಹಾಸದಲ್ಲೊಂದು ದುರ್ದಿನ! ಕನ್ನಡಿಗರ ಕಣ್ಮಣಿ, ಕರ್ನಾಟಕದ ಸ್ಪರ್ಶಮಣಿ, ಚಿತ್ರಕಲಾರಂಗದ ದಿನಮಣಿ ಡಾ. ರಾಜಕುಮಾರ್ ವನವಾಸಿ ವೀರಪ್ಪನಿಗೆ ಒತ್ತೆಯಾಳಾದ ದುರಂತ ದಿನ!

ವಿಧಿನಿಯಮ ಅನುಲ್ಲಂಘನೀಯ ಎಂಬ ಋಷಿವಾಣಿಗೆ ರಾಜಕುಮಾರರ ಅಪಹರಣವೊಂದು ಜ್ವಲಂತ ನಿದರ್ಶನ. ವೀರಪ್ಪನ್ ಕೆಂಗಣ್ಣು ರಾಜಕುಮಾರರ ಮೇಲೆ ಬಿದ್ದಿದೆ ಎಂದು ಪೊಲೀಸ್ ವರದಿಗಳು ಕಿರಿಚಿಕೊಂಡರೂ, ಅವರಿಗೆ ತಿಳಿಸದೆ ಭದ್ರತಾದಳವನ್ನು ಜತೆಯಲ್ಲೊಯ್ಯದೆ, ತಮಿಳು ನಾಡಿನ ದೊಡ್ಡಗಾಜನೂರಿಗೆ ರಾಜ್ ಹೋದದ್ದು ವಿಧಿವಿಲಾಸವಲ್ಲವೆ? ತಮ್ಮಂಥ ನಿರ್ವೈರದ ಸರಳ ವಿರಳ ಸಾತ್ವಿಕ ವ್ಯಕ್ತಿಗೆ ದೈವಭಕ್ತನಿಗೆ ಯಾರಿಂದ ತಾನೆ ಅಪಾಯ ತಟ್ಟೀತೆಂಬ ಭಾವನೆ ಅವರ ಮುಗ್ಧತೆಗೆ ಸಾಕ್ಷಿಯಾಗಿದೆಯಲ್ಲವೆ? ಆ ಮುಗ್ಧತೆಯಲ್ಲಿ ಸ್ವಾಭಿಮಾನ ಆತ್ಮಪ್ರತ್ಯಯವನ್ನು ಕಾಣುವವರೂ ಇದ್ದಾರು!

ಮೇರುನಟ, ಚಿತ್ರಕಲಾರಂಗದ ಸಾರ್ವಭೌಮ, ಕರ್ನಾಟಕದ ಏಕೈಕ ರಕ್ಷಾಮಣಿ ವೀರಪ್ಪನ್ ಹಿಂದೆ ಸದ್ದಿಲ್ಲದೆ ಹೋದ ಸಂಗತಿ ಕಾಳ್ಗಿಚ್ಚಿನಂತೆ ಹರಡಿದಾಗ ಇಡೀ ಕನ್ನಡನಾಡು ದುಃಖಾಬ್ಧಿಯಲ್ಲಿ ಮುಳುಗುತ್ತದೆ; ಕರ್ನಾಟಕ ಸರ್ಕಾರ ರಾಜ್ ಬಿಡುಗಡೆಗಾಗಿ ಪ್ರಯತ್ನ ನಡಸುತ್ತದೆ. ಮುಖ್ಯಮಂತ್ರಿಗಳೇ ಎರಡು ಮೂರು ಸಲ ಕರುಣಾನಿಧಿಯವರ ದಿವ್ಯಸನ್ನಿಧಾನಕ್ಕೆ ಧಾವಿಸುತ್ತಾರೆ; ಅವರ ಅನುಗ್ರಹಕ್ಕಾಗಿ ಕಾತರಿಸುತ್ತಾರೆ. ಆದರೆ ಕೇಂದ್ರದ ಬೆಂಬಲದಿಂದ ಮೆರೆಯುವ ಕರುಣಾಳು ಕರುಣಾನಿಧಿಯವರು ದಿವ್ಯನಿರ್ಲಕ್ಷ್ಯವನ್ನು ಮೆರೆದದ್ದಲ್ಲದೆ, ಆ ಹಗರಣವನ್ನು ರಾಜಕೀಯಗೊಳಿಸಲು ಸನ್ನಾಹಿಸುತ್ತಾರೆ. ಗಾಜನೂರು ತಮಿಳುನಾಡಿನಲ್ಲಿದೆ, ಅಪಹರಣ ನಡೆದದ್ದು ತಮಿಳುನಾಡಿನಲ್ಲಿ ಅಪಹರಣಕಾರ ತಮಿಳ, ಈ ಕಾರಣಗಳಿಂದ ರಾಜ್ ಬಿಡುಗಡೆಗೆ ವ್ಯವಸ್ಥೆ ಮಾಡಬೇಕಾದ್ದು, ತಮಿಳುನಾಡು ಸರ್ಕಾರದ ಹೊಣೆಗಾರಿಕೆ ಎಂಬ ಸಂಗತಿ ದೀರ್ಘಕಾಲದಿಂದ ಮುಖ್ಯಮಂತ್ರಿಯಾಗಿರುವ ಕರುಣಾನಿಧಿಯವರಿಗೆ ಅರ್ಥವಾಗಲಿಲ್ಲವೇಕೆ?

ವೀರಪ್ಪನ್ ನಿಜಕ್ಕೂ ವೀರ ವೀರರ ಅಪ್ಪ; ಶೂರ ಧೀರ ಸಾಹಸಿಗ. ನಾಲ್ಕಾರು ವರ್ಷಗಳಿಂದ ಆ ಒಂಟಿ ಸಲಗನನ್ನು ಹಿಡಿಯಲಾರದ ಪೊಲೀಸರಿಂದ ಸಮಾಜ ರಕ್ಷಣೆ ಸಾಧ್ಯವೆ? ಅವನನ್ನು ಸುಲಭವಾಗಿ ಹಿಡಿಯಬಹುದೆಂದು ಜಂಭಕೊಚ್ಚಿಕೊಳ್ಳುವವರೇ ಮಾಡಿದ್ದೇನು? ದುರ್ಗಮವಾದ ಅರಣ್ಯದಲ್ಲಿರುವುದರಿಂದ ಅವನನ್ನು ಹಿಡಿಯಲಾಗದೆಂದು ಅವರು ತಮ್ಮ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳುತ್ತಾರೆ. ಆದರೆ ವೀರಪ್ಪನ್ ದುರುದುಂಬಿತನಕ್ಕೆ ಎರಡೂ ರಾಜ್ಯಗಳ, ಮುಖ್ಯವಾಗಿ ತಮಿಳುನಾಡಿನ ಮಂತ್ರಿಗಳ ಮತ್ತು ಶಾಸಕರ ಬೆಂಬಲವೇ ಕಾರಣವೆಂಬ ಸುದ್ದಿಯಲ್ಲಿ ನಿಜವಿರಲಾರದೆ? ತಮಿಳುನಾಡಿನ ಉಗ್ರಗಾಮಿಗಳ ಮತ್ತು ಎಲ್‌ಟಿಟಿಇಗಳ, ಜತೆಗೆ ಅಧಿಕಾರಸ್ಥ ಜನರ ಸಹಾಯ ಸಹಕಾರಗಳಿಂದಾಗಿ ಅವನು ಅಜೇಯನಾಗಿರಬಹುದೆ? ಮಲೆಯ ಮಾದೇಶ್ವರ ಕರ್ನಾಟಕದ ಮುಖ್ಯಮಂತ್ರಿಗಳಿಗೆ ಮಾತ್ರವಲ್ಲ, ವಿರಪ್ಪನಿಗೂ ಅಭಿಮಾನದ ದೇವತೆಯೆಂಬುದನ್ನು ಮರೆಯುವಂತಿಲ್ಲ. ಮಾದೇಶ್ವರನ ಕೃಪೆಯಿಂದಾಗಿ ಈ ಹಗರಣ ಬೇಗ ಮುಗಿದೀತೆಂಬ ವಿಶ್ವಾಸವಿದೆ.

ಒಂದು ರೀತಿಯಲ್ಲಿ ರಾಜಕುಮಾರ್ ಪುಣ್ಯವಂತರು. ಜಗತ್ತಿನ ಇತರ ಒತ್ತೆಯಾಳುಗಳಿಗೆ ಲಭ್ಯವಾಗದ ಕನಿಕರ ಸಹಾನುಭೂತಿ ಗೌರವ ಮರ್ಯಾದೆಗಳು ಅವರಿಗೆ ದೊರೆತಿವೆ. ದಕ್ಷಿಣ ಇಂಡಿಯಾದ, ಮುಖ್ಯವಾಗಿ ಕರ್ನಾಟಕದ ಎಲ್ಲ ಪತ್ರಿಕೆಗಳಲ್ಲಿ ದಿನಾಲೂ ರಾಜ್ ಅವರ ಸುದ್ದಿಗೆ

ಪ್ರಥಮ ಪ್ರಾಶಸ್ತ್ಯ, ರಾಷ್ಟ್ರೀಯ ಅಂತರ ರಾಷ್ಟ್ರೀಯ ಗಣ್ಯರಿಗೆ ದೊರಕದ ಸ್ಥಾನ ಸಮೂಹ ಮಾಧ್ಯಮಗಳಲ್ಲಿ ಅವರಿಗೆ ದೊರಕುತ್ತದೆ. ಬೆಳಗಾಗ ಎದ್ದಕೂಡಲೇ ಜನರ ಕಣ್ಣು ರಾಜ್‌ರ ಸುದ್ದಿಗಾಗಿ ಪತ್ರಿಕೆಗಳನ್ನು ಬೇಟೆಯಾಡುತ್ತದೆ. ಎಲ್ಲ ಭೇದಗಳನ್ನು ತೊರೆದು ಆ ಬಾಲವೃದ್ಧರಾದಿಯಾಗಿ ಎಲ್ಲರೂ ವೀರಪ್ಪನನ್ನು ಶಪಿಸುತ್ತಾರೆ, ರಾಜ್‌ರಿಗೊದಗಿದ ವಿಪತ್ತಿಗಾಗಿ ಮರುಗುತ್ತಾರೆ, ಕೊರಗುತ್ತಾರೆ. ರಾಜ್ ಅವರ ಮಡದಿ ಮಕ್ಕಳಿಗೂ ಸಂಕಟವಿದೆ. ಆದರೆ ಸಮಾಜದ ಸಾಮೂಹಿಕ ಸಂಕಟದ ಮುಂದೆ ಅವರದೇನೂ ಅಲ್ಲ. ರಾಜ್ ತಮ್ಮ ಬಳಗದಲ್ಲೊಬ್ಬರೆಂದೇ ತಿಳಿದು, ಅವರ ಬಿಡುಗಡೆಗಾಗಿ ಕಂಡ ಕಂಡ ದೇವರಿಗೆಲ್ಲ ಪೂಜೆ ಪ್ರಾರ್ಥನೆ ಸಲ್ಲಿಸುತ್ತಾರೆ; ಹರಕೆ ಕಟ್ಟಿಕೊಳ್ಳುತ್ತಾರೆ; ಹೋಮ ಹವನಗಳನ್ನು ಮಾಡಿಸುತ್ತಾರೆ; ಧರಣಿ ಮುಷ್ಕರ ಪ್ರತಿಭಟನೆಗಳನ್ನು ನಡಸುತ್ತಾರೆ; ಉರುಳು ಸೇವೆ ಒಪ್ಪಿಸುತ್ತಾರೆ. ಸದಾಶಿವನಗರದ ಅವರ ಮನೆಗೆ ಬಂದು ಹೋಗುವವರ ಸಂಖ್ಯೆ ಅಪಾರ. ಬೆಂಗಳೂರಿಗೆ ಬಂದ ರಾಷ್ಟ್ರದ ಗಣ್ಯರು ಅವರ ಮನೆಗೆ ಹೋಗಿ ಪಾರ್ವತಮ್ಮನವರಿಗೂ ಅವರ ಮಕ್ಕಳಿಗೂ ಸಾಂತ್ವನ ಹೇಳುತ್ತಾರೆ.

ಈ ಹಗರಣದ ಅವಧಿಯಲ್ಲಿ ಚಿತ್ರೋದ್ಯಮ ಕೆಲವುಕಾಲ ಸ್ಥಗಿತಗೊಂಡದ್ದುಂಟು ; ಸರ್ಕಾರಿ ಕಾರ್ಯಕ್ರಮಗಳು ಅಸ್ತವ್ಯಸ್ತಗೊಂಡದ್ದುಂಟು. ಖಾಸಗಿವಲಯದ ಕಾರ್ಯಕ್ರಮಗಳೂ ಸ್ಥಗಿತಗೊಂಡದ್ದುಂಟು. ಬೊಕ್ಕಸಕ್ಕೆ ಸಾವಿರಾರು ಕೋಟಿರೂಪಾಯಿ ನಷ್ಟವಾಯಿತೆಂದು ಅಂದಾಜು ಮಾಡಲಾಗಿದೆ. ರಾಜ್ ಅವರ ಹತ್ತಿರದ ಬಂಧುಗಳು ದುಃಖಭಾರವನ್ನು ಸಹಿಸಲಾರದೆ, ಭಾವಾವೇಗದಲ್ಲಿ ಮನಸ್ಸಿನ ಸಮತೋಲನ ಕಳೆದುಕೊಂಡು ಸರ್ಕಾರವನ್ನು ಮಾತ್ರವಲ್ಲ, ಇಡೀ ಮನುಷ್ಯ ಕುಲವನ್ನೆ ನಿಂದಿಸಬಹುದು; ಕರ್ನಾಟಕವೆಂದರೆ ತಮ್ಮ ತಂದೆ; ರಾಜ್‌ಕುಮಾರ್ ಇಲ್ಲದ ಕರ್ನಾಟಕ ಸೊನ್ನೆಯೆಂದು ಉದ್ರೇಕದ ಭರದಲ್ಲಿ ಹೇಳಬಹುದು. ಆದರೆ ಕರ್ನಾಟಕಕ್ಕಾಗುತ್ತಿರುವ ನಷ್ಟಕ್ಕಾಗಿ ಹಲವರು ಈ ಹಗರಣಕ್ಕೆ ಕಾರಣರಾದವರನ್ನೆಲ್ಲ ಶಪಿಸುವುದೂ ಉಂಟು. ಒಬ್ಬ ವ್ಯಕ್ತಿ ಎಷ್ಟೇ ದೊಡ್ಡವನಾದರೂ ದೇಶಕ್ಕಿಂತ ದೊಡ್ಡವನಲ್ಲವೆಂಬುದನ್ನು ವಿವೇಕಿಗಳು ಅರಿತಿದ್ದಾರೆ.

ಏತನ್ಮಧ್ಯೆ ಕರುಣಾನಿಧಿಯವರ ಪ್ರತಿನಿಧಿ ನಕ್ಕೀರನ್ ಗೋಪಾಲ್ ಅವರ ಯಾತ್ರೆ ಪ್ರಾರಂಭವಾಗುತ್ತದೆ. ರಾಜ್ ಅವರನ್ನು ಮುಕ್ತಗೊಳಿಸಬೇಕಾದರೆ ಕೆಲವು ,ಶರತ್ತುಗಳನ್ನು ಈಡೇರಿಸತಕ್ಕದ್ದೆಂದು ವೀರಪ್ಪನ್ ಗೋಪಾಲರ ಮುಖಾಂತರ ಆಜ್ಞೆ ಮಾಡುತ್ತಾನೆ. ತಮಿಳುನಾಡು ಕೇಳುವಷ್ಟು ಕಾವೇರೀ ನೀರನ್ನು ಬಿಟ್ಟುಕೊಡಬೇಕು; ಟಾಡಾಬಂದಿಗಳನ್ನೆಲ್ಲ ಬಿಡುಗಡೆ ಮಾಡಬೇಕು; ಕರ್ನಾಟಕದಲ್ಲಿ ತಮಿಳು ದ್ವಿತೀಯ ಆಡಳಿತ ಭಾಷೆಯಾಗಬೇಕು; ತನ್ನ ಮೇಲಿನ ಆಪಾದನೆಗಳನ್ನುರದ್ದುಗೊಳಿಸಬೇಕು, ಇತ್ಯಾದಿ ಇತ್ಯಾದಿ. ಈ ಷರತ್ತುಗಳನ್ನು ಈಡೇರಿಸುವಂತೆ ಗೋಕಾಕ್‌ವರದಿ ಚಳುವಳಿಯ ನಾಯಕ ಕನ್ನಡದ ಕಣ್ಮಣಿ ರಾಜಕುಮಾರ್ ಕರ್ನಾಟಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಾರೆ. ಅನಾಥ ಸ್ಥಿತಿಯಲ್ಲಿದ್ದಾಗ ಪ್ರಾಣಭಯದಿಂದಾಗಿ ರಾಜ್ ವಿನಂತಿ ಮಾಡಿಕೊಂಡದ್ದು ಸಹಜವೇ. ಆ ಷರತ್ತುಗಳು ಕರ್ನಾಟಕ ಸರ್ಕಾರವನ್ನು ನಡುಗಿಸಿರಬೇಕು. ಈ ಸಂದರ್ಭದಲ್ಲಿ ಅತ್ಯಂತ ಸಂತೋಷವಾದದ್ದು ಕರುಣಾನಿಧಿ ಮಹಾಶಯರಿಗೆ ಮತ್ತು ತಮಿಳು ಉಗ್ರಗಾಮಿಗಳಿಗೆ. ಈ ಷರತ್ತುಗಳು ರಾಜಕೀಯ ಪ್ರೇರಿತವಾದುವೆಂದು, ಅವುಗಳ ಹಿಂದೆ ಅಧಿಕಾರಸ್ಥರ ಮತ್ತು ಉಗ್ರಗಾಮಿಗಳ ಕೈವಾಡವಿತ್ತೆಂಬುದರಲ್ಲಿ ಲವಲೇಶವೂ ಸಂದೇಹವಿಲ್ಲ. ಪ್ರತ್ಯೇಕ ಸ್ವತಂತ್ರ ತಮಿಳು ರಾಷ್ಟ್ರ ಸಂಸ್ಥಾಪನೆಯೇ, ಕರ್ನಾಟಕ ತನ್ನ ಆಶ್ರಿತ ಸಂಸ್ಥಾನವಾಗಬೇಕೆಂಬುದೇ ಈ ಷರತ್ತುಗಳ ಫಲಶ್ರುತಿ. ಈ ಷರತ್ತುಗಳು ಕರ್ನಾಟಕದೊಳಗಿನ

ತಮಿಳರಿಗೂ ಪ್ರಿಯವಾಗಿರಬೇಕು. ಆದರಿಂದಾಗಿಯೇ ಅವರು ಷರತ್ತುಗಳ ವಿರುದ್ಧವಾಗಿ ಪ್ರತಿಭಟನೆ ವ್ಯಕ್ತಪಡಿಸಲಿಲ್ಲ. ಇಷ್ಟಕ್ಕೆಲ್ಲ ಸಾಲುಸಾಲಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಎರಡೂ ರಾಜ್ಯಗಳ ನಾಯಕರ ವೀತ ದೂರದರ್ಶಿತ್ವ ಅವಿವೇಕ ಆತ್ಮಗೌರವ ರಾಹಿತ್ಯ ಸ್ವಾರ್ಥ ಸಾಧಕ ಪ್ರವೃತ್ತಿ ಹೇಡಿತನ ಹುಂಬತನಗಳೇ ಕಾರಣವೆಂಬುದನ್ನು ಮರೆಯುವಂತಿಲ್ಲ.

ಇಳಿವಯಸ್ಸಿನಲ್ಲಿ ಸದಾಶಿವನಗರದ ಪ್ರಶಾಂತ ನಾಗರಿಕ ವಾತಾವರಣದಲ್ಲಿ ಭಗವಚ್ಚಿಂತನೆ, ಅಪವರ್ಗಸಾಧನೆ ಕಲಾರಾಧನೆಯಲ್ಲಿ ನಿರತರಾಗಿ ಐಷಾರಾಮಿ ಜೀವನ ನಡಸುತ್ತಿದ್ದ ರಾಜಕುಮಾರ್ ಸಜ್ಜನರು ವನವಾಸದ ಜತೆಗೆ ಕಾರಾಗೃಹವಾಸದ ಕಷ್ಟನಿಷ್ಠುರಗಳನ್ನೆದುರಿಸುತ್ತಿರುವುದು ದೈವದ ಅಣಕವೆಂದೇ ಹೇಳಬೇಕಾಗಿದೆ. ಈ ಹಗರಣ ಶುರುವಾಗಿ ಶತದಿನ (೭.೧೧.೨೦೦) ಕಳೆಯುತ್ತಿದ್ದರೂ, ಅದು ದಿನೇ ದಿನೇ ಜಟಿಲಗೊಳ್ಳುತ್ತಿದೆ; ಸಂಧಾನ ಯಾತ್ರೆಯೊಂದು ಕಣ್ಣೊರಸುವ ನಾಟಕವಾಗಿದೆ. ಗೋಪಾಲ್ ಜತೆಗೆ ಉಗ್ರಗಾಮಿ ಪಂಥದ ನೆಡುಮಾರನ್ ಮೊದಲಾದವರು ಸಂಧಾನ ಯಾತ್ರೆಯಲ್ಲಿ ಸೇರಿಕೊಂಡದ್ದು ದುಶ್ಶಕುನ ಸೂಚಕವಾಗಿದೆ. ವೀರಪ್ಪನ್ ಸೆರೆಯಿಂದ ನಾಗಪ್ಪ ರಾಜ್ ಅವರಿಗೂ ಗೊತ್ತಿಲ್ಲದಂತೆ ತಪ್ಪಿಸಿಕೊಂಡು ಬಂದದ್ದು ಮತ್ತಷ್ಟು ಗೊಂದಲಕ್ಕೆ ಕಾರಣವಾಗಿದೆ. ಈ ಅವಗಡದ ಶಿಖರ ಪ್ರಾಯವೆಂಬಂತೆ ಟಾಡಾ ಬಂದಿಗಳ ಬಿಡುಗಡೆಗೆ ವಿರುದ್ಧವಾಗಿ ಪುತ್ರಶೋಕ ವಿಹ್ವಲನಾದ ಅಬ್ದುಲ್‌ಕರೀಂ ಸರ್ವಶ್ರೇಷ್ಠ ನ್ಯಾಯಾಲಯದಲ್ಲಿ ಅರ್ಜಿ ಗುಜರಾಯಿಸಿದ್ದು ಅನ್ಯಾಯವಲ್ಲದಿದ್ದರೂ , ಶಾಂತಿ ಪ್ರಿಯರ ಈ ಹಗರಣ ಬೇಗೆ ಮುಗಿಯಬೇಕೆಂದು ಪ್ರಾರ್ಥಿಸುತ್ತಿದ್ದವರ ಮನಸ್ಸಿನಲ್ಲಿ ಕಳವಳವನ್ನುಂಟು ಮಾಡಿದೆ.

ಶ್ರೇಷ್ಠನ್ಯಾಯಾಲಯದ ಇಂಗಿತವನ್ನರಿಯುವುದಾದರೆ, ಅದು ಟಾಡಾ ಬಂದಿಗಳ ಬಿಡುಗಡೆಗೆ ವಿರೋಧವಾಗಿರುವುದು ಸಹಜವೇ. ದೇಶದ ಬೇರೆ ಬೇರೆ ಕಡೆಗಳಲ್ಲಿ ಆರು ಸಾವಿರಕ್ಕೂ ಮಿಗಿಲಾಗಿ ಟಾಡಾ ಬಂದಿಗಳಿರುವ ಸಾಧ್ಯತೆಯಿದೆಯಂತೆ. ಇಲ್ಲಿಯವರು ಬಿಡುಗಡೆ ಹೊಂದಿದ ಮೇಲೆ ಅವರ ಗತಿಯೇನೆಂಬುದು ನ್ಯಾಯಾಲಯದ ಚಿಂತೆಯಾಗಿರಬೇಕು. ಅಪರಾಧಿಗಳನ್ನೆಲ್ಲ ಸಾರಾಸಗಟಾಗಿ ಬಿಡುಗಡೆ ಮಾಡುವುದು ತರವೆ? ಅಷ್ಟೇ ಅಲ್ಲ, ನ್ಯಾಯಾಲಯ ಕರ್ನಾಟಕ ತಮಿಳುನಾಡು ಸರ್ಕಾರಗಳನ್ನು ತರಾಟೆಗೆ ತೆಗೆದುಕೊಂಡಿರುವುದು ಸರಿಯೇ ಸರಿ. ಕರ್ನಾಟಕದ ಹಿಂದಿನ ಸರ್ಕಾರಗಳು ತೋರಿದ ದಿವ್ಯ ನಿರ್ಲಕ್ಷ್ಯದ, ಹುಂಬತನದ ಪರಿಣಾಮಗಳನ್ನು ಇಂದಿನ ಸರ್ಕಾರ ಎದುರಿಸಬೇಕಾಗಿ ಬಂದಿರುವುದು ಶೋಚನೀಯ ಸಂಗತಿ. ಒಟ್ಟಿನಲ್ಲಿ ವೀರಪ್ಪನ್ ಹಗರಣ ತುಕ್ಕು ತಗುಲಿದ ನಾಮರ್ದ ಅಧಿಕಾರಿಷಾಹಿಗೆ ಹಿಡಿದ ಕನ್ನಡಿಯಾಗಿದೆ.

೧೩.೧೧.೨೦೦೦ನೆಯ ದಿನದಂದು ಮುಖ್ಯಮಂತ್ರಿ ಕರುಣಾನಿಧಿಯವರು ತಮಿಳುನಾಡಿನ ವಿಧಾನಸಭೆಯಲ್ಲಿ ಈ ಹಗರಣದ ಬಗ್ಗೆ ಕೊಟ್ಟ ಹೇಳಿಕೆಯನ್ನು ಗಮನಿಸಬೇಕು. ತಾವೆಷ್ಟು ಪತ್ರ ಬರೆದರೂ ಪಟೇಲ್ ಸರ್ಕಾರ ಟಾಡಾ ಬಂದಿಗಳನ್ನು ಬಿಡುಗಡೆ ಮಾಡಲಿಲ್ಲವೆಂದೂ, ಆ ಬಂದಿಗಳು ನಿರಪರಾಧಿಗಳೆಂದೂ, ಅವರು ಕರ್ನಾಟಕ ಸರ್ಕಾರದ ಮೇಲೆ ತಪ್ಪು ಹೊರಿಸಿದ್ದಾರೆ. ತಮಿಳು ರಾಷ್ಟ್ರೀಯ ಪಕ್ಷ ನಿಷೇಧಗೊಂಡಿಲ್ಲವಾದ್ದರಿಂದ, ಅದರ ನೇತಾರ ನೆಡುಮಾರನ್ ಬಹಿಷ್ಕೃತ ವ್ಯಕ್ತಿಯಲ್ಲವೆಂದೂ, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂದೂ ಅವರು ಸ್ಪಷ್ಟಪಡಿಸಿದ್ದಾರೆ. ಅವರ ರಾಜಕೀಯ ವ್ಯವಹಾರ ಕೌಶಲ ಏಕಪಕ್ಷೀಯವಾಗಿದೆ ಎಂದೆನಿಸದಿರಲಾರದು. ಅಷ್ಟೇ ಅಲ್ಲ, ಕರುಣಾನಿಧಿಯವರು ಮನಸ್ಸು ಮಾಡಿದ್ದರೆ ರಾಜ್‌ರನ್ನು ಈ ಮೊದಲೇ ಬಿಡಿಸಬಹುದಿತ್ತೇನೋ ಎಂದು ಜನ ಹೇಳುವುದೂ ಉಂಟು.

ರಾಜ್ಯದ ಹಿತಾಸಕ್ತಿಗಳಿಗೆ ಸ್ವಲ್ಪವೂ ಧಕ್ಕೆಯೊದಗಬಾರದು ; ರಾಜಕುಮಾರ್ ಅರಣ್ಯವಾಸದ ವಿನೂತನ ಅನುಭವಗಳೊಂದಿಗೆ ಸುಖವಾಗಿ ಮನೆಗೆ ಬರಬೇಕು; ಒಂದು ದೊಡ್ಡ ಕಾವ್ಯದ ಖಳನಾಯಕನೊ ಪ್ರತಿನಾಯಕನೊ ಆಗಬಹುದಾದ ವೀರಪ್ಪನ್ ರಾಜಕುಮಾರರ ಸಂಸರ್ಗದ ಫಲವಾಗಿ ಸುಸಂಸ್ಕೃತನಾಗಿ ಪರಿವರ್ತನೆಗೊಂಡು ಸುಖವಾಗಿ ಬಾಳುವಂತಾಗಬೇಕು. ಇದು ಸಜ್ಜನರ ನಿರೀಕ್ಷೆ.

ಸಜ್ಜನರ ನಿರೀಕ್ಷೆ ಪಾರ್ಶ್ವಿಕವಾಗಿ ನಿಜವಾಗಿದೆ. ೧೪.೧೧.೨೦೦೦ನೆಯ ದಿನ ರಾತ್ರಿ ಡಾ. ರಾಜಕುಮಾರ್ ಬಿಡುಗಡೆಗೊಂಡಿದ್ದಾರೆಂಬ ಸುದ್ದಿಯಿಂದಾಗಿ ಎಲ್ಲೆಲ್ಲೂ ದೀಪಾವಳಿ ಹಬ್ಬ ಮತ್ತೊಮ್ಮೆ ಆಚರಣೆಗೊಳ್ಳುತ್ತಿದೆ. ಇಷ್ಟಕ್ಕೆಲ್ಲ ಸರ್ಕಾರ ಅಭಿನಂದನೀಯ. ವೀರಪ್ಪನ್‌ನಲ್ಲಿಯೂ ಮನುಷ್ಯತ್ವವಿದೆಯೆಂಬುದು ಈ ಹಗರಣದಿಂದ ವ್ಯಕ್ತವಾಗಿದೆ. ಮುಂದೆ ಅವನ ಭವಿಷ್ಯವೇನು?

ಕನ್ನಡದ ಕಾಳಿದಾಸ ಕಣ್ಮರೆಯಾದರು:

ಜಗತ್ತಿನಲ್ಲಿ ಪ್ರತಿನಿತ್ಯ ಸಹಸ್ರ ಸಹಸ್ರ ಜನರು ಸಾಯುತ್ತಾರೆ. ಹಲವರ ಮರಣ ದುಃಖ ಅವರ ನೆಂಟರಿಷ್ಟರಿಗೆ ಮಾತ್ರ ಸೀಮಿತವಾಗಿರುತ್ತದೆ. ಅದೂ ತಾತ್ಕಾಲಿಕವಾದುದಷ್ಟೇ. ಅವರ ಮರಣ ವಾರ್ತೆ ಪಕ್ಕದ ಹಳ್ಳಿಗಳಿಗೂ ಮುಟ್ಟದಿರಬಹುದು. ಈಗಂತು ಸಮೂಹ ಮಾಧ್ಯಮಗಳ ಅಧಿಕ ಬಳಕೆಯಿಂದಾಗಿ ಬಹು ಜನರ ಸಾವಿನ ಸುದ್ದಿ ದೇಶದ ಮೂಲೆ ಮೂಲೆಗಳಲ್ಲಿ ಹರಡುವ ಸಂಭವವಿದೆ. ಆದರೂ ಆ ಸುದ್ದಿಯಿಂದಾಗಿ ಯಾರೂ ಪರಿತಪಿಸುವಂತೆ ತೋರದು. ಸತ್ತವರ ಪರಿಚಯಸ್ತರು ಅವರ ಬದುಕಿನ ಘಟನೆಗಳನ್ನು ಕುರಿತು ಒಂದೆರಡು ದಿನ ಮೆಲುಕು ಹಾಕಬಹುದು. ಕೆಲವರ ಮರಣ ಲೋಕಸ್ಪರ್ಶೀ ಅಥವಾ ಸಮಾಜ ಸ್ಪಂದನದ ಘಟನೆಯಾಗಿ ಪರಿಣಮಿಸಿ, ಬಹುಜನರ ಬಹುದಿನದ ಸಂಕಟಕ್ಕೆ ಕಾರಣವಾಗಬಹುದು. ಅವರು ಲೋಕ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಸವೆಸಿದ ತ್ಯಾಗವೀರರು ಅಂಥವರು ಲಕ್ಷಕ್ಕೊಬ್ಬ, ಕೋಟಿಗೊಬ್ಬ, ಅಂಥ ವಿರಳರಲ್ಲಿ ಕನ್ನಡದ ಕಾಳಿದಾಸರೆಂದು ಪ್ರಖ್ಯಾತರಾದ ಎಸ್. ವಿ. ಪರಮೇಶ್ವರ ಭಟ್ಟರೂ ಒಬ್ಬರು.

ಎಂಬತ್ತೇಳು ವರ್ಷ ಸುದೀರ್ಘ ಜೀವನ ನಡಸಿ, ೨೭.೧೦.೨೦೦೦ನೆಯ ದಿನದಂದು ಆ ಸಾತ್ವಿಕ ಚೇತನ ಕೊನೆಯುಸಿರೆಳೆದಾಗ ಕನ್ನಡವಿರುವ ಕಡೆಯಲ್ಲೆಲ್ಲ ಕೃತಜ್ಞತಾ ಪೂರ್ವಕವಾದ ಅನುಕಂಪೆಯ, ಪ್ರೀತಿಯ ಗೌರವದ ಅಲೆ ಸಂಚರಿಸಿತೆಂಬುದನ್ನು ಗಮನಿಸಿದಾಗ ಆ ಮಹನೀಯರ ಬಾಳು ಬಂಗಾರವಾಗಿ ಶ್ರೀಗಂಧವಾಗಿ ಸಾರ್ಥಕವಾಯಿತೆನಿಸುತ್ತದೆ. ಪ್ರಚಾರಾಸಕ್ತಿಯಿಲ್ಲದೆ, ಪ್ರದರ್ಶನಲೋಲುಪ್ತಿಯಿಲ್ಲದೆ, ಪ್ರಸ್ತುತಿ ಪ್ರತೀಕ್ಷೆಯಿಲ್ಲದೆ, ಸಾಹಿತ್ಯ ಸಾಧನೆ ಬೋಧನೆಯಲ್ಲಿ ನಿರತರಾಗಿ ವಿಶಿಷ್ಟಗರಿಷ್ಠ ಸಿದ್ಧಿಯನ್ನು ಪಡೆದ ಹುಟ್ಟು ಕವಿಗಳವರು. ಗದ್ಯಕ್ಕಿಂತ ಪದ್ಯದ ಕಡೆಗೆ ಅವರ ಒಲವು ; ಅದರಲ್ಲಿಯೇ ಅವರ ಗೆಲವು. ರಾಗಿಣಿಯಿಂದ ಉಂಬರದವರೆಗೆ ಹನ್ನೊಂದು ಕವನ ಸಂಕಲನಗಳ ಮೆರೆವಣಿಗೆ ಸಾಗಿದೆ. ಮೊದಲ ಕವನ ಸಂಕಲನಕ್ಕೆ ಪದ್ಯದಲ್ಲಿಯೇ ಮುನ್ನುಡಿ ಬರೆದ ಕುವೆಂಪು ಅವರ ಕವಿತಾ ಪ್ರತಿಭೆಯನ್ನು ಮೆಚ್ಚಿಕೊಂಡಿದ್ದಾರೆ.

ಕಾವ್ಯ ಕೃಷಿಯ ಪ್ರಾರಂಭದಲ್ಲಿ ಭಟ್ಟರು ನವೋದಯ ಸಂಪ್ರದಾಯವನ್ನನುಕರಿಸುತ್ತ ತಕ್ಕಮಟ್ಟಿನ ಯಶಸ್ಸನ್ನು ಗಳಿಸುತ್ತಾರಾದರೂ, ಅವರು ತಮ್ಮತನವನ್ನು ಕಂಡುಕೊಂಡದ್ದು ಹಿಂದಿನ ಸುಪ್ರಸಿದ್ಧ ದೇಶಿ ಛಂದಸ್ಸುಗಳಲ್ಲಿ ಕಾವ್ಯರಚನೆಯನ್ನಾರಂಭಿಸಿದಾಗ. ಅತ್ಯಾಧುನಿಕ ವಿನೂತನ ಶ್ರೀಮಂತಾನುಭವ ಚಿಂತನೆಗಳಿಗೆ ವಾಹಕಗಳಾದ ಹಳೆಯ ಛಂದೋಪ್ರಕಾರಗಳಿಗೆ ಹೊಸ

ಮೆರುಗು ಬಣ್ಣ ಬನಿ ಉಕ್ಕು ಉಕ್ಕಂದಗಳು ಸಮನಿಸುತ್ತವೆ. ಸಾಂಗತ್ಯ ತ್ರಿಪದಿಗಳಿರಲಿ, ಹಿಂದಿನ ಕಾಲ ದಲ್ಲಿಯೂ ಅಜ್ಞಾತವಾಗಿದ್ದ, ತಿರಸ್ಕೃತವಾಗಿದ್ದ ಏಳೆಗೆ ಪಟ್ಟಕಟ್ಟುತ್ತಾರೆ. ತುಂಬೆಯ ಹೂವು ಎಂಬ ಇಡೀ ಗ್ರಂಥ ಏಳೆ ಛಂದಸ್ಸಿನಲ್ಲಿದೆ.

ಬಾಡಿಗೆ ಮನೆ ಚಂದ ನೋಡಿದೆನೊಪ್ಪಿದೆ
ಬಾಡಿಗೆ ಮನವು ಚಂದವೆ
ಸಾವುಂಟು ಅತ್ತರು, ಸಾವುಂಟು ನಕ್ಕರು
ಸಾವಿರಲೆಮಗೆ ನಗುವಾಗ
ಕವಿಸತ್ತನೆನಬೇಡ ಅವ ತನ್ನ ಕೃತಿಯೊಳು
ಭುವಿಯೊಳಗಿಹನು ನಿತ್ಯವು.

ಇವು ಸುಂದರ ಸುಭಾಷಿತಗಳಂತಿವೆ. ಅವರ ಮಂಥಾನದ ಗಾದೆಗಳು ಏಕಪದಿ ಕವಿತೆಗಳಂತಿವೆ : 'ಈಗ ಭ್ರೂರತ, ಆಮೇಲೆ ಇಳಿತ' 'ಕಿವುಡನ ಏಕಾಂತ, ಕುರುಡನ ಜೂಜಾಟ'-ಇಂಥವು ನೂರಾರು. ಇಂದ್ರಚಾಪದ ಸಾಂಗತ್ಯಗಳು, ಸುರಗಿಸುರಹೊನ್ನೆಯ ತ್ರಿಪದಿಗಳು, ಉಪ್ಪುಕಡಲಿನ ವಚನಗಳು ಲೋಕಾನುಭವಗಳ ತವನಿಧಿಗಳಾಗಿದ್ದು, ಕಾಲಾತೀತವಾಗಿರುತ್ತವೆ. ದೇಶೀ ಪ್ರಜ್ಞೆಯೇ ಮೈವೆತ್ತಂತಿರುವ ಭಟ್ಟರು ಭಾರತೀಯತೆಯ ಹಾಗೂ ಕರ್ನಾಟಕತ್ವದ ಸಂಕೇತವಾಗಿದ್ದಾರೆ.

ಅನುವಾದ ಕ್ಷೇತ್ರದಲ್ಲಿ ಭಟ್ಟರದು ಅದ್ವಿತೀಯ ಸಾಧನೆ. ಅವರ ಸಮಕ್ಕೆ ಬರುವವರು ಹಿಂದೆಯೂ ಇಲ್ಲ, ಇಂದೂ ಇಲ್ಲ. ಭಾಸಕಾಳಿದಾಸರ ಕೆಲಕೆಲವು ಕೃತಿಗಳನ್ನು ಭಾಷಾಂತರಿಸಿದ ಪಂಡಿತರಿದ್ದಾರೆ. ಅವರ ಎಲ್ಲ ಕೃತಿಗಳನ್ನು ಸಾರಾಸಗಟಾಗಿ ಭಾಷಾಂತರಿಸಿದ ಏಕೈಕ ಪ್ರಕಾಂಡ ಪಂಡಿತರೆಂದರೆ ಇವರೊಬ್ಬರೇ. ಇದರಿಂದಾಗಿ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಪ್ರತ್ಯೇಕವಾಗಿ ಗೊಮ್ಮಟನಂತೆ ನಿಲ್ಲುತ್ತಾರೆ. ಇವಲ್ಲದೆ ಅಮರುಶತಕ, ಭರ್ತೃಹರಿಯ ಶತಕತ್ರಯ, ಗೀತಗೋವಿಂದ, ಗಾಥಾ ಸಪ್ತಶತಿಗಳನ್ನು ಸಹ ಕನ್ನಡಿಸಿದ್ದಾರೆ. ಕನ್ನಡ ಸಾರಸ್ವತ ಲೋಕದಲ್ಲಿ ಇವರ ಸಾಹಸವೊಂದು ದಾಖಲೆ. ಅನುವಾದದ ಬಗೆಗೆ ಮುಖ ಮುರಿಯುವ ಅನುವಾದಭೀರುಗಳಿಗೆ ಅವರು ಕೊಡುವ ಉತ್ತರವಿದು:

ಅನುವಾದವೆಂದರೆ ಮೌಲ್ಯವು ಕಡಿಮೆಯೆ
ಓದಿದವರಿಗೆ ಅರಿವು
ಕಡತಂದ ಕೊಡಲಿಯ ಹರಿತವು ಕಡಿಮೆಯೆ
ಕಡಿದರೆ ಬೀಳದೆ ಮರವು (ಇಂದ್ರಚಾಪ)

ಒಂದು ಸಾಹಿತ್ಯದ ಹುಲುಸಿಗೆ ಅನುವಾದದ ರಸಗೊಬ್ಬರ ಬೇಕು; ಅದರ ಘನತೆಗೆ ಅನುವಾದದ ಸತ್ವಬೇಕು. 'ರಸಋಷಿ ಕುವೆಂಪು' ಹೆಸರಿನ ಐದು ಗದ್ಯ ಸಂಪುಟಗಳಲ್ಲಿ ಸಮಗ್ರ ಕುವೆಂಪು ಸಾಹಿತ್ಯವನ್ನು ಭಟ್ಟಿಯಿಳಿಸಿದ್ದಾರೆ.

ಪರಮೇಶ್ವರ ಭಟ್ಟರ ಸಾಂಸಾರಿಕ ಕ್ಲೇಶ ಪರಿಹಾರಕ್ಕೆ ಕಾವ್ಯಕೃಷಿಯೆಂತು ಸಾಧನವಾಯಿತೋ ಅಂತೆಯೇ ವೃತ್ತಿಯ ಕೊನೆಗಾಲದ ದಕ್ಷಿಣಕನ್ನಡ ಜಿಲ್ಲೆಯ ವಾಸವೂ ವರವಾಗುತ್ತದೆ. ಜೀವನದಲ್ಲಿ ನಾನು ಪಟ್ಟಪಾಡಿನ ಗಾತ್ರ ಕಾಲು ಚೆಂಡಿನ ಗಾತ್ರ; ಕಾವ್ಯದಲಿ ಬಣ್ಣನೆ ಗೊಂಡುದು ಗುಂಡುಸೂಜಿಯ ತಲೆಯ ಗಾತ್ರ ಸದಾಶಿವಗುರು' ಎಂಬ ಅವರ ನೋವು ನುಡಿಯಲ್ಲಿ ಸಂಸಾರದಲ್ಲಿ ಅವರು ಪಟ್ಟಪಾಡಿನ ವೇಧೆಯ ಪರಿಚಯವಾಗುತ್ತದೆ. ಘಟ್ಟದ ಕೆಳಗಿನ

ದಕ್ಷಿಣ ಕನ್ನಡ ಜಿಲ್ಲೆ ಅವರ ಪಾಲಿಗೆ ಸ್ವರ್ಗವಾಗುತ್ತದೆ. 'ನಿಂದ ನೆಲದ ಗುಣವೋ ಬಂದ ಕಾಲ ಗುಣವೋ ಎಂಬಂತೆ ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಬಂದ ದಿನದಿಂದ ಸಂತೋಷದ ಮೇಲೆ ಸಂತೋಷವನ್ನು ಕಾಣುತ್ತಿದ್ದೇನೆ. ಏಳಿಗೆಯ ಮೇಲೆ ಏಳಿಗೆಯನ್ನು ಪಡೆಯುತ್ತಿದ್ದೇನೆ.' (ಅರುವತ್ತರ ಅರಳು-ಬಿನ್ನಹ X) ಎಂಬ ಅವರ ಮಾತು ಅಕ್ಷರಶಃ ನಿಜ. ಅವರ ಕಾವ್ಯಾನುವಾದಗಳ ಸಿದ್ಧತೆಯ ಬಹುಭಾಗ ಫಲಿಸಿದ್ದೇ ಅಲ್ಲಿ. ಅಲ್ಲಿದ್ದ ಅವರ ಜೀವಮಾನದ ಭಾಗ (೧೯೬೮-೧೯೭೪) ಸುವರ್ಣಯುಗ. ಆ ಕಾಲದಲ್ಲಿ ಆ ಜಿಲ್ಲೆಯಲ್ಲಿ ಅವರಂಥ ಅತ್ಯಂತ ಜನಪ್ರಿಯ ವ್ಯಕ್ತಿ ಮತ್ತೊಬ್ಬರಿಲ್ಲ. ಅವರ ಆಗಮನದಿಂದ ಆ ಜಿಲ್ಲೆಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ನವೋತ್ಸಾಹ ನವ ಪಟುತ್ವ ಚಿಮ್ಮಿದ್ದುಂಟು. ಅವರಂಥ ನಗೆಗಾರ ವಾಗ್ಮಿಯೂ ವಿರಳ.

ವಿಷಮ ಸಂಸಾರ ಸಾಗರದಲ್ಲೀಜುವವರಿಗೆ ಭಟ್ಟರು ಆದರ್ಶವ್ಯಕ್ತಿ, ಮಾದರಿಯ ಯಜಮಾನರು. ದುಃಖದ ನಂಜಿನಿಂದಲೇ ನಗೆಯ ಬೆಳಕನ್ನು ಬೆಳೆದ ಸಿದ್ಧಪುರುಷರವರು. 'ಭಟ್ಟರ ಬಳಿ ಅಳುತ್ತಾ ಬಂದವರು ನಗುತ್ತಾ ಮರಳುತ್ತಾರೆ. ನಿರಾಶೆ ತುಂಬಿ ನಿಂತವರು ಭರವಸೆಯ ಬೆಳಕನ್ನು ಪಡೆಯುತ್ತಾರೆ' ಎಂಬ ಡಾ. ಲಕ್ಕಪ್ಪಗೌಡರ ಮಾತಿನಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆಯಿಲ್ಲ. ಅವರ ಕೊನೆಯಾಸೆಯಲ್ಲಿಯೇ ಅವರ ಜೀವನ ಧರ್ಮ-ಸಂದೇಶಗಳು ಅಭಿವ್ಯಕ್ತಿಗೊಂಡಿವೆ:


> ಮೊಗಬಾಡದಿರಬೇಕು ನಗೆ ಮೂಡುತಿರಬೇಕು
> ಅಗಲುವಾಗೆಂಬುದೆನ್ನಾಸೆ (ಕೊನೆಯಾಸೆ, ಭಾವಗೀತೆಗಳು- ಅರುವತ್ತರ ಅರಳು ಪು೮೪)

ಕನ್ನಡ ಕಾಳಿದಾಸರ ಈ ಸಂದೇಶ ಮನುಕುಲಕೆ ದಾರಿದೀಪವಾಗಲಿ!

ಹಾಮಾನಾ ಅವರ ವಿಮುಕ್ತಿ:

ನಾನು ಆಸ್ಪತ್ರೆಯಿಂದ ವಾಪಸಾಗಿ ಒಂದೂವರೆ ತಿಂಗಳು ಕಳೆದಿತ್ತು. ಒಂದು ದಿನ ಅಪರಾಹ್ನ ೩.ಗಂಟೆಗೆ ಎಂದಿನಂತೆ ನನ್ನ ಕುಟೀರದ ಕಡೆಗೆ ಹೊರಟಿದ್ದೆ. ಉರಿಬಿಸಿಲು ಸುರಿಯುತ್ತಿತ್ತು. ನನಗಾಗಿ ಕಾದುಕೊಂಡಿದ್ದರೇನೋ ಎನ್ನುವಂತೆ ಹಾಮಾನಾ ಅವರು 'ಗೋಧೂಳಿ' ಯಿಂದ ಹೊರ ಬಂದರು. 'ನಮಸ್ಕಾರ' ಎನ್ನುತ್ತ ನನ್ನೆದುರು ನಿಂತರು. 'ನಿಮಗೇನಾಯಿತು? ಹೇಗಾಯಿತು? ಮೊದಲೇ ಏನಾದರೂ ಸೂಚನೆಗಳಿದ್ದುವೆ ? ನಿಮ್ಮ ಕಾಯಿಲೆಯ ಸ್ವರೂಪ ಎಂಥದ್ದು? ಅದೇನು ಮಾರಕವಾದದ್ದೇ? ಆಸ್ಪತ್ರೆಯಲ್ಲಿ ಏನೇನಾಗುತ್ತಿತ್ತು? ಸಂಪೂರ್ಣವಾಗಿ ವಾಸಿಯಾಗಿದೆಯೆ?' ಇತ್ಯಾದಿ ಎಂಟು-ಹತ್ತು ಪ್ರಶ್ನೆಗಳನ್ನು ಕೇಳಿದರು. ನಾನು ಉತ್ತರ ಹೇಳಿದೆ. ಆ ಸರಪಳಿ ಪ್ರಶ್ನೆಗಳಿಂದಾಗಿ ಹಾಗೂ ಆ ಪ್ರಶ್ನೆಗಳು ಕಾರುತ್ತಿದ್ದ ಕಾತರತೆಯಿಂದಾಗಿ ಅವರಿಗೂ ತಮ್ಮ ಆರೋಗ್ಯದ ಬಗ್ಗೆ ಸಂಶಯವಿರಬೇಕು, ಭಯವಿರಬೇಕು ಎಂದು ಕೊಂಡೆ. 'ಈ ವಯಸ್ಸಿನಲ್ಲಿ ನೀವು ತುಂಬ ಕೆಲಸ ಹಚ್ಚಿಕೊಂಡಿದ್ದೀರಿ. ಪ್ರವಾಸವನ್ನು ಕಡಿಮೆ ಮಾಡಿಲ್ಲ. ನೀವಿನ್ನು ವಿಶ್ರಾಂತಿ ತೆಗೆದುಕೊಳ್ಳಬೇಕು' ಎಂದು ನನಗೆ ಎಚ್ಚರಿಕೆ ನೀಡಿದರು. 'ನನ್ನಿಂದ ವಿಶ್ರಾಂತಿ ಸಾಧ್ಯವಿಲ್ಲ, ನಾಯಕರೆ. ಎಂದಾದರೊಂದು ದಿನ ಸಾಯಬೇಕಲ್ಲವೆ' ಎಂದೆ. 'ಸಾವನ್ನು ತಡೆಯಲಾಗದು ನಿಜ. ಆದರೂ ಜಾಗರೂಕರಾಗಿರಬಾರದೆ ? 'ಎಂದರು. 'ಸಾಧ್ಯವಾದಷ್ಟು ಭಾಷಣ ಪ್ರವಾಸಗಳನ್ನು ನಿಲ್ಲಿಸಬೇಕೆಂದು ಸಂಕಲ್ಪ ಮಾಡಿಕೊಂಡಿದ್ದೇನೆ' ಎಂದೆ. ಬಿಸಿಲಿನ ಸ್ನಾನವಾಗುತ್ತಿದ್ದಂತೆ ಕಾಲು ಗಂಟೆ ಮಾತಾಡಿ, ನಾನು ಮುಂದೆ ನನ್ನ ನಡಿಗೆ ಬೆಳೆಸಿದೆ.

ನಾನು ನಾಯಕರ ಪ್ರಶ್ನೆಗಳ ಹಿಂದಿದ್ದ ಕಾತರತೆಯ ಬಗ್ಗೆ ಆ ದಿನ ಬಹು ಹೊತ್ತು



ಪ್ರೊ. ಎಸ್. ವಿ. ಪರಮೇಶ್ವರಭಟ್ಟ

ಜನನ: ೮-೨-೧೯೧೪ ಮರಣ: ೨೭-೧೦-೨೦೦೦



ಡಾ. ಹಾ. ಮಾ. ನಾಯಕ

ಜನನ: ೧೨–೯–೧೯೩೧ ಮರಣ: ೧೦–೧೧–೨೦೦೦

ಚಿಂತಿಸುತ್ತಿದ್ದೆ. ಮನೆಯಲ್ಲಿ ಮತ್ತು ಮೂರ್‍ನಾಲ್ಕು ಮಂದಿ ಮಿತ್ರರಲ್ಲಿ ನನ್ನ ಅಳಲನ್ನು ತೋಡಿಕೊಂಡಿದ್ದೆ. ನನ್ನ ಸಂಶಯವನ್ನು ವ್ಯಕ್ತಪಡಿಸಿದ್ದೆ. ನನ್ನ ಸಂಶಯ ನಿಜವಾಯಿತು. ೧೧.೧೧.೨೦೦೦ ದಿನಾಂಕ ಬೆಳಗ್ಗೆ ೭ ಗಂಟೆಯ ಸಮಯದಲ್ಲಿ ರಾತ್ರಿ (೧೦.೧೧.೨೦೦೦) ೧೦ ಗಂಟೆಗೆ 'ನಾಯಕರು ಹೃದಯಾಘಾತದಿಂದ ತೀರಿಕೊಂಡರಂತೆ' ಎಂದು ನನ್ನ ಮಡದಿ ಗದ್ಗದಿಸಿದರು. ಕ್ಷಣ ಕಾಲ ನನಗೆ ಉಸಿರು ಕಟ್ಟಿದಂತಾಯಿತು, ಕಣ್ಣು ಕತ್ತಲಿಸಿದಂತಾಯಿತು, ಗತಕಾಲದ ನೆನಪುಗಳೊಡನೆ ಅಶ್ರುಮಾಲೆ ಬೆಳೆಯುತ್ತಿತ್ತು. ಹದಿನೈದು ದಿನಗಳ ಹಿಂದೆ ನಾನವರನ್ನು ನೋಡಿದಾಗ ಚೆನ್ನಾಗಿಯೇ ಇದ್ದರು. ನನ್ನ ಶಿಷ್ಯ ನನ್ನ ಕಣ್ಮುಂದೆಯೆ, ೬೯ನೆಯ ವಯಸ್ಸಿಗೆ ಸಾಯಬೇಕೆ (ಜನನ, ೧೨.೯.೧೯೩೧)? ಪ್ರವಾಸ ಮಾಡಬೇಡಿರೆಂದು ನನಗೆ ವಿವೇಕ ಹೇಳಿದ ಅವರು ಕೂಡಲೇ ಸಾಗರಕ್ಕೆ ಪ್ರವಾಸ ಬೆಳೆಸಿದರು. ಭೂಮಂಡಲದಲ್ಲಿ ಅದೇ ಕೊನೆಯ ಪ್ರವಾಸವಾಗಬೇಕೆ?

ನನ್ನ ಉತ್ಕರ್ಷಕ್ಕೆ ಕಾರಣವಾದ ಒಂದು ಸಂಗತಿಯನ್ನು ಕೃತಜ್ಞತೆಯಿಂದ ನಾನಿಲ್ಲಿ ನೆನೆಯಬೇಕಾಗಿದೆ. ನನಗೆ ಐವತ್ತು ವರ್ಷ ತುಂಬಿದಾಗ, 'ದೇಜಗೌ-ಬದುಕು, ಬರಹ' ಎಂಬ ಅಭಿನಂದನ ಗ್ರಂಥವನ್ನು ಮುನ್ಸೂಚನೆಯಿಲ್ಲದೆ ಸಿದ್ಧಪಡಿಸಿ, ಸಮರ್ಪಣ ಸಮಾರಂಭ ಕೇವಲ ಹತ್ತು ದಿನಗಳಿದ್ದಾಗ ನನಗೆ ತಿಳಿಸಿ ಬೆರಗುಗೊಳಿಸಿದ್ದು ನನ್ನ ಬದುಕಿನಲ್ಲಿ ಮರೆಯಲಾರದ ಸಂದರ್ಭ. ಅದರ ಬೆನ್ನಿನಲ್ಲಿಯೇ ಕರ್ನಾಟಕದ ಹಲವು ಕಡೆಗಳಲ್ಲಿ ಸನ್ಮಾನ ಸಮಾರಂಭಗಳು ನಡೆದುವೆಂಬುದನ್ನು, ಎಲ್ಲ ಕಡೆಗಳಲ್ಲಿ ಅವರು ನನ್ನ ಜತೆಗಿದ್ದರೆಂಬುದನ್ನು ನಾನು ಮರೆಯಲಾರೆ.

ಅವರು ಹುಟ್ಟಿ ಬೆಳೆದದ್ದು ಸುಸಂಸ್ಕೃತ ವಾತಾವರಣ. ತಂದೆ ಶ್ರೀನಿವಾಸ ನಾಯಕರು ಓದುಗುಳಿ. ಎಲ್ಲಿಂದಾದರೂ ಪ್ರಸಿದ್ಧ ಸಾಹಿತಿಗಳ ಗ್ರಂಥಗಳನ್ನೊ ಮಾಸ ಪತ್ರಿಕೆಗಳನ್ನೊ ತಂದು ಓದುತ್ತಿದ್ದರು. ಓದುವ ಗೀಳನ್ನು ಎಳವೆಯಲ್ಲಿಯೇ ಮಗ ಮಾನಪ್ಪ ನಾಯಕನಿಗೂ ಅಂಟಿಸುತ್ತಾರೆ. ಕೈಯಲ್ಲಿ ಕಾಸಿಲ್ಲದಿದ್ದರೂ ಎಲ್ಲ ಮಕ್ಕಳನ್ನು ವಿದ್ಯಾವಂತರನ್ನಾಗಿ ಬೆಳೆಸಬೇಕೆಂಬ ಹಟ ಅವರದು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೆ ಮಗ ಮಾಸ್ತಿಯವರಂಥ ಹಿರಿಯ ಸಾಹಿತಿಗಳ ಸ್ನೇಹ ಸಂಪರ್ಕವನ್ನು ಸಂಪಾದಿಸಿಕೊಂಡಿದ್ದು, ವಾಕ್ಶಕ್ತಿ ಸಾಹಿತ್ಯಶಕ್ತಿಯನ್ನು ಸಾಧಿಸಿಕೊಂಡಿದ್ದು, 'ಬಾಳ್ನೋಟಗಳು' ಎಂಬ ಕಥಾಗುಚ್ಛವನ್ನು ಪ್ರಕಟಿಸಿದ್ದು, ತಂದೆ ಮಗನ ಬಗ್ಗೆ ಅಪಾರ ಅಭಿಮಾನತಾಳುವಂತಾಗುತ್ತದೆ. ಆನರ್ಸ್ ತರಗತಿಗೆ ಬರುವ ಹೊತ್ತಿಗಾಗಲೇ ಅವರು ಅರಳುತ್ತಿರುವ ಸಾಹಿತಿಯೆಂದೂ ಸಿದ್ಧ ಚರ್ಚಾಪಟುವೆಂದೂ ಹೆಸರುಗಳಿಸುತ್ತಾರೆ. ಆಗಿನ ಕಾಲಕ್ಕೆ ಮಾನಪ್ಪ ಆಗಲಿ, ಕೆ.ವಿ.ಸುಬ್ಬಣ್ಣ ಆಗಲಿ ಸಭೆ ಸಮಾರಂಭ ಗೋಷ್ಠಿಗಳಲ್ಲಿ ಮಾತ್ರವಲ್ಲ, ಇಡೀ ಕಾಲೇಜಿನಲ್ಲಿಯೇ ಎದ್ದು ಕಾಣುವ ವ್ಯಕ್ತಿಗಳೆಂಬುದು ಎಲ್ಲ ಪ್ರಾಧ್ಯಾಪಕರಿಗೂ ಗೊತ್ತಿದ್ದ ಸಂಗತಿ.

ನಾಯಕರು ಜಗತ್ಪ್ರಸಿದ್ಧ ಭಾಷಾ ವಿಜ್ಞಾನಿಗಳ ಗರಡಿಯಲ್ಲಿ ಸಾಧನೆ ಮಾಡಿ, ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿಗಳನ್ನು ಪಡೆದಿದ್ದರೂ, ಭಾಷಾವಿಜ್ಞಾನವನ್ನು ಬೋಧಿಸುತ್ತಿದ್ದರೂ, ಏಕೊ ಏನೊ ಆ ಕ್ಷೇತ್ರವನ್ನವರು ಉಪೇಕ್ಷಿಸುತ್ತಾರೆ. ತಮ್ಮ ಸೃಜನಶೀಲ ಪ್ರತಿಭೆಯ ಅಭಿವ್ಯಕ್ತಿಗೆ ಸಾಹಿತ್ಯಮಾಧ್ಯಮವೇ ಸರಿಯೆಂದು ಕಂಡಿರಬೇಕು. 'ನಮ್ಮ ಮನೆಯ ದೀಪ' ಎಂಬ ಸುಸ್ನಿಗ್ಧ ಸುಂದರ ಸುಕೋಮಲ ಭಾವಮಯ ಕಥಾ ಪ್ರಬಂಧದಲ್ಲಿಯೇ ಅವರು ತಮ್ಮನ್ನು ಕಂಡುಕೊಂಡಿರಬೇಕು. ಮುಂದೆ ಆ ನಿಟ್ಟಿನಲ್ಲಿ ಸಾಹಿತ್ಯ ಕೃಷಿಯನ್ನು ಮುಂದುವರಿಸದಿದ್ದುದು ಕನ್ನಡಕ್ಕಾದ ನಷ್ಟವೆಂದೇ ಗಣಿಸಬೇಕು. ಅಷ್ಟೇ ಅಲ್ಲ, ಅವರು 'ಸಮೀಕ್ಷೆ' ಯಂತೆ ವಿಮರ್ಶಾ ಸಾಹಿತ್ಯದ ಕಡೆಗೆ ಗಮನಹರಿಸಿದ್ದರೆ, ಅವರು ಕನ್ನಡದ ಶ್ರೇಷ್ಠತಮ ನಿಷ್ಪಕ್ಷಪಾತ ವಿಮರ್ಶಕರಾಗುತ್ತಿದ್ದುದರಲ್ಲಿ ಸಂಶಯವಿಲ್ಲ. ಕನ್ನಡಕ್ಕೆ ಇದೂ ಒಂದು ಭಾರಿ ನಷ್ಟ.

ಆದರೆ ಆ ನಷ್ಟ ಅಂಕಣ ಸಾಹಿತ್ಯಕ್ಕೆ ಲಾಭವಾಯಿತೆಂದೇ ಹೇಳಬೇಕು. ಅವರು ನಾನು ಕಂಡ ಉತ್ಕೃಷ್ಟ ಮಹೋಜ್ವಲ ಮೇಧಾವಿಗಳಲ್ಲೊಬ್ಬರು, ಅಗ್ರಗಣ್ಯರು. ಪ್ರತಿಭಾ

ಸಾಮರ್ಥ್ಯದಲ್ಲಿಯೂ ಅವರು ಪ್ರಥಮ ದರ್ಜೆಗೆ ಸೇರಿದವರು. ಅವರ ಈ ಗುಣಗಳು, ಜತೆಗೆ ಅವರ ಇಡೀ ಬದುಕು ಕೇವಲ ಅಂಕಣ ಸಾಹಿತ್ಯಕ್ಕೆ ಮೀಸಲಾಯಿತು. ಕೊನೆಗೆ ಈ ಗುಣಗಳು ಆಡಳಿತದಲ್ಲಿ ಪ್ರತಿಬಿಂಬಿಸಲಿಲ್ಲ. ರವೀಂದ್ರನಾಥ ಟಾಗೋರ್ ಎಂಬ ಒಂದೇ ಒಂದು ಜೀವನ ಚರಿತ್ರೆ, ಜಾನಪದ ಸ್ವರೂಪ, 'ಕನ್ನಡ ಕಟ್ಟುವ ಕೆಲಸ' ಎಂಬ ಸಮ್ಮೇಲನಾಧ್ಯಕ್ಷ ಭಾಷಣ ಬಿಟ್ಟರೆ, ಅವರ ಲೇಖನಿಯಿಂದ ಬೇರಾವ ದೀರ್ಘ ರಚನೆಗಳೂ ಪ್ರಕಟವಾದದ್ದು ನನ್ನ ಗಮನಕ್ಕೆ ಬಂದಿಲ್ಲ. ಅಂಕಣಕ್ಕೆ ತಮ್ಮನ್ನು 'ಸಂಪೂರ್ಣವಾಗಿ ನಿವೇದಿಸಿಕೊಂಡದ್ದೇ ಕಾರಣವಾಗಿ ಅದು ಅವರ ಬದುಕಿನ ಅವಿಭಾಜ್ಯಾಂಗವಾಗುತ್ತದೆ.; ಸಹಜ ಪ್ರವೃತ್ತಿಯಾಗುತ್ತದೆ; ಅದಮ್ಯ ಲಾಭದಾಯಕ ಪ್ರಲೋಭನೆಯಾಗುತ್ತದೆ. ಚಲನಶೀಲ ವಿಶ್ವಕೋಶದಂತಿರುವ ನಿರ್ದಿಗಂತವಾದ ಅನುಭವದ ಹರಹು ಹೊಂದಿರುವ ಅವರ ವ್ಯಕ್ತಿತ್ವಾಭಿವ್ಯಕ್ತಿಗೆ ಅದು ಸಲ್ಲಲಿತ ಸಂವಹನ ಮಾಧ್ಯಮವಾಗುತ್ತದೆ. ದೀರ್ಘರಚನೆಯ ಕಡೆಗೆ ಅವರ ಮನಸ್ಸು ಹರಿದಿದ್ದರೆ, ಎಂಥ ಮಹತ್ಕೃತಿಯನ್ನಾದರೂ ರಚಿಸಬಲ್ಲ ಸಾಮರ್ಥ್ಯವಿತ್ತೆನ್ನುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಅವರ 'ಸಂಪ್ರತಿ' ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದಾಗ ಅಂಕಣ ಲೇಖನಗಳಿಗೆ ಸಾಹಿತ್ಯಕ್ಷೇತ್ರದಲ್ಲಿ ಯೋಗ್ಯಸ್ಥಾನಮಾನ ದೊರೆಯುತ್ತವೆ; ನಾಯಕರು ಅಂಕಣ ಸಾಮ್ರಾಜ್ಯದ ನಿಜವಾದ ನಾಯಕರಾಗುತ್ತಾರೆ, ಕಿರೀಟಿಯಾಗುತ್ತಾರೆ.

ಹಾಮಾನಾ ಅವರ ಆತ್ಮಪ್ರತ್ಯಯ ಅದಮ್ಯವಾದದ್ದು, ಅಪ್ರತಿಹತವಾದದ್ದು; ಅತಿ ಎನ್ನುವ ಮಟ್ಟಕ್ಕೂ ಹೋಗುತ್ತದೆ. ಆತ್ಮಪ್ರತ್ಯಯಕ್ಕೆ ತಕ್ಕಂಥ ಶಕ್ತಿಸಾಮರ್ಥ್ಯಗಳೂ ಅವರಲ್ಲಿ ವಿಪುಲವಾಗಿವೆ. ಆ ಗುಣದಿಂದಾಗಿ ಅವರ ವ್ಯವಹಾರದಲ್ಲಿ ನಿರ್ದಾಕ್ಷಿಣ್ಯ ಪ್ರವೃತ್ತಿಯ ನೈಷ್ಠುರ್ಯ ಎದ್ದು ಕಾಣುತ್ತದೆ. ಹತ್ತಿರದ ಕೆಲವೇ ಕೆಲವರ ಮಿತಿಮೀರಿದ ಸ್ತವನ ಸ್ತುತಿಗಳಿಂದಾಗಿ, ಚಾಡಿರಾಡಿಯಿಂದಾಗಿ, ಪೂರ್ವಗ್ರಹದ ಕೀವು ಸೇರಿಕೊಂಡು ಆ ನೈಷ್ಠುರ್ಯ ಎಲ್ಲೆ ಮೀರುತ್ತದೆ, ಸಮತೋಲನಕ್ಕಧಿಯಾಗುತ್ತದೆ, ನಿಜವಾದ ಸ್ನೇಹವನ್ನು ನಿರಾಕರಿಸುತ್ತದೆ, ಕರ್ತೃವಿನ ದೌರ್ಬಲ್ಯಗಳನ್ನು ಮರೆಸಿ, ಪರರ ಲೋಪದೋಷಗಳಿಗೆ ದುರ್ಬೀನು ಹಿಡಿದು, ಅವರನ್ನು ತುಂಡರಿಸುತ್ತದೆ. ಇಂದಿನ ಜಗತ್ತಿಗೆ ನಾಯಕರಂಥ ಧೈರ್ಯಸ್ಥರ ಕಟುಟೀಕೆ ಅತ್ಯಾವಶ್ಯಕವೆಂಬುದರಲ್ಲಿ ಎರಡು ಮಾತಿಲ್ಲ. 'ಈಗಾಗಲೇ ಕನ್ನಡದಲ್ಲಿ ತಮ್ಮ ಆತ್ಮಕಥೆ ಪ್ರಕಟಿಸಿದ ಕೆಲವರಂತೆ ಸುಳ್ಳು ಹೇಳಿಕೊಂಡು ದೊಡ್ಡವನೆನಿಸಿಕೊಳ್ಳಲು ನನಗೆ ಇಷ್ಟವಿಲ್ಲ'(ಸ್ವಾಂತ: ಮೊದಲ ಮಾತು, ಪು.೭) ಎಂಬ ಅವರ ಮಾತನ್ನು ಇತರರ ಕೃತಿಗಳಿಗಿಂತ ಅವರ ಸ್ವಾಂತಕ್ಕೆ ಅನ್ವಯಿಸಬಾರದೇಕೆ ? ಬದುಕಿದ್ದಾಗ ಇತರರ ಕೃತಿಗಳಲ್ಲಿ ತಾವು ಕಂಡ ಸುಳ್ಳುಗಳನ್ನು ಈ ಸತ್ಯನಿಷ್ಠ ವ್ಯಕ್ತಿ ಎತ್ತಿ ತೋರಲಿಲ್ಲವೇಕೆ? ಎಲ್ಲರಲ್ಲಿರುವಂತೆ ಇವರಲ್ಲಿಯೂ ದೌರ್ಬಲ್ಯಗಳಿದ್ದೇ ಇವೆ.

ಅದೇನೇ ಇರಲಿ, ವಿಶ್ವಕೋಶದಂಥ ಅವರ ಅಂಕಣ ಸಾಹಿತ್ಯ ೧. ಹಾಗೂ ಅವರ ಕನ್ನಡ ನಿಷ್ಠೆ ಅವರ ದೌರ್ಬಲ್ಯಗಳನ್ನು ಮರೆಸುವಷ್ಟು ಪ್ರಖರವಾಗಿವೆ, ಪ್ರಕಾಶಮಾನವಾಗಿವೆ, ಚಿರ ಮೌಲ್ಯಾತ್ಮಕವಾಗಿವೆ. ಅವರ ಜೀವನದ ಜೀವಧಾತುವೇ ಕನ್ನಡ, ಕನ್ನಡದ ಸಮಸ್ಯೆಗಳೇನು? ಅವುಗಳಿಗೆ ಪರಿಹಾರಗಳೇನೆಂಬುದು ಚಳುವಳಿಗಾರರಿಗೂ ಪೂರ್ತಿ ಗೊತ್ತಿಲ್ಲ. ನಾಯಕರು ತಮ್ಮ ಭಾಷಣ ಲೇಖನ ಸಂವಾದಗಳ ಮೂಲಕ ಅವನ್ನು ಸ್ಪಷ್ಟಪಡಿಸಿದ್ದಾರೆ. ಸರಕಾರೀ ಮರ್ಯಾದೆಗಳೊಡನೆ ಅವರ ಅಂತ್ಯಸಂಸ್ಕಾರ ನಡೆದದ್ದು ಸಂಸ್ಕೃತಿಯ ಸಂಕೇತವಾಗಿದೆ. ಕನ್ನಡ ಪರವಾದ ನಾಯಕರ ಸಂದೇಶವನ್ನು ಕಾರ್ಯಗತಗೊಳಿಸಿದಾಗ ಮಾತ್ರ, ಆ ಮರ್ಯಾದೆಗಳಲ್ಲಿ ಎಷ್ಟು ನಿಯತ್ತಿದೆಯೆಂಬುದು ರುಜುವಾತಾಗುತ್ತದೆ. ಶಿಸ್ತು ಅಚ್ಚುಕಟ್ಟುಗಳಿಗೆ ಹೆಸರಾದ ಅವರು ಹುಟ್ಟಿನಿಂದಲೇ ನಾಯಕರು; ನಾಯಕರೆಂಬ ಹೆಸರನ್ನವರು ಜೀವನದಲ್ಲಿ ಸಾರ್ಥಕಪಡಿಸಿಕೊಂಡದ್ದುಂಟು; ಮುಂದೆಯೂ ಅವರು ವಾಙ್ಮಯ ಕ್ಷೇತ್ರದ ನಾಯಕರಾಗಿಯೇ ಉಳಿಯಲಿ!

೧. ನಾಯಕರ ಅಂಕಣ ಗ್ರಂಥಗಳು: ಸಾಹಿತ್ಯ ಸಲ್ಲಾಪ, ಸಲ್ಲಾಪ ಸಂಪುಟ, ಸಂಪದ, ಸಮೂಹ, ಸಂಪರ್ಕ, ಸಾಂಪ್ರತ, ಸಂವಹನ, ಇತ್ಯಾದಿ.

ಗಡಿನಾಡ ಅಧ್ಯಯನ ಆಯೋಗದ ಮಧ್ಯಂತರ ವರದಿ:

ಗಡಿನಾಡ ಅಧ್ಯಯನ ಆಯೋಗದ ಅಧ್ಯಕ್ಷರಾದ ಶ್ರೀ ವಾಟಾಳ್ ನಾಗರಾಜ್ ಅವರು ಮಧ್ಯಂತರ ವರದಿಯನ್ನು ೧೮.೮.೨೦೦೦ನೆಯ ದಿನಾಂಕದಂದು ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. ಈ ವರದಿ ಪೂರ್ಣವಲ್ಲವೆಂಬುದನ್ನು, ಪೂರ್ಣವಾಗದಿರಲು ಕಾರಣಗಳೇನೆಂಬುದನ್ನು ವಿವರಿಸಿ, ಆಯೋಗ ಮಾಡಬೇಕಾದ ಕಾರ್ಯವನ್ನು ಪಟ್ಟಮಾಡಿದ್ದಾರೆ. ಹೊರನಾಡ ಕನ್ನಡಿಗರು ಅಬ್ಬೇಪಾರಿಗಳಾಗಿದ್ದಾರೆ, ಗಡಿನಾಡ ಕನ್ನಡಿಗರು ಕರುಣಾಜನಕ ಸ್ಥಿತಿಯಲ್ಲಿದ್ದಾರೆ, ಕನ್ನಡ ನಾಡಿನೊಳಗಿರುವ ಪರಭಾಷಾ ಜನ ಪ್ರಬಲವಾಗಿದ್ದಾರೆ ಎಂಬುದೇ ಮಧ್ಯಂತರ ವರದಿಯ ಸದ್ಯದ ತೀರ್ಮಾನವಾಗಿದೆ. ಕನ್ನಡ ಅಭಿವೃದ್ಧಿಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಡಾ. ಪಾಟೀಲ ಪುಟ್ಟಪ್ಪನವರೂ ಇದೇ ಅಭಿಪ್ರಾಯ ಹೊಂದಿದ್ದರೆಂಬುದು ನನ್ನ ನೆನಪು. ವರದಿಗಳೆಲ್ಲವೂ ಸಾಮಾನ್ಯವಾಗಿ ಕಪಾಟುಗಳಲ್ಲಿ ಧೂಳು ಮುಕ್ಕಿಕೊಂಡು, ಹುಳು ಹಿಡಿದು, ನಶಿಸಿಹೋಗುತ್ತವೆಂಬುದು ಸಾರ್ವಜನಿಕಾಭಿಪ್ರಾಯ.

ಆಯೋಗದ ಅಧ್ಯಕ್ಷರು ಎತ್ತಿರುವ ಸಮಸ್ಯೆಹಾಗೂ ಸಲಹೆಗಳಿವು: ನೆರೆರಾಜ್ಯಗಳಲ್ಲಿರುವ ಗಡಿ ಅಂಚಿನ ಕನ್ನಡ ಪ್ರದೇಶಗಳಲ್ಲಿ ಕಲೆ ಸಂಸ್ಕೃತಿ, ಸಾಹಿತ್ಯ ಮಾತ್ರವಲ್ಲದೆ ಕನ್ನಡಿಗರ ಅಸ್ತಿತ್ವವನ್ನೇ ನಾಶಮಾಡಲು ಅಲ್ಲಿನ ಸರ್ಕಾರಗಳು ನಿರಂತರವಾಗಿ ಪ್ರಯತ್ನಮಾಡುತ್ತಿವೆ. ೨. ಹೊರನಾಡಿನಲ್ಲಿ ಕನ್ನಡ ಶಾಲೆಗಳು ಯಾವುದೇ ಕಾರಣಕ್ಕೆ ಮುಚ್ಚದಂತೆ ಆಸಕ್ತಿವಹಿಸಿ ನೋಡಿಕೊಳ್ಳಬೇಕು. ೩. ಗಡಿನಾಡ ಜಿಲ್ಲೆಗಳಲ್ಲಿ ಕನ್ನಡದಲ್ಲಿ ಅಭಿಮಾನವಿರುವ ಅಧಿಕಾರಿಗಳನ್ನು ನೇಮಕ ಮಾಡಬೇಕು. ೪. ವಿವಿಧ ಅಕಾಡೆಮಿಗಳಲ್ಲಿ ಗಡಿನಾಡು ಹೊರನಾಡು ಸದಸ್ಯರನ್ನು ನೇಮಿಸಿಕೊಳ್ಳಬೇಕು. ೫. ಬೆಂಗಳೂರಿನಲ್ಲಿ ಗಡಿನಾಡ ಕನ್ನಡ ಭವನ ಕಟ್ಟಬೇಕು. ಈ ಸಲಹೆಗಳು ಯೋಗ್ಯ ಹಾಗೂ ಜರೂರಾಗಿ ಕಾರ್ಯಗತಗೊಳಿಸಬೇಕಾದಂಥವೆಂದು ಸ್ಪಷ್ಟಪಡಿಸಬಹುದಾಗಿದೆ.

ಕನ್ನಡನಾಡಿನೊಳಗಿರುವ ಗಡಿಹಳ್ಳಿಗಳನ್ನು ಆಯ್ದುಕೊಂಡು, ಸಾಂಸ್ಕೃತಿಕವಾಗಿ ಹಾಗೂ ಆರ್ಥಿಕವಾಗಿ ಬಲಪಡಿಸಬೇಕು. ಸಣ್ಣಪುಟ್ಟ ಕೈಗಾರಿಕೆಗಳನ್ನು ಆರಂಭಿಸಬೇಕು, ಕಚೇರಿಗಳನ್ನು ವ್ಯವಸ್ಥೆಗೊಳಿಸಬೇಕು. ಕನ್ನಡ ಮಾಧ್ಯಮದ ಶಾಲೆಗಳನ್ನು ನಡಸಬೇಕು. ಗಮಕ ಸಂಗೀತಾದಿ ಕಲಾ ಕಾರ್ಯಕ್ರಮಗಳನ್ನು ಪ್ರತಿ ತಿಂಗಳೂ ನಡಸಬೇಕು. ಗಡಿಯಾಚೆಯಿರುವ ಕನ್ನಡಿಗರು ಈ ಎಲ್ಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತು ಗಡಿ ಊರುಗಳಲ್ಲಿ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕನ್ನಡ ಭಾಷೆ ಪ್ರಜಾಪ್ರಭುತ್ವದ ಹೆಗ್ಗುರುತು, ಗಡಿಭದ್ರತೆಯ ಸಂಕೇತ, ಆತ್ಮಗೌರವದ ಚಿಹ್ನೆ ಎಂಬುದನ್ನು ಆಡಳಿತ ನಡಸುವವರು ಅರಿಯಬೇಕು. ಏಕೀಕರಣವಾಗಿ ನಲವತ್ತು ನಾಲ್ಕು ವರ್ಷಸಂದರೂ ಆ ಕಡೆ ಸರ್ಕಾರ ಗಮನಹರಿಸದಿರುವುದು ಈ ರಾಜ್ಯದ ದೌರ್ಭಾಗ್ಯ. ಕನ್ನಡ ನಾಡುನುಡಿಗಳ ಬಗ್ಗೆ ಅಲ್ಲಿಯ ಜನರಲ್ಲಿ ಪ್ರೀತಿ ಗೌರವ ಹೆಮ್ಮೆ ಮೂಡುವಂತೆ ಸನ್ನಿವೇಶ ವಾತಾವರಣಗಳನ್ನು ಸೃಷ್ಟಿಸಬೇಕಾದ್ದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಬೇಕಾದ್ದು ಅತ್ಯಗತ್ಯ. ಕನ್ನಡ ಭಾಷೆ ಗಡಿಯ ಕೋಟೆಯಾದಾಗ, ನಾಡಿನ ಅಂತರ್ಪ್ರದೇಶದಲ್ಲಿ ಶಾಂತಿಕ್ಷೇಮಗಳು ನೆಲಸುವಂತಾಗುತ್ತದೆ. ಬೆಂಗಳೂರು ಬಳಿಯಿರುವ ಹೊಸೂರನ್ನು ತಮಿಳುನಾಡು ಯಾವ ವೈಖರಿಯಿಂದ ಅಭಿವೃದ್ಧಿಗೊಳಿಸುತ್ತಿದೆಯೆಂಬುದನ್ನು ಸರ್ಕಾರ ಗಮನಿಸಬೇಕು. ಒಂದಲ್ಲ ಒಂದು ದಿನ ಅದು ಉಗ್ರರ ನೆಲೆಯಾಗುವುದಾದರೆ, ಬೆಂಗಳೂರಿಗೆ ಅಪಾಯವಾಗುವುದಾದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಅದೇ ಮಾದರಿಯಲ್ಲಿ ನಮ್ಮ ಗಡಿ ಹಳ್ಳಿಗಳೂ ಬೆಳೆಯಬಾರದೇಕೆ?

-ದೇಜಗೌ

ಶಿಶಿರದ ಸುಮಗಳು

ಎ.ಪಿ.ಗೌರೀಶಂಕರ
"ಶ್ರೀಶೈಲ" ಪಿಂಟೋಲೇನ್ ಕ್ರಾಸ್
ಕರಂಗಲ್ಪಾಡಿ
ಮಂಗಳೂರು-೫೭೫ ೦೦೩

ನ್ಯಾಯಮೂರ್ತಿ ರಾಷ್ಟ್ರಪ್ರೇಮಿ ಸತ್ಯನಿಷ್ಠ ಎಂ.ಸಿ.ಚಾಗ್ಲಾ ಅವರ ಜನ್ಮ ಶತಮಾನೋತ್ಸವದ (೨೦೦೦) ಸಂದರ್ಭಕ್ಕಾಗಿ ಬರೆಸಿದ ಲೇಖನ

"ಸನ್ಯಾಸದ ಆದರ್ಶ ನನ್ನ ಮೆಚ್ಚಿಗೆಯದಲ್ಲ. ಸಂನ್ಯಾಸಿಯು ಬಾಹ್ಯ ಜಗತ್ತಿನಿಂದ ತನ್ನನ್ನು ಪ್ರತ್ಯೇಕಿಸಿ ಏಕಾಂತದಲ್ಲಿ ಧ್ಯಾನಾಸಕ್ತನಾಗಿ ತನ್ನ ಆತ್ಮವನ್ನು ಮಾಯೆಯಿಂದ ಮುಕ್ತಗೊಳಿಸಲು ಪ್ರಯತ್ನಿಸುವನು. ಮೂಲತಃ ಇದೊಂದು ಸ್ವಾರ್ಥಪರಸಾಧನೆ. ಬಾಹ್ಯ ಜಗತ್ತು ರಾಜಕೀಯ ಹಾಗೂ ಆರ್ಥಿಕ ದಾಸ್ಯದಲ್ಲಿ ತೊಳಲುತ್ತ ಪರಿಹಾರಗಾಣದೆ ದುಃಖಿಸುತ್ತಿರುವಾಗ ನನ್ನೊಬ್ಬನ ಆತ್ಮೋನ್ನತಿ ಸಾಧನೆಗೆಲ್ಲಿಯ ಹಕ್ಕು? ಇದಕ್ಕಿಂತ ಭಗವದ್ಗೀತೆ ಉಪದೇಶಿಸುವ ಅನಾಸಕ್ತಿಯೋಗ ನನಗೆ ಹೆಚ್ಚಿನ ತೃಪ್ತಿ ನೀಡುವ ಆದರ್ಶ. ಜೀವನವನ್ನು ತ್ಯಜಿಸತಕ್ಕದ್ದಲ್ಲ. ಯಾವುದೇ ಸ್ಥಾನದಲ್ಲಿರುವುದಾದರೂ, ಅದಕ್ಕಿರುವ ಕರ್ತವ್ಯ ಪೂರೈಸತಕ್ಕದ್ದು. ಕರ್ತವ್ಯ ಪೂರೈಸಿ ಫಲದ ಕುರಿತು ನಿರಾಸಕ್ತನಾಗಿರಬೇಕು. ಕೆಲಸ ಮಾಡುವ ಸ್ವಾತಂತ್ರ್ಯ ನಮಗಿದೆ. ಯಶಸ್ಸು ದೈವೇಚ್ಛೆ ಅಥವಾ ಯಾವುದೋ ಅವ್ಯಕ್ತ ವಿಧಿಶಕ್ತಿಗೆ ಸೇರಿದ್ದು. ನಿಜಕ್ಕೂ, ಬೌದ್ಧಿಕವಾಗಿ ಮತ್ತು ಭಾವನಾತ್ಮಕವಾಗಿ ಜೀವನದಲ್ಲಿ ಸಂತೋಷವೆಂಬುದಿದೆ ಎಂದು ನನಗನಿಸುವುದಿಲ್ಲ. ಕ್ರೂರ ವಿಧಿಯ ಕೂರಂಬುಗಳಿಂದ ನಾವು ಸದಾ ಗಾಸಿಗೊಳಗಾಗುತ್ತಿರುವೆವು. ಆದರೆ ನಿಜಕ್ಕೂ ತೃಪ್ತಿ ಎಂಬುದಿದೆ ಮತ್ತು ಅದು ನಮ್ಮಟುಕಿನಲ್ಲಿದೆ. ಚೆನ್ನಾಗಿ ಪೂರೈಸುವ ಯಾವುದೇ ಕೆಲಸದಿಂದ ತೃಪ್ತಿ ಲಭ್ಯ. ಇದು ನನ್ನ ಅನುಭವ. ವ್ಯಕ್ತಿಯ ಪಾಲಿಗೆ ಬರುವ ಯಾವುದೇ ಕೆಲಸವನ್ನು ಪೂರೈಸುವ ಕಾರ್ಯ ವಿಧಾನ ಮತ್ತು ಶ್ರದ್ಧೆ ಆತನ ಜೀವನವನ್ನು ಸಾರ್ಥಕಗೊಳಿಸುತ್ತವೆ. ಸೋಲು ಗೆಲವುಗಳು ಕೇವಲ ಪ್ರಾಸಂಗಿಕ- ಅವು ಸಹಜ ತೃಪ್ತಿ ದೊರಕಿಸಲಾರವು. ಸ್ವಾರ್ಥ ಚಿಂತನೆ ಸ್ವಲ್ಪವೂ ಇಲ್ಲದೆ, ಕೆಲಸಕ್ಕಾಗಿಯೇ ಕೈಗೊಂಡ ಶ್ರದ್ಧೆಯ ಕೆಲಸ ಮಧುರ ಸಂಗೀತ ಲಹರಿಯಂತೆ- ಆದರ ಗಾನಮಾಧುರ್ಯ ನಿತ್ಯ ಜೀವನದ ಸದ್ದುಗದ್ದಲದ ಮಧ್ಯೆ ಭಾವದಲ್ಲಿ ಉಳಿಯುವ ವಸ್ತು. ಹಿನ್ನೋಟದ ಅನುಭವದಿಂದ ಹೇಳುವುದಾದರೆ ದಯೆ ಮತ್ತು ವಿನಯ ಮಾನವ ಸ್ವಭಾವಸಾಧ್ಯ ಗುಣಗಳು. ಇವು ಯಾರನ್ನೂ ತಣಿಸಿ ಮಣಿಸುವಂಥವು. ಸ್ವಪ್ರತಿಷ್ಠೆ ಮತ್ತು ಸ್ವಾರ್ಥಗಳ ತೆಳು ಹಾಸಿನಡಿಯಲ್ಲಿ ಪ್ರತಿಯೊಬ್ಬನಲ್ಲೂ ಸ್ವಭಾವ ಸಹಜವಾಗಿರುವ ಗುಣಗಳಿವು. ಇವುಗಳ ಉತ್ಕರ್ಷೆಯಿಂದ ಜೀವನ ಸಮೃದ್ಧ, ಸಂತುಷ್ಟ" Roses in December , M.C.Chagla's auto biography (ಶಿಶಿರದ ಸುಮಗಳು, ಪುಟ ೪೭೫).

ಜೀವಿಸಿದ್ದರೆ ಇಂದಿಗೆ ನೂರು ವಸಂತಗಳನ್ನು ಕಳೆಯುತ್ತಿದ್ದ ಮಹಮ್ಮದ್ ಕರೀಮ್ ಚಾಗ್ಲಾರವರ ಜೀವನ ಧರ್ಮದರ್ಶನವಿದು.

ಮಹಮ್ಮದ್ ಕರೀಮ್ ಗುಜರಾತಿ ಮೂಲದ, ಶೀಯಾ ಶಾಖೆಯ ಬೋರಾ ಮುಸ್ಲಿಮ್. ಕುಲಕಸಬು ವ್ಯಾಪಾರ. ಹಾಗೆಂದೇ ಸಣ್ಣ ತರಗತಿಯಲ್ಲಿ ಸಹಪಾಠಿಗಳು ಇವನನ್ನು "ವ್ಯಾಪಾರೀ" (ಮರ್ಚೆಂಟ್) ಎಂದೇ ಕರೆ ಯುತ್ತಿದ್ದರು. ಆ ಹೆಸರು ಅಸಹ್ಯವೆನಿಸಿತು ಚಿಕ್ಕ ಬಾಲಕನಿಗೆ. ಅತಿ ದುಃಖದಲ್ಲಿ ತನ್ನ ಅಜ್ಜನಲ್ಲಿ "ವ್ಯಾಪಾರಿ ಎಂಬ ಹೆಸರಲ್ಲದೆ ಇತರ ಯಾವುದೇ ಹೆಸರು ತನಗೆ ಸಿಗದೇ?"- ಎಂದು ಹಲುಬಿದ. ಮೊಮ್ಮಗನ ತಲೆ ಮೃದುವಾಗಿ ನೇವರಿಸುತ್ತಾ, ಅಜ್ಜ ಸಹೃದತೆಯಲ್ಲಿ ಅವನ ದುಃಖದ ಕಾರಣ ಅರಿತು "ಚಾಗ್ಲಾ" ಎಂಬ ಹೆಸರು ಸೂಚಿಸಿದರು. "ನನ್ನ ತಂದೆ ಅವರ ತಂದೆಯ ಒಬ್ಬನೇ

ಮಗ ; ಹಾಗಾಗಿ ಪ್ರೀತಿಯಿಂದ ಮಗನನ್ನು ಚಾಗ್ಲಾ ಎಂದು ಕರೆಯುತ್ತಿದ್ದರು. ಅದುವೇ ನಿಜಕ್ಕೂ, ನಿನ್ನ ಅನ್ವರ್ಥ ನಾಮವಾಗಲಿ'' ಅಜ್ಜನ ಹರಕೆ. ಅವರ ಮಾತೃಭಾಷೆ ಕಚ್ಚಿ. ಆ ಭಾಷೆಯಲ್ಲಿ ''ಚಾಗ್ಲಾ'' ಎಂದರೆ ಪ್ರೀತಿ ಪಾತ್ರ ಪ್ರಿಯಾಂಕ ಎಂದು ಅರ್ಥ. ನಿಜಕ್ಕೂ ಮಹಮ್ಮದ್ ಕರೀಮನ ಅನ್ವರ್ಥ ನಾಮ ಚಾಗ್ಲಾ ಬಂಧುಗಳಿಗೆ, ಸ್ನೇಹಿತರಿಗೆ, ಉಪಾಧ್ಯಾಯರಿಗೆ, ತನ್ನ ಸಹೋದ್ಯೋಗಿಗಳಿಗೆ ರಾಜಕೀಯ ಧುರೀಣರಿಗೆ , ತೀರ ಜನಸಾಮಾನ್ಯರಿಗೂ, ಕೊನೆಯ ತನಕ ಚಾಗ್ಲಾರವರು ''ಚಾಗ್ಲಾ'' ಆಗಿಯೇ ಉಳಿದರು.

ಮುಂಬಯಿಯ ದಾದರ್‌ನಲ್ಲಿ ಎಂಟೋನಿಯೋ ಡಿ.ಸಿಲ್ವ ಹೈಸ್ಕೂಲ್, ಅನಂತರ ಸೈಂಟ್ ಕ್ಸೇವಿಯರ್ ಹೈಸ್ಕೂಲ್‌ಗಳಲ್ಲಿ ವಿದ್ಯಾಭ್ಯಾಸ. ಬಹಳ ಸೌಮ್ಯ ಸ್ವಭಾವದ, ಚುರುಕು ಬುದ್ಧಿಯ, ಶಿಸ್ತಿನ ಹುಡುಗ. ಸಹಪಾಠಿಗಳಿಗೆ, ಅಧ್ಯಾಪಕರಿಗೆ ಮೆಚ್ಚಿನ ''ಚಾಗ್ಲಾ'' ಎಳವೆಯಿಂದಲೂ ಪಠ್ಯೇತರ ಪುಸ್ತಕಗಳಲ್ಲಿ ತೀವ್ರ ಆಸಕ್ತಿ. ಒಂದು ದಿನ ತರಗತಿ ಪ್ರಾರಂಭವಾಗುವ ಮೊದಲೇ ಪುಸ್ತಕವೊಂದನ್ನು ಓದುವುದರಲ್ಲಿ ಮಗ್ನವಾಗಿದ್ದ. ಗಾಢತೆ ಎಷ್ಟೆಂದರೆ, ಅಧ್ಯಾಪಕರು ತರಗತಿಯೊಳಗೆ ಬಂದುದು, ವಿದ್ಯಾರ್ಥಿಗಳೆಲ್ಲಾ ಗೌರವದಲ್ಲಿ ಎದ್ದು ನಿಂತದ್ದು, ಅನಂತರ ದಿನದ ಪ್ರಾರ್ಥನೆ ಸಲ್ಲಿಸಿದ್ದು ಮುಂತಾದವು ಚಾಗ್ಲಾನಿಗೆ ತಿಳಿಯಲಿಲ್ಲ. ಇದೊಂದು ಶಿಸ್ತು ಭಂಗ ಪ್ರಕರಣ. ಅಧ್ಯಾಪಕರು ಚಾಗ್ಲಾನನ್ನು ಕರೆದು ಅವನ ಹಸ್ತಕ್ಕೆ ಬೆತ್ತದ ಚಡಿಏಟು ಕೊಟ್ಟು ದಂಡಿಸಿ, ತಮ್ಮ ಶಿಸ್ತು ಪಾಲನೆ ಮಾಡಿದರು. ಈ ಚಿಕ್ಕ ಶಿಸ್ತುಭಂಗ ಪ್ರಕರಣ ಮತ್ತು ದಂಡನೆಯಿಂದ ಎಳೆಯ ಚಾಗ್ಲಾ ಬಹಳ ನೊಂದುಕೊಂಡ.

ಭವಿಷ್ಯದಲ್ಲಿ ಮುಂಬೈ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಲಿರುವ ಮಗುವಿನ ತಲೆಯಲ್ಲಿ ವಾದ ಸರಣಿ ಹೀಗೆ ಬೆಳೆದಿತ್ತು.''ಶಿಸ್ತು ಭಂಗಿಸುವ ಉದ್ದೇಶ ನನಗಿರಲಿಲ್ಲ. ಅಧ್ಯಾಪಕರಿಗೆ ಅಗೌರವ ತೋರುವ ಉದ್ಧಟತನಕ್ಕೆ ನನ್ನಲ್ಲಿ ಅವಕಾಶ ವಿಲ್ಲ. ಪುಸ್ತಕ ಓದುವುದರಲ್ಲಿ ಮಗ್ನನಾಗಿರುವುದು ತಪ್ಪಲ್ಲ. ಶಿಸ್ತುಭಂಗವಲ್ಲ. ಈ ವಿಚಾರವೆಲ್ಲ ತಿಳಿದಿದ್ದ ಅಧ್ಯಾಪಕರು ನನ್ನಲ್ಲಿ ಆ ಕುರಿತು ಒಂದು ಮಾತನ್ನೂ ಕೇಳದೆ ದಂಡಿಸಿದ್ದು ಸರಿಯಲ್ಲ'' ಮಗುವಿನ ವಾದ ಸರಣಿ ನಿಜಕ್ಕೂ ಶಿಸ್ತುಕ್ರಮದ ಕುರಿತಿರುವ ಪ್ರೌಢ ಕಾನೂನಿನ ಸ್ವಭಾವ ಸಿದ್ಧ ನ್ಯಾಯದ ಕ್ರೋಢೀಕರಿಸಿದ ತತ್ವಗಳ ಸಾರ. ಆಪಾದಿತನಿಗೆ ಶಿಕ್ಷೆ ವಿಧಿಸುವ ಮೊದಲು ನ್ಯಾಯಾಧೀಶ ಕಡ್ಡಾಯವಾಗಿ ಅನುಸರಿಸಲೇಬೇಕಾಗಿರುವ ಕಾನೂನು ಕ್ರಮವಿದು.

ಬಹಳ ವರ್ಷಗಳ ಅನಂತರ ಕೇಂದ್ರ ಸರಕಾರದ ವಿದ್ಯಾಮಂತ್ರಿಯಾಗಿ ಅದೇ ಶಾಲೆಯ ಯಾವುದೋ ಸಮಾರಂಭಕ್ಕೆ ಹಳೆವಿದ್ಯಾರ್ಥಿಯಾಗಿ ಆಮಂತ್ರಿತರಾಗಿ ಭೇಟಿಯಿತ್ತಾಗ, ಇವರನ್ನು ದಂಡಿಸಿದ್ದ ವೃದ್ಧ ಅಧ್ಯಾಪಕರು ಸಭೆಯಲ್ಲಿದ್ದರು. ಇಬ್ಬರೂ ಆತ್ಮೀಯತೆಯಲ್ಲಿ ಹಳೆಯ ನೆನಪುಗಳನ್ನು ಹಂಚಿಕೊಂಡರು. ಹಿಂದೆ ಶಿಸ್ತುಭಂಗ ಮಾಡಿದ್ದಕ್ಕೆ ನೀಡಿದ ದಂಡನೆ ತನ್ನ ಜೀವನದ ಮರೆಯಲಾರದ ಪಾಠವೆಂದರು. ಸುಮಾರು ಅದೇ ಕಾಲ ೧೯೦೮ರಲ್ಲಿ ಬಾಲಗಂಗಾಧರ ತಿಲಕರಿಗೆ, ದೇಶದ್ರೋಹ ಅಪರಾಧಕ್ಕಾಗಿ ಆರು ವರ್ಷಗಳ ಜೈಲು ವಾಸ ವಿಧಿಸಲಾಗಿತ್ತು. ಶಿಕ್ಷೆ ವಿಧಿಸಿದವರು ನ್ಯಾಯಮೂರ್ತಿ ದಾವರ್ ಎಂಬ ಭಾರತೀಯ. ಕೇವಲ ತಾಂತ್ರಿಕ ಕಾರಣಕ್ಕಾಗಿ, ಭಾರತೀಯ ನ್ಯಾಯಾಧೀಶನೊಬ್ಬ ನಿಜಕ್ಕೂ ನಿರಪರಾಧಿ ಅಪ್ರತಿಮ ದೇಶಭಕ್ತನಿಗೆ ಶಿಕ್ಷೆ ವಿಧಿಸಿದ

ದುರಂತದಿಂದ ಚಾಗ್ಲಾ ಆದಯ ಬಹಳ ಉದ್ವಿಗ್ನನಾದ. ಇನ್ನೂ ಏಳು-ಎಂಟರ ಹರೆಯದ ಬಾಲಕ ದಾದರ್-ಪರೇಲ್ ವಠಾರದಲ್ಲಿ ಉದ್ವಿಗ್ನರಾಗಿ ದಂಗೆಯೆದ್ದ ಜನರೊಡನೆ ಸೇರಿ ಸಹಕರಿಸಲು ಸಾಧ್ಯವಾಗದೆ ಹಲುಬಿ ಅನುಕಂಪಿಸಿದ. ಈ ಸಂದರ್ಭದಲ್ಲಿ ತನ್ನಿಂದೇನೂ ಮಾಡಲಾಗದೇ? ಎಂದು ಚಿಂತಿಸಿದ. ಬಹಳ ವರ್ಷಗಳ ಅನಂತರ, ಮುಂಬೈ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನೇಮಕಗೊಂಡಾಗ ಹಿಂದೆ ಲೋಕಮಾನ್ಯರಿಗೆ ಶಿಕ್ಷೆ ವಿಧಿಸಲಾದ ನ್ಯಾಯಾಲಯದಕೊಠಡಿಯಲ್ಲಿ ಹೊರಗೋಡೆಯ ಮೇಲೆ, ಅವರ ಸಮರ್ಥನಾವಾದದ ಭಾವನಾತ್ಮಕ ಮಾತುಗಳನ್ನು ಸುವರ್ಣಾಕ್ಷರದಲ್ಲಿ ಬರೆಯಿಸಿ ತನ್ನ ಅಂದಿನ ಅಸಹಾಯಕ ಸ್ಥಿತಿಯಿಂದುಂಟಾದ ಮಾನಸಿಕ ಹಿಂಸೆಯನ್ನು ಸ್ವಲ್ಪವಾದರೂ ಶಮನ ಮಾಡಲು ಪ್ರಯತ್ನಿಸಿದರು.

''ಜ್ಯೂರಿಯುವರ ತೀರ್ಪು ಏನಿದ್ದರೂ ನಾನು ನಿರಪರಾಧಿ. ಪ್ರಜೆಗಳ ಹಾಗೂ ದೇಶದ ಭವಿಷ್ಯ ನಿರ್ಧಾರ ಮಾಡುವ ಮಹಾಶಕ್ತಿಯೊಂದಿದೆಯೆಂದು ತಿಳಿದಿದ್ದೇನೆ. ನಾನು ಮುಕ್ತನಾಗಿರುವುದಕ್ಕಿಂತ, ಬಂಧನವನ್ನನುಭವಿಸುವುದರಿಂದಲೇ, ನನ್ನ ರಾಜಕೀಯ ಸಾಧನೆಯ ಉದ್ದೇಶ ಸಫಲವಾಗುವಂತೆ ದೈವೇಚ್ಛೆ ಇರಬಹುದು''.

ಲೋಕಮಾನ್ಯರ ಕುರಿತು ಚಾಗ್ಲಾರಿಗೆ ಬಹಳ ಎಳವೆಯಲ್ಲೇ ಪರಮ ಅಭಿಮಾನ ಮತ್ತು ಭಕ್ತಿ. ಲೋಕಮಾನ್ಯರು ಆ ದಿನ ಪ್ರಾರಂಭಿಸಿದ ಧೀಶ ನಿಸ್ವಾರ್ಥ ಸೇವೆಯ ಫಲವಾಗಿ ಈ ದಿನ (೧೯೫೬ರಲ್ಲಿ) ಭಾರತೀಯನೊಬ್ಬ ಈ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿ ಈ ಅಮೃತಶಿಲೆಯ ಪುಣ್ಯ ಫಲಕದ ಅನಾವರಣ ನಡೆಯುತ್ತಿದೆ ಎಂದರು.

ಭಾರತದಲ್ಲಿ ಕಾಲೇಜು ವ್ಯಾಸಂಗ ಮುಗಿಸಿ, ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡಿಗೆ ತೆರಳಿದರು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸ್ನಾತಕ ಪದವಿ ಮತ್ತು ಕಾನೂನಿನ ಬಾರ್-ಎಟ್-ಲಾ ಪದವಿ ಪಡೆದು ೧೯೨೨ರಲ್ಲಿ ಮಾತೃಭೂಮಿಗೆ ಮರಳಿದರು. ಮೊದಲೇ ನಿರ್ಧರಿಸಿದಂತೆ ಮುಂಬೈಯಲ್ಲಿ ಮಹಮ್ಮದಾಲಿ ಜಿನ್ನಾರವರ ಶಿಷ್ಯ ವೃತ್ತಿ ವಹಿಸಿ ಕೊಂಡರು. ಜಿನ್ನಾರವರು ಪ್ರಾರಂಭದಲ್ಲಿ ಅವಿಭಜಿತ ಭಾರತದ ನಿಷ್ಠಾವಂತ ದೇಶಭಕ್ತರಾಗಿದ್ದವರು. ಯಾವುದೋ ಅದೃಶ್ಯ, ಅವ್ಯಕ್ತ, ದುರದೃಷ್ಟ ಶಕ್ತಿ ಅಥವಾ ವಿಧಿಯ ಕಾರಣದಿಂದ ಕ್ರಮೇಣ ಮುಸ್ಲಿಮ್ ಜನಾಂಗಕ್ಕೆ ಪ್ರತ್ಯೇಕ ದೇಶ ನಿರ್ಮಾಣ ಕಾರ್ಯದಲ್ಲಿ ಪ್ರವೃತ್ತರಾದಾಗ, ವೃತ್ತಿ ಹಾಗೂ ಸಾರ್ವಜನಿಕ ಜೀವನದಲ್ಲಿ ಚಾಗ್ಲಾ ಅವರ ಸಂಗ ಸಂಪೂರ್ಣ ತ್ಯಜಿಸಿ, ಸ್ವತಂತ್ರರಾದರು.

ಪ್ರಾರಂಭದಲ್ಲಿ ಆರ್ಥಿಕವಾಗಿ ಬಹಳ ಕಷ್ಟವನ್ನನುಭವಿಸಬೇಕಾಗಿ ಬಂದರೂ, ಏಳು-ಎಂಟು ವರ್ಷಗಳಲ್ಲಿ ಯಶಸ್ವೀ ತರುಣ ವಕೀಲರ ಸಾಲಿನಲ್ಲಿ ಪ್ರಪ್ರಥಮರಾದರು. ಆರ್ಥಿಕ ಮುಗ್ಗಟ್ಟು ಧೃತಿಗೆಡಿಸುವ ಕಾಲಕ್ಕೆ, ಸಹಾಯ ನೀಡಿದ ಮಿತ್ರ ವೇಲನ್‌ಕರ್ ಮತ್ತು ಹಿರಿಯ ಶುಭಾಕಾಂಕ್ಷಿ ಸರ್ ಚಮನ್‌ಲಾಲ್ ಸೆಟಲ್‌ವಾಡ್, ವಿಠಲ್‌ಬಾಯಿ ಪಟೇಲ್ ಮತ್ತಿತರ ಉಪಕಾರವನ್ನು ಧನ್ಯತೆಯಲ್ಲಿ ಸ್ಮರಿಸುತ್ತಾರೆ. ಅವರ ಭಾವೀ ಪತ್ನಿಯೊಡನೆ ವಿವಾಹ ನಿಶ್ಚಯಗೊಂಡ ಶುಭದಿನದಂದು, ಸ್ವತಂತ್ರವಾಗಿ ನಡೆಯಿಸಲು ದೊಡ್ಡ ಮೊಕದ್ದಮೆಯೊಂದು ಅವರನ್ನರಸಿ ಬಂತು. ಅದರಲ್ಲಿ ಯಶಸ್ವಿಯಾದರು. ತನ್ನ ಪತ್ನಿಯ ಶುಭನಕ್ಷತ್ರ ದಿನದಿಂದ ದಿನಕ್ಕೆ ತನ್ನನ್ನು ಉತ್ಕರ್ಷ ಮಾರ್ಗದಲ್ಲಿ ಕೊಂಡೊಯ್ದಿತು ಎಂದು ಬಹಳ ಭಾವುಕತೆಯಲ್ಲಿ ಅಗಲಿದ ಪತ್ನಿಯನ್ನು ಸ್ಮರಿಸಿಕೊಳ್ಳುತ್ತಾರೆ. ವಕೀಲ ವೃತ್ತಿ ಜತೆಯಲ್ಲೇ

ಸಾರ್ವಜನಿಕ ಹಾಗೂ ರಾಜಕೀಯ ಜೀವನವೂ ನಡೆದಿತ್ತು.

ಬಿಡುವಿಲ್ಲದ ದಿನಗಳು. ಮಧ್ಯರಾತ್ರಿ ಕಳೆಯದೆ ವಿಶ್ರಮಿಸಿದ ದಿನಗಳಿರಲಿಲ್ಲವೆನ್ನುವಷ್ಟು ವೃತ್ತಿಕೆಲಸ. ಹಿಂದೂ-ಮುಸ್ಲಿಮರ ಐಕ್ಯ, ಧರ್ಮ ನಿರಪೇಕ್ಷತೆಯ ರಾಜಕೀಯ, ಪ್ರಜಾಪ್ರಭುತ್ವ ಮತ್ತು ಅಖಂಡ ಭಾರತದ ಸ್ವಾತಂತ್ರ್ಯ-ಇವುಗಳು ಅವರ ರಾಜಕೀಯ ತತ್ವದ ನೆಲೆಗಟ್ಟು. ಭಾರತ ಉಪಖಂಡದ ಜನಸಾಮಾನ್ಯರ ಭಾರತೀಯತೆಯ ಕುರಿತು ಭಾವಪರವಶರಾಗಿ ನುಡಿಯುತ್ತಾರೆ: ''ಉತ್ತರದಲ್ಲಿ ಹಿಮಾಚಲ ಇತರ ದೆಸೆಗಳಲ್ಲಿ ಆಳ ಸಮುದ್ರಗಳಿಂದ ಆವೃತ್ತವಾಗಿರುವ ಈ ಭೂ ಪ್ರದೇಶ ಇತರ ಪ್ರದೇಶಗಳಿಗಿಂತ ವಿಭಿನ್ನ. ಒಂದೇ ಜನಾಂಗದ ಒಂದೇ ದೇಶವಾಗಿ ಬಾಳತಕ್ಕದ್ದೆಂದು ದೇವರ ಇಚ್ಛೆ. ನಮ್ಮ ಪೂರ್ವಿಕರು ಆರ್ಯರಿಂದ ಬಂದಿರುವ ಅನರ್ಘ್ಯ ಪಿತ್ರಾರ್ಜಿತ ಸೊತ್ತು ಈ ಭಾರತೀಯತೆ. ಭಾರತ ಎಂದೂ ಎರಡಾಗಿ ಬಾಳದು.''

ರಾಜಕೀಯ ಚದುರಂಗ ಆಟದಲ್ಲಿ ಮೇಲ್ಮೆ ಸಾಧಿಸಲು ಕುಟಿಲ ನೀತಿ ಕೈಗೊಂಡು ದೇಶ ವಿಭಜಿಸಿದ್ದನ್ನು ನೆನೆದು ದುಃಖಿಸುತ್ತಾರೆ. ಜಿನ್ನಾರ ಕುರಿತು ''ಯಾವುದೋ ಅದೃಶ್ಯ ಶಕ್ತಿ ಈ ದೇಶದ ಭವಿಷ್ಯದಲ್ಲಿ ಕಲಬೆರಕೆ ಮಾಡುವ ಉದ್ದೇಶದಿಂದಲೋ ಎಂಬಂತೆ, ಅವರಿಗೂ ತಿಳಿಯದೆ, ಜಿನ್ನಾರು ಮುಸ್ಲಿಮ್ ಮತಾಂಧರ 'ಕೈಸೆರೆ'ಯಾದರು. '' ಎಂದು ದುಃಖದಲ್ಲಿ ಉದ್ಗರಿಸುತ್ತಾರೆ. ಮಹಾತ್ಮಾ ಗಾಂಧೀಜಿಯವರು ಮುಸ್ಲಿಮರ ಮೈತ್ರಿ ಒಗ್ಗೂಡಿಸುವ ಸಲುವಾಗ ಖಿಲಾಫತ್ ಚಳುವಳಿಗೆ ಪ್ರೋತ್ಸಾಹ ನೀಡಿರುವುದು ಬಲುದೊಡ್ಡ ಪ್ರಮಾದವೆನ್ನುತ್ತಾರೆ. ಮುಸ್ಲಿಮ್ ಸಮುದಾಯದ ಮೈತ್ರಿ ಗಳಿಸುವ ಸಲುವಾಗಿ ನೆಹ್ರೂ ಸರಕಾರ ರೂಪಿಸಿದ ಧೋರಣೆಯನ್ನು ಕಟುವಾಗಿ ಟೀಕಿಸುತ್ತಾರೆ: ''ನಮ್ಮ ಸಂವಿಧಾನದಲ್ಲಿ ಧರ್ಮ ನಿರಪೇಕ್ಷತೆಯನ್ನು ಅಳಿಸಲಾಗದಂತೆ ಉಲ್ಲೇಖಿಸಲಾಗಿದೆ. ಕಾನೂನಿನ ದೃಷ್ಟಿಯ ಸಮತ್ವವನ್ನು ಕಾರ್ಯರೂಪದಲ್ಲಿ ಪಾಲಿಸುವಾಗ ದೇಶದ ಎಲ್ಲ ಜನರಿಗೂ ಅನ್ವಯವಾಗತಕ್ಕ ಸಾಮಾನ್ಯ ಕಾಯದೆ ಸಂಹಿತೆಯನ್ನು ನಿರ್ಮಿಸಬೇಕಾದುದು ಸರಕಾರದ ಪರಮ ಧ್ಯೇಯ. ಹಿಂದೂ ಕೋಡ್ ಬಿಲ್ಲನ್ನು ಕಾಯದೆಯಾಗಿ ಸ್ವೀಕರಿಸುವಾಗ ನೆಹ್ರೂ ರವರು ತೋರಿದ ಧೈರ್ಯ, ಉತ್ಸಾಹ, ದೂರದರ್ಶಿತ್ವ ಸಾಮಾನ್ಯ ಕಾಯದೆ ಸಂಹಿತೆ ನಿರ್ಮಿಸುವ ಕಾರ್ಯದಲ್ಲಿ ತೋರಲಿಲ್ಲ. ಇಲ್ಲಿ ಅಲ್ಪಸಂಖ್ಯಾತರಿಗೆ ಹುಸಿ ಉದಾರತೆ ತೋರಿ ಕರ್ತವ್ಯ ಚ್ಯುತಿಗೊಂಡರು'' ದೈವದತ್ತ ಮೇಧಾ ಶಕ್ತಿ ಜತೆ, ಮೈಗೂಡಿಸಿಕೊಂಡ ವಿನಯ, ಸೌಜನ್ಯ, ಕರ್ತವ್ಯ ನಿಷ್ಠೆಗಳಿಂದ ವಿಶಾಲ ಮಿತ್ರವೃಂದ ಮತ್ತು ಸಾಕಷ್ಟು ವೃತ್ತಿ ಕೆಲಸವನ್ನೂ ಸಂಪಾದಿಸಿ ೧೯೪೦ರ ಸುಮಾರಿಗೆ ಬಹಳ ಯಶಸ್ವಿ ತರುಣ ವಕೀಲರಾಗಿದ್ದರು.

ಅದೇ ಕಾಲಕ್ಕೆ ಮುಂಬೈ ಉಚ್ಚನ್ಯಾಯಾಲಯದ ನ್ಯಾಯಾಧೀಶರ ಹುದ್ದೆ ಕೇವಲ ಅನಿರೀಕ್ಷಿತವಾಗಿ ಇವರನ್ನರಸಿ ಬಂತು. ಚಾಗ್ಲಾರವರ ರಾಜಕೀಯ ನಿಲುವಿನಿಂದ ಭಯಪಟ್ಟ ದಿಲ್ಲಿ ಸರಕಾರ ಮುಖ್ಯ ನ್ಯಾಯಾಧೀಶರು ಮಾಡಿದ್ದ ಚಾಗ್ಲಾ ಪರ ಶಿಫಾರಸ್ಸನ್ನು ವಿರೋಧಿಸಿತ್ತು. ಆದರೆ, ಮುಖ್ಯ ನ್ಯಾಯಾಧೀಶ ಸರ್ ಜಾನ್ ಬೋಮಂಟ್‌ರವರು ತಮ್ಮ ಅಭ್ಯರ್ಥಿಯನ್ನು ಅವರ ಶುದ್ಧ ಚಾರಿತ್ರ್ಯ, ಧೀಮಂತಿಕೆ, ಮಾನಸಿಕ ಸಮತೋಲನ ಮತ್ತು ನ್ಯಾಯಾಧೀಶರಲ್ಲಿ ನಿರೀಕ್ಷಿಸುವ ನ್ಯಾಯನಿಷ್ಠುರತೆಗಳಿಗಾಗಿ ತೀವ್ರವಾಗಿ ಶಿಫಾರಸ್ಸು ಮಾಡಿ ವೈಸ್‌ರಾಯ್‌ರನ್ನು ಒಪ್ಪಿಸಿದ್ದರು. ಆ ತನಕ ಚಾಗ್ಲಾರು ಸಾರ್ವಜನಿಕ ಹಾಗೂ ವೃತ್ತಿ ಜೀವನದಲ್ಲಿ ಸ್ವಲ್ಪವೂ ಬಿಡುವಿರದೆ ದುಡಿಯುತ್ತಿದ್ದುದರಿಂದ ಕುಟುಂಬ ಜೀವನದ ಶಾಂತಿ, ಪರಿಪೂರ್ಣತೆ, ಸ್ವಾಸ್ಥ್ಯಗಳಿಂದ ಸಂಪೂರ್ಣ ವಂಚಿತರಾಗಿದ್ದರು. ಪತ್ನಿ ಮತ್ತು ಮಕ್ಕಳು,

ಆರಿಸಿ ಬಂದಿರುವ ಈ ಭಾಗ್ಯವನ್ನು ಬಿಡದಂತೆ ಒತ್ತಾಯಿಸಿದರು.

ಸಾಧಾರಣ ೧೯೪೧ರ ಆಗಸ್ಟ್ ತಿಂಗಳಿನಿಂದ ೧೯೫೮ರ ತನಕ ಮುಂಬೈ ಉಚ್ಚ ನ್ಯಾಯಾಲಯದ ಪ್ರಾರಂಭದಲ್ಲಿ ನ್ಯಾಯಾಧೀಶ, ಅನಂತರ ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದರು. ದಕ್ಷತೆಗೆ , ನ್ಯಾಯ ನಿಷ್ಠುರತೆಗೆ, ಅತಿ ಕಿರಿಯರಿಂದ ಅತಿ ಹಿರಿಯ ವಕೀಲರ ತನಕ ಎಲ್ಲರ ಸ್ನೇಹಕ್ಕೂ, ಅಭಿಮಾನಕ್ಕೂ, ಭಾಜನರಾಗಿ, ಕೇವಲ ಮುಂಬೈ ಮಾತ್ರವಲ್ಲದೆ ಸಂಪೂರ್ಣ ದೇಶ ವ್ಯಾಪ್ತಿ ಕೀರ್ತಿಗಳಿಸಿದರು. ಅವರ ನ್ಯಾಯಾಲಯದ ನ್ಯಾಯದೇವತೆ ದಯಾಪೂರ್ಣಳಾಗಿ, ಬಡವರ, ನೊಂದವರ, ನೋವಳಿಸುವ, ನಿಶ್ಶಕ್ತರಿಗೆ ರಕ್ಷಣೆ ನೀಡುವ, ದುಷ್ಟರನ್ನು ಎಚ್ಚರಿಸಿ ರುಜುದಾರಿಗೊಯ್ಯುವ, ಸರ್ವರಿಗೂ, ಸೌಹಾರ್ದದ ಮೃದುಹಾಸ ಬೀರುವ ಸರ್ವಮಂಗಳೆಯಾಗಿದ್ದಳು. ನ್ಯಾಯ ಧೋರಣೆಯ ಕಠೋರತೆ ಮತ್ತು ಸಾಮಾನ್ಯರಿಗೆ ನಿಲುಕದ ಪಾವಿತ್ರ್ಯ ಮತ್ತು ಭಯಪ್ರದ ಗಾಂಭೀರ್ಯಗಳಲ್ಲಿ ಚಾಗ್ಲಾರಿಗೆ ಒಲವಿರಲಿಲ್ಲ. ನ್ಯಾಯ ಧೋರಣೆ ನಿಜಕ್ಕೂ ದಯಾ ಪೂರ್ಣ ಚಿಕಿತ್ಸಾ ವಿಧಾನವೆಂದೇ ಅವರ ಅಭಿಮತ. ಅವರು ನ್ಯಾಯಾಧೀಶರಾಗಿರುತ್ತಿದ್ದ ಕಾಲದಲ್ಲಿ ಒಂದೋ, ಎರಡೋ ದಾವೆಗಳಲ್ಲದೆ, ಇತರ ಎಲ್ಲಾ ದಾವೆಗಳಲ್ಲೂ, ಪಕ್ಷಗಾರರ ಮತ್ತು ವಕೀಲರುಗಳ ವಾದ ಮಂಡನೆ ಮುಗಿದೊಡನೆಯೇ, ತೀರ್ಪು ನೀಡುತ್ತಿದ್ದರು. ಅವರ ನ್ಯಾಯಾಲಯದಲ್ಲಿ ತೀರ್ಪು ಬರೆದುಕೊಳ್ಳಲು ಸದಾಕಾಲ ಶೀಘ್ರಲಿಪಿಕಾರ ಸಿದ್ಧನಿರತಕ್ಕದ್ದು. ಹಾಗಿದ್ದರೂ, ಅವಸರ, ಆತುರ, ಯಾವುದೇ ವಿಚಾರ ಪರಿಗ್ರಹಿಸಲು ಅಸಡ್ಡೆಗಳಿರಲಿಲ್ಲ. ಎಲ್ಲವನ್ನೂ ಎಲ್ಲರನ್ನೂ ಸಂಪೂರ್ಣ ಆಲಿಸಿ ತಮ್ಮ ನಿಲುವನ್ನು ಅಡಕವಾದ, ಸರಳ ಸ್ಪಷ್ಟ ಮಾತುಗಳ ತೀರ್ಪು ನೀಡುತ್ತಿದ್ದರು. ಆ ಕಾಲದಲ್ಲಿ(೧೯೫೮) ಜೀವವಿಮೆ ಪ್ರಾಧಿಕಾರದ ಆಡಳಿತೆಯಲ್ಲಿ ನಡೆದ ಅತಿ ದೊಡ್ಡ ಆರ್ಥಿಕ ಅವ್ಯವಹಾರದ ಕುರಿತು ಅವರು ತನಿಖೆ ನಡೆಯಿಸಿ, ಕೇವಲ ೨೩-೨೪ ದಿನಗಳೊಳಗೆ ವರದಿ ಸಲ್ಲಿಸಿ ಚರಿತ್ರೆ ನಿರ್ಮಿಸಿದ್ದಾರೆ. ವರದಿಯ ಪರಿಣಾಮವಾಗಿ ಕೇಂದ್ರ ವಿತ್ತ ಮಂತ್ರಿ ಟಿ.ಟಿ.ಕೃಷ್ಣಮಾಚಾರಿಯವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕಾಯ್ತು. ಪರಿಣಾಮವಾಗಿ ಚಾಗ್ಲಾರು ಪಂಡಿತ್ ನೆಹ್ರೂರವರ ಕೋಪವನ್ನು ಎದುರಿಸಬೇಕಾಯ್ತು.

ತತ್ವ ನಿಮಿತ್ತ ವ್ಯಕ್ತಿ ವ್ಯಕ್ತಿಯೊಳಗೆ ಈ ತರದ ಸಂಘರ್ಷವಿದ್ದರೂ, ನೆಹ್ರೂರವರ ನಿರ್ಮತ್ಸರ, ನಿರ್ಮಲ, ವಿಶಾಲ ವ್ಯಕ್ತಿತ್ವವು ಚಾಗ್ಲಾರವರ ಪುತ್ತಳಿತನವನ್ನು ಉಪೇಕ್ಷಿಸಲಾರದಾಗಿತ್ತು. ಮುಂದ್ರಾ ಪ್ರಕರಣದ ಬಿರುಗಾಳಿ ದೇಶಾದ್ಯಂತ ವ್ಯಾಪಿಸಿದ್ದರೂ, ಚಾಗ್ಲಾ ಅವರನ್ನು ಅಮೆರಿಕಕ್ಕೆ ಭಾರತದ ರಾಯಭಾರಿಯಾಗಿ ಒತ್ತಾಯ ಪೂರ್ವಕ ಒಪ್ಪಿಸಿ ಕಳುಹಿಸಿದರು. ಅಮೆರಿಕದಲ್ಲಿ ಮೂರು ವರ್ಷಕಾಲ ಚಾಗ್ಲಾರವರ ರಾಯಭಾರಿತ್ವ ನಡೆಸಿದರು. ಭಾರತ ಮತ್ತು ಅಮೆರಿಕ ಪರಸ್ಪರ ಸ್ನೇಹಿತರಾಗಿಯೇ ಉಳಿದುವು. ಭಾರತದ ತಟಸ್ಥ ವಿದೇಶ ನೀತಿಯನ್ನು ಅಮೆರಿಕವು ಒಪ್ಪಿಕೊಳ್ಳದಿದ್ದರೂ, ಆ ಕಾರಣಕ್ಕಾಗಿ ನಮ್ಮೊಡನೆ ಒರಟಾಗಿ ವ್ಯವಹರಿಸಲಿಲ್ಲ. ಪರಿಣಾಮವಾಗಿ ಚೀನಾ ಆಕ್ರಮಣವಾದಾಗ ಅಮೆರಿಕ ಮತ್ತು ಇಂಗ್ಲೆಂಡ್ ಭಾರತಕ್ಕೆ ಸಂಪೂರ್ಣ ಬೆಂಬಲ ನೀಡಿ ಸಹಕರಿಸಿದುವು. ಅಮೆರಿಕದ ಅಧ್ಯಕ್ಷ ರಾಬರ್ಟ್ ಕೆನೆಡಿಯವರು ನೆಹರೂರವರನ್ನು ಅತ್ಯಪೂರ್ವ ಮೇಧಾವಿ, ಮಹಾನ್ ಚಿಂತಕ, ನಿಜಕ್ಕೂ ಜಗತ್ತಿನ ಧೀರ ನೇತಾರ ಎಂದು ಅಭಿಮಾನ ತಾಳಿದ್ದರು. ಅಮೆರಿಕದ ರಾಯ ಭಾರಿತ್ವದ ಅನಂತರ ಇಂಗ್ಲೆಂಡಿಗೆ ಹೈಕಮಿಷನ್‌ರಾಗಿ ಚಾಗ್ಲಾರನ್ನು ಕಳುಹಿಸಿದರು. ಅಲ್ಲಿಯೂ

ಅವರು ಭಾರತದ ಸೇವೆಯನ್ನು ಸಮರ್ಥ ವಾಗಿ ನಿರ್ವಹಿಸಿದರು. ಬ್ರಿಟನ್‌ನ ಪ್ರಧಾನಿ ಹೆರಾಲ್ಡ್ ಮೆಕ್ಮಿಲಿನ್‌ರವರು ಚೈನಾ ಆಕ್ರಮಣ ಕಾಲದಲ್ಲಿ ವಾರಾಂತ್ಯದ ರಜಾ ದಿನಗಳಲ್ಲೂ, ಸರಕಾರಿ ಗಾಲಿಗಳನ್ನು ತಿರುಗಿಸಿ ಅತಿ ಶೀಘ್ರ ವಾಗಿ ರಕ್ಷಣಾ ಯುದ್ಧಕ್ಕೆ, ಅಗತ್ಯವಿರುವ ಸಾಮಗ್ರಿಗಳನ್ನೆಲ್ಲಾ ಒದಗಿಸಿದರು. ಭಾರತ ಮತ್ತು ಇಂಗ್ಲೆಂಡ್‌ಗಳ ಪರಸ್ಪರ ಸ್ನೇಹ ಉತ್ಕರ್ಷಿಸಿತು.

ಮುಂದೆ ನೆಹರೂ ಸಂಪುಟದಲ್ಲಿ ಚಾಗ್ಲಾರು ವಿದ್ಯಾಮಂತ್ರಿಯಾಗಿದ್ದರು. ಸಂಯುಕ್ತರಾಷ್ಟ್ರ ಸಂಘದಲ್ಲಿ ಭಾರತದ ಪ್ರತಿನಿಧಿಯಾಗಿ ಕಾಶ್ಮೀರ ವಿವಾದದಲ್ಲಿ ಬಹಳ ದಕ್ಷತೆಯಲ್ಲಿ ವಾದ ಮಂಡನೆ ಮಾಡಿದ್ದರು. ಚಕ್ರವರ್ತಿ ಅಶೋಕ ಮತ್ತು ಅಕ್ಬರರ ಕಾಲದಿಂದಲೇ ಕಾಶ್ಮೀರವು ಭಾರತದ ಅವಿಭಾಜ್ಯ ಅಂಗರಾಜ್ಯ. ಅದರಲ್ಲಿ ಮುಸ್ಲಿಮ್ ಧರ್ಮದವರು ಬಹುಸಂಖ್ಯಾತ ರಾಗಿದ್ದರೆಂಬ ಕಾರಣಕ್ಕಾಗಿ ಭಾರತದಿಂದ ಬೇರ್ಪಡಿಸುವುದು, ಯಾವ ದೃಷ್ಟಿಯಲ್ಲೂ ಸರಿಯಲ್ಲ. ಭಾರತದಲ್ಲಿ (೧೯೬೪ರಲ್ಲಿ) ಐವತ್ತು ಮಿಲಿಯನ್ ಮುಸ್ಲಿಮ್‌ರಿದ್ದು, ಜಗತ್ತಿನ ಅತಿ ದೊಡ್ಡ ಮುಸ್ಲಿಮ್ ರಾಷ್ಟ್ರ ವಾಗಿದೆ. ಮುಸ್ಲಿಮರು ಭಾರತೀಯರು. ಇತರ ಭಾರತೀಯರಂತೆ ಸಮಾನ ಹಕ್ಕು, ಜವಾಬ್ದಾ ರಿಕೆಯುಳ್ಳವರು. ಮುಸ್ಲಿಮರಂತೆಯೇ, ಕ್ರಿಶ್ಚಿಯನ್, ಬೌದ್ಧ, ಸಿಖ್ಖ, ಪಾರ್ಸಿ ಮತ್ತು ಇತರ ಧರ್ಮಾವಲಂಬಿಗಳು ಭಾರತದಲ್ಲಿ ಸಮಾನ ಹಕ್ಕಿನ ಪೌರರು. ಆದ್ದರಿಂದ, ಮುಸ್ಲಿಮ್ ಧರ್ಮದವರು ಒಂದು ರಾಜ್ಯದಲ್ಲಿ ಬಹು ಸಂಖ್ಯೆಯಲ್ಲಿದ್ದಾರೆಂಬ ಕಾರಣಕ್ಕಾಗಿ ಆ ರಾಜ್ಯವನ್ನು ಪ್ರತ್ಯೇಕಿಸಿ, ಸ್ವತಂತ್ರರಾಷ್ಟ್ರ ಮಾಡಲು ಪ್ರಯತ್ನಿಸುವುದು ಸರಿಯಲ್ಲ. ಭಾರತ ಅನುಸರಿಸುವ ಧರ್ಮ ನಿರಪೇಕ್ಷತಾ ಧೋರಣೆ ಪಾಕಿಸ್ತಾನಕ್ಕೆ ಅರ್ಥವಾಗದೆ ಕಾಶ್ಮೀರ ಸಮಸ್ಯೆಯನ್ನು ಕುಟಿಲತೆಯಲ್ಲಿ ಹುಟ್ಟು ಹಾಕಲಾಗಿದೆ. ಪಾಕಿಸ್ತಾನ ಧೂರ್ತತೆ, ಕ್ರೌರ್ಯ, ಜನಾಂಗ ನಾಶಪಡಿಸುವ ಕಾರ್ಯ ಕ್ರಮ ಇವುಗಳ ಕುರಿತು ದಾಖಲೆ ಪತ್ರಗಳ ಸ್ಪಷ್ಟ ಸಾಕ್ಷ್ಯ ರುಜುವಾತುಗಳನ್ನು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳಿಯ ಸಮ್ಮುಖದಲ್ಲಿ ಮಂಡಿಸಿ ಬಹಳ ಪರಿಣಾಮ ಕಾರಿಯಾಗಿ ವಾದಿಸಿದರು.

ಪರಿಣಾಮವಾಗಿ, ಕಾಶ್ಮೀರದ ಕುರಿತು ಭಾರತದ ವಿರೋಧವಾಗಿ ಭದ್ರತಾ ಮಂಡಳಿಯು ನಿರ್ಣಯ ಅಂಗೀಕರಿಸುವಂತೆ ಪಾಕಿಸ್ತಾನ ಹೂಡಿದ ಸಂಚು ಮತ್ತು ಪ್ರಯತ್ನಗಳು ನಿಷ್ಫಲವಾದುವು. ಶೀತಲ ಸಮರದ ಆ ಕಾಲದಲ್ಲಿ ಅಮೆರಿಕದ ಪ್ರಭಾವಕ್ಕೊಳಗಾಗಿದ್ದ ಪಾಶ್ಚಾತ್ಯ ರಾಷ್ಟ್ರಗಳು ಪಾಕಿಸ್ತಾನವನ್ನು ಬೆಂಬಲಿಸುತ್ತಿದ್ದುವು. ಆ ಹಿಂದೆ ವಿ.ಕೆ.ಕೃಷ್ಣ ಮೆನನ್‌ರವರು ಭಾರತದ ಪ್ರತಿನಿಧಿಯಾಗಿ ಭದ್ರತಾ ಮಂಡಳಿಯಲ್ಲಿ ಸತತ ಏಳು ಗಂಟೆಗಳ ಕಾಲ ವಾದ ಮಂಡಿಸಿದಾಗ ಪಾಶ್ಚಾತ್ಯ ರಾಷ್ಟ್ರ ಗಳು ಭಾರತ ವಿರೋಧ ನಿಲುವನ್ನು ಬಹಿರಂಗ ವಾಗಿ ತಳೆದಿದ್ದರು. ಆಗ ರಷ್ಯದ ಪ್ರತಿನಿಧಿ ವಿಟೋ ಹಕ್ಕು ಚಲಾಯಿಸಿ ಭಾರತವನ್ನು ರಕ್ಷಿಸಿದ್ದರು. ಮೆನನ್‌ರವರ ನಿಷ್ಠುರ ವೈಖರಿ, ಇತರ ರಾಷ್ಟ್ರಗಳ ಪ್ರತಿನಿಧಿಗಳೊಡನಿದ್ದ ಸಾಮರಸ್ಯರಹಿತ ವ್ಯಾವಹಾರಿಕ ಸಂಬಂಧ ಮತ್ತು ಅವರ ಒರಟು ಸ್ವಭಾವಗಳಿಂದ ಭಾರತಕ್ಕೆ ಪ್ರತಿಕೂಲ ವಾತಾವರಣ ನಿರ್ಮಿಸಿ ಕೊಂಡಿದ್ದರು. ಚಾಗ್ಲಾರವರು ತಮ್ಮ ವ್ಯಾವಹಾರಿಕ ಕೌಶಲ, ವೈಯಕ್ತಿಕ ಸ್ನೇಹ, ಮಾತಿನ ಮೃದುತನಗಳಿಂದ ನಷ್ಟಹೋಗಿದ್ದ ಸ್ಥಾನವನ್ನು ಪುನಃ ಪಡೆದರು. ಚಾಗ್ಲಾರವರ ವಾದ ಮತ್ತು ನಿಲವನ್ನು ಭಾರತದ ಸಂಸತ್ತು ಸಂಪೂರ್ಣ ಬೆಂಬಲಿಸಿತು.

ನಿಜಕ್ಕೂ ಚಾಗ್ಲಾರು ವಿಶ್ವಮಾನವರು. ಭಾರತದ ಪೌರರು. ಮಾನವಿಕ ಸತ್ವ, ತತ್ವಗಳನ್ನು ಗರಿಷ್ಟ ಪ್ರಮಾಣದಲ್ಲಿ ಪ್ರಕೃತಿಮಾತೆ

ಬಿಂದುಂಡು ತಮ್ಮ ವ್ಯಕ್ತಿತ್ವ ಸಂವರ್ಧಿಸಿಕೊಂಡವರು. ಎಳವೆಯಲ್ಲಿ ಧರ್ಮನಿಷ್ಠರಾಗಿ ಸಾಂಪ್ರದಾಯಿಕ ಧಾರ್ಮಿಕ ಕ್ರಿಯೆಗಳನ್ನು ಅನೂಚೂನಾಗಿ ಪಾಲಿಸಿದವರು. ಆದರೆ ಪ್ರಾಯ ಪ್ರಬುದ್ಧ ರಾದಂತೆ ಧಾರ್ಮಿಕ ಕ್ರಿಯೆಗಳಲ್ಲಿದ್ದ ನಂಬಿಕೆ ಶಿಥಿಲವಾಯಿತು. ಮಾನವನ ಪ್ರಾರ್ಥನೆಗೆ ಒಂದು ಸಹಾಯ ಮಾಡುವ ದೇವರ ಕುರಿತು ಸಂಶಯ ಮೂಡಿತು. ಬೌದ್ಧಿಕ ಪ್ರಮಾಣಕ್ಕೆ ಒಳಪಡದ ದೇವರ ಅಥವಾ ಪ್ರವಾದಿಗಳ ಸಂತರ ನುಡಿಗಳು ಆಕರ್ಷಣೆ ಕಳಕೊಂಡವು. ನೈತಿಕ ನಿಲುವಿನ ಸರ್ವೋದಯ ಸಮಾಜ ಅವರ ಒಲವನ್ನು ಗಳಿಸಿತು. ಹಾಗಿದ್ದರೂ, ದೇವರಿಲ್ಲ ವೆಂದು ಸಾರುವ ನಿರೀಶ್ವರ ವಾದಿ ತಾನಲ್ಲವೆಂದು ನೆನಪಿಸುತ್ತಾರೆ.

''ನಾಸ್ತಿಕನಿಂದ ನಾನು ಬಹು ದೂರ. ನಾಸ್ತಿಕನ ಒರಟುತನ, ಜಗತ್ತನ್ನು ಧಿಕ್ಕರಿಸುವ ಅಹಂಕಾರ ನನಗೆ ಹಿಡಿಸದು. ನಾನು ವಿನೀತ. ನನಗೆ ಕಂಡಿರುವಂತೆ ಮಾನವನ ವಿವೇಚನಾ ಮತ್ತು ಬುದ್ಧಿಶಕ್ತಿ ಸೀಮಿತವಾದವು. ಅನಂತ ಮತ್ತು ಶಾಶ್ವತ ತತ್ವದ ಪರಿಗ್ರಹಣ ಶಕ್ತಿ ಅವುಗಳಿಗಿಲ್ಲ. ನಾನು ದೇವರಲ್ಲಿ ನಂಬಿಕೆ ಇಲ್ಲದವನಲ್ಲ. ಆದರೆ ದೇವರನ್ನು ನಾನರಿಯೆ, ಅವನನ್ನು ಅರಿಯುವುದೆಂತೆಂಬುದನ್ನೂ ನಾನರಿಯೆ '' ಎಂದು ನಮ್ರತೆಯಲ್ಲಿ ಒಪ್ಪಿಕೊಳ್ಳುತ್ತಾರೆ. ''ಬದುಕು, ದಯೆ ಮತ್ತು ಕರುಣೆಯನ್ನು ನನಗೆ ಕಲಿಸಿತು. ನನ್ನ ಸಹಪಯಣಿಗರನ್ನು ಸಹೃದಯತೆಯಲ್ಲಿ ಅರಿಯಲು, ಕಲಿತೆ. ಅವರ ಕುರಿತು ತೀರ್ಮಾನಿಸಲು ನಾನು ಅಶಕ್ತನೆಂದು ಅರಿತೆ. ಅಪನಂಬಿಕೆ, ಸಂಶಯಗಳನ್ನು ನಿವಾರಿಸಿ, ಮನುಷ್ಯ ಮನುಷ್ಯರ ಮಧ್ಯೆ, ದೇಶ ದೇಶದ ಮಧ್ಯೆ ಸ್ನೇಹ ಸೇತುವೆ ನಿರ್ಮಿಸಲು ಕಲಿತೆ. ಅವರೊಳಗೆ ಐಕ್ಯ ಸಾಧಿಸಲು ಪ್ರಯತ್ನಿಸಿದೆ. ನಾನು ಕಂಡಂತೆ ಜೀವನದ ಅತಿ ಶ್ರೇಷ್ಠ ತತ್ವವೆಂದರೆ, ನಿರ್ಲಿಪ್ತತೆ. ಜೀವನದ ಕುರಿತು ನಿರಾಸಕ್ತಿ ಬೆಳೆಸಿಕೊಂಡರೆ, ಕೊನೆಯ ನೋವಿನ ತೀವ್ರತೆ ಸಹ್ಯವಾಗಬಹುದೆಂದೆನಿಸುತ್ತದೆ.'' ಭಾರತದ ಸಂಸ್ಕೃತಿಯ ಸಾತ್ವಿಕ ಮತ್ತು ನಮ್ರ ಪ್ರತಿನಿಧಿ; ಬೌದ್ಧಿಕವಾಗಿ ಮತ್ತು ಶುದ್ಧ ಚಾರಿತ್ರ್ಯದಲ್ಲಿ ರಾಜಾಜಿ, ನೆಹ್ರೂ, ವಿಶ್ವೇಶ್ವರಯ್ಯನವರ ಸಾಲಿನಲ್ಲಿ ನಿಲ್ಲಬಹುದಾದ ಭಾರತರತ್ನ ಪ್ರಾಯ ಅಪೂರ್ವ ಭವ್ಯ ವ್ಯಕ್ತಿ.

ದಯೆಯೇ ಧರ್ಮದ ಮೂಲವಯ್ಯಾ ಎಂಬ ತತ್ವವನ್ನು ಆಚರಣೆ ಮೂಲಕ ತೋರಿಸಿಕೊಟ್ಟವರು ಚಾಗ್ಲಾ.

ಮಹಾಪುರುಷರ ಜೀವನದ ಸಂದೇಶವೆಂದರೆ : ನಾವು ನಮ್ಮ ಜೀವನವನ್ನು ಉದಾತ್ತೀಕರಿಸಬಲ್ಲೆವು ಮತ್ತು ಕಾಲ ಎಂಬ ಮರಳ ರಾಶಿಯ ಮೇಲೆ ನಮ್ಮ ಹೆಜ್ಜೆಯ ಗುರುತನ್ನು ಬಿಟ್ಟು ಹೋಗಬಲ್ಲೆವು.

-ಲಾಂಗ್‌ಫೆಲೋ

ಉದಾರ ಚರಿತ ಕುವೆಂಪು

ಎಚ್.ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೧, ಚಾಮುಂಡಿಪುರಂ
ಮೈಸೂರು-೫೭೦ ೦೦೪

'ಶ್ರೀ ರಾಮಾಯಣ ದರ್ಶನಂ' ಮಹಾ ಕಾವ್ಯ ಬರೆದು ಆಧುನಿಕ ವಾಲ್ಮೀಕಿ ಎನಿಸಿ ಕೊಂಡಿರುವ ರಾಷ್ಟ್ರಕವಿ ಕುವೆಂಪು ಒಬ್ಬ ಅಸಾಮಾನ್ಯ ಕವಿಮಾತ್ರರಲ್ಲಅವರೊಬ್ಬಶ್ರೇಷ್ಠ ಕಾದಂಬರಿಕಾರರು, ನಾಟಕಕಾರರು, ವಿಮರ್ಶಕರು, ಪ್ರಬಂಧಕಾರರು ಮತ್ತು ಕಥೆಗಾರರು. ಬಂಗಾಳಕ್ಕೆ ರವೀಂದ್ರ ಠಾಕೂರರು ಹೇಗೋ ಹಾಗೆ ಕರ್ನಾಟಕಕ್ಕೆ ಕುವೆಂಪು. ಅವರು ಸಾಹಿತಿ ಮಾತ್ರವಲ್ಲ, ಶ್ರೇಷ್ಠ ಮಾನವ ಹಿತೋತ್ಸಾಹಿ, ಮಾನವತಾವಾದಿ ಕೂಡ. ಕೆಳಗೆ ತಿಳಿಸುವ ಘಟನೆಯಿಂದ ಇದು ಸ್ಪಷ್ಟವಾಗುತ್ತದೆ.

ಕುವೆಂಪು ಆಗ ಮಹಾರಾಜಾ ಕಾಲೇಜಿನ ವಿದ್ಯಾರ್ಥಿ. ಬಿಡಾರ ಮರಿಮಲ್ಲಪ್ಪ ಹೈಸ್ಕೂಲಿನ ಬಳಿ ಆಗಿದ್ದ ಶ್ರೀರಾಮಕೃಷ್ಣ ಆಶ್ರಮದಲ್ಲಿ.

ನನ್ನ ಸೋದರ ಮಾವ ಎ.ಸಿ. ಶ್ರೀಕಂಠಯ್ಯ ನವರು ಅವರ ಆಪ್ತಗೆಳೆಯರಲ್ಲೊಬ್ಬರು. ಮೇಧಾವಿ ಶ್ರೀಕಂಠಯ್ಯನವರಿಗೆ ಪಾಶ್ಚಾತ್ಯ ಸಾಹಿತ್ಯ , ಸಂಗೀತ, ಚಿತ್ರಕಲೆ, ವೇದಾಂತ, ಸಿನಿಮಾ ಇವುಗಳಲ್ಲಿ ತುಂಬ ತಿಳಿವಳಿಕೆ ಇತ್ತು. ಸಮ ಮನಸ್ಕರರಾದ ಇವರಿಬ್ಬರೂ ಸಂಜೆ ಕಾರಂಜಿ ಅಥವಾ ಕುಕ್ಕರಹಳ್ಳಿ ಕೆರೆಯ ಬಳಿ ಬಂದು ಅಲ್ಲಿ ಸ್ವಲ್ಪ ಹೊತ್ತು ಕುಳಿತು ತಮಗಿಷ್ಟ ವಾದ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು .ಅಂದಹಾಗೆ ಶ್ರೀಕಂಠಯ್ಯನವರು ಮಹಾರಾಜ ಕಾಲೇಜ್ ಯೂನಿಯನ್ನಿನ ಕಾರ್ಯದರ್ಶಿ ಯಾಗಿ ಪ್ರತಿಷ್ಠಿತರಾಗಿದ್ದ ನರಸಿಂಹಮೂರ್ತಿ ಯವರ ಸಹೋದರ. ಜನಪ್ರಿಯ 'ಸಂಧ್ಯಾರಾಗ', 'ಕರುಣೆಯೇ ಕುಟುಂಬದ ಕಣ್ಣು' 'ಕಲಾವತಿ' ಮುಂತಾದ ಚಲನಚಿತ್ರಗಳನ್ನು ಮಾಡಿದವರು ಈ ನರಸಿಂಹಮೂರ್ತಿ

ದುರದೃಷ್ಟ ಶ್ರೀಕಂಠಯ್ಯನವರಿಗೆ 'ಪ್ಲೂರಿಸಿ' ರೋಗ ತಗಲಿತು. ತಪಾಸಣೆ ಮಾಡಿದ ವೈದ್ಯರು, 'ರೋಗವು ಕ್ಷಯಕ್ಕೆ ತಿರುಗ ಬಹುದು. ರೋಗಿಗೆ ಔಷಧಿಯೊಡನೆ ಪುಷ್ಟಿಕರ ವಾದ ಆಹಾರ, ಹಣ್ಣು ಹಂಪಲು ಅಗತ್ಯ. ಜೊತೆಗೆ ಹವಾ ಬದಲಾವಣೆಯಾದರೆ ಅನುಕೂಲ' ಎಂದರು. ಅವರದೊಂದು ಕೆಳ ಮಧ್ಯಮ ವರ್ಗದ ಹಿರಿ ಸಂಸಾರ. ಈ ಸಂಕಟಕರ ಪರಿಸ್ಥಿತಿಯಲ್ಲಿ ಆಯಾಚಿತವಾಗಿ ಕುವೆಂಪು ರವರ ಸಹಾಯ ಒದಗಿತು. 'ಶ್ರೀಕಂಠಯ್ಯ, ನನ್ನ ಹಳ್ಳಿಗೆ ಹೋಗು. ಮನೆಗೆ ನಾನು ಆಗಲೇ ನೀನು ಬರುವ ವಿಷಯ ಬರೆದಿದ್ದೇನೆ. ನಿನ್ನನ್ನು ಅವರು ಚೆನ್ನಾಗಿ ನೋಡಿಕೊಳ್ಳುತ್ತಾರೆ, ಆರೈಕೆ ಮಾಡುತ್ತಾರೆ. ಮನೆಯಲ್ಲಿ ಹಾಲು, ಮೊಸರು ಹಣ್ಣು ತರಕಾರಿಗಳಿಗೆ ಬರವಿಲ್ಲ, ಎಲ್ಲವೂ ಯಥೇಚ್ಛ, ಶುಭ್ರ ವಾಯು ಮತ್ತು ನೀರು'' ಎಂದುಕುವೆಂಪು ಹೇಳಿ ಅವರನ್ನು ತಮ್ಮ ಮನೆಗೆ ಬಲವಂತ ಮಾಡಿ ಕಳುಹಿಸಿದರು.

ಉದಾರವಾದ ಆತಿಥ್ಯ, ಒಳ್ಳೆಯ ಆಹಾರ, ಹಣ್ಣು ಹಂಪಲು, ಬದಲಾಯಿಸಿದ ವಾತಾವರಣ ಎಲ್ಲವೂ ಶ್ರೀಕಂಠಯ್ಯನವರು ಸುಧಾರಿಸಿ ಕೊಳ್ಳುವುದಕ್ಕೆ ಸಹಾಯ ಮಾಡಿದುವು. ಅವರ ಮೈ ಕೈ ತುಂಬಿಕೊಂಡಿತು, ಕಣ್ಣುಗಳಲ್ಲಿ ಹೊಳಪು, ಕೆನ್ನೆ ಕೆಂಪು. ಮೂರು ತಿಂಗಳ ನಂತರ ಅವರು ಮೈಸೂರಿಗೆ ವಾಪಸ್ಸಾದಾಗ ಅವರನ್ನು ಕಂಡು ಎಲ್ಲರಿಗೂ ಆಶ್ಚರ್ಯ. ನರಪೇತಲನಂತಿದ್ದ ವ್ಯಕ್ತಿ ಈಗ ಸದೃಢ, ಚೈತನ್ಯ ತುಂಬಿಲುಕ್ಕುವ ಯುವಕ. ಶ್ರೀಕಂಠಯ್ಯ ಬದುಕುಳಿಯುವುದಕ್ಕೆ ಕಾರಣ ಅನುಮಾನವೇ ಇಲ್ಲ, ಕುವೆಂಪು. ಅವರ ಕರುಣಾಮಯ ಸಹಾಯ.

ತಮ್ಮ ಆತ್ಮ ಚರಿತ್ರೆ 'ನೆನಪಿನ ದೋಣಿ ಯಲ್ಲಿ' ಕುವೆಂಪು ಶ್ರೀಕಂಠಯ್ಯ, ನರಸಿಂಹ ಮೂರ್ತಿ, ನಂಜುಂಡಯ್ಯ, ನನ್ನ ತಾತ ಚಂದ್ರ ಶೇಖರಯ್ಯ ಇವರುಗಳ ಬಗ್ಗೆ ಸಂದರ್ಭೋ ಚಿತವಾಗಿ ಅಲ್ಲಲ್ಲಿ ಬರೆದಿದ್ದಾರೆ.

ಮಕ್ಕಳು ಆತ್ಮಹತ್ಯೆಗೆ ಒಳಗಾಗುವುದು ಏಕೆ?

ಸವಿತಾ ಪ್ರಭಾಕರ
ನಂ.೬೬೮, ೧೧ನೇ ಕ್ರಾಸ್
ಗೋಕುಲಂ ೩ನೇ ಹಂತ
ಮೈಸೂರು-೨

ಚೆನ್ನೈನ ಹದಿನಾಲ್ಕು ವರ್ಷದ ಹುಡುಗನೊಬ್ಬ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಕಾರಣಕ್ಕೆ ತನ್ನ ಶಾಲೆಯ ಮಹಡಿಯ ಮೇಲಿಂದ ಕೆಳಗೆ ಬೀಳುವೆನೆಂದು ಹೆದರಿಸಿದ. ಶಾಲೆಯ ಮುಖ್ಯಸ್ಥರು ಅವನನ್ನು ಸಮಾಧಾನಿಸಿದರು. ಆದರೆ ಮತ್ತೆ ಕೆಲವೇ ದಿನಗಳಲ್ಲಿ ಅವನು ನದಿಯೊಳಕ್ಕೆ ಧುಮುಕಿ ಮುಳುಗಿ ಹೋದ.

ಲಕ್ನೋದಲ್ಲಿ ಹನ್ನೆರಡು ವರ್ಷದ ಹುಡುಗಿಯೊಬ್ಬಳು ಒಬ್ಬ ಹುಡುಗನೊಡನೆ ಆಡುತ್ತಿದ್ದಳು. ಆ ಹುಡುಗನ ಕುಟುಂಬದವರೊಡನೆ ಹುಡುಗಿಯ ತಂದೆಯು ಜಗಳವಾಡಿದ್ದ ಕಾರಣದಿಂದಾಗಿ ಅವಳನ್ನು ತಂದೆಯು ಗದರಿಸಿದರು. ತಂದೆಯ ಬೈಗಳನ್ನು ಕೇಳಿದ ಹುಡುಗಿ ನೇಣು ಹಾಕಿಕೊಂಡಳು.

ಸಚಿನ್ ತೆಂಡೂಲ್ಕರ್ ತನ್ನ ಬೆನ್ನು ನೋವಿನ ತೊಂದರೆಯಿಂದಾಗಿ ಇನ್ನುಮುಂದೆ ಕ್ರಿಕೆಟ್ ಆಡಲು ಸಾಧ್ಯವಿಲ್ಲವೆಂದು ಕೇಳಿದ ಮೈಸೂರಿನ ೧೯ ವರ್ಷದ ಹುಡುಗಿ ಬೆಂಕಿ ಹಚ್ಚಿಕೊಂಡು ಮರಣಿಸಿದಳು.

ಇಂಥ ದುರಂತಗಳು ಒಂದು ಆತಂಕಕಾರಿ ಬೆಳವಣಿಗೆಯನ್ನು ಪ್ರತಿನಿಧಿಸುತ್ತವೆ. ಹಿಂದೆ ವಯಸ್ಕರಿಗೆ ಮಾತ್ರ ಸೀಮಿತವಾಗಿದ್ದ ಈ ಪ್ರವೃತ್ತಿ ಇತ್ತೀಚೆಗೆ ಹೆಚ್ಚು ಹೆಚ್ಚು ಯುವ ಜನಾಂಗವನ್ನು ಬಲಿತೆಗೆದುಕೊಳ್ಳುತ್ತಿದೆ. ಮುಂದೆ ಬರಬೇಕಾಗಿರುವ ಯುವ ಜನಾಂಗದಲ್ಲಿ ಈ ರೀತಿಯ ನಿರಾಶಾಭಾವನೆ ಕಂಡುಬರುತ್ತಿರುವುದು ನಿಜಕ್ಕೂ ದಿಗ್ಭ್ರಮೆಗೊಳಿಸುವಂಥ ವಿಷಯ ಆಗಿದೆ ಎಂದು ಮದರಾಸಿನ ಬಿಕ್ಕಟ್ಟು ಪರಿಹಾರ ಕೇಂದ್ರ 'ಸ್ನೇಹ' ದ ಸ್ಥಾಪಕಿ ಡಾ. ಲಕ್ಷ್ಮಿ ವಿಜಯ್‌ಕುಮಾರ್ ಅವರು ಅಭಿಪ್ರಾಯ ಪಡುತ್ತಾರೆ.

ವರ್ಷದಿಂದ ವರ್ಷಕ್ಕೆ ಕಿರಿಯರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತಿವೆ ಎನ್ನುತ್ತಾರೆ ದೆಹಲಿಯ ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆಯ ನಿರ್ದೇಶಕರಾದ ಶಾರದಾ ಪ್ರಸಾದ್. ೧೯೮೬ರಲ್ಲಿ ೧೮ ವರ್ಷಕ್ಕಿಂತ ಕೆಳಗಿನ ೭೫.೪೫ ಕಿರಿಯರು ಆತ್ಮಹತ್ಯೆ ಮಾಡಿಕೊಂಡಿದ್ದರೆ ೧೯೯೪ರಲ್ಲಿ ಈ ಸಂಖ್ಯೆ ೯೯.೭೫ಕ್ಕೆ ಏರಿದೆ. (೧೯೯೫ರಲ್ಲಿ ಸಂಸ್ಥೆಯು ೧೮ ವರ್ಷಕ್ಕಿಂತ ಕೆಳಗಿನ ಗುಂಪನ್ನು ತೆಗೆದು ಹಾಕಿ ೧೪ ವರ್ಷಕ್ಕಿಂತ ಕೆಳಗಿನವರದ್ದೊಂದು ಗುಂಪು ಮತ್ತು ೧೫ರಿಂದ ೨೯ ವರ್ಷದವರದ್ದೊಂದು ಗುಂಪು ಎಂದು ವಿಂಗಡಿಸಿದೆ.)

ನಿಜವಾಗಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಇನ್ನೂ ಹೆಚ್ಚಾಗಿದೆ. ಆದರೆ ಸಾಮಾಜಿಕ ಮತ್ತು ಧಾರ್ಮಿಕ ಅಪವಾದಗಳಿಗೆ ಹೆದರಿ ಎಷ್ಟೋ ಪ್ರಕರಣಗಳ ಬೆಳಕಿಗೆ ಬರುವುದೇ ಇಲ್ಲ ಎಂದು ಪರಿಣಿತರು ಅಭಿಪ್ರಾಯ ಪಡುತ್ತಾರೆ. ''ಕಿರಿಯರು ಆತ್ಮಹತ್ಯೆ ಮಾಡಿಕೊಂಡಾಗ ಅವರ ಕುಟುಂಬದವರು ಅದೊಂದು ಅಪಘಾತವೆಂದೇ ಹೇಳಿಬಿಡುತ್ತಾರೆ'' ಎಂಬುದು ಮನಃಶಾಸ್ತ್ರಜ್ಞರಾದ ಅಮಿತ್ ದೇಸಾಯಿ ಅವರ ಅನಿಸಿಕೆ.

ಈ ದುರಂತದ ಹಿಂದೆ ಏನಿದೆ? ಹಲವು ಉತ್ತರಗಳು ಬರೀ ಊಹೆಯಾಗೇ ಉಳಿದಿವೆ. ಆದರೆ ಮನಃಶಾಸ್ತ್ರಜ್ಞರ ಪ್ರಕಾರ ಕಿರಿಯರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಹಲವಾರು ಕಾರಣಗಳಿವೆ. ಮಾತಾಪಿತರೊಡನೆ ಅಥವಾ ಮಲ ತಂದೆತಾಯಿಯೊಡನೆ ವಿರೋಧ, ಶಿಕ್ಷೆ ಕಠೋರವೆಂಬ ಅಭಿಪ್ರಾಯ, 'ಪ್ರೇಮ' ದ ತೊಡಕುಗಳು, ಶಾಲೆಯ ದಿನಚರಿ

ಅಕ್ಟೋಬರ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಶಾನೂ ಬಿಜಲಾನಿ ಇವರ 'ವೈ ಚಿಲ್ಡ್ರನ್ ಕಮಿಟ್ ಸೂಸೈಡ್' ಲೇಖನದ ಭಾವಾನುವಾದ

ಮತ್ತು ಉತ್ತಮ ಫಲಿತಾಂಶಕ್ಕಾಗಿ ಒತ್ತಡ, ಮುರಿದ ಕುಟುಂಬದಿಂದ ಉಂಟಾಗುವ ಅಸಂತೋಷ, ಬೇರೂರಿದ ಖಾಯಿಲೆಗಳು ಮತ್ತು ಮಾನಸಿಕ ತೊಂದರೆಗಳು. "ಈಚಿನ ದಿನಗಳಲ್ಲಿ ಯುವಜನರು ತಮ್ಮ ಬದುಕನ್ನು ಕೊನೆಗಾಣಿಸುವ ಮುನ್ನ ಯೋಚಿಸುವುದೇ ಇಲ್ಲ. ತೀರ ಆತುರದ ನಿರ್ಧಾರ ತೆಗೆದು ಕೊಂಡು ಬಿಡುತ್ತಾರೆ" ಎನ್ನುತ್ತಾರೆ ಹೆಚ್ಚುತ್ತಿರುವ ಆತ್ಮಹತ್ಯೆಯ ಬಗ್ಗೆ ಇತ್ತೀಚೆಗೆ ವ್ಯಾಸಂಗ ಮಾಡಿರುವ ಲಕ್ನೋದ ಕೆ.ಜಿ. ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಹರಿಜೀತ್ ಸಿಂಗ್.

ಒಂಟಿತನ: ಯುವಜನಾಂಗಕ್ಕೆ ಒಂಟಿತನವೊಂದು ಮುಖ್ಯವಾದ ಸಮಸ್ಯೆ. ತಂದೆ ತಾಯಿ ಇಬ್ಬರೂ ಹೊರಗಡೆ ಹೋಗಿ ದುಡಿಯುತ್ತಿರುವ ಚಿಕ್ಕ ಸಂಸಾರಗಳು ಇಂದು ಹೆಚ್ಚುತ್ತಿವೆ. ಹೆಚ್ಚಿನ ಮಕ್ಕಳು ತೀರ ಚಿಕ್ಕವಯಸ್ಸಿನಲ್ಲೇ ಒಂಟಿತನ ವನ್ನು ಅನುಭವಿಸುವಂತಾಗಿದೆ. ಪಾಲಕರು ತಮ್ಮ ಬಿಡುವಿಲ್ಲದ ಕಾರ್ಯಕ್ರಮದಿಂದಾಗಿ ಮಕ್ಕಳ ಬೇಕು ಬೇಡಗಳಿಗೆ ಗಮನಕೊಡು ವುದು ಸಾಧ್ಯವಾಗುತ್ತಿಲ್ಲ. "ಈಚಿನ ದಿನಗಳಲ್ಲಿ ಮಕ್ಕಳಿಗೆ ತಮ್ಮ ತೊಂದರೆಗಳನ್ನು ತಂದೆ ತಾಯಿಯರ ಬಳಿ ಹೇಳಿಕೊಳ್ಳಲೂ ಸಾಧ್ಯವಾಗುತ್ತಿಲ್ಲ" ಎನ್ನುತ್ತಾರೆ ಮುಂಬಯಿಯ ಮನಃಶಾಸ್ತ್ರಜ್ಞರಾದ ಡಾ. ಅಂಜಲಿ ಛಬ್ರಿಯಾ: "ಮಕ್ಕಳು ಕೇಳಿದ್ದನ್ನೆಲ್ಲಾ ತೆಗೆದು ಕೊಟ್ಟರೂ ನಮ್ಮ ನಡುವಿನ ಸಂಪರ್ಕ ತೀರಾ ಕಡಿಮೆಯಾಗಿ ಬಿಟ್ಟಿದೆ ಎಂದು ಅನೇಕ ಪಾಲಕರು ನನ್ನೊಡನೆ ಆಗಾಗ ಹೇಳುತ್ತಲೇ ಇರುತ್ತಾರೆ. ಆದರೆ ಯಾವುದೇ ಪದಾರ್ಥಗಳು ಕೂಡ ಮಕ್ಕಳು ತಂದೆತಾಯಿಯೊಡನೆ ಕಳೆಯುವ ಸಂತೋಷದ ಸಮಯಕ್ಕೆ ಸರಿಸಾಟಿಯಾಗಲಾರವು" ಎಂದೂ ಸೇರಿಸುತ್ತಾರೆ.

ಒಟ್ಟು ಕುಟುಂಬದಲ್ಲಿ ಕೂಡ ಮಕ್ಕಳಿಗೆ, ವಿಶೇಷವಾಗಿ ಯುವಕ ಯುವತಿಯರಿಗೆ ತಮ್ಮ ತಂದೆ ತಾಯಿಯಾಗಲೀ, ಬೇರೆಯವರಾಗಲೀ ತಮ್ಮನ್ನು ಅರ್ಥಮಾಡಿಕೊಳ್ಳಲಾರರು, ಅವರೊಡನೆ ಮಾತನಾಡಲು ಸಾಧ್ಯವಾಗದು ಎಂಬ ಅನಿಸಿಕೆ ದಟ್ಟವಾದಾಗ ಈ ಘಟ್ಟವನ್ನು ತಲಪಿಬಿಡುತ್ತಾರೆ. ಮಕ್ಕಳನ್ನು ಪ್ರೀತಿಸಿದಾಗ, ಕುಟುಂಬದವರು ಅವರನ್ನು ಅರ್ಥಮಾಡಿಕೊಂಡಾಗ ಆತ್ಮಹತ್ಯೆಯ ಪ್ರಕರಣಗಳು ಅಪರೂಪವಾಗುತ್ತವೆ" ಎನ್ನುತ್ತಾರೆ ಮುಂಬಯಿಯ ಮಾನಸಿಕ ಸಲಹೆಗಾರಾದ ಕಿಶನ್ ಜ್ಯೋತಿ ಸಯಾನಿಯವರು.

ಪರೀಕ್ಷೆಗಳ ಕಾಲದ ಆತಂಕ : ಕಿರಿಯರಲ್ಲಿ ಆತ್ಮಹತ್ಯೆಯ ಪ್ರಕರಣ ಹೆಚ್ಚುತ್ತಿರುವುದಕ್ಕೆ ಮತ್ತೊಂದು ಮುಖ್ಯವಾದ ಕಾರಣವೆಂದರೆ ಶೈಕ್ಷಣಿಕ ಒತ್ತಡ ಎಂಬುದನ್ನು ಹೆಚ್ಚಿನ ಪರಿಣತರು ಒಪ್ಪುತ್ತಾರೆ. "ಇಂದಿನ ಮಕ್ಕಳು ಹೆಚ್ಚು ಹೆಚ್ಚು ವಿಷಯುಗಳನ್ನು ಕಲಿಯಬೇಕಾಗಿದೆ. ಜೊತೆಗೆ ಚೆನ್ನಾಗಿ ನಿಭಾಯಿಸಲು ಪಾಲಕರ ಒತ್ತಡ, ಸ್ನೇಹಿತರ ಒತ್ತಡ, ಹಾಗೂ ಸ್ವತಃ ತಮ್ಮದೇ ಒತ್ತಡವೂ ಸೇರಿಬಿಡುತ್ತವೆ" ಎನ್ನುತ್ತಾರೆ ಡಾ. ಛಬ್ರಿಯಾ.

"ಪರೀಕ್ಷೆಗೆ ಮೊದಲು ಮತ್ತು ಫಲಿತಾಂಶದ ತರುವಾಯ ಯುವಜನರಲ್ಲಿ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚುತ್ತವೆ" ಎನ್ನುತ್ತಾರೆ ಮುಂಬಯಿಯ ಬಿ.ವೈ.ಎಲ್.ನಾಯರ್ ಆಸ್ಪತ್ರೆಯ ಮನಃಶಾಸ್ತ್ರದ ಪ್ರಾಧ್ಯಾಪಕರಾದ ಡಾ. ಹೇಮಂಗೀ ಧಾವಲೆ.

೧೯ ವರ್ಷದ ಸೋನಿಯಾ ಠಾಕೂರ್ ವಿಷಯವನ್ನೇ ತೆಗೆದುಕೊಳ್ಳೋಣ. ಅವಳು ಜೈಪುರದಲ್ಲಿ ಹಿಂದಿ ಮಾಧ್ಯಮದಲ್ಲಿ ಓದುತ್ತಿದ್ದ ಹುಡುಗಿ. ಮುಂಬಯಿಯಲ್ಲಿ ಒಳಾಂಗಣ ವಿನ್ಯಾಸವನ್ನು ಕಲಿಯಲು ಬಂದಳು. ಅವಳ ಇಂಗ್ಲೀಷ್ ಭಾಷೆ ಅಷ್ಟೊಂದು ಚೆನ್ನಾಗಿರಲಿಲ್ಲವಾದ್ದರಿಂದ ಅವಳಿಗೆ ಕಲಿಕೆ ಕಷ್ಟವೆನಿಸಿತು. ಪರೀಕ್ಷೆಗೆ ಕೊಂಚದಿನಗಳ ಮೊದಲು ಅವಳು

ತನ್ನ ತಂದೆಗೆ ಮತ್ತು ಸೋದರಿಗೆ ಇಂಗ್ಲೀಷಿನಲ್ಲಿ ಪತ್ರ ಬರೆದಳು. ಆದರೆ ಆ ಪತ್ರದಲ್ಲಿಯ ಭಾಷೆ ಸರಿಯಿಲ್ಲವೆಂದು ಅವರಿಬ್ಬರೂ ಅವಳನ್ನು ದೂಷಿಸಿದರು. ಮೊದಲೇ ವ್ಯಗ್ರಗೊಂಡಿದ್ದ ಮನಃಸ್ಥಿತಿಯಲ್ಲಿದ್ದ ಅವಳು ಹತಾಶೆಯಿಂದ ನೇಣು ಹಾಕಿಕೊಂಡಳು.

ಪ್ರೇಮ ತೊಡಕುಗಳು: ಹೇಳಿಕೊಳ್ಳುವಂಥ ಸಾಮರಸ್ಯವಿಲ್ಲದ ಕುಟುಂಬದಿಂದ ಬಂದ ಮಕ್ಕಳು ಸಾಮಾನ್ಯವಾಗಿ 'ಪ್ರೇಮ'ದಲ್ಲಿ ಸಿಲುಕಿಕೊಳ್ಳುತ್ತಾರೆ. ಆದರೆ ಈ ಸಂಬಂಧ ಹಳಸಿಕೊಂಡಾಗ ಅವರಿಗೆ ಭವಿಷ್ಯವೇ ಶೂನ್ಯವಾಗಿ ಬಿಡುತ್ತದೆ. ೧೭ ವರ್ಷದ ಚೆನ್ನೈನ ಹುಡುಗಿಯೊಬ್ಬಳನ್ನು ಆಕೆಯ ಪ್ರೇಮಿ ವಿವಾಹವಾಗಲು ನಿರಾಕರಿಸಿದಾಗ ಅವಳು ವಿಷವನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಳು. ಮಾತಾಪಿತರು ಮಕ್ಕಳ ವಿವಾಹಕ್ಕೆ ಅಡ್ಡಿ ಬಂದಾಗ ಕೂಡ ಆತ್ಮಹತ್ಯೆಯ ಪ್ರಕರಣಗಳು ಉಂಟಾಗುವುದುಂಟು. ಪುಣೆಯಲ್ಲಿಯ ಒಂದು ಸಂಪ್ರದಾಯಸ್ಥ ಕುಟುಂಬದ ೧೮ ವರ್ಷದ ಹುಡುಗಿ ತನ್ನ ಹತ್ತಿರದ ಸಂಬಂಧಿ ಹುಡುಗನನ್ನು ವಿವಾಹವಾಗಲು ಇಚ್ಛಿಸಿದಳು. ಆದರೆ ಕುಟುಂಬದವರಿಂದ ಒಪ್ಪಿಗೆ ಸಿಗಲಿಲ್ಲ. ಆದ್ದರಿಂದ ಅವಳು ಆತ್ಮಹತ್ಯೆಗೆ ಪ್ರಯತ್ನಿಸಿದಳು. ಮೊದಲ ಸಾರಿ ವಿಫಲಳಾದಳು. ಆದರೂ ಕುಟುಂಬದವರು ದಯೆ ತೋರಲಿಲ್ಲ. ಕೊನೆಗೆ ಅವಳು ಸ್ನಾನದ ಮನೆಯ ಬಾಗಿಲನ್ನು ಮುಚ್ಚಿಕೊಂಡು ವಿಷ ಸೇವಿಸಿ ಬಿಟ್ಟಳು. ಈ ಸಾರಿ ಅವಳ ಪ್ರಯತ್ನ 'ಸಫಲವಾಯಿತು'.

ಬದುಕಿನ ಆಸೆ ಬಿಟ್ಟುಬಿಡುವುದಕ್ಕೆ ಒಂದೇ ಕಾರಣವಿರುವುದು ಅಪರೂಪ ಎನ್ನುತ್ತಾರೆ ಚೆನ್ನೈನ 'ಸ್ನೇಹ' ಕೇಂದ್ರದ ಡಾ. ಲಕ್ಷ್ಮಿ ವಿಜಯ್‌ಕುಮಾರ್. ''ಹಲವು ತೊಡಕುಗಳಿಂದ ಬಿಡುಗಡೆ ಹೊಂದಲು ಸಾವೊಂದನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ ಅನಿಸಿದಾಗ ಆತ್ಮಹತ್ಯೆಯ ಪ್ರಕರಣ ಉಂಟಾಗುತ್ತವೆ. ೧೯ ವರ್ಷದ ಸುಲೇಖಾ ಹಲವು ಸಮಸ್ಯೆಗಳಿಂದ ಚಿತ್ರಹಿಂಸೆ ಅನುಭವಿಸುತ್ತಿದ್ದಳು. ವಿಫಲ ಪ್ರೇಮ, ತಾಯಿಯ ನಿರ್ಲಕ್ಷತನ ಇವುಗಳಿಂದಾಗಿ ಖಿನ್ನತೆಯನ್ನು ಅನುಭವಿಸುತ್ತಿದ್ದಳು. ಅವಳಿಗೆ ವಿದ್ಯಾಭ್ಯಾಸ ಕೂಡ ಕಷ್ಟಕರವಾಗಿ ತೋರಿತು. ಕೊನೆಗೆ ಅನ್ಯ ಮಾರ್ಗ ಕಾಣದೇ ತನ್ನ ಬದುಕನ್ನು ಕೊನೆಗಾಣಿಸಿಕೊಂಡಳು.

ಅಪಾಯದ ಸೂಚನೆಗಳು : ಆತ್ಮಹತ್ಯೆಗೆ ಏನೇ ಕಾರಣವಿರಲಿ ಅಪಾಯದ ಸೂಚನೆಗಳು ಕಾಣಿಸಿಕೊಳ್ಳಬಹುದು. ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಮುಕ್ಕಾಲು ಪಾಲು ಜನ ತಮ್ಮ ಉದ್ದೇಶವನ್ನು ಸೂಕ್ಷ್ಮವಾಗಿ ತೋರಿಸಿಕೊಂಡು ಬಿಡುತ್ತಾರೆ ಎನ್ನುತ್ತದೆ. ಹಲವು ಪರಿಶೀಲನೆಗಳು, ಮನೆಯಿಂದ ಓಡಿ ಬಿಡುವುದು, ಕರ್ತವ್ಯಚ್ಯುತಿ, ವಿವೇಚನೆಯಿಲ್ಲದ ನಡವಳಿಕೆ, ಪುಗಳ್ತನ, ಸೋಮಾರಿತನ, ಜೊತೆಯವರನ್ನು ಗೋಳುಗುಟ್ಟಿಸುವುದು... ಇಂಥ ಹಲವಾರು ಅಹಿತಕರವಾದ ನಡವಳಿಕೆಗಳ ಮುಸುಕಿನಿಂದ ತಮ್ಮ ನಿಜವಾದ ಭಾವನೆಗಳನ್ನು ಮುಚ್ಚಿಬಿಡುತ್ತಾರೆ. ''ಆದರೆ ಹದಿಹರೆಯದ ಮುನಿಸಿಗೂ ಅಸಹಜವಾದ ನಡವಳಿಕೆಗೂ ವ್ಯತ್ಯಾಸವನ್ನು ಪಾಲಕರು ಗುರುತಿಸಬೇಕು.'' ಎನ್ನುತ್ತಾರೆ ಮುಂಬಯಿಯ ಮನಃಶಾಸ್ತ್ರಜ್ಞರಾದ ಡಾ. ಹರೀಶ್ ಶೆಟ್ಟಿ.

ಬೇಸರ, ಕಳವಳ, ಜಡತೆ, ಏಕಾಗ್ರತೆಯ ಕೊರತೆ ಮತ್ತು ಅತಿ ಮುಖ್ಯವಾಗಿ ನಡವಳಿಕೆಯಲ್ಲಿಯ ಬದಲಾವಣೆ ಅಂದರೆ ಒಂಟಿತನದ ಬಯಕೆ, ಅಜೀರ್ಣ, ನಿದ್ರಾಹೀನತೆ, ವಿಷಾದದ ಭಾವನೆ, ಸಂತೋಷ ತರುವಂಥ ವಿಷಯದಲ್ಲೂ ನಿರ್ಲಕ್ಷ್ಯ, ಮತ್ತು ಇತರ ಅಪಾಯಕರ ಸೂಚನೆಗಳೆಂದರೆ ಹೆಚ್ಚಾದ ಆತಂಕ ಮತ್ತು ಉದ್ವೇಗ ಮದ್ಯ- ಅಫೀಮುಗಳ ದುರುಪಯೋಗ, ಬೆಲೆ ಬಾಳುವ ವಸ್ತುಗಳನ್ನು ಕೊಟ್ಟುಬಿಡುವುದು, ಮತ್ತು ಆತ್ಮಹತ್ಯೆಗೆ ಉಪಯೋಗ ಬರುವಂಥ

ಸಾಧನಗಳಾದ ನಿದ್ರೆಯ ಮಾತ್ರೆ, ವಿಷ, ಹಗ್ಗ ಇಂಥವನ್ನು ಭದ್ರಪಡಿಸುವುದು.. ಇವುಗಳೇನಾದರೂ ಮಕ್ಕಳಲ್ಲಿ ಕಂಡುಬಂದರೆ ತಂದೆ ತಾಯಿಗಳಾಗಲೀ ಸ್ನೇಹಿತರಾಗಲೀ ಅವರನ್ನು ಚೆನ್ನಾಗಿ ಗಮನಿಸುತ್ತಿರಬೇಕು.

ಮಾತಿನಲ್ಲಿಯ ಬೆದರಿಕೆಯನ್ನೂ ಗಂಭೀರವಾಗಿಯೇ ತೆಗೆದುಕೊಳ್ಳಬೇಕು. ಆದರೆ ಇದರಲ್ಲಿ ಸತ್ಯತೆ ಇಲ್ಲದಿರಲೂ ಬಹುದು. ಆತ್ಮಹತ್ಯೆಯ ಬಗ್ಗೆ ಮಾತನಾಡುವವರೆಲ್ಲರೂ ಪ್ರಾಣ ಕಳೆದುಕೊಳ್ಳಲಾರರು ಎನ್ನುತ್ತಾರೆ ಡಾ. ಲಕ್ಷ್ಮಿ ವಿಜಯ್ ಕುಮಾರ್.

ಆತ್ಮಹತ್ಯೆಗೆ ಪ್ರಯತ್ನಿಸುವವರು "ಮರಣಾನಂತರ ನಾನು ನನ್ನ ದೇಹವನ್ನು ಹೇಗೆ ದಾನ ಮಾಡಬಹುದು? "ನಾನು ಹೊರಟು ಹೋದರೆ ಯಾರು ವಿಷಾದ ಪಡಬಹುದು?" ಎಂದೆಲ್ಲಾ ತಮ್ಮ ಇಂಗಿತವನು ತೋರ್ಪಡಿಸಿಕೊಳ್ಳಬಹುದು. "ಬದುಕುವುದರಲಿ ಏನಿದೆ?" "ನಾನು ಇದ್ದರೂ, ಸತ್ತರೂ ಯಾರಿಗೂ ಚಿಂತೆ ಇಲ್ಲ" ಎಂಬ ಹೇಳಿಕೆಗಳಿಗೆ ಕಾರಣ ಸದಾ ಸಹಾನುಭೂತಿಯನ್ನು ಪಡೆದುಕೊಳ್ಳು ವುದಕ್ಕೇ ಆಗಿರಲಾರದು ಎನ್ನುತ್ತಾರೆ ಮುಂಬಯಿಯ ಸಂಸ್ಥೆಯೊಂದರ ಕಾರ್ಯ ನಿರ್ವಾಹಕರಾದ ಫ್ರೆನಿ ಮಹೇಂದ್ರ.

ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವವರು ಸಾಮಾನ್ಯವಾಗಿ ತಮ್ಮ ಬೆಲೆಯನ್ನು ತಾವೇ ಕಡಿಮೆ ಮಾಡಿಕೊಂಡು ಬಿಡುತ್ತಾರೆ ಮತ್ತು ತಾವು ಪ್ರಯೋಜನಕ್ಕೆ ಬಾರದವರು ಎಂದೇ ನಿರ್ಧರಿಸಿಕೊಂಡುಬಿಡುತ್ತಾರೆ. ಆತ್ಮಾಭಿಮಾನ ತೀರಾ ನೆಲಕಚ್ಚಿಹೋದಾಗ ಮತ್ತು ತಾವು ತೀರಾ ಸೋತು ಹೋಗಿದ್ದೇವೆ ಅನಿಸಿದಾಗ ಆತ್ಮಹತ್ಯೆಯ ಕಡೆಗೆ ವಾಗುತ್ತಾರೆ. ಹೀಗೆ ಅಭಿಪ್ರಾಯ ಪಡುವವರು ಪುಣೆಯ ಕಮಲಾ ನೆಹರು ಆಸ್ಪತ್ರೆಯ ಮಾನಸಿಕ ತಜ್ಞರಾದ ಡಾ. ಡಿ.ಕೆ. ಶಿರೋಳೆ, ತಮಾಷೆಯೆಂದರೆ ಆತ್ಮಹತ್ಯೆಗೆ ನಿರ್ಧರಿಸಿರುವ ವ್ಯಕ್ತಿಗಳು ಕೂಡ ಆದದ್ದಾಗಲಿ ಎಂಬ ಮನೋದೃಢತೆಯಿಂದಲೂ, ನಿರಾತಂಕವಾಗಿಯೂ ಇರಬಲ್ಲರು.

ಸಹಾಯ ಹಸ್ತ: ಆತ್ಮಹತ್ಯೆಯ ಪ್ರಯತ್ನದಲ್ಲಿರುವವರಿಗೆ ತುರ್ತು ಪರಿಸ್ಥಿತಿಯ ಸಮಯದಲ್ಲಿ ವಾಸ್ತವವಾಗಿ ಯಾರು ಬೇಕಾದರೂ ಮಾನಸಿಕ ಒತ್ತಾಸೆಯನ್ನು ನೀಡಬಹುದು. ಸ್ನೇಹಿತರು, ಉಪಾಧ್ಯಾಯರು, ಸಂಬಂಧಿಕರು, ಪಾಲಕರು. ಹೀಗೆ ಯಾರೂ ಆಗಬಹುದು ಅಥವಾ ತತ್‌ಕ್ಷಣವೇ ಇದಕ್ಕೆ ಸಂಬಂಧಪಟ್ಟವರ, ಕುಟುಂಬವೈದ್ಯರ ಅಥವಾ ಮಾನಸಿಕ ತಜ್ಞರ ಸಹಾಯವನ್ನು ಪಡೆಯಬಹುದು.

ಮನೋವ್ಯಥೆ ಮತ್ತು ಆತ್ಮಹತ್ಯಾ ಪರಿಹಾರ ಕೇಂದ್ರಗಳು ನಮ್ಮ ದೇಶದಲ್ಲಿ ಸಾಕಷ್ಟಿವೆ. ಅಂಥ ಒಂದು ಕೇಂದ್ರ ನಿಮ್ಮ ಊರಿನಲ್ಲಿದ್ದರೆ ನೀವು ಅದರಿಂದ ತಕ್ಕ ಪ್ರಯೋಜನ ಪಡೆದುಕೊಳ್ಳಬಹುದು. ಪಾಂಡಿಚೇರಿಯಲ್ಲಿರುವ 'ಮೈತ್ರೇಯಿ' ಸಂಸ್ಥೆಗೆ ವರ್ಷಕ್ಕೆ ಸುಮಾರು ೫೫೦೦ ದೂರವಾಣಿ ಕರೆಗಳು ಬರುತ್ತವೆ. ಅನುಕೂಲ ಫಲ ಎಷ್ಟೆಂದು ಲೆಖ್ಖ ಸರಿಯಾಗಿ ಸಿಗದಿದ್ದರೂ ಪ್ರತಿ ವರ್ಷ ಸಾವಿರಾರು ಹದಿಹರೆಯದವರ ಆತ್ಮಹತ್ಯೆಯ ಪ್ರಯತ್ನವನ್ನು ತಡೆಯುವುದರಲ್ಲಿ ಆ ಸಂಸ್ಥೆ ಸಫಲವಾಗಿದೆ. ನಿಮ್ಮ ಸಮಸ್ಯೆಯ ಪರಿಹಾರಕ್ಕೆ ಬೇರೆ ಮಾರ್ಗಗಳಿವೆ. ಆತ್ಮಹತ್ಯೆಯೊಂದೇ ಇದಕ್ಕೆ ಪರಿಹಾರವಲ್ಲ ಎಂದು ಅಲ್ಲಿಯ ಸ್ವಯಂ ಸೇವಕರು ಯುವ ಜನರನ್ನು ಸಮಾಧಾನಿಸುತ್ತಾರೆ.

ಆದರೆ, ಇದರಲ್ಲಿ ಸಾಮಾನ್ಯ ಜನರ ಪಾತ್ರವೇ ಸಾಕಾಗುತ್ತದೆ. ಆತ್ಮಹತ್ಯೆಗೆ ಪ್ರಯತ್ನಿಸುವಂಥ ಕಿರಿಯರನ್ನು ಪ್ರೀತಿಸಲು, ವಿಶ್ವಾಸಕ್ಕೆ ತೆಗೆದುಕೊಳ್ಳಲು ಪರಿಣತರೇ ಆಗಬೇಕಾಗಿಲ್ಲ ಎನ್ನುವುದು ಮುಂಬಯಿಯ ಭವಾನ್ಸ್ ಕಾಲೇಜಿನ ರಾಜೀವ ಪಂಡಿತರ ಅಭಿಪ್ರಾಯ.

ಪಂಡಿತ್ ಅವರು ತಮ್ಮ ಹನ್ನೆರಡನೇ ತರಗತಿ ವಿದ್ಯಾರ್ಥಿ ವಿಜಯನ ವಿಷಯದಲ್ಲಿ ಇದನ್ನು ದೃಢಪಡಿಸಿದ್ದಾರೆ. ಒಂದು ದಿನ ಮಧ್ಯರಾತ್ರಿಯಲ್ಲಿ ವಿಜಯ್, ಪಂಡಿತ್ ಅವರ ಮನೆಗೆ ದೂರವಾಣಿಯ ಕರೆಮಾಡಿ ತಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆಂದು ತಿಳಿಸಿದ. ಕಾರಣವೇನೆಂದರೆ ಆತನ ತಂದೆ ಅವನಿಗೆ ವೈದ್ಯಕೀಯ ವಿದ್ಯಾಭ್ಯಾಸ ಮಾಡಲು ಬಲವಂತ ಮಾಡುತ್ತಿದ್ದರು. ವಿಜಯನಿಗಾದರೋ ಇಂಜಿನಿಯರಿಂಗ್ ಓದಲು ಇಷ್ಟವಿತ್ತು. ಹೀಗಾಗಿ ಆತ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದ. ವಿಜಯನ ನಿರ್ಧಾರ ಕೇಳಿದ ಪಂಡಿತ್ ಅವರು ಅರೆಕ್ಷಣ ಕಂಪಿಸಿದರು. ಅನಂತರ ಶಾಂತವಾಗಿಯೇ ಅವನೊಡನೆ ಸುಮಾರು ಒಂದು ಘಂಟೆಯ ವರೆಗೆ ಸಂಭಾಷಣೆ ನಡೆಸಿದರು. ಆಗ ವಿಜಯನ ತಂದೆ ಕುಡಿತದ ಮಂಪರಿನಲ್ಲಿ ಮಲಗಿಬಿಟ್ಟಿದ್ದಾರೆ ಹಾಗೂ ಕೇವಲ ಮತ್ತೊಬ್ಬ ವ್ಯಕ್ತಿ ಮಾತ್ರ ಮನೆಯಲ್ಲಿದ್ದಾರೆಂಬ ವಿಷಯ ತಿಳಿಯಿತು. ಪಂಡಿತ್ ಅವರು ವಿಜಯನ ಮನೆಗೆ ಈಗಲೇ ಬರುತ್ತೇನೆಂದು ತಿಳಿಸಿದರು.

ತಮ್ಮ ಮನೆಯಿಂದ ೪೦ ನಿಮಿಷದ ಹಾದಿಯಲ್ಲಿರುವ ವಿಜಯನ ಮನೆಗೆ ಹೊರಟು ಮಧ್ಯೆ ಹಲವಾರು ಸಾರಿ ತಮ್ಮ ಸೆಲ್ ಫೋನಿನಲ್ಲಿ ಅವನೊಡನೆ ಮಾತನಾಡಿದರು. ಕೊನೆಗೆ ಅವನ ಮನೆ ತಲುಪಿದ ಕೂಡಲೇ ಅವನನ್ನು ಎದೆಗವಚಿಕೊಂಡು ತಮಗೆ ಅವನ ಮೇಲೆ ತುಂಬಾ ಪ್ರೀತಿ ಇದೆಯೆಂದು ತಿಳಿಯಪಡಿಸಿದರು. ಅನಂತರ ಪಂಡಿತ್ ಅವರು ವಿಜಯನ ತಂದೆಗೆ ವಸ್ತುಸ್ಥಿತಿಯನ್ನು ಮನದಟ್ಟು ಮಾಡಿಸಿ ಹುಡುಗ ಇಷ್ಟಪಡದ ವಿಷಯವನ್ನು ಓದಲು ಬಲವಂತ ಮಾಡದಿರಲು ಸೂಚಿಸಿದರು. ತಂದೆ ಮತ್ತು ಮಗ ಮತ್ತೆ ಸಮಾಧಾನ ಹೊಂದಿದರು. ಈಗ ಅವರಿಬ್ಬರೂ ಅಮೇರಿಕಾದಲ್ಲಿದ್ದಾರೆ.

ಪಾಲಕರ ಮತ್ತು ಮಕ್ಕಳ ನಡುವಿನ ಬಾಂಧವ್ಯ ಅತ್ಯಗತ್ಯ ಎನ್ನುತ್ತಾರೆ ಡಾ. ಛಬ್ರಿಯಾ, ''ಮಕ್ಕಳ ಬಗ್ಗೆ ನಿಮಗಿರುವ ಪ್ರೀತಿ ಮತ್ತು ಆಸಕ್ತಿಯನ್ನು ಅವರೆದುರಿಗೆ ಆಗಾಗ ತೋರ್ಪಡಿಸಿ ಅವರ ಒಂಟಿತನವನ್ನು ಸಾಧ್ಯವಾದಷ್ಟೂ ಹೋಗಲಾಡಿಸಿ. ಇದರಿಂದ ಅವರಿಗೆ ಹಿಂದಕ್ಕೆ ಬರಲಾಗದಂತಹ ಹೆಜ್ಜೆಯನ್ನಿಡುವ ಹಂಬಲ ಉಂಟಾಗದು''.

ಅಜ್ಞಾನ, ಅಶಿಸ್ತು, ಮನುಷ್ಯನ ತೊಂದರೆಗಳಿಗೆ ಮುಖ್ಯ ಕಾರಣ.

-ಕೌಟಿಲ್ಯ

ನೀವು ನಾಚಿಕೊಂಡಾಗ....

ಮುಳಿಯ ಸರಸ್ವತೀ
ನಂ.೪, ''ಸ್ವರ್ಣ ವಿಲಾಸ''
೯೨೬,೧ನೇ ಮುಖ್ಯರಸ್ತೆ
ಲಕ್ಷ್ಮೀಪುರಂ, ಮೈಸೂರು-೫೭೦ ೦೦೪

ಮೂವತ್ತೆರಡು ವರ್ಷ ಪ್ರಾಯದ 'ಗ್ರೇಸ್' ನಗರದ ಒಂದು ರೆಸ್ಟೋರೆಂಟನಲ್ಲಿ ಕುಳಿತು ಊಟ ಮಾಡುತ್ತಿರುವುದು ಒಂದು ಪವಾಡವೇ ನಿಜ. ಸಣ್ಣ ಸಣ್ಣ ತುತ್ತುಗಳನ್ನೆತ್ತಿ ಅವಳು ಉಣ್ಣುತ್ತಿರುವುದು ವಿಶೇಷವೇನಲ್ಲ ಎಂದು ನೋಡಿದವರಿಗೆ ಯಾರಿಗೂ ಎನಿಸಬಹುದು. ಆದರೆ ಅವಳ ಮಟ್ಟಿಗೆ ಅದೊಂದು ಸಾಹಸವೇ ಸರಿ. ಶಾಲಾದಿನಗಳಲ್ಲಿ ಕ್ಯಾಂಟೀನಿನಲ್ಲಿ ಎಲ್ಲರ ಮುಂದೆ ಕುಳಿತು ಉಣ್ಣುವುದು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ. ಯಾಕೆಂದರೆ, ಎಲ್ಲರೂ ತನ್ನನ್ನೇ ದಿಟ್ಟಿಸಿ ನೋಡುತ್ತಾರೆ ಎಂದು ಅವಳಿಗೆ ಅನಿಸಿತ್ತು. ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದ ಒಂದು ರೀತಿಯ ಅವ್ಯಕ್ತ ಭೀತಿಯು ಬಾಧಿಸಲು ಆರಂಭಿಸಿದ ಮೇಲಷ್ಟೆ ಅವಳಿಗೆ ಅರಿವಾದುದು ತನ್ನ ಈ ಭಯಭೀತ ಮನೋಭಾವ ಬರಿಯ ನಾಚಿಕೆ ಸ್ವಭಾವವಲ್ಲ; ಅದೊಂದು ಬಗೆಯ ''ಸಾಮಾಜಿಕ ಆತಂಕ ವ್ಯಾಧಿ'' ಎನ್ನುವ ಮನೋವಿಕಾರ ಎಂದು. ಇದಕ್ಕೆ ಸಾಮಾಜಿಕ ಭೀತಿ ಎನ್ನುವುದೂ ಉಂಟು. ವೈದ್ಯಕೀಯ ಚಿಕಿತ್ಸೆ ಹಾಗೂ ಔಷಧಗಳ ಸಹಾಯದಿಂದ ಅವಳ ಸ್ಥಿತಿ ಸಾಕಷ್ಟು ಬದಲಾಗಿದ್ದರೂ ಇನ್ನೂ ಸಂಪೂರ್ಣ ಸುಧಾರಿಸಿಲ್ಲ. ''ನಿರಂತರವಾಗಿ ಇದರೊಡನೆ ಹೆಣಗಾಡಬೇಕಿರದಿದ್ದಲ್ಲಿ ನಾನು ಇನ್ನೆಲ್ಲೋ ಬೇರೆಯೇ ವ್ಯಕ್ತಿಯಾಗಿರುತ್ತಿದ್ದೆನೋ ಏನೋ'' ಎನ್ನುತ್ತಾಳೆ ಅವಳು.

ನಾಚಿಕೆ ಸ್ವಭಾವ ಅಥವಾ ಜನರಿಂದ ದೂರ ಸರಿಯುವ ಪ್ರವೃತ್ತಿ ಸರ್ವೇಸಾಮಾನ್ಯವಾದ ಒಂದು ಮಾನವ ಸಹಜ ಗುಣ. ಜಗತ್ತಿನ ಪ್ರತಿಯೊಬ್ಬನೂ ಒಂದಲ್ಲ ಒಂದು ಸಲ ಇದನ್ನು ಅನುಭವಿಸಿಯೇ ಇರುತ್ತಾನೆ. ಈವರೆಗೆ ದಾಖಲಿಸಿದ ಅಂಕೆ ಸಂಖ್ಯೆಯ ಪ್ರಕಾರ, ಹೆಚ್ಚಿನ ಕಾಲೇಜು ವಿದ್ಯಾರ್ಥಿಗಳು ತಮ್ಮನ್ನು ನಾಚಿಕೆ ಸ್ವಭಾವದವರು ಎಂದು ಹೇಳಿಕೊಂಡಿದ್ದಾರೆ. ಅಮೆರಿಕ ಸಂಯುಕ್ತ ರಾಷ್ಟ್ರದಲ್ಲಿ ಕೈಕೊಂಡ ಒಂದು ಸರ್ವೇಕ್ಷಣೆಯ ಫಲಸ್ವರೂಪ, ಸುಮಾರು ಎಂಟು ಜನರಲ್ಲಿ ಒಬ್ಬರು ಈ ನಾಚಿಕೆ ಸ್ವಭಾವದಿಂದಾಗಿ ಸಮಾಜವನ್ನೆದುರಿಸಲಾರದಷ್ಟು ಭೀತರಾಗಿರುತ್ತಾರೆ ಎಂದು ಕಂಡು ಬಂದಿದೆ. ಕೆಲವು ಪ್ರತಿಕೂಲ ಸಂದರ್ಭಗಳಲ್ಲಿ ಅಂತಹವರ ಹೃದಯದ ಗತಿ ಏರುತ್ತದೆ, ಅಂಗೈಗಳು ಬೆವರುತ್ತವೆ, ಬಾಯಿ ಆರುತ್ತದೆ, ಮಾತು ಮಾಯವಾಗುತ್ತದೆ. ಇಂತಹ ಸಮಯದಲ್ಲಿ ಅಲ್ಲಿಂದ ಹೇಗಾದರೂ ಪಾರಾಗಲು ಹವಣಿಸುತ್ತಾರೆ. ಈ ರೀತಿಯ ಸಾಮಾಜಿಕ ಭೀತಿಯುಳ್ಳವರು ಸಾಮಾನ್ಯವಾದ ಮಾನಸಿಕ ಅಸ್ವಸ್ಥತೆಯಿಂದ ಬಳಲುವವರಾಗಿರುತ್ತಾರೆ.

ಇಂತಹ ಕೆಲವರು ಸಾರ್ವಜನಿಕ ಶೌಚಾಲಯಗಳನ್ನು ಬಳಸಲು, ದೂರವಾಣಿಯಲ್ಲಿ ಮಾತಾಡಲು ಹಿಂಜರಿಯುತ್ತಾರೆ. ಕೆಲವರು ತಮ್ಮ ಮೇಲಧಿಕಾರಿಯ ಸಮ್ಮುಖದಲ್ಲಿ ಇಲ್ಲವೆ ಗಂಡಾದರೆ ಹೆಣ್ಣಿನ ಮುಂದೆ, ಹೆಣ್ಣಾದರೆ ಗಂಡಿನ ಮುಂದೆ, ಅವಾಕ್ಕಾಗಿಬಿಡುವುದುಂಟು. ಇನ್ನು ಕೆಲವರು ತಮ್ಮ ಸುತ್ತಲೂ ಕಾಲ್ಪನಿಕ ಕೋಟೆ ಕಟ್ಟಿಕೊಂಡು ಯಾರೊಡನೆಯೂ ಬೆರೆಯದೆ, ಸಮಾಜದಿಂದ ವಿಮುಖರಾಗಿ ಸನ್ಯಾಸ ಜೀವನ ನಡೆಸುತ್ತಿರುತ್ತಾರೆ.

ಈ ತರಹದ ಸಾಮಾಜಿಕ ಭೀತಿಯ ಲಕ್ಷಣಗಳು ಹಿಪ್ಪೋಕ್ರೇಟಸ್‌ನ ಕಾಲದಿಂದಲೇ ಅಂಕಿತ

ಏಪ್ರಿಲ್ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೋನಿ ಎಂ.ಸ್ಮಿತ್ ಹಾಗೂ ಸ್ಟೇಸಿ ಶುಲ್ಟ್ಸ್ ಅವರ ''ವೈ ಯೂ ಆರ್ ಟೂ ಶೈ'' ಎನ್ನುವ ಪ್ರಬಂಧದ ಭಾವಾನುವಾದ.

ವಾಗಿದ್ದರೂ ೧೯೮೦ನೇ ಇಸವಿಯವರೆಗೆ ಮನೋವೈಜ್ಞಾನಿಕ ಕೈಪಿಡಿಗಳಲ್ಲಿ ಸೇರ್ಪಡೆಯಾಗಿರಲಿಲ್ಲ. ಕೆಲ ಮನೋವಿಜ್ಞಾನಿಗಳು ಇಂದಿನ ಇಂಟರ್‌ನೆಟ್ ಸಂಸ್ಕೃತಿಯು ನಾಚಿಕೆ ಸ್ವಭಾವವನ್ನು ಕೆಳಮಟ್ಟದಿಂದ ಮೇಲಕ್ಕೊಯ್ಯುವ ಸಾಧನವಾಗಬಹುದೆಂದು ಕಣಿ ನುಡಿಯುತ್ತಿದ್ದಾರೆ. ''ಮೊದಮೊದಲು ತುಸುವೇ ನಾಚುತ್ತಿರುವವರು ಇದರಿಂದಾಗಿ (ಇಂಟರ್‌ನೆಟ್) ಇತರರೊಡನೆ ಪರಸ್ಪರ ಸಂಬಂಧವನ್ನು ಇನ್ನೂ ಕಡಮೆ ಮಾಡಿಕೊಳ್ಳುವ ಅವಕಾಶ ಹೆಚ್ಚುತ್ತಿದೆ. ಇದು ಅವರ ನಾಚಿಕೆ ಸ್ವಭಾವವನ್ನು ಮತ್ತಷ್ಟು ಹದಗೆಡಿಸುತ್ತದೆ'' ಎಂದು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಮನೋವಿಜ್ಞಾನದ ಪ್ರಾಧ್ಯಾಪಕರಾದ ಪ್ರೊ. ಫಿಲಿಪ್ ಜಿ. ಜಿಂಬಾರ್ಡೋರವರ ಅಂಬೋಣ.

ಕೆಲವರು ಜನ್ಮದಾರಭ್ಯ ಅತಿಲಜ್ಜಾ ಸ್ವಭಾವದವರಾಗುವ ಲಕ್ಷಣಗಳನ್ನು ಹೊಂದಿದ್ದರೂ ಇದೇ ಅವರ ಹಣೆಬರಹವಾಗಬೇಕಿಲ್ಲ. ಹಾರ್ವರ್ಡ್ ಸಂಶೋಧಕರಾದ ಜೆರೋಮ್ ಕಾಗನ್‌ರವರು, ಒಂದು ಶಿಶು ೧೬ ವಾರದ ಬೆಳವಣಿಗೆಯಲ್ಲಿಯೇ ತನ್ನ ನಾಚಿಕೆತನ ಅಥವಾ ಎದೆಗಾರಿಕೆಯನ್ನು ಪ್ರದರ್ಶಿಸುತ್ತದೆ ಎಂದು ಸಂಶೋಧಿಸಿದ್ದಾರೆ. ಸಾಮಾನ್ಯವಾಗಿ ಐದರಲ್ಲೊಂದು ಶಿಶು ಹೊಸ ಪರಿಸರದಿಂದ ಮುಖ ತಿರುಗಿಸುತ್ತದೆ ಅಥವಾ ರಚ್ಚೆ ಹಿಡಿದು ಅಳುತ್ತದೆ. ಉಳಿದವು ಅಪರಿಚಿತರನ್ನೂ ಧೈರ್ಯವಾಗಿ ಸಂಪರ್ಕಿಸಬಹುದು ಅಥವಾ ಹೊಸ ವಸ್ತುಗಳಿಗೂ ಕೈಚಾಚಬಹುದು. ಆದರೂ ಕೆಲವೊಮ್ಮೆ ನಾಚಿಕೆ ಸ್ವಭಾವದ ಶಿಶುಗಳು ಬೆಳೆದು ದೊಡ್ಡವರಾದಂತೆ ಸಂಘಜೀವಿಗಳಾಗಬಹುದು; ಧೈರ್ಯಸ್ಥರಾಗಿದ್ದ ಮಕ್ಕಳು ಮುಂದೆ ಸಾಮಾಜಿಕ ಭೀತಿಗೆ ಬಲಿಯಾಗಿ ವ್ಯತಿರಿಕ್ತವಾಗಿ ಸ್ಪಂದಿಸಬಹುದು.

ಜೀವನದ ಅನುಭವಗಳು, ಮನುಷ್ಯನನ್ನು ಕಾಲ ಕ್ರಮೇಣ ಹೆಚ್ಚು ಅಥವಾ ಕಡಿಮೆ ಎದೆಗಾರಿಕೆಯುಳ್ಳವನನ್ನಾಗಿಸುವಂತೆ ಅವನ ಮೆದುಳನ್ನು ರೂಪಿಸಬಹುದು. ಮಾನವನ ಮೆದುಳು, ಪ್ರಾಯಶಃ ಭೀತಿಚಿಹ್ನೆಯೊಂದನ್ನು ಸಂದರ್ಭೋಚಿತವಾಗಿ (ಸ್ಥಳ, ಸಮಯ, ಸಂಗೀತ ಇತ್ಯಾದಿ) ಸಂಯೋಜಿಸಿಕೊಳ್ಳುವಂತೆ ತೋರುತ್ತದೆ ಎಂದು ಮನೋವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಉದಾಹರಣೆಗೆ, ಮಗುವೊಂದನ್ನು ಕ್ಲಾಸಿನಲ್ಲಿ ಉಪಾಧ್ಯಾಯರು ಯಾವುದೋ ಕಾರಣಕ್ಕೆ ಚೆನ್ನಾಗಿ ಬೈದರೆ, ಮುಂದೆ ಹಲವು ಸಲ ಆ ಮಗು ಕ್ಲಾಸಿನೊಳಗೆ ಅಡಿ ಇಡಲು ಅಂಜುತ್ತದೆ; ಆ ಉಪಾಧ್ಯಾಯರೆಂದರೆ ಭಯ ಪಡಲಾರಂಭಿಸುತ್ತದೆ. ಕೆಲವೊಮ್ಮೆ ಮೆದುಳು ಈ ರೀತಿ ಗುರುತಿಟ್ಟುಕೊಳ್ಳುವುದು ಎಷ್ಟು ಪರಿಣಾಮಕಾರಿಯಾಗಿರುತ್ತದೆಂದರೆ, ಅಂತಹ ಮಗು ಎಲ್ಲಾ ಕ್ಲಾಸುಗಳಲ್ಲೂ, ಎಲ್ಲಾ ಉಪಾಧ್ಯಾಯರ ಮುಂದೆಯೂ ಅಂಜತೊಡಗಬಹುದು.

ಮನೋರೋಗ ಚಿಕಿತ್ಸಕಿ ಮೊಯ್ರಾರಿನ್ ಹೇಳುವುದೇನೆಂದರೆ ಈ ತರಹದ ಪ್ರಸಂಗಗಳನ್ನು ಸರಿಯಾಗಿ ಎದುರಿಸಲಾರದ ಮಕ್ಕಳು ಶಾಲೆಗೆ ಹೋಗುವುದನ್ನೇ ನಿಲ್ಲಿಸಬಹುದು; ಅಥವಾ ಗೆಳೆಯರೊಡನೆ ಬೆರೆಯಲು ಹಿಂಜರಿಯಬಹುದು ; ಇಲ್ಲವೇ ಕೆಲವೇ ಗೆಳೆಯರನ್ನು ಹೊಂದಿರಬಹುದು. ಹೀಗೆ, ಯಾವ ಸಂದರ್ಭಗಳಿಂದ ಸಾಮಾಜಿಕ ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳಬೇಕೋ ಅವುಗಳಿಂದಲೇ ದೂರವಿರುವುದರಿಂದ, ಇಂತಹ ಮಕ್ಕಳು ತಮ್ಮ ಜೀವನದಲ್ಲಿ ಮುಂಬರಲಿರುವ ವೈಪರೀತ್ಯಗಳನ್ನು ಎದುರಿಸುವ ಕ್ಷಮತೆಯನ್ನು ಕಳೆದುಕೊಳ್ಳುತ್ತಾರೆ.

ಇಲ್ಲಿ ಪೋಷಕರಿಗೊಂದು ಕಿವಿಮಾತು- ''ಪೋಷಕರು ಅತಿ ವಿಮರ್ಶಕ ಪ್ರವೃತ್ತಿಯವರಾಗಿದ್ದರೆ, ಅವರು ಮಕ್ಕಳಿಗೆ ಹೆದರಿಸುವ ಶಿಕ್ಷಣ ಕೊಡಬಹುದು. ಆದರೆ ಅತ್ಯಂತ ಮೆದು

ಸ್ವಭಾವದ ತಂದೆತಾಯಿಯರೂ ಕೂಡಾ ಇಂತಹ ನಾಚುಬುರುಕ ಮಕ್ಕಳನ್ನು ಚೆನ್ನಾಗಿ ಬೆಳೆಸಬಹುದು. ಆದರೆ ಅವರು ಮಕ್ಕಳ ಬಗೆಗೆ ತುಂಬಾ ತಲೆಕೆಡಿಸಿಕೊಳ್ಳಬಾರದು. ಇತರರು ಏನು ಹೇಳುತ್ತಾರೋ ಎಂದು ಚಿಂತಿಸ ಬಾರದು'' ಎಂದು ಮಾನಸಿಕ ಚಿಕಿತ್ಸಾ ಕೇಂದ್ರ ವೊಂದರ ಮುಖ್ಯಸ್ಥರಾದ ರಿಚರ್ಡ್ ಹೈಂಬರ್ಗ್ ಹೇಳುತ್ತಾರೆ. ಮಗುವಿಗೆ ಅವರ ಕಿವಿಮಾತೇನೆಂದರೆ ''ಈ ಜಗತ್ತು ಭಯಂಕರ, ತೇಜೋಭಂಗ ಪ್ರಸಂಗಗಳಿಂದ ತುಂಬಿದೆ'' ಎಂದು.

ಸಾಮಾಜಿಕ ಭೀತಿ ಎಂಬ ಪಿಡುಗಿಗೆ ಬಲಿಯಾದವರಲ್ಲಿ ಅರ್ಧಕ್ಕರ್ಧ ಜನ ತಮ್ಮ ಲನೇ ವಯಸ್ಸಿನಿಂದಲೇ ಇದಕ್ಕೆ ಬಲಿಯಾಗಿ ದ್ದರೆ ಉಳಿದವರು ತಮ್ಮ ತಾರುಣ್ಯದಲ್ಲಿ ಬಲಿಯಾಗುತ್ತಾರೆ. ಕೆಲವರಲ್ಲಿ ಈ ಸಮಸ್ಯೆ ಬಹುತೇಕ ಗುಪ್ತವಾಗಿದ್ದು, ಕಾಲೇಜು ಅಥವಾ ಹೊಸ ಉದ್ಯೋಗ ಅಥವಾ ಇನ್ನಿತರ ಸಾರ್ವಜನಿಕ ಕ್ಷೇತ್ರಕ್ಕೆ ಕಾಲಿಡುತ್ತಿರುವಂತೆಯೇ ಪ್ರಕಟವಾಗುತ್ತದೆ. ಗಂಡಸರಿಗಿಂತಲೂ ಹೆಂಗಸರೇ ಸಾಮಾಜಿಕ ಭೀತಿಯಿಂದ ಹೆಚ್ಚು ಬಳಲುತ್ತಾರೆಂದು ಕಂಡುಬಂದಿದೆ. ಆದರೆ ಗಂಡಸರಲ್ಲಿ ನಾಚುಬುರುಕತನವನ್ನು ಸಮಾಜ ಸಹಿಸುವುದಿಲ್ಲವಾದುದರಿಂದ ಹೆಚ್ಚು ಗಂಡಸರು ವೈದ್ಯಕೀಯ ನೆರವಿಗೆ ಮೊರೆ ಹೋಗುತ್ತಾರೆ.

ಸ್ಟೀವ್ ಫಾಕ್ಸ್ ಎಂಬುವನು ಸಾಮಾಜಿಕ ಭೀತಿಯಿಂದ ಎಷ್ಟು ಬಳಲುತ್ತಿದ್ದನೆಂದರೆ ಅವನಿಗೆ ಹೈಸ್ಕೂಲಿನಲ್ಲಿ ಹುಡುಗಿಯರೊಡನೆ ಮಾತಾಡಲು ಧೈರ್ಯ ಬರುತ್ತಿರಲಿಲ್ಲ. ಹಾಗಾಗಿ ಹುಡುಗಿಯರೆಲ್ಲಾ ಛೇಡಿಸಲೆಂದೇ ತಾವಾಗಿ ಮುಂದೆ ಬಿದ್ದು, ಅವನನ್ನು ಮಾತನಾಡಿಸಿ, ಅವನು ಲಜ್ಜೆಯಿಂದ ಕೆಂಪಾಗು ವುದನ್ನು ನೋಡಿ ಆನಂದಿಸುತ್ತಿದ್ದರು. ಕ್ಲಾಸಿನಲ್ಲಿ ಅವನು ಬಾಯೇ ತೆರೆಯುತ್ತಿರಲಿಲ್ಲ, ಅಷ್ಟೇಕೆ, ಇತರರ ಮುಂದೆ ನಡೆದು ಹೋಗ ಬೇಕಾದರೂ ಅವನ ಅಂಗೈ ಬೆವರಿ ಒದ್ದೆ ಯಾಗುತ್ತಿದ್ದುವು. ಅವನು ೧೯ ವರ್ಷದವ ನಾದಾಗುತ್ತಿದ್ದಂತೆಯೇ, ಚಿಂತಿತನಾದ ಅವನ ತಂದೆ ವೈದ್ಯಕೀಯ ನೆರವು ಪಡೆಯಲೇಬೇಕಾಗಿ ಬಂತು. ಚಿಕಿತ್ಸೆ ಹಾಗೂ ಔಷಧೋಪಚಾರ ಗಳಿಂದ ಅವನು ಚೇತರಿಸಿಕೊಂಡ. ಈಗ ೨೪ರ ಹರೆಯದ ಫಾಕ್ಸ್, ಈತ್ತೀಚೆಗೆ ೧೭೦೦ ಜನರ ಸಮ್ಮುಖದಲ್ಲಿ ಯಾವ ಅಡಚಣೆಯೂ ಇಲ್ಲದೆ ಭಾಷಣ ಮಾಡಿದ ಹಾಗೂ ಅವನನ್ನು ಛೇಡಿಸು ತ್ತಿದ್ದ ಒಬ್ಬಳು ಶಾಲಾಸಂಗಾತಿಯನ್ನೇ ಜೀವನ ಸಂಗಾತಿಯನ್ನಾಗಿಸಿಕೊಂಡ.

ನಾಚಿಕೆಯಿಂದ ಸಮಾಜವನ್ನೆದುರಿಸ ಲಾರದವರು ವೈದ್ಯಕೀಯ ನೆರವನ್ನು ಅಪೇಕ್ಷಿಸಿ ದಾಗ, ವೈದ್ಯರು ಆರಂಭದಲ್ಲಿ ಕೆಲವು ತಿಂಗಳು ಅವರಿಗೆ ಮೂಲತಃ ಸಮಾಜದಲ್ಲಿ ಹೇಗೆ ಬೆರೆಯಬೇಕು ಎಂಬುದನ್ನು ಹೇಳಿ ಕೊಡುತ್ತಾರೆ. ನ್ಯೂಯಾರ್ಕಿನ ಒಬ್ಬ ಮನೋವೈದ್ಯ ಐಸಾಕ್ ಟೈಲಿಂ ಹೇಳುವಂತೆ ಇದು ಸಾಮಾಜಿಕ ಭೀತಿಯ ಅಂತರಾಳದೊಡನೆ ಹೋರಾಡಲು ಸಹಾಯ ಮಾಡುತ್ತದೆ. ಇಂತಹವರಿಗೆ ಇತರರು ತಮ್ಮನ್ನು ತಪ್ಪಾಗಿ ತಿಳಿದು ತಾವು ಅವಮಾನಿತರಾದರೆ ಎನ್ನುವ ಅಳುಕು ಇರುತ್ತದೆ. ಈ ತರಹದ ಒಬ್ಬ ಗೃಹಿಣಿ ಹೇಳುತ್ತಾಳೆ- ''ಆತ್ಮೀಯರೇ ಆಮಂತ್ರಿಸಿದರೂ, ನನಗೆ ಹೋಗುವ ಇಚ್ಛೆ ಯಿದ್ದರೂ ಅವರೊಡನೆ ಭೋಜನಕೂಟಗಳಿಗೆ ಹೋಗುವುದಿಲ್ಲ. ಏಕೆಂದರೆ ಹಿಂದಿನಿಂದ ಅವರು ನನ್ನನ್ನು ಯಾಕೆ ಕರೆದೆವೋ ಎಂದು ಆತಂಕ ಪಡುವುದು ಬೇಡ. ಹಾಗಾಗಿ ನಾನೇ ಹೋಗದಿದ್ದರೆ ಆಯಿತಲ್ಲ''. ಹೀಗೆ ವಿಚಾರ ಮಾಡುವವರು ವೈದ್ಯಕೀಯ ಚಿಕಿತ್ಸೆಯ ಮೂಲಕ ತಮ್ಮ ತಪ್ಪು ತಿಳಿವಳಿಕೆಯನ್ನು ತಿದ್ದಿಕೊಳ್ಳಬಹುದು.

ಸಾಧಾರಣವಾಗಿ ಭಾಷಣ ಮಾಡಲು ಎದ್ದು ನಿಂತ ಪ್ರತಿಯೊಬ್ಬನೂ ಒಂದಲ್ಲ ಒಂದು

ಸಲ, ಕೆಲವು ನಿಮಿಷ ವಾದರೂ ಸಭಾಕಂಪನವನ್ನು ಅನುಭವಿಸಿರುತ್ತಾನೆ . ಹೆಚ್ಚಿನವರಲ್ಲಿ ಅದು ಶೀಘ್ರದಲ್ಲಿಯೇ ಮಾಯವಾಗುತ್ತದೆ. ಆದರೆ ಸಾಮಾಜಿಕ ಅಂಜಿಕೆಯಿಂದ ಬಳಲುವವನಿಗೆ ಈ ಭಯ ನಿವಾರಣೆಯಾಗುವುದೆಂದೇ ಇಲ್ಲ. ವರ್ತನೆ ಚಿಕಿತ್ಸಕರು ಇಂತಹವರನ್ನು ಭಯಕಾರಕವೆನಿಸುವ ಸನ್ನಿವೇಶಗಳಲ್ಲಿ ಮನಃಪೂರ್ವಕವಾಗಿ ಸಮಯ ಕಳೆಯುವಂತೆ ಪ್ರೇರೇಪಿಸುತ್ತಾರೆ. ಹೀಗೆ ಮಾಡುವುದರಿಂದ ನಿಜವಾಗಿ ಅವರಿಗೆ ಏನೂ ಕೆಟ್ಟದು ಪರಿಣಮಿಸುವುದಿಲ್ಲ ಎನ್ನುವ ಅರಿವು ಮೂಡಲು ಸಾಧ್ಯವಾಗುತ್ತದೆ.

ಟೆಕ್ಸಾಸಿನ ಮನೋರೋಗ ಚಿಕಿತ್ಸೆ ಹಾಗೂ ಮತ್ತು ನಡವಳಿಕೆಯ ಪ್ರಾಧ್ಯಾಪಕ ಮೆಲಿಂಡಾ ಸ್ಟಾನ್ಲೀ ರೋಗಿಗಳನ್ನು ದೊಡ್ಡ ಸಭಾಂಗಣಕ್ಕೆ ಕರೆದೊಯ್ದು, ಅಲ್ಲಿ ವೇದಿಕೆಯ ಮೇಲೆ ನಿಲ್ಲಿಸಿ ಚಿಕ್ಕ ಸಭೆಯನ್ನುದ್ದೇಶಿಸಿ ಭಾಷಣ ಮಾಡಲು ಅಭ್ಯಾಸ ಮಾಡಿಸುತ್ತಿದ್ದರು. ''ಕೆಲವೊಮ್ಮೆ ಈ ಚಿಕಿತ್ಸೆಗೆ ಬಹಳ ಸಮಯ ತಗಲಬಹುದು. ಆದರೆ ಕಾಲಕ್ರಮೇಣ ರೋಗಿಯ ಭಯ ಹಿಡಿತಕ್ಕೆ ಬರುತ್ತದೆ'' ಎನ್ನುತ್ತಾರೆ ಸ್ಟಾನ್ಲೀ. ಇನ್ನು ಕೆಲವು ವೈದ್ಯರು ಮನೋರೋಗಿಗಳನ್ನು ಬೇಕೆಂದೇ ಜನನಿಬಿಡ ಪ್ರದೇಶದಲ್ಲಿ ನಡೆಯುವಂತೆ, ಜನರೊಡನೆ ಬೆರೆಯುವಂತೆ ಪ್ರೇರೇಪಿಸುತ್ತಾರೆ.

ನಾಚಿಕೆಸ್ವಭಾವದ ಹಲವರು ಇತರರೊಡನೆ ಮಾತಾಡುವ ಅಭ್ಯಾಸವನ್ನಿಟ್ಟುಕೊಳ್ಳದ ಕಾರಣ, ಚಿಕಿತ್ಸಕರು ಅವರ ಸಾಮಾಜಿಕ ಶಿಷ್ಟಾಚಾರದ ವರ್ತನೆಯನ್ನು ಊರ್ಜಿತಗೊಳಿಸಲು ನೆರವು ನೀಡುತ್ತಾರೆ. ಉದಾಹರಣೆಗಾಗಿ, ಎಷ್ಟೋ ಜನರಿಗೆ ಇತರರನ್ನು ಕಂಡರೆ ''ನಮಸ್ಕಾರ''ಅಥವಾ ''ಹಲೋ ''ಎಂದು ಕುಸಲ ಪ್ರಶ್ನೆ ಮಾಡಬೇಕೆಂದೂ ಅರಿವಿರುವುದಿಲ್ಲ. ಹೆಚ್ಚಾಗಿ ಅಂತಹವರು ಸಂಭಾಷಣೆಯ ಮಧ್ಯದಲ್ಲಿ ಪ್ರಶ್ನೆಗಳಿಗೆ ಅತಿ ಚುಟುಕಾದ ಉತ್ತರವಿತ್ತು ಸಂಭಾಷಣೆಯನ್ನೇ ಮೊಟಕಾಗಿಸುತ್ತಾರೆ. ''ಯಾರಾದರೂ ನನ್ನ ಮೊದಲ ಮಾತಿನಲ್ಲಿ ಆಸಕ್ತಿ ತೋರಿಸದಿದ್ದಲ್ಲಿ ಕೂಡಲೇ ಅವರೊಡನೆ ಮಾತನ್ನು ಬಿಟ್ಟು ಹೋಗಬೇಕಾಗಿಲ್ಲ ಎಂದು ನನಗೆ ತಿಳಿದಿರಲೇ ಇಲ್ಲ'' ಎನ್ನುತ್ತಾರೆ. ೩೨ ಪ್ರಾಯದ ರಿಕ್ ರಾಬಿನ್ಸ್. ಅವರ ಇದೇ ಸಾಮಾಜಿಕ ಭೀತಿ, ಅವರನ್ನು ಕಾಲೇಜಿನಿಂದ ವಿಮುಖರನ್ನಾಗಿಸಿತ್ತು. ''ಆದರೆ ಈಗ ನಾನು ಹೊರಗೆ ಹೋಗುವುದರ ಮೊದಲೇ ಸಂಭಾಷಣೆಗೋಸ್ಕರ ನಾಲ್ಕೈದು ವಿಷಯಗಳನ್ನು ಸಿದ್ಧಪಡಿಸಿಕೊಂಡಿರುತ್ತೇನೆ. ಅವುಗಳಲ್ಲಿ ಯಾವುದಾದರೊಂದು ಉಪಯೋಗಕ್ಕೆ ಬರುತ್ತದೆ. ಅತನ್ಮಧ್ಯೆ ನನ್ನ ಭಯ ನಿವಾರಣೆಯಾಗುತ್ತದೆ'' ಎಂದು ನುಡಿಯುತ್ತಾರೆ.

ನಾಚಿಕೆ ಸ್ವಭಾವದವರ ಮನಸ್ಸನ್ನು ಸ್ವಯಂಕೇಂದ್ರೀಕೃತವಾಗುವುದನ್ನು ತಪ್ಪಿಸಿ ಬೇರೆಡೆಗೆ ತಿರುಗಿಸಿದರೆ ಅವರ ನಾಚಿಕೆ ಸ್ವಭಾವ ಬಹುತೇಕ ಕಡಿಮೆಯಾಗುತ್ತದೆ ಎಂಬುದು ಲಜ್ಜಾ ಸಂಶೋಧಕ ಬರ್ನಾರ್ಡೋ ಜೆ. ಕಾರ್ಡೂಸಿರ, ದೃಢವಾದ ನಂಬಿಕೆ. ಕಾರ್ಡೂಸಿ ಅವರು ಅಂತಹವರನ್ನು ಆಸ್ಪತ್ರೆ ಅಥವಾ ಶುಶ್ರೂಷಾಕೇಂದ್ರಗಳಿಗೆ ಕಳುಹಿಸು ತ್ತಾರೆ. ಹೀಗೆ ಮಾಡುವುದರಿಂದ ಅವರು ತಮಗಿಂತಲೂ ಹೆಚ್ಚು ನಾಚಿಕೆ ಸ್ವಭಾವದ ಇತರ ರೋಗಿಗಳೊಡನೆ ತಮ್ಮನ್ನು ಹೋಲಿಸಿಕೊಂಡು ಸಮಾಧಾನ ಪಟ್ಟುಕೊಳ್ಳುತ್ತಾರೆ ಎಂದು ಇನ್ನೊಬ್ಬ ವೈದ್ಯ ರಾಬಿನ್ ಅವರ ಅಭಿಪ್ರಾಯ.

ತೀವ್ರವಾಗಿ ಬಳಲುವ ರೋಗಿಗಳಿಗೆ ಔಷಧೋಪಚಾರ ಬಹಳ ಮಟ್ಟಿಗೆ ಪರಿಣಾಮಕಾರಿಯಾಗಬಹುದಾದರೂ ಈ ರೋಗಕ್ಕೆ ತಕ್ಕುದಾದ ಪರಿಹಾರ ಇನ್ನೂ ದೊರಕಿಲ್ಲ. ಸಧ್ಯದ ಉಪಚಾರವೆಂದರೆ ವಿಷಣ್ಣತಾಹಾರಿಗಳ ಹಾಗೂ ಹೃದಯರೋಗಿಗಳ ಔಷಧಗಳ ಪ್ರಯೋಗ. ಆದರೆ ''ಇವೆಲ್ಲಾ ತಾತ್ಕಾಲಿಕ

ಉಪಶಮನಗಳು, ಅಷ್ಟೇ. ಔಷಧ ಪ್ರಯೋಗ ನಿಲ್ಲಿಸಿದ ಕೂಡಲೇ ರೋಗದ ಲಕ್ಷಣಗಳು ಮರುಕಳಿಸುವುದು ಸಾಮಾನ್ಯ'' ಎಂದು ಇನ್ನೊಬ್ಬ ತಜ್ಞ ಆಲನ್ ಹೆಂಡರ್ಸನ್ ಹೇಳುತ್ತಾರೆ. ಮಾನಸಿಕ ಚಿಕಿತ್ಸೆಯೇ ಈ ಸಮಸ್ಯೆಗೆ ದೀರ್ಘ ಕಾಲಿಕ ಪರಿಹಾರ ಎಂದು ಸಂಶೋಧನೆ ಯಿಂದ ತಿಳಿದು ಬಂದಿದೆ.

ಸಮಾಜವನ್ನೆದುರಿಸಲು ನಾಚುವವರು ತಮ್ಮ ಆತಂಕವನ್ನು ಸಾಧ್ಯವಾದಷ್ಟು ಹಿಡಿದಿಟ್ಟು, ದಿನನಿತ್ಯದ ಕೆಲಸಗಳನ್ನು ಸುಸೂತ್ರವಾಗಿ ನಡೆಸುವಷ್ಟು ಸುಧಾರಿಸಿದರೆ ಸಾಕು; ಜಗತ್ತಿನಲ್ಲಿ ನೆಮ್ಮದಿಯಿಂದ ಬಾಳ ಬಹುದು ಎಂದು ಹೆಚ್ಚಿನ ಚಿಕಿತ್ಸಕರ ಅಭಿಪ್ರಾಯವಾಗಿದೆ. ಐತಿಹಾಸಿಕ ಪುರುಷರಲ್ಲಿ ಅನೇಕರು ನಾಚಿಕೆ ಸ್ವಭಾವದವರಾಗಿದ್ದುದು ಕಂಡು ಬರುತ್ತದೆ. ರಾಬರ್ಟ್ ಫ್ರಾಸ್ಟ್, ಆಲ್ಬರ್ಟ್ ಐನ್‌ಸ್ಟೈನ್ ಮೊದಲಾದವರನ್ನು ಇಲ್ಲಿ ಹೆಸರಿಸ ಬಹುದು. ಲಘುಮಟ್ಟದ ನಾಚಿಕೆಯನ್ನೇ ಅನುಭೂತಿ ಪ್ರವೃತ್ತಿ, ಅಂತಃಸ್ಫೂರ್ತಿ, ಶೀಘ್ರ ಗ್ರಾಹಿತ್ವ, ಸಂವೇದನಾಶೀಲತ್ವ ಇತ್ಯಾದಿ ಪರ್ಯಾಯವಾಗಿ ವರ್ಣಿಸುತ್ತಾರೆ. ಈ ಗುಣ ಗಳಾವುವೂ ನಾಚಿಕೊಳ್ಳಬೇಕಾದವು ಗಳಲ್ಲವಷ್ಟೇ?

ನಾಚಿಕೆಯ ವಿವಿಧ ಸ್ವರೂಪಗಳು

ಸಾಮಾನ್ಯ ಮಟ್ಟದ ನಾಚಿಕೆ

- ಪ್ರಾರಂಭದಲ್ಲಿ ನಡುಕಹುಟ್ಟಿದರೂ ಅನಂತರ ಭಾಷಣ ಮಾಡಿದ್ದು ಒಳ್ಳೆಯದೇ ಆಯಿತು ಎನ್ನುವ ಭಾವನೆ.
- ಪ್ರಥಮ ಮಿಲನದಲ್ಲಿ ಭಾವನಾಶೂನ್ಯತೆಯ ಅನುಭವವಾದರೂ ನಿಧಾನವಾಗಿ ಮಾತು ಸಾಧ್ಯವಾಗುತ್ತದೆ.
- ಉದ್ಯೋಗಕ್ಕಾಗಿ ಸಂದರ್ಶನದಲ್ಲಿ ಅಂಗೈಗಳು ಬೆವರುತ್ತಿದ್ದರೂ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಲಾಗುತ್ತದೆ.

ಅತಿರೇಕದ ನಾಚಿಕೆ

- ಇತರರು ನಿಮ್ಮನ್ನು ದೃಷ್ಟಿಸುತ್ತಿರುವಾಗ ಹೃದಯದ ಗತಿ ಏರುವುದು
- ಸಾರ್ವಜನಿಕವಾಗಿ ಮಾತನಾಡಬೇಕಾದರೆ ಕೇವಲ ತನ್ನ ಹೆಸರು ಹೇಳುವುದಷ್ಟೇ ಆದರೂ ಎದೆ ನಡುಕ.
- ಏನಾದರೂ ಅಸಂಬದ್ಧ ನುಡಿದರೆ ಎನ್ನುವ ಭಯದಿಂದ ಮಾತನ್ನೇ ಪ್ರಾರಂಭಿಸಲು ಅಂಜುವುದು.

ಸಾಮಾಜಿಕ ಭೀತಿ

- ಹೊಸಬರನ್ನು ಪರಿಚಯಿಸಿಕೊಳ್ಳುವುದನ್ನು ಹೇಗಾದರೂ ಮಾಡಿ ತಪ್ಪಿಸಿಕೊಳ್ಳುವುದು
- ಸಾರ್ವಜನಿಕ ಸ್ಥಳಗಳಲ್ಲಿ ನುಂಗಲು ಕಷ್ಟವಾಗಿ, ಹೊರಗೆ ಎಲ್ಲೂ ಭೋಜನ ಮಾಡದಿರುವುದು.
- ಇತರರಲ್ಲಿ ತನ್ನ ಬಗೆಗೆ ಸದಭಿಪ್ರಾಯ ಮೂಡಿಸಲು ಅಸಮರ್ಥನೆಂಬ ಭಾವನೆ; ಸಾಮಾಜಿಕ ವೈಫಲ್ಯದ ಅನುಮಾನ ಇರುವುದು.

ಅತಿರೇಕದ ಸಾಮಾಜಿಕ ಭೀತಿ

- ಏಕಾಂಗಿತ್ವದಲ್ಲಿ ಮಾತ್ರ ಶಾಂತಿ ; ಮನೆಬಿಟ್ಟು ಹೊರಡಲೇ ಸಾಧ್ಯವಾಗದಿರುವುದು.
- ಇತರರು ತನ್ನನ್ನು ಪೇಚಿನಲ್ಲಿ ಸಿಕ್ಕಿಸಿ ಅವಮಾನಿಸುವರೆಂಬ ಸದಾ ಚಿಂತೆ
- ಅಡಿಗಡಿಗೆ ಬಾಧಿಸುವ ಭಯ ; ಮಾತುಕತೆಯ ಬದಲು ಕೋಣೆಯನ್ನೇ ಬಿಟ್ಟು ಹೋಗುವ ಚಪಲ

ಕೆಟ್ಟ ಅಡಿಗಿ ಅಟ್ಟು ಉಂಡವನೆ ಜಾಣ

ಡಾ.ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬ.ವಿ.ವ.ಸಂಘ
ಬಾಗಲಕೋಟೆ-೫೮೭ ೧೦೧

ಕಮಲಾಕರ ನನ್ನ ಗೆಳೆಯ. ಅವನು ಪ್ರಾಥಮಿಕ ಶಾಲಾ ಶಿಕ್ಷಕ. ಅವನ ಜೀವನವನ್ನು ನೋಡಿದರೆ ನಾನೂ ಸಹ ಪ್ರಾಥಮಿಕ ಶಾಲಾ ಶಿಕ್ಷಕನಾಗಬೇಕು ಎಂದೆನಿಸುವುದು. ಅವನು ಬಡತನದಲ್ಲಿ ಬೆಳೆದವ. ಮುಂದೆ ಓದ ಬೇಕೆಂದರೂ ಆರ್ಥಿಕ ತೊಂದರೆಯಿಂದ ಶಿಕ್ಷಣವನ್ನು ಅಪೂರ್ಣಗೊಳಿಸಿದ. ಶಾಲಾ ಶಿಕ್ಷಕ ಹುದ್ದೆ ಪಡೆದು ಸೇವೆ ಪ್ರಾರಂಭಿಸಿದ. ಸರೋಜನಿ ಎಂಬ ಕನ್ನೆಯನ್ನು ಮದುವೆಯಾದ. ಒಳ್ಳೆಯ ಜೋಡಿ. ಸರೋಜನಿ ಆಕರ್ಷಕ ವ್ಯಕ್ತಿತ್ವ ಪಡೆದಿದ್ದಳು. ಸಂಸಾರ ಮುಂದುವರೆಯಿತು. ಒಂದರ ಮೇಲೆ ಒಂದರಂತೆ ಮೂರು ಮಕ್ಕಳಾದುವು. ಕಮಲಾಕರನಿಗೆ ತನ್ನ ಕಾರ್ಯದಲ್ಲಿ ಎಲ್ಲವೂ ಮರೆತು ಹೋಗುತ್ತಿತ್ತು. ಹೆಂಡತಿಯ ಕಡೆಗೆ ಲಕ್ಷ್ಯವಿಲ್ಲ. ಮಕ್ಕಳ ಕಡೆಗೆ ಲಕ್ಷ್ಯವಿಲ್ಲ. ದುಡಿಯುವುದರಲ್ಲಿ ಮಗ್ನನಾಗಹತ್ತಿದ. ಚಿಕ್ಕಮಕ್ಕಳೂ ಶಾಲೆಗೆ ಹೋಗ ತೊಡಗಿದುವು. ಮನೆಯಲ್ಲಿ ಸರೋಜನಿ ಒಬ್ಬಳೇ ಆದಳು.

ಇವರ ಮನೆಯ ಮಗ್ಗುಲಲ್ಲಿ ಓರ್ವ ತರುಣ ಬಾಡಿಗೆಗೆ ಬಂದ. ಅವನು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ಸೇವೆ ಸಲ್ಲಿಸುತ್ತಿದ್ದ. ಕೈ ತುಂಬ ಸಂಬಳ ಬರುತ್ತಿತ್ತು. ಕಮಲಾಕರನಿಗೂ ಈ ತರುಣನಿಗೂ ಪರಿಚಯವಾಯಿತು. ದಿನಾಲೂ ಒಂದಿಲ್ಲೊಂದು ವಿಷಯ ಚರ್ಚಿಸುತ್ತಿದ್ದರು. ಒಂದು ದಿನ ಹುಣ್ಣಿಮೆ ಮನೆಯಲ್ಲಿ ಸರೋಜನಿ ಹೋಳಿಗೆ ಮಾಡುವುದಿತ್ತು. ಕಮಲಾಕರ ತರುಣನಿಗೆ ಊಟಕ್ಕೆ ಆಮಂತ್ರಣ ಕೊಟ್ಟ. ಅಂದು ಭರ್ಜರಿ ಊಟವಾಯಿತು. ಮನೆಯವರಿಗೆಲ್ಲ ಧನ್ಯವಾದ ಹೇಳಿ ತರುಣ ತಾನಿದ್ದ ಮನೆಗೆ ಹೋದ. ಪರಿಚಯ ಬರುಬರುತ್ತ ಹೆಚ್ಚಾಯಿತು. ಕಮಲಾಕರನಿರಲಿ ಬಿಡಲಿ ಆಗೊಮ್ಮೆ ಈಗೊಮ್ಮೆ ಕಮಲಾಕರನ ಮನೆಗೆ ಕರೆಯದಿದ್ದರೂ ಹೋಗಿ ಮಕ್ಕಳೊಡನೆ ಆಟವಾಡಿ ಬರುತ್ತಿದ್ದ. ಒಂದು ದಿನ ಅವನು ಮನೆಗೆ ಹೋದಾಗ ಮಕ್ಕಳೂ ಇರಲಿಲ್ಲ. ಅವು ಆಟಕ್ಕೆಂದು ಹೊರಗೆ ಹೋಗಿದ್ದುವು. ಮನೆಯಲ್ಲಿ ಸರೋಜನಿ ಓದುತ್ತ ಕುಳಿತಿದ್ದಳು. ತರುಣನನ್ನು ಸ್ವಾಗತಿಸಿದಳು. ಇಬ್ಬರೂ ಅದೂ ಇದೂ ಮಾತಾಡಿದರು. ಸರೋಜನಿ ಚಹಾ ಮಾಡಿ ಕೊಟ್ಟಳು. ಇಬ್ಬರೂ ಕುಡಿದರು. ಇಬ್ಬರಿಗೂ ಬೇಸರ ಕಳೆದಂತಾಯಿತು. ಮಕ್ಕಳು ಮನೆಯಲ್ಲಿದ್ದರೆ ಅವರಿಬ್ಬರಿಗೂ ಮಾತಾಡಲು ತಮ್ಮ ಬಗ್ಗೆ ಹೇಳಲು ಸಾಧ್ಯವಾಗುತ್ತಿರಲಿಲ್ಲ. ಕಾರಣ ಸರೋಜನಿ ಮಕ್ಕಳಿಗೆ ತಿಂಡಿ ಕೊಟ್ಟು ಆಟವಾಡಲು ಓಡಿಸಿ ತರುಣನ ಬರವನ್ನು ಕಾಯುತ್ತಿದ್ದಳು. ಅವನಿಗೂ ಇದು ರುಚಿಸಿತು. ಇಬ್ಬರೂ ಒಬ್ಬರಿಗೊಬ್ಬರು ಗೌರವ ಭಾವನೆಯಿಂದಲೇ ನೋಡುತ್ತಿದ್ದರು. ಆಗೊಮ್ಮೆ ಈಗೊಮ್ಮೆ ಮಾತನಾಡುವುದು ಹೋಗಿ ನಿತ್ಯ ಮಾತಾಡಲು ಪ್ರಾರಂಭಿಸಿದರು. ಒಂದು ದಿನ ತಪ್ಪಿದರೆ ಚಡಪಡಿಸುತ್ತಿದ್ದರು. ಇಬ್ಬರ ನಡುವೆ ಏನೋ ಆತ್ಮೀಯತೆ ಹೆಚ್ಚುತ್ತ ನಡೆಯಿತು. ಒಬ್ಬರಿಗೊಬ್ಬರು ಸೂಚನೆ ಸಲಹೆ ಕೊಡಲು ಪ್ರಾರಂಭಿಸಿದರು. ತರುಣ ಒಳ್ಳೊಳ್ಳೆ ಬಟ್ಟೆ ಧರಿಸುತ್ತಿದ್ದ. ಹೊಸ ಹೊಸ ನಮೂನೆಯ ಬಟ್ಟೆ ಧರಿಸುತ್ತಿದ್ದ. ಅವುಗಳ ಮೇಲೆ ಸರೋಜನಿ ತನ್ನ ವಿಮರ್ಶೆ ಕೊಡುತ್ತಿದ್ದಳು. ಆಕೆ ಮೆಚ್ಚಿದರೆ ಅವನಿಗೆ ಸಂತೋಷವಾಗುತ್ತಿತ್ತು. ತರುಣನೂ ಆಗಾಗ ಸರೋಜನಿಯ ವಸ್ತ್ರ ಒಡವೆಗಳ ಬಗ್ಗೆ ತನ್ನ ಅಭಿಪ್ರಾಯ ಕೊಡಲು ಪ್ರಾರಂಭಿಸಿದ.

ಮೊದ ಮೊದಲು ಹೆದರಿ ಹೆದರಿ ಹೇಳುತ್ತಿದ್ದ. ಸರೋಜನಿಗೆ ಇದು ಬೇಕೆನಿಸತೊಡಗಿತು. ಅವನು ಏನೂ ಅನ್ನದೇ ಹೋದರೆ ಆಕೆಯೇ ಕೇಳಹತ್ತಿದಳು. ಅವರು ಮಾತಾಡದೆ ಇದ್ದ ದಿನವಂತು ಇಬ್ಬರಿಗೂ ಊಟ ರುಚಿಸುತ್ತಿದ್ದಿಲ್ಲ. ಮನಸ್ಸೆಲ್ಲ ಹುಳು ಹುಳು ಎನಿಸುತ್ತಿತ್ತು.ಮರುದಿನ ಒಬ್ಬರೊಬ್ಬರನ್ನು ಕಾಣಲು ಹಾತೊರೆಯುತ್ತಿದ್ದರು ಸರೋಜನಿಗಂತೂ ಜೀವನದಲ್ಲಿ ಏನೋ ಕಳೆದುಕೊಂಡಂತೆ ಅನಿಸುತ್ತಿತ್ತು.ಆಕೆ ಬುದ್ಧಿವಂತೆ . ಒಳ್ಳೆಯ ರಂಗೋಲಿ ಹಾಕುತ್ತಿದ್ದಳು. ಕಸೂತಿ ಕಲೆಯಲ್ಲಿ ನಿಪುಣೆ. ಅಡುಗೆಯಲ್ಲಿ ಆಕೆಯ ರುಚಿಯನ್ನು ಬೇರೆಯವರಿಗೆ ತರಲು ಸಾಧ್ಯವಿದ್ದಿಲ್ಲ. ಪ್ರಾಥಮಿಕ ಶಾಲಾ ಶಿಕ್ಷಕನ ಬಡತನದ ಜೀವನವನ್ನೇ ಸುಂದರವಾಗಿ ನಡೆಸುವ ಚತುರೆ. ಆಕೆ ಹಳ್ಳಿಯ ಹಾಡುಗಳನ್ನು ಸುಂದರವಾಗಿ ಹಾಡುತ್ತಿದ್ದಳು. ಯಾರೆ ಇರಲಿ ಅವಳನ್ನು, ಅವಳ ನಡೆನುಡಿಗಳನ್ನು ಧ್ವನಿಯನ್ನು ಪರೋಪಕಾರಿ ಗುಣವನ್ನು ಕಂಡವರಿಗೆ ಆ ವ್ಯಕ್ತಿತ್ವ ಹಿಡಿಸುತ್ತಿತ್ತು. ಆ ತರುಣನಿಗಂತೂ ಆಕೆ ಜೀವನದ ಒಂದು ಭಾಗವಾಗಿದ್ದಳು. ಮಾಸ್ತರ ಕಮಲಾಕರನಿಗೆ ತರುಣ ಸಮೀಪದ ಸ್ನೇಹಿತನಾಗಿದ್ದ. ಮಕ್ಕಳಿಗೆ ಅಕ್ಕರೆಯವನಾಗಿದ್ದ. ಎಲ್ಲವೂ ಸುಂದರವಾಗಿ ನಡೆದಿತ್ತು. ಒಂದು ಸಲ ಕಮಲಾಕರ ಯಾವುದೋ ಕಾರ್ಯ ನಿಮಿತ್ತ ಒಂದು ವಾರ ಬೇರೆ ಊರಿಗೆ ಹೋಗ ಬೇಕಾಗಿ ಬಂದಿತು. ಜೋಕೆಯಿಂದ ಇರಲು ಹೇಳಿ ಊರಿಗೆ ಹೋದ.

ಅಂದು ಸಂಜೆ ನಿತ್ಯದಂತೆ ತರುಣ ಕಮಲಾಕರನ ಮನೆಗೆ ಬಂದ. ಚಹಾ ಸೇವಿಸಿ ಹರಟೆ ಹೊಡೆದ. ಅಷ್ಟರಲ್ಲಿ ಮಕ್ಕಳು ಆಟ ವಾಡಿ ಓಡೋಡಿ ಮನೆಗೆ ಬಂದುವು. ತರುಣನೊಡನೆ ಮಾತಾಡಿದುವು. ಹೊಟ್ಟೆ ಬಹಳ ಹಸಿದಿದೆ ಎಂದು ತಾಯಿಗೆ ಹೇಳಿದುವು. ತಾಯಿ ಅವರಿಗೆಲ್ಲ ಊಟ ಬಡಿಸಿದಳು. ದಣಿವಾದ ಮಕ್ಕಳು ಕ್ಷಣದಲ್ಲಿ ನಿದ್ದೆ ಹೋದುವು. ಆಗ ತರುಣ ತಾನು ತನ್ನ ಮನೆಗೆ ಹೋಗುವೆನೆಂದು ಎದ್ದ. ಸರೋಜನಿ ನೀವೂ ಇಂದು ಇಲ್ಲಿಯೇ ಊಟ ಮಾಡಿ ಎಂದು ಒತ್ತಾಯಿಸಿದಳು.ತಾನು ಅಡುಗೆ ಸಾಕಷ್ಟು ಮಾಡಿರುವೆನೆಂದು ಹೇಳಿದಳು.ತರುಣನು ಒಪ್ಪಿ ಊಟಕ್ಕೆ ಕುಳಿತನು. ಸರೋಜನಿ ಹಾಗೂ ಅವನು ಹರಟೆ ಹೊಡೆಯುತ್ತ ಊಟ ಮಾಡಿದರು. ಅಷ್ಟರಲ್ಲಿ ರಾತ್ರಿಯಾಗಿತ್ತು. ಮನೆಗೆ ಹೊರಡಬೇಕೆಂದರೆ ರಸ್ತೆ ದೀಪಗಳು ಹೋಗಿದ್ದುವು. ಹೊರಡಲು ಬಾಗಿಲಿಗೆ ಹೋದ. ಅಷ್ಟರಲ್ಲಿ ಚಿಕ್ಕ ಮಗು ಎಚ್ಚರಗೊಂಡು ತರುಣ ತನ್ನ ಜತೆ ಅಲ್ಲಿಯೇ ಮಲಗಲು ಒತ್ತಾಯಿಸಿ ಅಳತೊಡಗಿತು. ಎಷ್ಟು ಹೇಳಿದರೂ ಹಠ ಬಿಡಲಿಲ್ಲ. ಕೊನೆಗೆ ತರುಣ ಅದನ್ನು ಸಮಾಧಾನ ಮಾಡಲು ಮಲಗಿದಂತೆ ನಟಿಸಿದ. ಮಗು ಸಮಾಧಾನವಾಗಿ ಗಾಢ ನಿದ್ರೆಯಲ್ಲಿ ಮುಳುಗಿತು. ಇವನಿಗೂ ನಿದ್ದೆ ಆವರಿಸಿತು.

ಚಿಕ್ಕ ಮನೆ ಎಲ್ಲರೂ ಅಲ್ಲಿಯೇ ಮಲಗಿದರು. ಮಧ್ಯ ರಾತ್ರಿ ಸರೋಜನಿ ಎದ್ದು ದೀಪ ಹಚ್ಚಿ ನೀರು ಕುಡಿಯಲು ಹೋದಳು . ತರುಣನಿಗೂ ಎಚ್ಚರವಾಗಿತ್ತು. ಅವನು ಎದ್ದು ಕುಳಿತನು. ತನಗೂ ಬಾಯಾರಿಕೆ ಆಗಿದೆ ಎಂದನು. ಆಕೆ ಅವನಿಗೂ ನೀರು ತಂದು ಕೊಟ್ಟಳು. ಅವನು ನೀರು ಕುಡಿಯುವವರೆಗೆ ನಿಂತಳು. ಅವನನ್ನೇ ನೋಡತೊಡಗಿದಳು ಅವನು ತನ್ನ ಷರಟು ಕಳಚಿ ಬರಿ ಬನಿಯನ್ನಿನಲ್ಲಿ ಇದ್ದ. ಅವನು ನೀರು ಕುಡಿದು ಬಟ್ಟಲವನ್ನು ಆಕೆಯ ಕೈಗೆ ಕೊಡುವಾಗ ಎರಡು ಕೈಗಳು ಸ್ಪರ್ಶ ವಾದುವು. ಇಬ್ಬರಿಗೂ ಕರೆಂಟ ಹೊಡೆದಂತಾಯಿತು. ಬಟ್ಟಲು ಜಾರಿ ಬಿದ್ದಿತು. ಅದನ್ನು ತೆಗೆದುಕೊಳ್ಳಲು ಇಬ್ಬರೂ ಮುಂದಾದರು. ಎರಡೂ ದೇಹಗಳು ತಾಕಲಾಡಿದವು. ಮುಂದೆ ಏನಾಯಿತು ಎಂಬುದು ಅವರಿಗೂ ತಿಳಿಯ ಲಿಲ್ಲ. ಎಲ್ಲವೂ ನಡೆದು ಹೋಯಿತು.

ಸರೋಜನಿಗೆ ಎಚ್ಚರ ಬಂದಾಗ ತಾನು ಅರೆ ಬೆತ್ತಲೆ ಎಂದು ತಿಳಿಯಿತು. ತರುಣನೂ ಅದೇ ಸ್ಥಿತಿಯಲ್ಲಿದ್ದ. ಇದೇನೋ ನಡೆಯಿತಲ್ಲ ಎಂದು ಸರೋಜನಿ ಎದ್ದಳು. ದೀಪ ಆರಿಸಿದಳು. ತನ್ನ ಹಾಸಿಗೆಗೆ ಹೋಗಿ ಮಲಗಿದಳು. ತರುಣನೂ ಮಲಗಿದ. ಮರುದಿನ ಮುಂಜಾನೆ ಎದ್ದು ಮನೆಕೆಲಸ ಪ್ರಾರಂಭಿಸಿದಳು. ಸ್ನಾನ ಮಾಡಲು ಹೋದಳು. ತನ್ನ ದೇಹವನ್ನು ನೋಡಿಕೊಂಡಳು. ರಾತ್ರಿಯ ಘಟನೆಯಿಂದ ಆದ ಚಿಕ್ಕ ಪುಟ್ಟ ಗಾಯಗಳನ್ನು ನೋಡಿ ಗಾಬರಿ ಆದಳು. ಸ್ನಾನ ಮಾಡಿ ಮಕ್ಕಳಿಗೆ ತಿಂಡಿ ತಯಾರಿಸಿದಳು.

ಇಷ್ಟರಲ್ಲಿ ತರುಣ ಎದ್ದು ತನ್ನ ಮನೆಗೆ ಹೋಗಿದ್ದ. ಅವನೂ ಸ್ನಾನ ಮಾಡಿ ಸಿದ್ಧನಾಗಿದ್ದ. ಚಿಕ್ಕಮಗು ಓಡಿಬಂದು ತರುಣನನ್ನು ಕರೆಯಿತು. ತನ್ನ ಜೊತೆ ತಿಂಡಿ ತಿನ್ನಬೇಕೆಂದು ಹಠ ಹಿಡಿಯಿತು. ಅವನಿಗೂ ಆ ಕಡೆ ಹೋಗುವುದೆಂದರೆ ಭಯ ಎನಿಸಿತು. ಮಗು ಬಿಡಲಿಲ್ಲ. ಆದರೊಡನೆ ಸರೋಜನಿಯ ಮನೆಗೆ ಹೋದ. ಸರೋಜನಿ ತರುಣನನ್ನು ನೋಡಿ ತಲೆ ತಗ್ಗಿಸಿದಳು. ಅವನದೂ ಅದೇ ಹಾಡು, ತಿಂಡಿ ಮುಗಿಯಿತು. ಮಕ್ಕಳು ಗಡಿಬಿಡಿ ಮಾಡುತ್ತ ಶಾಲೆಗೆ ಓಡಿದುವು. ಮತ್ತೆ ಮನೆಯಲ್ಲಿ ಇಬ್ಬರೇ ಉಳಿದರು. ನಿನ್ನೆ ರಾತ್ರಿ ನಡೆದ ಘಟನೆಗೆ ವಿಷಾದ ವ್ಯಕ್ತ ಪಡಿಸಲು ಇಬ್ಬರೂ ತಲೆ ಎತ್ತಿ ನೋಡಿದರು. ಇಬ್ಬರೂ ಸಮೀಪದಲ್ಲಿ ಇದ್ದರು. ಮತ್ತೆ ಇಬ್ಬರಿಗೂ ಗರ ಬಡಿದಂತಾಗಿ ಒಬ್ಬರನೊಬ್ಬರು ಬಿಗಿದಪ್ಪಿದರು. ಮತ್ತೆ ಕರಂಟ್ ಹೊಡೆದಂತಾಯಿತು. ತರುಣ ತಲಬಾಗಿಲ ಮುಚ್ಚಿ ಬಂದ ನಿನ್ನೆ ರಾತ್ರಿ ನಡೆದ ಘಟನೆ ಈಗ ಬೆಳಕಿನಲ್ಲಿ ನಡೆಯಿತು. ಇಬ್ಬರೂ ಸ್ನಾನ ಮಾಡಿ ಸಡಿಲು ಅರಿವೆ ಧರಿಸಿದ್ದರು. ಎರಡೂ ದೇಹಗಳು ಶಾಂತವಾದ ಮೇಲೆ ಎಚ್ಚರವಾದರು. ಈಗ ದೂರ ಸರಿಯಲು ಇಬ್ಬರಿಗೂ ಮನಸ್ಸು ಬರಲಿಲ್ಲ. ಕೂಡಿ ಕುಳಿತರು. ಕೈಕೈಗಳು ಬೆಸೆದು ಕೊಂಡಿದ್ದವು. ಸರೋಜನಿ ಅಲ್ಲಿಯೇ ಮಲಗಿದಳು. ತರುಣ ಎದ್ದು ಬಟ್ಟೆ ಸರಿಪಡಿಸಿಕೊಂಡು ನಡೆದ. ಅವನಿಗರಿಯದಂತೆ ''ಸಂಜೆಗೆ ಭೇಟಿಯಾಗೋಣ'' ಎಂದ. ಸರೋಜನಿ ಗೋಣು ಹಾಕಿದಳು.

ಅವರಿಬ್ಬರಲ್ಲಿ ಆಕರ್ಷಣೆ ಜಾಸ್ತಿ ಆಯಿತು. ಆ ಕಾರ್ಯಕ್ರಮವನ್ನು ಅವರು ಪ್ರತಿದಿನ ನಡೆಸತೊಡಗಿದರು. ಅಗಲಿ ಇರುವುದೇ ದುಸ್ತರ ಎನಿಸಿತು. ಅವರಿಬ್ಬರನ್ನು ಬಿಟ್ಟು ಇದು ಯಾರಿಗೂ ಗೊತ್ತಾಗಲಿಲ್ಲ. ತರುಣ ಆಕೆಯ ದೇಹವನ್ನು ನೋಡಿ ಮರುಳಾಗಿದ್ದ. ಹೌದು ಆಕೆ ಅಷ್ಟು ಚಲುವೆ ಇದ್ದಳು. ತರುಣನ ದೇಹ ಆಕೆಯ ಮೇಲೆ ಮೋಡಿ ಮಾಡಿತ್ತು. ಎಷ್ಟು ಸಲ ಕೂಡಿದರೂ ಸಾಕು ಎನಿಸುತ್ತಿರಲಿಲ್ಲ. ತಾಸೆರಡು ತಾಸು ವಿರಹವೂ ತಾಳಲಾರದಾಯಿತು.

ನಾಲ್ಕು ತಿಂಗಳು ಕಳೆದರೂ ಈ ದಾಹ ಶಮನವಾಗಲಿಲ್ಲ. ಕೊನೆಗೆ ಇಬ್ಬರೂ ಮಾತಾಡಿ ಒಂದು ದಿನ ಮನೆಬಿಟ್ಟು ಯಾರಿಗೂ ಗೊತ್ತಾಗದಂತೆ ಬೇರೆ ಊರಿಗೆ ಹೋದರು. ಅಲ್ಲಿ ಒಂದು ಮನೆ ಮಾಡಿ ಇರಹತ್ತಿದರು.

ಆ ಕಡೆ ಕಮಲಾಕರ ಗೊಂದಲದಲ್ಲಿ ಬಿದ್ದ. ಹೆಂಡತಿ ತರುಣನೊಡನೆ ಹೋದದ್ದು ಅಂದಾಜಿಸಿದ. ಜನ ಕೇಳಿದರೆ ಹೆಂಡತಿಯನ್ನು ಅರ್ಜಂಟಾಗಿ ಊರಿಗೆ ಕಳಿಸಿರುವೆನೆಂದು ಹೇಳಿದ. ಮಕ್ಕಳನ್ನು ಸಮಾಧಾನ ಮಾಡಿ ಅವರಿಗೂ ಸುಳ್ಳು ಹೇಳಿ ಸುಮ್ಮನಾಗಿರಿಸಿದ. ಈಗ ಶಾಲೆಯ ಕೆಲಸದೊಡನೆ ಮಕ್ಕಳ ಆರೈಕೆಯೂ ಕೂಡಿ ನುಗ್ಗಾಗಿ ಹೋದ. ಮೆಲ್ಲ ಮೆಲ್ಲಗೆ ಜನರಿಗೆ ಸಂಶಯ ಬಂದಿತು. ನೇರವಾಗಿ ಮಾತಾಡ ತೊಡಗಿದರು ಯಾವದಕ್ಕೂ ಧೈರ್ಯಗೆಡಲಿಲ್ಲ. ಕುಂಟುತ್ತ ಜೀವನ ಸಾಗಿತು.

ಒಂದು ವರ್ಷ ಕಳೆಯಿತು. ಯಾರೋ ಸುದ್ದಿ ತಂದರು. ಸರೋಜನಿ ಇಂಥ ಊರಲ್ಲಿ ಮನೆ ಮಾಡಿಕೊಂಡಿದ್ದಾಳೆ ಎಂದು ಹೇಳಿದರು.

ಒಂದು ರಜೆಯ ದಿನ ನೋಡಿ ತಾನೇ ಆ ಊರಿಗೆ ಹೋದ. ನೇರವಾಗಿ ಮನೆಗೆ ಹೋದ. ತರುಣ ಇರಲಿಲ್ಲ. ಸರೋಜನಿ ಬಾಗಿಲು ತೆಗೆದಾಗ ಎದುರಿಗೆ ಸಭ್ಯ, ಸೌಮ್ಯ ಮೂರ್ತಿಯಾದ ಕಮಲಾಕರ ನಿಂತಿದ್ದ. ಆಕೆ ಇದನ್ನು ಎಂದೂ ನೆನೆಸಿರಲಿಲ್ಲ. ಗಾಬರಿಯಾಗಿ ಮಾತು ಬಾರದೆ ಹಿಂದೆ ಸರಿದಳು. ಕುಸಿದು ಬಿದ್ದಳು. ಕಮಲಾಕರ ಮನೆಯೊಳಗೆ ಹೋಗಿ ಬಾಗಿಲು ಮುಚ್ಚಿದ. ಅಡುಗೆ ಮನೆಗೆ ಹೋಗಿ ಚಂಬಿನಲ್ಲಿ ನೀರು ತಂದು ಸರೋಜನಿಗೆ ಚಿಮುಕಿಸಿದ. ಆಕೆ ಮೆಲ್ಲನೆ ಕಣ್ಣು ಬಿಟ್ಟು ಅಳಹತ್ತಿದಳು. ಕಮಲಾಕರ ಆಕೆಗೆ ಸಮಾಧಾನ ಹೇಳಿದ. ಎದ್ದು ಕೂಡ್ರಿಸಿದ. ಆಕೆಗೆ ಅವನನ್ನು ನೋಡಲು ಧೈರ್ಯ ಸಾಲದು. ಅವನು ಆಕೆಯನ್ನು ನೋಡಿದ. ಆಕೆ ಉಟ್ಟ ಸೀರೆ, ಕುಪ್ಪುಸ, ಧರಿಸಿದ ಒಡವೆಗಳನ್ನು ನೋಡಿದ ಆಕೆ ಕೈ ಮೈ ತುಂಬಿಕೊಂಡು ಬಹಳ ಸುಂದರವಾಗಿ ಕಾಣುತ್ತಿದ್ದಳು. ಆಕೆಯ ರೂಪ ಇಮ್ಮಡಿಸಿತ್ತು.

ಸ್ವಲ್ಪ ಹೊತ್ತಿನ ಮೇಲೆ ಕಮಲಾಕರ ಮಾತಿಗೆ ಪ್ರಾರಂಭಿಸಿದ. ನೇರವಾಗಿ ''ಸರೋಜನಿ ಮಕ್ಕಳನ್ನು ನೋಡಲು ಮನೆಗೆ ಬರುವದಿಲ್ಲವೇ''? ಎಂದ. ಸರೋಜನಿಗೆ ಇದು ಇನ್ನೊಂದು ಅಘಾತ. ಆಕೆಯ ದುಃಖದ ಕಟ್ಟೆ ಒಡೆಯಿತು. ಕಮಲಾಕರನ ಎರಡೂ ಪಾದಗಳನ್ನು ಹಿಡಿದು ಕ್ಷಮಿಸಿರೆಂದು ಬೊರಾಡಿ ಅತ್ತಳು. ಕಮಲಾಕರ ಹೇಳಿದ ''ನೋಡು ಸರೋಜನಿ ನಾನೇ ನಿನ್ನನ್ನು ಕರೆಯಲು ಬಂದಿರುವೆ. ಆಗಲೇ ನಿನ್ನನ್ನು ಕ್ಷಮಿಸಿರುವೆ''. ಸರೋಜನಿಗೆ ಪಶ್ಚಾತ್ತಾಪವಾಗಿತ್ತು. ಮಕ್ಕಳ ನೆನಪು ಕಾಡುತ್ತಿತ್ತು. ಇಂಥ ದಿನ ತನ್ನ ಬಾಳಿನಲ್ಲಿ ಬರುತ್ತದೆ ಎಂಬುದನ್ನು ಆಕೆ ಕಲ್ಪಿಸಿರಲಿಲ್ಲ. ತರುಣನೊಡನೆ ಹೊಂದಿಕೊಂಡು ಬೇರೆ ಜೀವನ ಪ್ರಾರಂಭಿಸಿದ್ದಳು. ಅವನೂ ಸಹ ಅವಳನ್ನು ಸಂಪೂರ್ಣ ನಂಬಿದ್ದ. ಆಕೆಗೆ ಯಾವ ಕೊರತೆಯೂ ಬರದಂತೆ ಕಾಳಜಿ ವಹಿಸಿದ್ದ. ಆಕೆಯನ್ನು ನೋಡಿದರೆ ಸುಖದಲ್ಲಿ ಇದ್ದಾಳೆ ಎಂದು ಯಾರೂ ಹೇಳಬಹುದಿತ್ತು.

ಈಗ ಕಮಲಾಕರ ಮರಳಿ ಬರಲು ಕೇಳುತ್ತಿರುವನು. ದಿಕ್ಕೇ ತೋರದಂತಾಯಿತು. ತರುಣನನ್ನು ಬಿಟ್ಟು ಹೋಗುವುದು ಕಠಿಣ. ಯಾಕೆಂದರೆ ಇಬ್ಬರೂ ಅಷ್ಟೊಂದು ಹೊಂದಿಕೊಂಡಿದ್ದರು. ಅನ್ಯೋನ್ಯವಾಗಿದ್ದರು. ಅದು ಅಸಾಧ್ಯವೆಂದು ಅನಿಸಿತು. ಆಕೆ ನೇರವಾಗಿ ಕಮಲಾಕರನಿಗೆ ಹೇಳಿದಳು. ''ನೋಡ್ರಿ ನಾನು ಪತಿತಳು. ನಿಮಗೂ, ಮಕ್ಕಳಿಗೂ ದ್ರೋಹ ಮಾಡಿರುವೆ. ನನ್ನ ದೇಹ ಸುಖಕ್ಕಾಗಿ ಇಲ್ಲಿ ಬಂದಿರುವೆ. ನಾನು ಮಾಡಿದ್ದು ತಪ್ಪು ಎಂಬುದರ ಅರಿವು ನನಗೆ ಇದೆ. ಆದರೆ ಈಗ ನಾನು ನಿಃಸಹಾಯಕಳು. ಆ ತರುಣನನ್ನು ಬಿಟ್ಟು ಜೀವಿಸುವುದು ನನಗೆ ಆಗದು. ಮಕ್ಕಳ ಮೇಲೆ ಪ್ರೀತಿ ಇದೆ. ನಿಮ್ಮ ಮೇಲೆ ಗೌರವ ಭಕ್ತಿ ಇದೆ. ಆದರೆ ಆ ತರುಣನ್ನು ಬಿಟ್ಟಿರಲಾರದವಳಾಗಿದ್ದೇನೆ. ಇದು ನನ್ನ ದುರ್ದೈವ''.

ಕಮಲಾಕರ ಹೇಳಿದ. ''ಸರೋಜನಿ ನೀನು ಎಷ್ಟು ಒಳ್ಳೆಯವಳು ಎಂಬುದು ನನಗೆ ಗೊತ್ತು. ನನ್ನೊಡನೆ ನೀನು ಹತ್ತು ವರ್ಷ ಬಾಳುವೆ ಮಾಡಿರುವೆ. ನನಗೆ ಸುಖ ಕೊಟ್ಟಿರುವೆ. ಮಕ್ಕಳನ್ನು ಚೆನ್ನಾಗಿ ಸಾಕಿದ್ದೆ. ಈಗ ನನಗೊಂದು ಸುಸಂಧಿ ಬಂದಿದೆ. ನಾನು ನಿನ್ನ ಸುಖಕ್ಕೆ ಬಾಧೆ ಮಾಡುವದಿಲ್ಲ. ಮನೆಗೆ ಬಾ. ಮಕ್ಕಳೊಡನೆ ಇರು. ಅವರೂ ನಿನ್ನನ್ನು ನೆನಸಿ ನೆನೆಸಿ ದುಃಖಿಸುತ್ತವೆ. ಮನೆಗೆ ಬಂದರೆ ನೀನೂ ಮಕ್ಕಳೂ ಸಂತೋಷದಿಂದ ಇರಬಹುದು. ನಿನ್ನ ಸ್ನೇಹಿತನಿಗೆ ಹೇಳು ನಾನು ನಿಮ್ಮಿಬ್ಬರ ಮಧ್ಯೆ ಯಾವ ತೊಡಕನ್ನೂ ತರುವುದಿಲ್ಲ. ನೀನು ಅವನ ಜತೆಯಲ್ಲಿ ಸುಖವಾಗಿರು. ಅವನು ನಮ್ಮ ಮನೆಗೆ ಬೇಕಾದಾಗ ಬರಲಿ ಇರಲಿ. ನನ್ನ ಅಭ್ಯಂತರ ಇಲ್ಲ. ಒಟ್ಟಿನಲ್ಲಿ ನೀನು ಸುಖವಾಗಿರು''. ಸರೋಜನಿಗೆ ಇದನ್ನು ನಂಬಲಾಗಲಿಲ್ಲ. ಕಮಲಾಕರ ಎಂಥವನು ಎಂಬುದನ್ನು

ಆಕೆ ಈಗ ತಿಳಿದಳು. ಅವನೆದುರಿಗೆ ತಾನು ಕಸ ಎನಿಸಿತು. ಏನು ಹೇಳಬೇಕೆಂಬುದೇ ತಿಳಿಯಲಿಲ್ಲ. ಕಮಲಾಕರನನ್ನು ದಿಟ್ಟಿಸಿ ನೋಡುತ್ತ ಕುಳಿತಳು. ಕಮಾಲಾಕರ ಕೇಳಿದ ''ನೋಡು ನಿನಗೆ ನಂಬಿಕೆಯಾಗದಿದ್ದರೆ ನಾನು ಆಣೆ ಮಾಡುತ್ತೇನೆ. ನನ್ನ ಮೂವರೂ ಮಕ್ಕಳ ಮೇಲಿನ ಆಣೆ. ನಿನಗೆ ಹೇಳಿದಂತೆ ತಪ್ಪದೇ ನಡೆಯುತ್ತೇನೆ. ನೀನು ಒಂದು ವಾರದಲ್ಲಿ ನಿನ್ನ ಸ್ನೇಹಿತನಿಗೆ ಹೇಳಿ ಬಾ.''

''ನನಗೆ ಈಗ ಬೇಗನೇ ಮರಳಬೇಕು. ತಡವಾದರೆ ಮಕ್ಕಳು ಉಪವಾಸ ಮಲಗಬೇಕು. ಹೋಗಿ ಅಡುಗೆ ಮಾಡಿ ಅವರಿಗೆ ಉಣಿಸುವೆ'' ಎಂದು ಬಾಗಿಲ ತೆಗೆದು ಹೊರಟೇ ಬಿಟ್ಟ. ಸರೋಜನಿಗೆ ಇದು ಕನಸಿನಂತೆ ಎನಿಸಿತು.

ಸಂಜೆಗೆ ತರುಣ ಬಂದ. ಸರೋಜನಿ ನಡೆದುದೆಲ್ಲ ತಿಳಿಸಿ ಅಳಹತ್ತಿದಳು. ಅವನಿಗೂ ದಿಕ್ಕು ತೋಚಲಿಲ್ಲ. ಇದೆಂತಹ ಪ್ರಸಂಗ ಎಂದು ಕುಸಿದು ಕುಳಿತ. ಸರೋಜನಿ ಅವನ ಎದೆಯ ಮೇಲೆ ಮುಖವಿಟ್ಟು ರೋಧಿಸತೊಡಗಿದಳು. ಇಂದು ಆಕೆಗೆ ಮಕ್ಕಳ ನೆನಪು ವಿಪರೀತ ಆಯಿತು. ತರುಣ ಒಪ್ಪಿಕೊಂಡ. ''ನೀನು ನಿನ್ನ ಮಕ್ಕಳನ್ನು ನೋಡಿ ಬಾ. ವಿಚಾರಿಸು. ನಿನಗೆ ಸರಿ ಎನಿಸಿದರೆ ನನಗೂ ಸರಿ. ನೀನು ನಿರ್ಣಯ ತೆಗೆದುಕೊ. ನನ್ನಿಂದ ನಿನಗೆ ಯಾವ ತೊಂದರೆಯು ಆಗಕೂಡದು'' ಎಂದ.

ಆಯಿತು ಕಮಲಾಕರ ಬಂದು ಹೋದ ಮೂರನೇ ದಿನ ಸರೋಜನಿ ಮಕ್ಕಳನ್ನು ನೋಡಲು ಕಮಲಾಕರನ ಮನೆಯಲ್ಲಿರಲು ಹೊರಟಳು. ಸುತ್ತಲಿನ ಜನರು ಏನು ಎನ್ನುವರೋ ಎಂಬ ಹೆದರಿಕೆ. ಮುಖವನ್ನು ಹೇಗೆ ಎತ್ತಿ ಅಡ್ಡಾಡಬೇಕೆಂಬ ಭಯ. ಮಕ್ಕಳಿಗೆ ಏನು ಹೇಳುವುದು ಎಂಬ ಪ್ರಶ್ನೆ.

ಮನೆಗೆ ಬಂದು ತಲುಪಿದಳು. ಮಕ್ಕಳು ತಾಯಿಯನ್ನು ಕಂಡು ಕುಣಿದಾಡಿದುವು. ಕಮಲಾಕರ ಶಾಲೆಯ ಕೆಲಸ ಮುಗಿಸಿ ಮನೆಗೆ ಬಂದ. ಸರೋಜನಿ ಬಂದುದನ್ನು ಕಂಡು ಸಂತೋಷ ಪಟ್ಟ. ನಿತ್ಯದಂತೆ ಬಟ್ಟೆ ಬದಲಿಸಿ ಮಕ್ಕಳಿಗೆ ತಿಂಡಿ ತಯಾರಿಸಲು ಅಡುಗೆ ಮನೆಗೆ ನಡೆದ. ಸರೋಜನಿ ಹಿಂದಿನಿಂದ ಬಂದು ಎರಡೂ ಕೈ ಜೋಡಿಸಿ ಕಣ್ಣೀರು ತಂದು ವಿನಂತಿಸಿದಳು. ''ಇಂದಿನಿಂದ ನಾನೇ ಅಡುಗೆ ಮಾಡುವೆ''. ಕಮಲಾಕರ ಆಗಬಹುದು. ನಿನಗೆ ದಣಿವು ಆಗಿರಬಹುದು. ವಿಶ್ರಾಂತಿ ತೆಗೆದುಕೋ. ನಾಳೆಯಿಂದ ನೀನೇ ಮಾಡು''. ಸರೋಜನಿ ಒಪ್ಪಲಿಲ್ಲ. ಆಕೆ ದೂರನಿಂದಲೇ ನೆಲ ಮುಟ್ಟಿ ಅವನಿಗೆ ನಮಸ್ಕರಿಸಿದಳು.

ಅರ್ಧ ತಾಸಿನಲ್ಲಿ ಓಣಿಯವರಿಗೆಲ್ಲ ಸುದ್ದಿ ತಲುಪಿತು. ಹಿರಿಯರೆನ್ನಿಸಿಕೊಂಡವರೆಲ್ಲ ಕೂಡಿಕೊಂಡು ಕಮಲಾಕರನ ಮನೆಗೆ ಬಂದರು. ಕೆಲವರಂತೂ ಸಿಟ್ಟಿನಿಂದ ಬೆಂಕಿಯಾಗಿದ್ದರು. ಅವಾಚ್ಯ ಶಬ್ದಗಳನ್ನು ಬಳಸುತ್ತಲೇ ಒಳಗೆ ಕಾಲಿಟ್ಟರು. ಕಮಲಾಕರ ಅವರೆಲ್ಲರಿಗೆ ಕುಳಿತು ಕೊಳ್ಳಲು ಹೇಳಿದ. ಸರೋಜನಿ ಅಡುಗೆಯ ಮನೆಯ ಬಾಗಿಲು ಮುಚ್ಚಿದಳು ಆದರೆ ನಡೆದ ಮಾತುಕತೆ ಚೆನ್ನಾಗಿ ಕೇಳುತ್ತಿದ್ದವು. ''ಆಕೆ ನೀತಿ ಕೆಟ್ಟವಳು'', ''ಹಾದರಗಿತ್ತಿ'' ''ನಿಮ್ಮ ಮಾನವನ್ನು ಕಳೆದಳು'',''ಇಂಥವಳನ್ನು ಮೊದಲು ಒದ್ದು ಹೊರಹಾಕಬೇಕು'', ''ಆಕೆಯನ್ನು ಜೀವಂತ ಸುಟ್ಟರೂ ಕಡಿಮೆ,'' ''ಆಕೆ ಮನುಷ್ಯಳಲ್ಲ ರಾಕ್ಷಸಿ'', ''ಮಕ್ಕಳನ್ನು ಮುಟ್ಟಬೇಡಿರೆಂದು ಹೇಳಿರಿ''. ಇನ್ನೂ ದೊಡ್ಡ ಬೈಗಳನ್ನು ಬಳಸಿದರು. ಕಮಲಾಕರ ಶಾಂತವಾಗಿ ಎಲ್ಲ ಕೇಳಿದ. ಅವರೆಲ್ಲರನ್ನು ನೋಡಿ ಹೇಳಿದ ''ನಿಮ್ಮ ಸಲಹೆಗೆ ವಂದನೆಗಳು. ಇದು ನನ್ನ ಸಂಸಾರದ ಪ್ರಶ್ನೆ. ವಿಚಾರಿಸಿ ಜೀವಿಸುವೆ'', ಎಂದು ವಿನಯಪೂರ್ವಕ ಹೇಳಿ ಅವರನ್ನು ಕಳುಹಿಸಿದ. ಸರೋಜನಿ ಬೆವತು ಬಿಟ್ಟಿದ್ದಳು. ಆಕೆಗೆ ಭಾವಿ ಹಾರುವುದೇ ಸುಲಭ ಎನಿಸಿತ್ತು. ಮಕ್ಕಳು ತಾಯಿಯನ್ನು ಹಿಡಿದುಕೊಂಡೇ

ಕುಳಿತಿದ್ದುವ ರಾತ್ರಿಯಾಯಿತು. ಮಕ್ಕಳಿಗೆ ಸರೋಜನಿ ಉಣಿಸಿದಳು. ಕಮಲಾಕರನಿಗೂ ತಾಟು ಹಚ್ಚಿ ಕೊಟ್ಟಳು. ಅವನು ಊಟ ಮಾಡಿದನು. ಒಂದು ಚಾಪೆ ತೆಗೆದುಕೊಂಡು ಮನೆಯಲ್ಲಿ ಬಹಳ ಶಕೆ ಎಂದು ಹೊರಗೆ ಕಟ್ಟೆಯ ಮೇಲೆ ಮಲಗಲು ಹೋದ. ಸರೋಜನಿ ಬಾಗಿಲ ಹಾಕಿದಳು. ಇಡೀ ರಾತ್ರಿ ಅತ್ತಳು. ತಾನೇನು ಮಾಡಿದೆ ಎಂದು ಪರಿತಪಿಸಿದಳು. ಮುಂಜಾನೆ ಕಮಲಾಕರನ ಸಹೋದ್ಯೋಗಿಗಳು ಬಂದರು ಮಾತಾಡಿದರು. ಸರೋಜನಿಯನ್ನು ದೂರದಿಂದಲೇ ನೋಡಿ ಅಸಹ್ಯ ಪಟ್ಟವರಂತೆ ಮಾಡಿದರು. ಆಕೆಗೆ ಬಹಳ ನೋವಾಯಿತು. ಬೇರೆ ದಾರಿಯಿಲ್ಲ . ಎಲ್ಲವನ್ನೂ ಸಹಿಸಿದಳು. ಕಮಲಾಕರ ಉದ್ವಿಗ್ನಗೊಳ್ಳದೇ ಕುಳಿತಿದ್ದ. ಮಾತಾಡುತ್ತಿದ್ದ. ಬಂದವರು ಹೋದರು.

ತರುಣ ಸರೋಜನಿಯನ್ನು ಕಾಣಲು ಬರುತ್ತಿದ್ದ. ಆಕೆಯೂ ಹೋಗಿ ಬರುತ್ತಿದ್ದಳು. ಸಾಧ್ಯವಾದಾಗ ವಸತಿಗಳೂ ನಡೆಯುತ್ತಿದ್ದವು. ಕಮಲಾಕರನಿಗೆ ಮನೆಯಲ್ಲಿ ಶಕೆಯೇ ಶಕೆ. ಕಾರಣ ಹೊರಗೆ ಮಲಗುತ್ತಿದ್ದ. ಸರೋಜನಿ ಮತ್ತೆ ಮತ್ತೆ ಮೊದಲಿನಂತೆ ಮನೆ ನಡಿಸ ತೊಡಗಿದಳು. ಏನೂ ಜರುಗಿಲ್ಲ ಎನ್ನುವಂತೆ ಜೀವನ ಮುಂದುವರೆಯಿತು.

ಈ ಘಟನೆಯನ್ನು ಓರ್ವಸ್ತ್ರೀಯು ಇನ್ನೋರ್ವ ಸ್ತ್ರೀಗೆ ವಿವರಿಸುತ್ತ ನಡೆದಿದ್ದಳು. ವಿವರಣೆ ಮುಗಿಯುತು ಕೇಳಿದವರು ಏನು ಅನ್ನುವಳೋ ಎಂದು ನಾನು ನನ್ನ ಕಿವಿಗಳನ್ನು ಚುರುಕುಗೊಳಿಸಿದೆ. ಕೇಳಿದ ಹಿರಿಯ ಹೆಣ್ಣು ಮಗಳು ಹೇಳಿದಳು.

''ಕೆಟ್ಟ ಅಡಿಗಿ, ಅಟ್ಟು ಉಂಡವನೇ ಜಾಣ'' , ಜನರ ಮಾತ ಕೇಳಿ ಸರೋಜನಿಯನ್ನು ಹೊರಗೆ ಹಾಕಿದ್ದರ ಯಾರಿಗೆ ಸುಖ ಇತ್ತವಾ ? ಕಮಲಾಕರ ಮಾಸ್ತರ ಶ್ಯಾಣಾ ಅದಾನು. ತನ್ನ ಸಂಸಾರ ತಾ ಒಳ್ಳೇದು ಮಾಡಿಕೊಂಡ ಹೋಗುತ್ತಿರುವನು. ಸರೋಜನಿ ಮಾಡಿದ್ದೆಲ್ಲಾ ಮುಚಗೊಂಡ, ನುಂಗಿದ, ಇಂಥಾ ಧೈರ್ಯ ಇದ್ದ ಪುರುಷರು ಸಿಗೂದು ಭಾಳ ಕಡಿಮೆ''.

ಇದು ನಿಜವಾಗಿ ನಡೆದ ಘಟನೆ. ಇದನ್ನು ಎಷ್ಟು ಜನ ನಂಬಬಹುದು ? ನನಗಂತೂ ಕಮಲಾಕರನ ಬಗ್ಗೆ ಗೌರವವಿದೆ.

ಹಲವರು ,ಜೀವಮಾನವೆಲ್ಲ ಅನೇಕ ದುರ್ಘಟನೆಗಳ ಬಗ್ಗೆಯೇ ಚಿಂತಿಸುತ್ತಿರುತ್ತಾರೆ. ಆದರೆ ಆಶ್ಚರ್ಯವೆಂದರೆ, ಅವರು ಚಿಂತಿಸುವ ಹಲವು ದುರ್ಘಟನೆಗಳು ಅವರ ಜೀವನದಲ್ಲಿ ಸಂಭವಿಸುವುದಿಲ್ಲ ಕೂಡ. ಆದ್ದರಿಂದ ಅಂಥ ಚಿಂತೆ ಎಷ್ಟು ವ್ಯರ್ಥವೆಂಬುದನ್ನವರು ಮೊದಲೇ ತಿಳಿದುಕೊಂಡರೆ ಹರ್ಷಚಿತ್ತರಾಗಿರಬಹುದು.

- ಹಬಾಸ್

ನನ್ನ ತಂದೆಯ ನೆರಳು

ಕೆ.ಸುಕನ್ಯ ಭಟ್
ಮಗೀಲಾ ಹೌಸ್, ಕದ್ರಿ ರಾಕ್‌ಸೈಡ್
ಮಂಗಳೂರು-೫೭೫ ೦೦೪

''ತನ್ನ ಮೊಮ್ಮಗನ ದರ್ಶನದಿಂದ ಅವನ ಮನಸ್ಸಿಗಾಗಿದ್ದ ಗಾಯ ದೊಡ್ಡದಾಯಿತೆ ಅಥವಾ ವಾಸಿಯಾಯಿತೆ ?''

ನ್ಯೂಯಾರ್ಕ್ ಪಟ್ಟಣದಿಂದ ಹವಾಯಿಗೆ, ನಾನು ನನ್ನ ಗಂಡ ಗ್ಯಾರಿ ಮತ್ತು ಐದು ತಿಂಗಳ ಮಗ ಟಿಮ್‌ನನ್ನು ಕರೆದುಕೊಂಡು ಮೊದಲ ಬಾರಿಗೆ ನನ್ನ ತಂದೆ-ತಾಯಿಯರಿಗೆ ತೋರಿಸಲಿಕ್ಕಾಗಿ ವಿಮಾನದಲ್ಲಿ ಹೊರಟಿದ್ದೆ. ಆದರೆ ಮನದಲ್ಲಿ ಮಾತ್ರ ಸಂತಸದ ಬದಲು ಶಂಕೆಯೇ ತುಂಬಿಕೊಂಡಿತ್ತು. ಐದು ವರ್ಷಗಳ ಕಾಲ ನಾನು, ನನ್ನ ತಂದೆಯೊಡನೆ ಮಾತನಾಡಿರಲೇ ಇಲ್ಲ. ಪ್ರೀತಿ ತೋರಿಸುತ್ತಿದ್ದರೂ, ಚೈನಾದೇಶದ ಇತರ ತಂದೆಯರಂತೆ ಕಟ್ಟುನಿಟ್ಟಿನ ಮನುಷ್ಯನಾಗಿದ್ದ ನನ್ನ ತಂದೆ ನನ್ನಿಂದ ಹೆಚ್ಚಿನ ವಿಧೇಯತೆಯನ್ನು ಅಪೇಕ್ಷಿಸುತ್ತಿದ್ದರು. ನಮ್ಮಿಬ್ಬರ ಸ್ವಭಾವ ಒಂದೇ ತೆರನಾಗಿದ್ದರೂ ಮಾನಸಿಕವಾಗಿ ನಾವು ದೂರವಾಗಿದ್ದೆವು.

ನನ್ನ ತಾಯಿಯ ಗುಣಗಳನ್ನು ಇಷ್ಟಪಡುತ್ತಿದ್ದ ತಂದೆ, ನಾನೂ ಅವಳಂತೆಯೇ ಇರಬೇಕೆಂದು ಬಯಸುತ್ತಿದ್ದರು. ಸಹವಾಸ ಪ್ರಿಯಳಾಗಿದ್ದ ನನ್ನ ಅಮ್ಮ ಸಂಘ-ಸಂಸ್ಥೆಗಳೊಡನೆ ಬೆರೆಯುತ್ತಿದ್ದರೆ, ನಾನು ಪಾರ್ಟಿಗಳಿಗಿಂತ ಪುಸ್ತಕಗಳನ್ನು ಬಯಸುತ್ತಿದ್ದೆ. ನನ್ನ ತಂದೆ, ಅವರ ಗೆಳೆಯರ ಮಕ್ಕಳೊಡನೆ ನಾನು ಬೆರೆಯಬೇಕೆಂದು ಒತ್ತಾಯಿಸುತ್ತಿದ್ದರು. ಆದರೆ ನಾನು, ನನ್ನ ಗೆಳೆಯರನ್ನು ನಾನೇ ಆಯ್ಕೆ ಮಾಡಿಕೊಳ್ಳುತ್ತೇನೆಂದು ಹಟಮಾಡುತ್ತಿದ್ದೆ. ತಾಯಿಯು ಹಾಕಿದ್ದ ದಾರಿಯಲ್ಲೇ ನಾನೂ ಹೆಜ್ಜೆ ಹಾಕಬಹುದೆಂದು ಭಾವಿಸಿದ್ದ ತಂದೆ, ನನ್ನನ್ನು ಹತ್ತಿರದ ವಿಶ್ವವಿದ್ಯಾಲಯದಲ್ಲಿ ಸೇರಿಸಿದ್ದರು. ತಂದೆಯನ್ನು ನನ್ನ ತಾಯಿ ಮದುವೆಯಾದಂತೆ, ನಾನೂ ಶಿಕ್ಷಕಿಯಾಗಿ, ಆ ದ್ವೀಪದಲ್ಲಿಯ ಯಾವುದಾದರೂ ದೊಡ್ಡ ಮನೆತನದವನನ್ನು ವರಿಸಿ, ಅಲ್ಲಿಯೇ ನೆಲೆಸಬೇಕೆಂದು ಅವರು ಇಚ್ಛಿಸಿದ್ದರು.

ಆದರೆ ನಾನು ಅಲ್ಲಿ ನೆಲೆಸಲಿಲ್ಲ. ತಂದೆಯಂತೆಯೇ ಹಟಮಾರಿಯಾಗಿದ್ದ ನಾನು, ಅಲ್ಲಿಂದ ತಪ್ಪಿಸಿಕೊಂಡು, ಕ್ಯಾಲಿಫೋರ್ನಿಯಾದಲ್ಲಿಯ ವಿಶ್ವವಿದ್ಯಾಲಯಕ್ಕೆ ಓದಲು ಹೋದೆ. ಮತ್ತು ಅಲ್ಲಿಯೇ .. ಕಾಕೇಶಸ್ ಪರ್ವತ ಪ್ರಾಂತ್ಯದವನಾದ, ನೀಲಿ ಕಂಗಳ, ಮರಳು ಬಣ್ಣದ ಕೂದಲಿನವನಾದ ಗ್ಯಾರಿಯನ್ನು ಪ್ರೀತಿಸಿದ್ದೆ. ಹವಾಯಿ ದ್ವೀಪದಲ್ಲಿ ಅಲ್ಲ! ಬರ್ಕಲಿಯಲ್ಲಿ ನಾವು ಮದುವೆಯಾಗುತ್ತೇವೆಂದೂ ನನ್ನ ಮನೆಯವರಿಗೆ ತಿಳಿಸಿದ್ದೆ! ನಮ್ಮ ಕುಲದವರು ಆಗುತ್ತಿದ್ದಂತೆ, ದೊಡ್ಡ ರೀತಿಯಲ್ಲಿ ಗದ್ದಲದಿಂದ ಕೂಡಿದ ಮದುವೆಯನ್ನು ನಾನು ಇಷ್ಟಪಟ್ಟಿರಲಿಲ್ಲ. ನಾವಾಗುವ ಚಿಕ್ಕ, ಸಾಧಾರಣ ರೀತಿಯ ಮದುವೆಗೆ ಎರಡು ದಿನದ ಮೊದಲು ನನ್ನ ತಂದೆ-ತಾಯಿಯರು ನನ್ನನ್ನು ಮತ್ತು ಗ್ಯಾರಿಯನ್ನು ಕಂಡಿದ್ದರು. ಅನಂತರ ನಾವಿಬ್ಬರು ಹವಾಯಿಯಿಂದ ಬಹುದೂರ (ಅಂದರೆ ಅಮೆರಿಕಾದ ನೆಲವನ್ನು ತೊರೆಯದೆ) ನ್ಯೂಯಾರ್ಕ್‌ನಲ್ಲಿ ನೆಲಸಿದ್ದೆವು.

ಮುಂದಿನ ದಿನಗಳಲ್ಲಿ ತಂದೆ ತಳೆದ ಮೌನ ಅವರ ಅಸಮ್ಮತಿಯನ್ನು ನನಗೆ ತಿಳಿಸಿತ್ತು. ಅವರು ನನ್ನಲ್ಲಿಗೆ ಬರಲಿಲ್ಲ. ನಾನೂ ಅಲ್ಲಿಗೆ ಹೋಗಲಿಲ್ಲ. ನನ್ನ ತಾಯಿ ನನ್ನೊಡನೆ ದೂರವಾಣಿಯಲ್ಲಿ ಮಾತನಾಡುತ್ತಿದ್ದರೂ , ತಂದೆ ಮಾತಾಡಿರಲಿಲ್ಲ ಮತ್ತು ನಾನೂ ಅವರ ಬಗ್ಗೆ ಕೇಳಿರಲಿಲ್ಲ. ನಮ್ಮಿಬ್ಬರ ನಡುವಿನ ಅಗಲಿಕೆಯ ಮೌನ ಸ್ಥಿರವಾಗಿ ಉಳಿಯುತ್ತಿತ್ತೇನೊ... ಆದರೆ ,ಹಾಗಾಗುವ ಮೊದಲೇ

ಮೇ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲಿಂಡ್ ಚಿಂಗ್ ಸ್ಲೆಂಡ್ವರವರ 'ಮೈ ಫಾದರ್ಸ್ ಶಾಡೋ' ಲೇಖನದ ಭಾವಾನುವಾದ

'ಟಿಮ್ಮಿ' ಹುಟ್ಟಿದ್ದ ಮತ್ತು ನಾನು ಊಹಿಸದೆ ಇದ್ದಂಥ ಒಂದು ರೀತಿಯ ಎಳೆತ ನನ್ನನ್ನು ಆ ದ್ವೀಪದತ್ತ ಎಳೆಯುತ್ತದೆ ಎನಿಸಿತ್ತು.

''ನನ್ನ ತಂದೆಯ ನೆರಳಿನಂತೆ ಆಗ ಅವರ ಹಿಂದೆ ನಾನಿರುತ್ತಿದ್ದೆ''-ಎಂಬೆಲ್ಲ ಬಾಲ್ಯದ ನೆನಪುಗಳು, ವಿಮಾನಯಾನದ ಉದ್ದಕ್ಕೂ, ನನ್ನೆಡೆ ಪ್ರವಾಹದಂತೆ ನುಗ್ಗಿ ಬಂದಿತು. ತೋಟಗಳ ಊರಿನಲ್ಲಿ ತಂದೆ ಪ್ರೌಢ ಶಾಲೆಯ ಶಿಕ್ಷಕರಾಗಿದ್ದಾಗ ನನಗೆ ಮೂರು ವರ್ಷವಾಗಿತ್ತು. ಬಾಳೆಯ ಗಿಡಗಳ ಮಧ್ಯೆ ತಂದೆ ನಡೆಯುತ್ತಿದ್ದಾಗ ನಾನೂ ಅವರ ಹಿಂದೆಯೇ ಓಡುತ್ತಿದ್ದೆ. ನನಗೆ ಆಯಾಸವಾದಾಗ ಅವರು ನನ್ನನ್ನು ತಮ್ಮ ಹೆಗಲ ಮೇಲೆ ಹೊರುತ್ತಿದ್ದರು. ಮುಂದಿನದ್ದನ್ನು ಮಾತ್ರ ನಾನು ಎಂದೆಂದಿಗೂ ಮರೆಯಲಾರೆ. ಅವರ ಹಾಡು ಇನ್ನೂ ನನ್ನ ಕಿವಿಯಲ್ಲಿ ಗುಂಯ್ ಗುಟ್ಟುತ್ತಿದೆ.

''ನೀನು ನನಗೆ ಸೂರ್ಯ ರಶ್ಮಿ... ನನಗಿರುವ ಒಂದೇ ಬೆಳಕು ನೀನು'' ಎಂದವರು ಹಾಡುತ್ತಿದ್ದರು. ''ಆಕಾಶ ಕಪ್ಪಾದಾಗಲೂ ನೀನು ನನ್ನನ್ನು ಖುಷಿಪಡಿಸುತ್ತೀಯ'' ಎಂದವರು ಹೇಳಿದಾಗ ನಾನು, ಅವರ ಪ್ರೀತಿಯ , ಆರಾಧನೆಯ ಪೂರ್ತಿ ಹಕ್ಕುದಾರಳು ಎಂದು ತಿಳಿಯುತ್ತಿದ್ದೆ. ನಗುತ್ತಿದ್ದೆ. ಇಂದು ಅವರ ಉಡಾಳ ಮಗಳು, ಅವರ ವಂಶೋದ್ಧಾರಕನಾದ ಮೊದಲ ಮೊಮ್ಮಗನನ್ನು ಕರೆದುಕೊಂಡು ಬರುತ್ತಿದ್ದಾಳೆ. ಆ ಮಗುವಾದರೊ, ಹೆರೆಝಲ್ ಕಂಗಳು, ಅರೆ ಬಿಳಿ ಬಣ್ಣದಾಗಿದ್ದು ತನ್ನ ಚೈನಾದೇಶದ ವಂಶಸ್ಥರನ್ನು ಅತಿ ಕಡಿಮೆ ಹೋಲುತ್ತಿದೆ! ಹೇಗೆ ನನ್ನ ತಂದೆ ಪ್ರತಿಕ್ರಿಯೆ ತೋರಿಸಿಯಾರು ? ನನ್ನ ನಡವಳಿಕೆಯನ್ನು ಒಪ್ಪದೆ ಇದ್ದ ತಂದೆ ಈಗ 'ಟಿಮ್ಮಿ'ಯನ್ನು ಒಪ್ಪದಿದ್ದರೆ... ನಮ್ಮಿಬ್ಬರ ಮಧ್ಯೆ ಅಂದು ಏರ್ಪಟ್ಟ ಕಂದಕ ಇನ್ನೂ ದೊಡ್ಡದಾದೀತು ಮತ್ತು ನಾನೆಂದೂ ಅವರಿದ್ದಲ್ಲಿಗೆ ಹಿಂತಿರುಗಲಾರೆ-ಎಂದುಕೊಂಡೆ.

ವಿಮಾನ ನಿಲ್ದಾಣದಲ್ಲಿ ಇಳಿದಿತ್ತು. ಹಸಿವೆಯಿಂದ ಅಳುತ್ತಿದ್ದ 'ಟಿಮ್ಮಿ'ಯನ್ನು ನಮಗಾಗಿ ಕಾಯುತ್ತಿದ್ದ ತಾಯಿಯ ಕೈಯಲ್ಲಿರಿಸಿದ್ದೆ. ಯಾವ ತಕರಾರಿಲ್ಲದೆ ಅಜ್ಜಿ ತನ್ನ ಮೊಮ್ಮಗನನ್ನು ಸ್ವೀಕರಿಸಿದ್ದಳು.

ಓದಲಾಗದಂಥ ನಿಷ್ಕ್ರಿಯ ಮುಖಭಾವವನ್ನು ಹೊಂದಿದ್ದ ತಂದೆ, ''ಪ್ರಯಾಣ ಸುಖಕರವಾಗಿತ್ತೆ ?'' ಎಂದು ಕೇಳಿದ್ದರು. ಮುಂದೆ ಅವರು ಎಚ್ಚರಿಕೆಯಿಂದ ಟಿಮ್ಮಿಯನ್ನು ಕಾಣಲು ಬಗ್ಗಿದ್ದರು. ಅವನಾದರೊ ಕೂಡಲೇ ಕಿರುಚಿದ್ದ. ನನ್ನ ತಂದೆ ಅವನ ಕಿರುಚಾಟಕ್ಕೆ ಹೆದರಿ ಹಿಂದೆ ಸರಿದಿದ್ದರು.

ಈ ಚೀರಾಡುವ ಅಪರಿಚಿತ ಮಗು, ತನ್ನ ರಕ್ತ-ಮಾಂಸವೆ ? ಎಂದು ನಿರ್ಧರಿಸಲು ತಂದೆ ಕಷ್ಟಪಡುತ್ತಿದ್ದಾರೆಯೆ? ಎಂದು ನನಗನಿಸಿತ್ತು.

ತಂದೆಯ ಮನೆಯಲ್ಲಿ, ರಾತ್ರಿ ಊಟದ ಬಳಿಕ ಗ್ಯಾರಿ ಮತ್ತು ನಾನು ನನ್ನ ಹಳೆ ಮಲಗುವ ಕೋಣೆಗೆ ಹೋಗಿದ್ದೆವು. ಕೆಳಗೆ ಹಾಲಿನ ಹತ್ತಿರದ ಕೋಣೆಯಿಂದ ಯಾರಿಂದಲೋ ಕೇಳಿ ತಂದಿಟ್ಟಿದ್ದ ತೊಟ್ಟಿಲಿನೊಳಗೆ ಟಿಮ್ಮಿಗೆ ಹೊದೆಸಿ ತಾಯಿ ಮಲಗಿಸಿದ್ದರು.

ಟಿಮ್ಮಿ ಬಾಟಲಿ ಹಾಲನ್ನು ಕುಡಿಯುವ ಸಮಯವಾದ್ದರಿಂದ, ಮಧ್ಯೆ ರಾತ್ರಿ, ನಿದ್ದೆಯಲ್ಲಿದ್ದರೂ ತಾಯಿಯಾದ ನನಗೆ ಎಚ್ಚರವಾಗಿತ್ತು. ಆದರೆ ಹಸಿವಿನಿಂದ ಅವನು ಅಳುತ್ತಿರಲಿಲ್ಲ, ಮತ್ತು ಕೋಪದಿಂದ ಕಿರುಚಾಡುತ್ತಿರಲೂ ಇಲ್ಲ. ಅದರ ಬದಲು ಸಂತಸದ, ಮೃದುವಾದ ಗುಳು-ಗುಳು ಶಬ್ದದೊಡನೆ ಮಗುವಿನ ನಗು ಕೇಳಿ ಹಗುರವಾದ ಹೆಜ್ಜೆಯೊಡನೆ ಹಾಲ್ ತಲುಪಿದ್ದೆ.

ಹಾಲ್‌ನಲ್ಲಿ ಬೆಳಕಿನಲ್ಲಿ , ತಲೆದಿಂಬಿನ ಮೇಲೆ ಟಿಮ್ಮಿ ಮಲಗಿದ್ದ. ಅವನ ದಪ್ಪವಾಗಿದ್ದ ಕಾಲುಗಳು, ಕೈಮುಷ್ಟಿ ಅತ್ತಿತ್ತ ಚಲಿಸುತ್ತಿದ್ದುವು.

ಸಂತಸದಿಂದ ಅವನ ಬಾಯಿಂದ ಶಬ್ದಗಳು ಹೊರಡುತ್ತಿದ್ದುವು. ಹವಾಯಿ ಬಿಸಿಲಿಂದ ಕಪ್ಪಾದ ಏಶಿಯಾದೇಶದ ಮುಖ ಟಿಮ್ಮಿನ ಮೇಲೆ ಬಗ್ಗಿತ್ತು. ನಗುವಿನಿಂದಾಗಿ ಕಣ್ಣುಗಳ ಸುತ್ತ ನೆರಿಗೆಗಳೂ ಇದ್ದ ಮುಖವನ್ನೇ ಟಿಮ್ಮಿ ಗಮನಿಸುತ್ತಿದ್ದ. ನನ್ನ ತಂದೆ ಟಿಮ್ಮಿಗೆ ಹಾಲು ಕುಡಿಸುತ್ತ ಅವನ ಹೊಟ್ಟೆ ಸವರಿ ನಗಿಸುತ್ತಿದ್ದರು. ''ನೀನು ನನ್ನ ಸೂರ್ಯರಶ್ಮಿ'' (ಯೂ ಆರ್ ಮೈ ಸನ್ ಶೈನ್) ಎಂದು ಮೆಲುದನಿಯಲ್ಲಿ ಅವರು ಹಾಡುತ್ತಿದ್ದರು. ಕತ್ತಲಿನಲ್ಲಿಯೇ ನಿಂತು ನೋಡುತ್ತಿದ್ದ ನಾನು, ಮಂತ್ರ ಮುಗ್ಧಳನ್ನಾಗಿಸುವಂಥ ದೃಶ್ಯವನ್ನು ಕೆಡಿಸಲಿಚ್ಛಿಸದೆ ಕೋಣೆ ಸೇರಿಕೊಂಡಿದ್ದೆ.

ಕೋಣೆ ಸೇರಿದಾಗ ನನಗೆ ಅನಿಸಿತ್ತು, ನನಗಿದ್ದಂತೆಯೇ... ನನ್ನ ತಂದೆಗೂ ಮುರಿದ ಸಂಬಂಧವನ್ನು ಸರಿಪಡಿಸಬೇಕೆಂದು ಅನಿಸಿರಬಹುದು ಎಂದು.

ನಯ-ನಾಜೂಕು ಇಲ್ಲದೆ, ಜಂಬದ ವ್ಯಕ್ತಿಯಾಗಿದ್ದ ತಂದೆಗೆ, ನನ್ನಂತೆಯೇ ಮುರಿದು ಹೋಗಿದ್ದ ನಮ್ಮ ಸಂಬಂಧವನ್ನು ಸರಿಪಡಿಸಲು ಗೊತ್ತಾಗಿರಲಿಕ್ಕಿಲ್ಲ ಎಂದು ಅನಿಸಿತ್ತು. ಆದರೆ ನಮ್ಮಿಬ್ಬರ ಮಧ್ಯೆ ಸಂಪರ್ಕ ವೇರ್ಪಡಿಸುವ ಸೇತುವೆ ಟಿಮ್ ಆಗಿದ್ದ.

ಮೊದಲಿದ್ದ ಆತಂಕವೆಲ್ಲಾ ಮುಂದೆ ನಾವಲ್ಲಿದ್ದ ದಿನಗಳಲ್ಲಿ ಕರಗಿತ್ತು. ನೇರವಾಗಿ ನಾನು ಮತ್ತು ತಂದೆ ನಮ್ಮ ಮಧ್ಯೆ ಇದ್ದ ವಿರಸದ ಬಗ್ಗೆ ಮಾತನಾಡುವ ಅವಕಾಶವನ್ನೇ ಟಿಮ್ ಕೊಡದೆ ಇದ್ದುದಕ್ಕಾಗಿ ಅವನಿಗೆ ಧನ್ಯವಾದಗಳನ್ನು ನಿಜಕ್ಕೂ ಹೇಳಬೇಕು! ಟಿಮ್‌ನನ್ನು ತಂದೆ ಸ್ವೀಕರಿಸಿದ ನಂತರ, ಅವರು ತಮ್ಮ ಮನೆತನದ ಬಗ್ಗೆ ಇರಿಸಿಕೊಂಡಿದ್ದ ಕೆಲವು ವಿಚಾರಗಳನ್ನು ಕೆಲವು ಧ್ಯೇಯಗಳನ್ನು ಸಡಿಲಿಸಿಕೊಂಡಿದ್ದರು. ವಂಶಪಾರಂಪರ್ಯದಿಂದ ಬರುವಂತಹ ಮುಖ ಚಹರೆಗಳು ಇಲ್ಲದೆ ಇದ್ದರೂ ಹೆರ್ಬಿಲ್ ಕಣ್ಣುಗಳ, ಗುಂಗುರು ಕೂದಲಿನ ಟಿಮ್ಮಿ ಎಲ್ಲರಿಂದ ಪ್ರೀತಿಸಲ್ಪಟ್ಟಿದ್ದ.

ತರುವಾಯದ ವರ್ಷವೂ ಬೇಸಗೆಯಲ್ಲಿ ದ್ವೀಪಕ್ಕೆ ನಾವು ಹಿಂತಿರುಗಿದ್ದೆವು. ಅಂಬೆಗಾಲಿಕ್ಕುವ ಟಿಮ್ಮಿ ಸಮುದ್ರದ ತೆರೆ-ನೊರೆಯೊಡನೆ ಅಜ್ಜನ ಜತೆ ಆಟವಾಡಿದ್ದ, ಮತ್ತೊಂದು ಬೇಸಿಗೆಯಲ್ಲಿ ಹರಕು-ಮುರುಕಾದ ಮರವನ್ನು ಉಪಯೋಗಿಸಿ ಅವರು ಮರದ ಮೇಲೆ ಮನೆಕಟ್ಟಿ, ನೀಲಿ ಬಣ್ಣವನ್ನೂ ಹಚ್ಚಿದ್ದರು, ಆನಂದಿಸಿದ್ದರು.

ಅಜ್ಜನ ಪದವಿ ದೊರೆತ ತಂದೆಗೆ ಸಂತೋಷ ಹೇಳತೀರದಷ್ಟಾಗಿತ್ತು. ನ್ಯೂಯಾರ್ಕ್ ಫ್ಯಾಮಿಲಿಯನ್ನು ನೋಡಲಿಕ್ಕೆಂದು ಆಗಾಗ ಬರಲು ಮತ್ತು ನಾಲ್ಕು ವರ್ಷದ ಟಿಮ್ಮಿಯೊಡನೆ ಹೆಚ್ಚು ಸಮಯ ಕಳೆಯಲಿಕ್ಕಾಗಿ ಅವರು ತನ್ನ ಕೆಲಸದಿಂದ ಬೇಗ ನಿವೃತ್ತಿ ಪಡೆದಿದ್ದರು. ನನ್ನ ಮಗ ಮತ್ತು ನನ್ನ ತಂದೆಯ ಜೊತೆ ಬಹಳ ಸುಂದರವಾಗಿತ್ತು. ಸಂತಸದಿಂದ ಹಾರಿ-ಹಾರಿ ನಡೆಯುವ ಬೇರೆ ರೀತಿಯ ನೆರಳೊಂದು ಈಗ ಚೈನಾ ದೇಶದ ಅಜ್ಜನ ಹಿಂದಿದೆ.

ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು.

-ಮಹಾಭಾರತ

ಮರುಭೂಮಿಯ ಹೂವು

ಭಾರತೀ ಭಟ್
೧೩೫, ಡಿ. ಬ್ಲಾಕ್, ೨೨ನೇ ಕ್ರಾಸ್,
೩ನೇ ಹಂತ,ವಿಜಯನಗರ,
ಮೈಸೂರು-೫೭೦೦೧೭

ಮರುಭೂಮಿಯ ಮಗು

ನಾನು ಆಫ್ರಿಕದ ಸೊಮಾಲಿಯಾ ಮರುಭೂಮಿಯಲ್ಲಿ ಕುರುಬರ ಕುಟುಂಬವೊಂದರಲ್ಲಿ ಹುಟ್ಟಿದೆ. ಚಿಕ್ಕವಳಾಗಿದ್ದಾಗ ಇಲ್ಲಿಯ ಪ್ರಕೃತಿ ಸೌಂದರ್ಯವನ್ನು ನೋಡುತ್ತಾ ಸಂತೋಷದಿಂದ ಕಾಲ ಕಳೆದೆ. ಇಲ್ಲಿ ಸಿಂಹಗಳು ಬಿಸಿಲಿನಲ್ಲಿ ತಿರುಗಾಡುತ್ತಿರುವುದನ್ನು ನೋಡುತ್ತಿದ್ದೆ. ಇಲ್ಲಿಯ ಮರಳಿನಲ್ಲಿ ನಾನು ಜಿರಾಫೆ, ಸಿಂಹಗಳು ಮತ್ತು ನರಿಗಳು ಮಧ್ಯೆ ಕಾಲ ಕಳೆಯುತ್ತಿದ್ದೆ.ನಾನಾಗ ತುಂಬಾ ಸಂತೋಷದಿಂದಿದ್ದೆ.

ಕ್ರಮೇಣ ನನ್ನ ಈ ಸಂತೋಷದ ದಿನಗಳು ಮಾಯವಾಗುತ್ತಾ ಬಂದುವು. ನನಗೆ ಐದು ವರ್ಷಗಳಾದಾಗ ಆಫ್ರೀಕದಲ್ಲಿ ಹೆಣ್ಣಾಗಿ ಹುಟ್ಟುವುದರಿಂದ ಎಷ್ಟೊಂದು ಕಷ್ಟವನ್ನು ಅನುಭವಿಸಬೇಕೆಂದು ಅರಿವಾಗ ತೊಡಗಿತು. ಆ ಜೀವನಕ್ಕಾಗಿ ಹೆಂಗಸರೇ ಜಾಸ್ತಿ ಕಷ್ಟಪಟ್ಟು ದುಡಿಯಬೇಕಾಗುತ್ತಿತ್ತು. ಆದರೆ ಅವರಿಗೆ ಯಾವ ಸ್ವಾತಂತ್ರ್ಯವೂ ಇರಲಿಲ್ಲ.

ಚಿಕ್ಕವಳಿದ್ದಾಗ ನಾನು ಇತರ ಸೋಮಾಲಿಗಳಂತೆ ಒಂಟೆ, ಆಡು, ಕುರಿ, ದನಗಳನ್ನು ಸಾಕುತ್ತಾ ಅವುಗಳ ಹಾಲನ್ನು ಕುಡಿದು ದೊಡ್ಡವಳಾದೆ. ಬೆಳಗಿನ ತಿಂಡಿ ಜತೆ ನಾವು ಒಂಟೆಯ ಹಾಲು ಕುಡಿಯುತ್ತಿದ್ದೆವು. ಸಾಮಾನ್ಯ ೬೦ ರಿಂದ ೭೦ ಕುರಿ ಮತ್ತು ಆಡುಗಳನ್ನು ಮೇಯಿಸಲು ದೊಡ್ಡ ಕೋಲು ಹಿಡಿದುಕೊಂಡು ಹೋಗುತ್ತಿದ್ದೆ. ಅವುಗಳ ಜತೆ ಹೋಗುತ್ತಿರುವಾಗ ಸಂತೋಷದಿಂದ ಹಾಡು ಹೇಳುತ್ತಿದ್ದೆ. ಅವು ಹುಲ್ಲು ತಿನ್ನುತ್ತಿದ್ದಾಗ ಹೈನಾ, ಸಿಂಹದಂತಹ ಇತರ ಪ್ರಾಣಿಗಳು ಅವನ್ನು ಹೊತ್ತೊಯ್ಯದಂತೆ ನೋಡಿಕೊಳ್ಳುತ್ತಿದ್ದೆ.

ನನ್ನ ಮನೆ ಒಂದು ಟೆಂಟಿನಂತಿತ್ತು. ಮರದ ಚೌಕಟ್ಟಿನ ಮೇಲೆ ಹುಲ್ಲು ಹೊದೆಸಿ ಅದನ್ನು ತಯಾರಿಸಿದ್ದರು. ಒಂದೂರಿನಿಂದ ಇನ್ನೊಂ ದೂರಿಗೆ ಹೋಗುವಾಗ ಆ ಗುಡಿಸಲನ್ನು ಬಿಚ್ಚಿ ಒಂಟೆಯ ಮೇಲೆ ಕಟ್ಟಿ ತೆಗೆದುಕೊಂಡು ಹೋಗುತ್ತಿದ್ದೆವು. ರಾತ್ರಿ ಹೊತ್ತು ನಾವು ಮಕ್ಕಳು ಗುಡಿಸಲಿನ ಹೊರಗೆ ಮಲಗುತ್ತಿದ್ದೆವು. ನಮ್ಮ ತಂದೆ ಒಂದು ಬದಿಯಲ್ಲಿ ನಮ್ಮ ರಕ್ಷಕನಂತೆ ಮಲಗುತ್ತಿದ್ದರು.

ನನಗೆ ವಾರಿಸ್ ಎಂದು ಹೆಸರಿದ್ದರೂ ನನ್ನ ತಾಯಿ ನನ್ನನ್ನು ಅವದೂಲ್(ಚಿಕ್ಕಬಾಯಿ) ಎಂದು ಕರೆಯುತ್ತಿದ್ದಳು. ವಾರಿಸ್ ಎಂಬುದು ಮರುಭೂಮಿಯ ಒಂದು ಹೂವಿನ ಹೆಸರು.

ಹೆಂಗಸಾದದ್ದು: ನಾನು ಹುಟ್ಟಿದ ಈ ಕುಟುಂಬದಲ್ಲಿ ವಿವಾಹವಾಗದ ಹೆಂಗಸಿಗೆ ಸ್ಥಳವಿರಲಿಲ್ಲ.ದೊಡ್ಡವಳಾದಾಗ ನನ್ನನ್ನು ಒಬ್ಬ ಒಳ್ಳೆಯ ವರನಿಗೆ ವಿವಾಹ ಮಾಡಿಕೊಡಬೇಕೆಂದು ನನ್ನ ತಾಯಿ ಆಲೋಚಿಸುತ್ತಿದ್ದಳು. ಸೋಮಾಲಿಯಾದಲ್ಲಿ ಹುಡುಗಿಯರನ್ನು ಒಂದು ಕ್ರೂರ ಪದ್ಧತಿಯಲ್ಲಿ ದಂಡಿಸುತ್ತಿದ್ದರು. ಅವಳ ಮೂತ್ರದ್ವಾರ ಮತ್ತು ಜನನೇಂದ್ರಿಯದ ಹೊರಭಾಗಗಳನ್ನು ಕತ್ತರಿಸಿ ಅತಿ ಚಿಕ್ಕ ತೂತು ಬಿಟ್ಟು ಹೊಲಿಯುತ್ತಿದ್ದರು. ಈ ರೀತಿ ಮಾಡಿದ ಹುಡುಗಿಯರಿಗೆ ಮಾತ್ರ ಅಲ್ಲಿ ಸರಿಯಾದ ವರ ಸಿಗುತ್ತಿದ್ದ.

ಈ ರೀತಿ ಕತ್ತರಿಸುವ ವಿಷಯವನ್ನು

ಆಗಸ್ಟ್ ೧೯೯೯ನೇ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ವಾರಿಸ್ ಡೈರಿ ಮತ್ತು ಕೆಥರಿನ್ ಮಿಲ್ಲರ್ ರ ''ಡೆಸರ್ಟ್ ಫ್ಲವರ್'' ಎಂಬ ಲೇಖನದ ಸಂಗ್ರಹಾನುವಾದ

ಹುಡುಗಿಯರಿಗೆ ಮೊದಲೇ ತಿಳಿಸುವುದಿಲ್ಲ. ಅದು ಒಂದು ರಹಸ್ಯವಾಗಿರುತ್ತದೆ. ಯುವತಿಯರಾದಾಗ ಏನೋ ಮಾಡುತ್ತಾರೆ ಎಂದಷ್ಟೇ ಅವರಿಗೆ ತಿಳಿದಿರುತ್ತದೆ. ಈ ಕೆಲಸವನ್ನು ಹುಡುಗಿಯರು ಮೊದಲ ಸಲ ಮುಟ್ಟಾದಾಗ ಮಾಡುವುದು ಪದ್ಧತಿಯಾಗಿತ್ತು. ಆದರೆ ಇತ್ತೀಚೆಗೆ ಇದನ್ನು ಚಿಕ್ಕವರಾಗಿದ್ದಾಗಲೇ ಮಾಡತೊಡಗಿದ್ದಾರೆ.

ಈ ಕೆಲಸವನ್ನು ಜಿಪ್ಸಿ ಹೆಂಗಸರು ಮಾಡುತ್ತಿದ್ದರು ಮತ್ತು ಇದಕ್ಕಾಗಿ ಅವರಿಗೆ ದುಬಾರಿ ಹಣ ಕೊಡಬೇಕಾಗುತ್ತಿತ್ತು. ಈ ರೀತಿ ಮಾಡಿಸಿಕೊಳ್ಳದ ಹುಡುಗಿಯರಿಗೆ ಮದುವೆಯಾಗುತ್ತಿರಲಿಲ್ಲ. ಹಾಗಾಗಿ ಈ ಕೆಲಸವನ್ನು ಮಾಡಬಲ್ಲ ಜಿಪ್ಸಿ ಹೆಂಗಸರಿಗೆ ಒಳ್ಳೆ ಸಂಪಾದನೆಯಾಗುತ್ತಿತ್ತು.

ನನಗೆ ೫ ವರ್ಷವಾಗಿದ್ದಾಗ ನನ್ನ ತಾಯಿ ನನ್ನ ಬಳಿ ಹೇಳಿದಳು ''ನಿನ್ನ ತಂದೆ ಜಿಪ್ಸಿ ಹೆಂಗಸನ್ನು ಕರೆದುಕೊಂಡು ಬರಲು ಹೋಗಿದ್ದಾರೆ. ಇನ್ನು ಬೇಗನೆ ಆ ಹೆಗಸು ಇಲ್ಲಿಗೆ ಬರುವಳು.''

ಇದರ ಹಿಂದಿನ ದಿವಸ ನನ್ನ ಕುಟುಂಬದವರು ನನ್ನನ್ನು ಬಹಳ ಪ್ರೀತಿಯಿಂದ ನೋಡಿಕೊಂಡು ತಿನ್ನಲು ರುಚಿರುಚಿಯಾದ ತಿಂಡಿಗಳನ್ನು ಕೊಟ್ಟರು. ಜಾಸ್ತಿ ನೀರು ಮತ್ತು ಹಾಲು ಕುಡಿಯಬಾರದೆಂದು ನನ್ನ ಅಮ್ಮ ಹೇಳಿದಳು. ಆ ರಾತ್ರಿ ಅವರು ಏನು ಮಾಡುತ್ತಾರೆಂದು ತಿಳಿಯುವ ಕುತೂಹಲದಲ್ಲಿದ್ದೆ.

ಮಧ್ಯರಾತ್ರಿಯಾಗಲು ತಾಯಿ ನನ್ನ ಬಳಿ ಬಂದಳು. ನಾನು ನನ್ನ ಹೊದಿಕೆಯನ್ನು ತೆಗೆದುಕೊಂಡು ನಿದ್ದೆಗಣ್ಣಿನಲ್ಲಿ ಆಕೆಯ ಹಿಂದೆ ಹೋದೆ. ನಡೆಯುತ್ತಾ ಹೋದ ನಾವು ಒಂದು ಪೊದೆಯ ಬಳಿ ನೆಲದಲ್ಲಿ ಕುಳಿತೆವು. ಸ್ವಲ್ಪ ಹೊತ್ತಿನಲ್ಲಿ ಅಲ್ಲಿಗೆ ಜಿಪ್ಸಿ ಹೆಂಗಸು ಬಂದಳು. ಅಲ್ಲೊಂದು ಸಮತಟ್ಟಾದ ಬಂಡೆಕಲ್ಲು ಇತ್ತು. ಅದರ ಮೇಲೆ ನನ್ನನ್ನು ಕುಳಿತುಕೊಳ್ಳಲು ಹೇಳಿದಳು. ಯಾರೊಬ್ಬರೂ ಮಾತನಾಡಲಿಲ್ಲ.

ನಾನು ಅಲ್ಲಿ ಕುಳಿತ ಅನಂತರ ನನ್ನ ತಾಯಿ ನನ್ನ ಹಿಂದೆ ಕುಳಿತು ನನ್ನ ತಲೆಯನ್ನು ಆಕೆಯ ಎದೆಯ ಮೇಲೆ ಒರಗಿಸಿಕೊಂಡಳು. ಅವಳು ಮರದ ತುಂಡೊಂದನ್ನು ನನ್ನ ಬಾಯಿಯಲ್ಲಿ ಹಲ್ಲುಗಳ ಮಧ್ಯೆ ಇರಿಸಿ ''ಇದನ್ನು ಕಚ್ಚಿಕೊಂಡಿರು'' ಎಂದು ಹೇಳಿದಳು.

ನನಗೆ ಭಯದಿಂದ ಮೈಯೆಲ್ಲ ಹೆಪ್ಪುಗಟ್ಟಿದಂತಾಯಿತು. ಬಾಯಿಯಲ್ಲಿ ಮರದ ತುಂಡು ಇದ್ದುದರಿಂದ ಮೆಲ್ಲಗೆ ''ನನಗೆ ನೋವಾಗಬಹುದು'' ಎಂದು ಹೇಳಿದೆ.

ತಾಯಿ ನನ್ನ ಕಿವಿಯ ಬಳಿಯಲ್ಲಿ ''ನೋವಾಗುವುದಿಲ್ಲ. ಧೈರ್ಯದಿಂದಿರು, ಬೇಗನೆ ಮುಗಿಯುತ್ತದೆ'' ಎಂದು ಪಿಸುಗುಟ್ಟಿದಳು. ಜಿಪ್ಸಿ ತನ್ನ ಚೀಲದಿಂದ ಒಂದು ರೇಜರ್ ಬ್ಲೇಡನ್ನು ತೆಗೆದಳು. ಆ ಬ್ಲೇಡಿನ ಒಂದು ಬದಿಯಲ್ಲಿ ರಕ್ತದ ಕಲೆ ಕಾಣಿಸುತ್ತಿತ್ತು. ಆ ಬ್ಲೇಡಿನ ಮೇಲೆ ಆಕೆ ಉಗುಳಿ ತನ್ನ ಉಡುಪಿನಿಂದ ಒರಸಿದಳು. ನನಗೆ ಕಾಣಬಾರದೆಂದು ನನ್ನ ತಾಯಿ ನನ್ನ ಕಣ್ಣಿಗೆ ಬಟ್ಟೆ ಕಟ್ಟಿದಳು. ಇದರಿಂದಾಗಿ ಜಿಪ್ಸಿ ನನ್ನ ಮೇಲೆ ಏನು ಮಾಡುತ್ತಿದ್ದಾಳೆಂದು ನನಗೆ ತಿಳಿಯಲಿಲ್ಲ.

ನನ್ನ ಜನನೇಂದ್ರಿಯದ ಹೊರಭಾಗವನ್ನು ಮತ್ತು ಮೂತ್ರದ್ವಾರವನ್ನು ಅವಳು ಬ್ಲೇಡಿನಿಂದ ಗರಗಸದಿಂದ ಕೊಯ್ಯುವಂತೆ ಕೊಯ್ದು ತೆಗೆಯುತ್ತಿದ್ದಾಳೆಂದು ನನಗೆ ತಿಳಿಯಿತು. ನೋವು ಸಹಿಸಲು ಸಾಧ್ಯವಾಗುತ್ತಿರಲಿಲ್ಲ. ಅವರ ವಿರೋಧ ಹೋದಲ್ಲಿ ನನಗೆ ಇನ್ನೂ ಕಷ್ಟ ಅನುಭವಿಸಬೇಕಾಗಬಹುದೆಂದು ನಾನು ಸುಮ್ಮನೆ ಕುಳಿತಿದ್ದೆ. ಈ ಕೆಲಸ ಆದಷ್ಟು ಬೇಗ ಮುಗಿಯಲಿ ಎಂದು ನಾನು ದೇವರನ್ನು ಪ್ರಾರ್ಥಿಸುತ್ತಿದ್ದೆ. ಸ್ವಲ್ಪ ಹೊತ್ತಿನಲ್ಲಿ ನನಗೆ ಎಚ್ಚರ ತಪ್ಪಿತು.

ನನಗೆ ಎಚ್ಚರವಾದಾಗ ನನ್ನ ಕಣ್ಣಿಗೆ ಕಟ್ಟಿದ

ಬಟ್ಟೆಯನ್ನು ಬಿಡಿಸಲಾಗಿತ್ತು. ಜಿಪ್ಸಿ ಹೆಂಗಸು ಅಕೇಶಿಯಾ ಮರದ ಮುಳ್ಳುಗಳ ರಾಶಿಯನ್ನು ತನ್ನ ಬಳಿ ಇಟ್ಟುಕೊಂಡಿದ್ದುದು ಕಾಣಿಸಿತು. ಆ ಮುಳ್ಳಿನಿಂದ ಅವಳು ನನ್ನ ಶರೀರದಲ್ಲಿ ತೂತು ಮಾಡಿ ಗಟ್ಟಿಯಾದ ಬಿಳಿದಾರದಲ್ಲಿ ಹೊಲಿದಿದ್ದಳು. ನನ್ನ ತೊಡೆಯ ಮಧ್ಯೆ ಆಗುತ್ತಿದ್ದ ನೋವಿನಿಂದಾಗಿ ನನಗಿನ್ನು ಸಾಯುವುದೇ ಒಳ್ಳೆಯದೆಂದು ಅನಿಸುತ್ತಿತ್ತು.

ಜಿಪ್ಸಿ ಹೆಂಗಸು ಹೋದ ಅನಂತರ ನನ್ನ ಕಾಲುಗಳನ್ನು ನೋಡಿದೆ. ಅಲ್ಲಾಡಿಸದಂತೆ ಎರಡು ಕಾಲುಗಳನ್ನು ಜೋಡಿಸಿ ಹಿಮ್ಮಡಿಯಿಂದ ತೊಡೆಯ ತನಕ ಬಟ್ಟೆಯ ಪಟ್ಟಿಯಿಂದ ಕಟ್ಟಲಾಗಿತ್ತು. ತಲೆತಿರುಗಿಸಿ ನಾನು ಕುಳಿತುಕೊಂಡಿದ್ದ ಬಂಡೆಕಲ್ಲನ್ನು ನೋಡಿದೆ. ಅಲ್ಲೊಂದು ಪ್ರಾಣಿಯನ್ನು ಕೊಂದಿರುವ ಹಾಗೆ ರಕ್ತ ಚೆಲ್ಲಿತ್ತು ಅದರ ಮೇಲೆ ನನ್ನ ಮೈಯ ಒಂದು ತುಂಡು ಮಾಂಸ ಬಿದ್ದಿತ್ತು.

ಬಿಸಿಲು ಜೋರಾಗಿ ನನ್ನ ಮುಖದ ಮೇಲೆ ಬೀಳತೊಡಗಿದಾಗ ನನ್ನ ಅಕ್ಕ ಅಮನ್ ಮತ್ತು ನನ್ನ ತಾಯಿ ನನ್ನನ್ನು ಎಳೆದುಕೊಂಡು ಹೋಗಿ ನೆರಳಿರುವ ಒಂದು ಪೊದೆಯ ಬಳಿ ಮಲಗಿಸಿದರು. ಅನಂತರ ಮರದ ಕೆಳಗೆ ಒಂದು ಚಿಕ್ಕ ಗುಡಿಸಲು ಕಟ್ಟಿ ನನ್ನನ್ನು ಅಲ್ಲಿ ಮಲಗಿಸಿದರು. ಅಲ್ಲಿ ನಾನು ಕೆಲವು ವಾರ ವಿಶ್ರಾಂತಿ ತೆಗೆದುಕೊಳ್ಳಬೇಕಾಗಿತ್ತು.

ನನ್ನ ಅಕ್ಕನನ್ನು ಕರೆದೆ. ಅವಳು ನನ್ನನ್ನು ಇನ್ನೊಂದು ಬದಿಗೆ ಹೊರಳಿಸಿ ಅಲ್ಲಿ ಮರಳಿನಲ್ಲಿ ಸ್ವಲ್ಪ ಹೊಂಡಮಾಡಿ ಹೇಳಿದಳು. ''ಇಲ್ಲೇ ಮಾಡು.'' ನನ್ನ ಮೂತ್ರದ್ವಾರವನ್ನು ಬೆಂಕಿಕಡ್ಡಿಯ ಮೊನೆಯಷ್ಟೇ ದೊಡ್ಡದಿರುವಂತೆ ಜಿಪ್ಸಿ ಹೆಂಗಸು ಹೊಲಿದಿದ್ದುದರಿಂದ ನನಗೆ ಮೂತ್ರಮಾಡಲು ಬಹಳ ಕಷ್ಟವಾಯಿತು. ಕೆಲವು ದಿವಸಗಳ ಅನಂತರ ಗಾಯದಲ್ಲಿ ರೋಗಾಣುಗಳುಂಟಾಗಿ ನನಗೆ ಜ್ವರ ಬರತೊಡಗಿತು. ಇದರಿಂದಾಗಿ ನನಗೆ ಆಗಾಗ ಪ್ರಜ್ಞೆ ತಪ್ಪುತ್ತಿತ್ತು. ನನ್ನ ತಾಯಿ ನನಗೆ ತಿಂಡಿ ಮತ್ತು ನೀರು ತಂದುಕೊಡುತ್ತಿದ್ದಳು.

ಇಂತಹ ಕ್ರೂರ ಪದ್ಧತಿಯನ್ನು ಯಾಕಾಗಿ ಮಾಡುತ್ತಾರೆ? ಚಿಕ್ಕವಳಾಗಿದ್ದ ನನಗೆ ಆಗ ಸ್ತ್ರೀ ಮತ್ತು ಪುರುಷರ ಸೆಕ್ಸ್ ಸಂಬಂಧ ತಿಳಿದಿರಲಿಲ್ಲ. ಕೆಲವು ದಿವಸ ನರಕ ಯಾತನೆ ಪಟ್ಟ ನಾನು ಹೇಗೋ ಬದುಕಿ ಉಳಿದೆ. ಎಷ್ಟೋ ಮಂದಿ ಹುಡುಗಿಯರು ಈ ಪದ್ಧತಿಯನ್ನು ಪಾಲಿಸುವ ವಿಧಾನದಿಂದಾಗಿ ರಕ್ತಸ್ರಾವನಿಲ್ಲದೆ, ಶಾಕ್‌ನಿಂದ, ಗಾಯದಲ್ಲಿ ರೋಗಾಣುವುಂಟಾಗಿ ಧನುರ್ವಾತದಿಂದ ಸಾಯುತ್ತಿದ್ದರು.

ಮದುವೆ: ನನಗೆ ೧೩. ವರ್ಷವಾದಾಗ ಒಂದು ದಿವಸ ನನ್ನನ್ನು ನನ್ನ ತಂದೆ ಮೆದು ಧ್ವನಿಯಲ್ಲಿ ಕರೆದರು. ನನಗಾಗಲೇ ಸಂಶಯವುಂಟಾಯಿತು. ಯಾಕೆಂದರೆ ಯಾವಾಗಲೂ ಅವನು ಗಡುಸು ಧ್ವನಿಯಲ್ಲೇ ಮಾತನಾಡುತ್ತಿದ್ದ. ''ನಾನು ನಿನಗಾಗಿ ಒಬ್ಬನನ್ನು ಹುಡುಕಿದ್ದೇನೆ'' ಎಂದು ಅವನು ನನ್ನ ಹತ್ತಿರ ಹೇಳಿದನು. ನನಗೆ ಮದುವೆ ಬೇಡವೆಂದು ಹೇಳಿದೆ.

ಮಾರನೆಯ ದಿವಸ ನಾನು ಆಡಿನ ಹಾಲು ಕರೆಯುತ್ತಿದ್ದಾಗ ನನ್ನ ತಂದೆ ನನ್ನನ್ನು ಕರೆದು ಕೋಲೂರಿ ನಡೆಯುತ್ತಿರುವವನೊಬ್ಬನನ್ನು ತೋರಿಸಿ ''ಇವನು ನಿನ್ನನ್ನು ಮದುವೆಯಾಗಲಿರುವವನು'' ಎಂದು ಹೇಳಿದ. ಅವನಿಗೆ ಉದ್ದವಾದ ಬಿಳಿಗಡ್ಡವಿದ್ದು ಕಡಿಮೆಗೆ ೬೦ ವರ್ಷಗಳಾದರೂ ಆಗಿರಬಹುದು. ನಾನು ಅವನನ್ನು ಬೆದರುವ ಕಣ್ಣುಗಳಿಂದ ನೋಡಿ ಅಲ್ಲಿಂದ ಆಡುಗಳ ಬಳಿಗೆ ಹೋದೆ. ನನ್ನ ತಂದೆಗೆ ಅವನು ೫ ಒಂಟೆಗಳನ್ನು ಕೊಡುವುದಾಗಿ ಹೇಳಿದ್ದ. ಹಾಗಾಗಿ ನನ್ನನ್ನು ಅವನಿಗೆ ಮದುವೆಮಾಡಿ ಕೊಡುವುದೆಂದು ನನ್ನ ತಂದೆ ನಿಶ್ಚಯಿಸಿದ್ದ.

ಆ ದಿವಸ ಸಾಯಂಕಾಲ ನಾನು ನನ್ನ ತಾಯಿಯ ಬಳಿಗೆ ಹೋಗಿ ಪಿಸುಮಾತಿನಲ್ಲಿ ಹೇಳಿದೆ ''ಅಮ್ಮಾ, ನಾನಿಲ್ಲಿಂದ ಇವತ್ತೇ ಓಡಿ

ಹೋಗುತ್ತೇನೆ''.

''ಎಲ್ಲಿಗೆ ಹೋಗುತ್ತೀ?''

''ಮೊಗದಿಶುವಿನಲ್ಲಿರುವ ನನ್ನ ಅಕ್ಕನ ಮನೆಗೆ ಹೋಗುತ್ತೇನೆ''.

''ಆಯಿತು. ನೀನೀಗ ಮಲಗು'' ಎಂದು ನನ್ನ ಅಮ್ಮ ಹೇಳಿದಳು.

ನಾನು ನಿದ್ದೆಮಾಡುತ್ತಿದ್ದಾಗ ಅಮ್ಮ ನನ್ನ ಬಳಿ ಬಂದು ನನ್ನನ್ನು ಎಬ್ಬಿಸಿದಳು ''ಬೇಗ ಹೋಗು. ಅವನು ಎಚ್ಚರವಾಗುವ ಮೊದಲೇ ಹೊರಟು ಹೋಗು'' ಎಂದು ಆಕೆ ನನ್ನ ಕಿವಿಯಲ್ಲಿ ಪಿಸುಗುಟ್ಟಿ ಅನಂತರ ಆಕೆ ನನ್ನನ್ನು ದುಃಖದಿಂದ ಬಿಗಿದಪ್ಪಿದಳು. ನಾನು ನನ್ನ ಕಣ್ಣೀರನ್ನು ತಡೆಹಿಡಿದು ಆಕೆಯನ್ನು ಅಪ್ಪಿಕೊಂಡೆ.''ವಾರಿಸ್, ನಿನಗೆ ಒಳ್ಳೆಯ ದಾಗಲಿ, ಜಾಗರೂಕತೆಯಿಂದ ಹೋಗು. ನನ್ನನ್ನು ಮರೆಯಬೇಡ'' ಎಂದು ಹೇಳಿದಳು.

''ಇಲ್ಲ, ಅಮ್ಮ, ನಿನ್ನನ್ನು ಮರೆಯು ವುದಿಲ್ಲ'' ಎನ್ನುತ್ತಾ ನಾನು ಆ ಕತ್ತಲೆಯಲ್ಲಿ ಹೊರಗೆ ಓಡಿದೆ.

ತಲೆಗೆ ಒಂದು ಬಟ್ಟೆಯನ್ನು ಸುತ್ತಿಕೊಂಡು ಬರಿಕಾಲಲ್ಲಿ ನಾನು ಆ ಕಪ್ಪು ಮರುಭೂಮಿ ಯಲ್ಲಿ ಓಡುತ್ತಾ ಹೋದೆ. ಯಾವ ದಿಕ್ಕಿನಲ್ಲಿ ಮೊಗದಿಶು ಇದೆಯೆಂದು ನನಗೆ ಸರಿಯಾಗಿ ತಿಳಿದಿರಲಿಲ್ಲ. ಓಡುತ್ತ ಹೋದವಳು ಮಧ್ಯಾಹ್ನದ ಹೊತ್ತಿಗೆ ಕೆಂಪು ಮರಳಿನ ಜಾಗಕ್ಕೆ ಬಂದೆ. ಹಸಿವೆಯಿಂದ ಮತ್ತು ಬಾಯಾರಿಕೆ ಯಿಂದ ಬಳಲಿದ ನಾನು ಮೆಲ್ಲಗೆ ನಡೆಯುತ್ತಾ ಮುಂದೆ ಹೋದೆ. ಹೀಗೆ ಹೋಗುತ್ತಿರುವಾಗ ದೂರದಿಂದ ನನ್ನನ್ನು ನನ್ನ ತಂದೆ ''ವಾರಿಸ್, ವಾರಿಸ್ ಎಂದು ಕರೆಯುವುದು ಕೇಳಿಸುತ್ತಿತ್ತು. ನನ್ನನ್ನು ಅವನು ಹಿಡಿದರೆ ಖಂಡಿತವಾಗಿಯೂ ಮದುವೆಮಾಡಿ ಬಿಡುತ್ತಾನೆ ಎಂದು ನನಗೆ ಭಯವಾಗುತ್ತಿತ್ತು.

ಮರಳಿನಲ್ಲಿ ಆದ ಹೆಜ್ಜೆ ಗುರುತನ್ನು ನೋಡಿ ನನ್ನ ತಂದೆ ನನ್ನ ಬಳಿ ಬಂದಿದ್ದ. ಆದರೆ ನಾನು ಜೋರಾಗಿ ಓಡುತ್ತಾ ಗುಡ್ಡ ಹತ್ತಿ ಇಳಿದು ಇನ್ನೂ ಮುಂದೆ ಹೋದೆ. ತುಂಬಾ ದೂರ ಹೋದ ನನ್ನನ್ನು ನನ್ನ ತಂದೆಗೆ ಹಿಂಬಾಲಿಸಲು ಸಾಧ್ಯವಾಗಲಿಲ್ಲ. ರಾತ್ರಿ ತನಕ ಓಡಿದ ನಾನು ಒಂದು ಕಡೆ ನಿಂತೆ. ನನ್ನ ಕಾಲಿನಿಂದ ರಕ್ತ ಬರುತ್ತಿತ್ತು. ಹಸಿವಿನಿಂದ ಕಂಗಾಲಾಗಿದ್ದೆ. ಒಂದು ಮರದ ಕೆಳಗೆ ಮಲಗಿ ನಿದ್ರಿಸಿದೆ.

ಬೆಳಿಗ್ಗೆ ಎಚ್ಚರವಾದಾಗ ಸೂರ್ಯನ ಬಿಸಿಲು ನನ್ನ ಕಣ್ಣನ್ನು ಸುಡುತ್ತಿತ್ತು. ಅಲ್ಲಿಂದೆದ್ದು ಪುನಃ ಓಡುತ್ತಾ ಹೋದೆ. ರಾತ್ರಿಯಾದಾಗ ಮರದಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದೆ. ಈ ರೀತಿ ಒಂದು ದಿವಸ ಆಯಾಸದಿಂದ ನಿದ್ರಿಸುತ್ತಿದ್ದಾಗ ಯಾವುದೋ ಸದ್ದು ಕೇಳಿ ಎಚ್ಚರವಾಯಿತು. ಕಣ್ಣು ತೆರೆದಾಗ ನನ್ನ ಎದುರು ಒಂದು ಸಿಂಹ ನಿಂತಿತ್ತು. ಕೆಲವು ದಿವಸದಿಂದ ಉಪವಾಸವಿದ್ದ ನನಗೆ ಕೂಡಲೇ ಅಲ್ಲಿಂದೆದ್ದು ಓಡಲು ಸಾಧ್ಯವಾಗಲಿಲ್ಲ. ನಾನು ಸಾಲಯು ತಯಾರಾದೆ. ಸಿಂಹವನ್ನು ದಿಟ್ಟಿಸಿ ನೋಡತೊಡ 'ಗಿದೆ. ಅದು ನನ್ನನ್ನು ನೋಡಿತು. ಇನ್ನೇನು ಅದು ನನ್ನನ್ನು ಹೊಡೆದು ತಿನ್ನುತ್ತದೆ ಎಂದು ಭಾವಿಸುತ್ತಿದ್ದಂತೆ ಅದು ನನ್ನ ಎದುರು ಅತ್ತೂ ಇತ್ತೂ ಹೋಗಿ ಅನಂತರ ಅಲ್ಲಿಂದ ಹೊರಟು ಹೋಯಿತು. ಜಾಸ್ತಿ ಮಾಂಸವಿರದ ನನ್ನ ಈ ದೇಹ ಬೇಡವೆಂದು ಅದು ಹೊರಟು ಹೋಗಿರಬೇಕು.

ಮೊಗದಿಶು: ತುಂಬಾ ವಾರಗಳ ಅನಂತರ ನಾನು ನನ್ನ ಅಕ್ಕನ ಮನೆಗೆ ಬಂದೆ. ಅವಳಿಗೆ ನನ್ನ ವಿಚಾರವನ್ನೆಲ್ಲ ತಿಳಿಸಿದೆ. ನನ್ನ ಅಕ್ಕನ ಗಂಡ ತುಂಬಾ ಒಳ್ಳೆಯ ಗುಣದವನಾಗಿದ್ದು ಕಷ್ಟಪಟ್ಟು ದುಡಿಯುವವನಾಗಿದ್ದ. ನನ್ನ ಅಕ್ಕ ಆಗ ಮೊದಲ ಬಾರಿಗೆ ಗರ್ಭಿಣಿಯಾಗಿದ್ದಳು.

ಅವಳದು ಎರಡು ಕೋಣೆಯಿರುವ ಮನೆಯಾಗಿತ್ತು. ಮನಸ್ಸಿಲ್ಲದ ಮನಸ್ಸಿನಿಂದ ಆಕೆ ನಾನು ಅಲ್ಲಿರಲು ಒಪ್ಪಿಗೆಯಿತ್ತಳು. ನಾನು ಅಲ್ಲಿ ಕಸಗುಡಿಸಿ, ಬಟ್ಟೆ ಒಗೆದು, ಮನೆಗೆ

ಸಾಮಾನು ತರುವ ಕೆಲಸ ಮಾಡತೊಡಗಿದೆ. ನನ್ನ ಅಕ್ಕನಿಗೆ ತಿಂಗಳು ತುಂಬಿ ಮುದ್ದು ಮುದ್ದಾದ ಮಗಳು ಹುಟ್ಟಿದಳು. ನಾನು ಅಕ್ಕನ ಮಗಳ ಆರೈಕೆ ಮಾಡತೊಡಗಿದೆ.

ಕೆಲವು ಸಮಯ ಹೀಗೆ ಕಳೆಯಲು ನನ್ನ ಅಕ್ಕ ನನ್ನ ಮೇಲೆ ಅಧಿಕಾರ ತೋರಿಸಲು ಪ್ರಾರಂಭಿಸಿದಳು. ಮುಂದೆ ನಾನು ಮೊಗದಿಶು ವಿನಲ್ಲಿರುವ ನನ್ನ ಅತ್ತೆ ಸಹ್ರು ಎಂಬವಳ ಮನೆಗೆ ಹೋದೆ. ಅವಳು ನನಗೆ ಅಲ್ಲಿರಲು ಜಾಗ ಕೊಟ್ಟಳು. ನನಗೆ ಯಾವಾಗಲೂ ನನ್ನ ಅಮ್ಮನ ನೆನಪಾಗುತ್ತಿತ್ತು. ನಾನು ದುಡಿದು ಹಣ ಸಂಪಾದಿಸಿ ಆಕೆಗೆ ಕಳುಹಿಸಬೇಕೆಂದು ತೀರ್ಮಾನ ಮಾಡಿದೆ. ಹಾಗೆ ನಾನು ಕೆಲಸ ಹುಡುಕಿಕೊಂಡು ಒಂದು ಮನೆಕಟ್ಟುವ ಜಾಗಕ್ಕೆ ಹೋಗಿ ಅಲ್ಲಿ ಕೆಲಸಕ್ಕೆ ಸೇರಿದೆ. ಅಲ್ಲಿ ಬೆನ್ನು ಮೂಳೆ ಮುರಿಯುವಂತೆ ಮರಳು ಹೊರಬೇಕಾಗಿತ್ತು. ನನ್ನ ಕೈಯಲ್ಲಿ ಗುಳ್ಳೆ ಬಂದರೂ ಹಣಬೇಕಿದ್ದರೆ ದುಡಿಯ ಬೇಕಾಗಿತ್ತು. ಅಂತೂ ಕಷ್ಟಪಟ್ಟು ೨೦೦೦ ರೂಪಾಯಿ ಉಳಿಸಿ ನನ್ನ ತಾಯಿಗೆ ಪರಿಚಯದವರ ಮೂಲಕ ಕಳುಹಿಸಿದೆ. ಆ ಹಣದಲ್ಲಿ ಒಂದು ಪೈಸೆಯೂ ಆಕೆಗೆ ಸಿಗಲಿಲ್ಲವೆಂದು ಮುಂದೆ ತಿಳಿಯಿತು.

ಒಂದು ದಿವಸ ಲಂಡನ್ನಿನಲ್ಲಿ ಸೋಮಾಲಿಯಾದ ಅಂಬಾಸಿಡರ್ ಆಗಿರುವ ಮೊಹಮ್ಮದ್ ಚಾಮಾ ಫಾರಾ ಎಂಬುವರು ನಮ್ಮಲ್ಲಿಗೆ ಬಂದರು. ಅವರಿಗೆ ನನ್ನ ಇನ್ನೊಬ್ಬ ಅತ್ತೆಯೊಡನೆ ವಿವಾಹವಾಗಿತ್ತು. ನಾನು ಇಲ್ಲಿ ಕೆಲಸ ಮಾಡುತ್ತಿದ್ದುದನ್ನು ನೋಡಿದ ಅವರು ಲಂಡನಿನಲ್ಲಿ ತಮ್ಮ ಮನೆಗೆಲಸಕ್ಕೆ ಒಬ್ಬ ಹುಡುಗಿ ಬೇಕಾಗಿದ್ದಾಳೆಂದು ಹೇಳಿದರು. ನನ್ನ ಅತ್ತೆ ನನ್ನನ್ನು ಅಲ್ಲಿಗೆ ಕಳುಹಿಸಲು ಒಪ್ಪಿಗೆಯಿತ್ತಳು. ಲಂಡನ್ ಬಹಳ ದೊಡ್ಡ ಊರು ಎಂದು ನನಗೆ ತಿಳಿದಿತ್ತು. ಆದರೆ ಅದು ಎಲ್ಲಿದೆ ಎಂದು ನನಗೆ ತಿಳಿದಿರಲಿಲ್ಲ.

ಕೆಲವು ದಿವಸಗಳ ಬಳಿಕ ಅವರು ನನಗೆ ಪಾಸ್‌ಪೋರ್ಟ್ ತಂದು ಕೊಟ್ಟರು. ಅದರಲ್ಲಿ ನನ್ನ ಹೆಸರು ಮತ್ತು ಫೋಟೊ ಇರುವುದನ್ನು ನೋಡಿ ನನಗೆ ಬಹಳ ಆನಂದವಾಯಿತು. ಸಂತೋಷದಿಂದ ನಾನು ನನ್ನ ಅತ್ತೆಯನ್ನು ಬಿಗಿದಪ್ಪಿ ಕೊಂಡು ಆಕೆಯಿಂದ ಬೀಳ್ಕೊಂಡೆ.

ಲಂಡನ್ನಿನಲ್ಲಿ ಪರಿಚಾರಿಕೆ: ಬೆಳಗ್ಗೆ ಲಂಡನ್ನಿನ ವಿಮಾನ ನಿಲ್ದಾಣದಿಂದ ಕಾರಿನಲ್ಲಿ ಅಂಬಾಸಡರ್‌ನ ಮನೆಗೆ ಹೋಗುತ್ತಿರುವಾಗ ರಸ್ತೆಯ ಬದಿಯಲ್ಲಿ ಹಿಮ ಬಿದ್ದಿತ್ತು. ನನಗೆ ಈ ಅಪರಿಚಿತವಾದ ದೇಶದಲ್ಲಿ ಒಬ್ಬಂಟಿಯಾಗಿರ ಬೇಕೆಂದು ಭಯವಾಗುತ್ತಿತ್ತು. ನಾವು ಮನೆಯ ಮುಂಭಾಗಕ್ಕೆ ಬರುತ್ತಿದ್ದಂತೆ ನನ್ನ ಅತ್ತೆ ಮರಿಯಂ ನನ್ನನ್ನು ಒಳಗೆ ಬರಲು ಹೇಳಿದಳು. ಅವಳು ಪಾಶ್ಚಾತ್ಯ ಮಾದರಿಯ ಉಡುಪನ್ನು ಧರಿಸಿದ್ದಳು. ನನಗೆ ಆಯಾಸವಾಗಿದೆ, ನಾನು ನಾಳೆಯಿಂದ ಕೆಲಸ ಮಾಡುತ್ತೇನೆಂದು ಹೇಳಿದೆ. ಅವಳು ನನ್ನನ್ನು ಒಂದು ಮಲಗುವ ಕೋಣೆಗೆ ಕರೆದುಕೊಂಡು ಹೋದಳು. ಅಲ್ಲಿ ಒಂದು ದೊಡ್ಡ ಮಂಚವಿತ್ತು. ಅದು ಹಳ್ಳಿಯಲ್ಲಿ ನಾವು ವಾಸಿಸುವ ಗುಡಿಸಿಲಿನಷ್ಟು ದೊಡ್ಡದಿತ್ತು. ಆ ಮಂಚದಲ್ಲಿ ಮಲಗಿದ ಕೂಡಲೇ ನನಗೆ ನಿದ್ದೆ ಬಂತು.

ಮಾರನೆಯ ದಿವಸ ಬೆಳಗ್ಗೆ ನನ್ನ ಅತ್ತೆ ನನ್ನನ್ನು ಅಡುಗೆ ಕೋಣೆಗೆ ಕರೆದುಕೊಂಡು ಹೋಗಿ ಹರ್ಬಲ್ ಟೀ ಮತ್ತು ತಿಂಡಿಗಳನ್ನು ಮಾಡುವ ವಿಧಾನವನು ಹೇಳಿಕೊಟ್ಟು "ದಿನಾ ಬೆಳಗ್ಗೆ ೬.೩೦ಕ್ಕೆ ನಿನ್ನ ಮಾವನಿಗೆ ತಿಂಡಿ ಮಾಡಿ ಕೊಡಬೇಕು ಮತ್ತು ೭ಗಂಟೆಗೆ ನನ್ನ ಕೋಣೆಗೆ ಕಾಫಿ ತಂದುಕೊಡಬೇಕು ಅನಂತರ ಮಕ್ಕಳಿಗೆ ದೋಸೆಮಾಡಿ ಕೊಡಬೇಕು. ಅವರು ಸರಿಯಾಗಿ ೮ಗಂಟೆಗೆ ತಿಂಡಿ ತಿನ್ನುತ್ತಾರೆ" ಎಂದು ಹೇಳಿದಳು.

ಇದೇ ರೀತಿ ಸಮಯಕ್ಕೆ ಸರಿಯಾಗಿ ಕೆಲಸ ಮಾಡುತ್ತಾ ನಾನು ಅಲ್ಲಿ ನಾಲ್ಕು ವರ್ಷ ಕಳೆದೆ. ನನಗೆ ೧೬ ವರ್ಷವಾದಾಗ ೧೯೮೩

ಡಿಸೆಂಬರ್‌ನಲ್ಲಿ ನನ್ನ ಮಾವನ ತಂಗಿ ತೀರಿ ಹೋದು ದರಿಂದ ಆಕೆಯ ಮಗಳು ಸೋಫಿಯಾ ಇಲ್ಲಿಗೆ ವಾಸಿಸಲು ಬಂದಳು. ಅವಳನ್ನು ಮಾವ ಅಲ್ಲಿ ಪ್ರಾಥಮಿಕ ಶಾಲೆಗೆ ಸೇರಿಸಿದರು. ನಾನು ಅವಳನ್ನು ದಿನಾ ಶಾಲೆಗೆ ಬಿಟ್ಟು ಬರಲು ಹೋಗುತ್ತಿದ್ದೆ.

ಒಂದು ದಿವಸ ಬೆಳಗ್ಗೆ ಎಂದಿನಂತೆ ನಾನು ಶಾಲೆಯ ಬಳಿ ಬಂದಾಗ ಒಬ್ಬ ಅಪರಿಚಿತ ನನ್ನನ್ನೇ ನೋಡುತ್ತಿದ್ದ. ಬಿಳಿಯವನಾದ ಅವನಿಗೆ ೪೦ ವರ್ಷ ವಯಸ್ಸಾಗಿರಬಹುದು. ಕೂದಲನ್ನು ಕುದುರೆಯಬಾಲದಂತೆ ಕಟ್ಟಿದ್ದ. ಅವನು ಅವನ ಮಗಳನ್ನು ಶಾಲೆಗೆ ಕರೆದು ಕೊಂಡು ಬಂದಿದ್ದ. ಸೋಫಿಯಾಳನ್ನು ಶಾಲೆಯಲ್ಲಿ ಬಿಟ್ಟು ನಾನು ಹಿಂದಿರುಗುತ್ತಿದ್ದಾಗ ಅವನು ನನ್ನ ಬಳಿ ಬಂದು ಇಂಗ್ಲಿಷ್‌ನಲ್ಲಿ ಮಾತನಾಡತೊಡಗಿದ. ಭಾಷೆ ತಿಳಿಯದ ನಾನು ಭಯದಿಂದ ಓಡುತ್ತಾ ಮನೆಗೆ ಬಂದೆ.

ಅಂದಿನಿಂದ ಪ್ರತಿಸಲ ನನ್ನನ್ನು ಕಂಡಾಗಲೂ ಆತ ಪ್ರೀತಿಯಿಂದ ನಗುತ್ತಿದ್ದ ಮತ್ತು ಅಲ್ಲಿಂದ ಹೊರಟು ಹೋಗುತ್ತಿದ್ದ. ಒಂದು ದಿವಸ ಅವನು ನನಗೆ ಕಾರ್ಡ್ ಕೊಟ್ಟ. ಅದನ್ನು ನಾನು ನನ್ನ ಜೇಬಿನಲ್ಲಿರಿಸಿಕೊಂಡೆ. ಮನೆಗೆ ಹೋದ ಬಳಿಕ ನನ್ನ ಅತ್ತೆಯ ಮಗಳಿಗೆ ಕಾರ್ಡನ್ನು ತೋರಿಸಿ ಇದರಲ್ಲಿ ಏನು ಬರೆದಿದೆ? ಎಂದು ಕೇಳಿದೆ. ''ಇವನೊಬ್ಬ ಫೋಟೋಗ್ರಾಫರ್'' ಎಂದು ಅವಳು ಹೇಳಿದಳು.

ನನ್ನ ಮಾವ ಮೊಹಮ್ಮದ್‌ನ ಕೆಲಸದ ಅವಧಿ ಮುಗಿಯಲು ಅವನು ಕುಟುಂಬ ಸಹಿತ ಊರಿಗೆ ಹೋಗಲು ನಿಶ್ಚಯಿಸಿದ. ನನಗೆ ಆ ಊರಲ್ಲಿ ಚೆನ್ನಾಗಿ ದುಡಿದು ಹಣ ಮಾಡಿ ನನ್ನ ತಾಯಿಗೆ ಒಂದು ಒಳ್ಳೆಯ ಮನೆ ಖರೀದಿಸಬೇಕೆಂಬ ಆಸೆಯಿತ್ತು. ಮೊಹಮ್ಮದ್ ಮಾವ ಅವರೆಲ್ಲರ ಪಾಸ್‌ಪೋರ್ಟ್‌ಗಳ ಜತೆ ಇಟ್ಟುಕೊಳ್ಳಲು ನನ್ನ ಪಾಸ್‌ಪೋರ್ಟನ್ನು ಕೇಳಿದಾಗ ನಾನು ನನ್ನ ಪಾಸ್‌ಪೋರ್ಟ್ ಕಾಣಿಸುವುದಿಲ್ಲವೆಂದು ಹೇಳಿದೆ. ನಿಜಕ್ಕೂ ನಾನದನ್ನು ಹಿತ್ತಲಲ್ಲಿ ಅಡಗಿಸಿಟ್ಟಿದ್ದೆ.

''ನಾನು ನಿಮ್ಮೊಂದಿಗೆ ಬರುವುದಿಲ್ಲ. ಇಲ್ಲಿಯೇ ಇರುತ್ತೇನೆ'' ಎಂದು ಹೇಳಿದೆ.

ಅವರು ಹೋಗುವ ದಿವಸ ನನ್ನ ಹತ್ತಿರ ಏನೂ ಹೇಳದೆ ಎಲ್ಲರೂ ಹಾಗೆಯೇ ಹೊರಟು ಹೋದರು. ಎಲ್ಲರೂ ಹೋದಾಗ ನನಗೆ ಸ್ವಲ್ಪ ಭಯವಾಗತೊಡಗಿತು. ಆದರೂ ಧೈರ್ಯದಿಂದ ನಾನು ನನ್ನ ಚೀಲವನ್ನು ತೆಗೆದುಕೊಂಡು ಪಾಸ್‌ಪೋರ್ಟನ್ನು ಜೇಬಿನಲ್ಲಿ ಇರಿಸಿಕೊಂಡು ಮನೆಯಿಂದ ಹೊರಗೆ ಹೊರಟೆ.

ಕನ್ನಡಿ ನೋಡು: ನಾನು ಒಂದು ಅಂಗಡಿಗೆ ಹೋದೆ. ಅಲ್ಲಿ ಒಬ್ಬಳು ರೂಪವತಿಯಾದ ಆಫ್ರಿಕನ್ ಹೆಂಗಸು ಸ್ವೆಟರನ್ನು ಪರೀಕ್ಷಿಸುತ್ತಿದ್ದಳು. ಅವಳೊಡನೆ ನಾನು ಸೋಮಾಲಿ ಭಾಷೆಯಲ್ಲಿ ಮಾತನಾಡಿದೆ. ಅವಳ ಹೆಸರು ಹಲ್ವ. ಅವಳಿಗೆ ನನ್ನ ವಿಚಾರವನ್ನು ತಿಳಿಸಿದೆ. ಅವಳು ವೈ.ಡಬ್ಲ್ಯು.ಸಿ.ಎ. ಯಲ್ಲಿರುವ ತನ್ನ ಕೋಣೆಯಲ್ಲಿ ಆ ರಾತ್ರಿ ನಾನು ಇರಬಹುದು ಎಂದು ಹೇಳಿದಳು.

ಕೆಲವು ದಿವಸ ನಾನು ಅವಳ ಜತೆಯಲ್ಲಿದ್ದೆ. ಅನಂತರ ಅಲ್ಲೇ ಒಂದು ಪ್ರತ್ಯೇಕ ಕೋಣೆ ದೊರಕಿಸಿಕೊಂಡೆ. ಮುಂದೆ ಕೆಲಸ ಹುಡುಕಲು ಹೊರಟೆ. ಮೆಕ್‌ಡೊನಾಲ್ಡ್‌ನಲ್ಲಿ ನನಗೆ ಪರಿಚಾರಿಕೆಯ ಕೆಲಸ ದೊರೆಯಿತು. ನನಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ. ಇಂಗ್ಲಿಷ್ ಕಲಿಯಲು ನಾನು ಉಚಿತವಾಗಿ ಕಲಿಸಿಕೊಡುವ ಶಾಲೆಗೆ ಹೋಗಿ ಇಂಗ್ಲಿಷ್ ಓದಲು ಮತ್ತು ಬರೆಯಲು ಕಲಿತೆ.

ಕೆಲವೊಮ್ಮೆ ಹಲ್ವ ನನ್ನನ್ನು ನೈಟ್ ಕ್ಲಬ್‌ಗೆ ಕರೆದುಕೊಂಡು ಹೋಗುತ್ತಿದ್ದಳು. ಅಲ್ಲಿ ಬಿಳಿ ಮತ್ತು ಕಪ್ಪು ಗಂಡಸರೊಂದಿಗೆ ಮತ್ತು ಹೆಂಗಸರೊಂದಿಗೆ ಮಾತನಾಡತೊಡಗಿದೆ.

ಹೀಗೆ ಅಲ್ಲಿಯ ಜನರೊಡನೆ ಸುಲಭವಾಗಿ ಹೊಂದಿಕೊಂಡೆ. ಒಂದು ದಿವಸ ಸಾಯಂಕಾಲ ನಾನು ನನ್ನ ಪಾಸ್‌ಪೋರ್ಟ್‌ನೊಳಗಿಟ್ಟ ಫೋಟೋಗ್ರಾಫರ್‌ನ ಕಾರ್ಡನ್ನು ಹಲ್ವಗೆ ತೋರಿಸಿದೆ. ಆತನ ಹೆಸರು ಮೈಕ್‌ಗೋಸ್. ಹಲ್ವ ನನಗೆ ಆ ಸ್ಟುಡಿಯೊ ಎಲ್ಲಿದೆ ಎಂದು ತೋರಿಸಿದಳು.

ಮಾರನೆ ದಿವಸ ನಾನು ಆ ಸ್ಟುಡಿಯೋಗೆ ಮೈಕ್ ಗೋಸ್‌ನನ್ನು ಕಾಣಲು ಹೋದೆ. ಬಾಗಿಲು ತೆರೆದು ಒಳಗೆ ಹೋದಾಗ ನನಗೆ ಬೇರೆ ಯಾವುದೋ ಒಂದು ಜಗತ್ತಿಗೆ ಹೊಕ್ಕಂತಾಯಿತು ಅಲ್ಲಿ ಎಲ್ಲಾ ಕಡೆಯಲ್ಲೂ ರೂಪವತಿಯರಾದ ಹುಡುಗಿಯರ ಫೋಟೋ ಗಳನ್ನು ತೂಗಾಡಿಸಿದ್ದರು. ನನ್ನನ್ನು ನೋಡಿದ ಮೈಕ್ ನನ್ನ ಬಳಿ ಬಂದು ''ನಿನ್ನದೊಂದು ಫೋಟೋ ತೆಗೆಯಲೇ?'' ಎಂದು ಕೇಳಿದ. ನಾನು ಅಲ್ಲಿದ್ದ ಒಂದು ಫೋಟೊವನ್ನು ತೋರಿಸಿ ಈ ರೀತಿಯ ಫೋಟೊವೇ ಎಂದು ಕೇಳಿದೆ. ''ಹೌದು. ನಿನಗೆ ಸುಂದರ ರೂಪವಿದೆ'' ಎಂದು ಅವನು ಹೇಳಿದ.

ಎರಡು ದಿವಸಗಳ ಬಳಿಕ ನಾನು ಪುನಃ ಆ ಸ್ಟುಡಿಯೊಗೆ ಹೋದೆ. ಮೇಕ್‌ಅಪ್ ಮಾಡುವ ಹೆಂಗಸು ನನ್ನನ್ನು ಕೂರಿಸಿ ಹತ್ತಿ, ಬಾಚಣಿಗೆ, ಸ್ಪಾಂಜ್, ಕ್ರೀಂ, ಪೆಯಿಂಟ್, ಪೌಡರ್ ಮುಂತಾದುವನ್ನು ತೆಗೆದುಕೊಂಡು ನನ್ನನ್ನು ಅಲಂಕರಿಸ ತೊಡಗಿದಳು.

''ಕನ್ನಡಿಯಲ್ಲಿ ನೋಡು'' ಎಂದು ಆ ಹೆಂಗಸು ನನ್ನಿಂದ ಸ್ವಲ್ಪ ದೂರ ನಿಂತು ಹೇಳಿದಳು. ಕನ್ನಡಿಯಲ್ಲಿ ನೋಡಿದೆ. ಮೇಕ್‌ಅಪ್‌ನಿಂದ ನನ್ನ ಮುಖ ಚಿನ್ನದ ಬಣ್ಣದಂತೆ, ಸಿಲ್ಕಿನಂತೆ ಮಾರ್ಪಾಡಾಗಿತ್ತು. ಆ ಹೆಂಗಸು ನನ್ನನ್ನು ಮೈಕ್‌ನ ಬಳಿ ಕರೆದುಕೊಂಡು ಹೋದಳು. ಮೈಕ್ ನನ್ನನ್ನು ಒಂದು ಸ್ಟೂಲಿನ ಮೇಲೆ ಕುಳಿತುಕೊಳ್ಳಲು ಹೇಳಿದ. ನಾನು ಕುಳಿತ ನಂತರ ಅವನು ನನ್ನ ಫೋಟೊ ತೆಗೆದ. ಕೆಮರಾದಿಂದ ಪೇಪರ್ ತೆಗೆದು ತೋರಿಸಿದ. ಅದರಲ್ಲಿದ್ದ ಫೋಟೋ ನಾನೆಂದು ಗುರುತಿಸಲು ನನಗೆ ಸಾಧ್ಯವಾಗಲಿಲ್ಲ. ನನ್ನ ಆ ಫೋಟೋ ಗೋಡೆಯಲ್ಲಿ ತೂಗಾಡಿಸಿದ್ದ ಒಬ್ಬ ರೂಪವತಿಯ ಫೋಟೋದಂತಿತ್ತು. ಪರಿಚಾರಿಕೆಯಾಗಿದ್ದ ನಾನು ಈಗ ಮೋಡೆಲ್ ಆಗಿದ್ದೆ.

ಶಸ್ತ್ರ ಚಿಕಿತ್ಸೆ : ಕೆಲವು ದಿವಸದ ನಂತರ ನನ್ನ ಫೋಟೊವನ್ನು ನೋಡಿದ ಮೊಡೆಲ್ಲಿಂಗ್ ಏಜೆನ್ಸಿಯಲ್ಲಿರುವ ಒಬ್ಬಾಕೆ ನನ್ನನ್ನು ಇನ್ನೊಂದು ಕಡೆಗೆ ಕೆಲಸಕ್ಕೆ ಬರುವಂತೆ ಹೇಳಿದಳು. ''ಎಂತಹ ಕೆಲಸ ?'' ಎಂದು ನಾನು ಕೇಳಿದೆ.

''ಪಿರೆಲ್ಲಿ ಕೆಲಂಡರಿಗಾಗಿ ಕೆಲಸಮಾಡಬೇಕು'' ಎಂದು ಅವಳು ಹೇಳಿದಳು. ಆ ಕೆಲಸಕ್ಕೆ ಹೋಗಲು ನಾನು ಒಪ್ಪಿಗೆಯಿತ್ತೆ.

ಅಲ್ಲಿಗೆ ಹೋದಾಗ ನನ್ನಂತೆ ತುಂಬಾ ಮಂದಿ ಮಾಡೆಲ್‌ಗಳು ಕೆಲಸಕ್ಕೆ ಬಂಧಿರುವುದು ಕಾಣಿಸಿತು. ಫೋಟೊಗ್ರಾಫರನೊಬ್ಬ ನನಗೆ ಚಹಾ ತಂದುಕೊಟ್ಟು ತನ್ನ ಬಳಿಯಿರುವ ಕೆಲವು ಕೆಲಂಡರ್‌ಗಳನ್ನು ತೋರಿಸಿದ. ಅದರ ಪ್ರತಿಯೊಂದು ಪುಟದಲ್ಲಿಯೂ ರೂಪವತಿ ಯಾದ ಒಬ್ಬ ಹೆಂಗಸು ಬೇರೆ ಬೇರೆ ಭಂಗಿಯಲ್ಲಿ ನಿಂತಿರುವ ಚಿತ್ರವಿತ್ತು. ''ಈ ವರ್ಷದ ಕೆಲಂಡರಿನಲ್ಲಿ ಆಫ್ರಿಕದ ಹೆಂಗಸಿನ ಚಿತ್ರಗಳನ್ನು ಹಾಕಬೇಕೆಂದಿದ್ದೇವೆ'' ಎಂದು ಅವನು ಹೇಳಿದ. ಕೊನೆಗೂ ನನ್ನ ಫೋಟೊ ಕೆಲಂಡರಿನ ಮೊದಲ ಪುಟದಲ್ಲಿ ಪ್ರಿಂಟಾಯಿತು.

ಮೊಡಲ್ ಆಗಿ ನಾನು ಪೇರಿಸ್, ಮಿಲಲ್ ಮತ್ತು ನ್ಯೂಯಾರ್ಕ್ ಮೊದಲಾದ ಕಡೆಗಳಿಗೆ ಹೋಗಿ ಕೆಲಸ ಮಾಡಿ ಹೆಸರು ಗಳಿಸಿದೆ. ಬೇಕಾದಷ್ಟು ಹಣವನ್ನೂ ಸಂಪಾದಿಸಿದೆ. ಫೇಷನ್ ಮೆಗಸಿನ್‌ಗಳಲ್ಲೂ ನನ್ನ ಚಿತ್ರ ಬರತೊಡಗಿತು. ಆದರೆ ಇಷ್ಟೆಲ್ಲಾ ಹೆಸರುವಾಸಿಯಾಗಿ ಜಯಗಳಿಸಿದರೂ ನನಗೆ ಹಿಂದೆ

ಆದ ಒಂದು ಗಾಯದ ನೋವು ಇನ್ನೂ ಹಾಗೆಯೇ ಇತ್ತು. ನನ್ನ ಮೂತ್ರದ್ವಾರವನ್ನು ತುಂಬಾ ಚಿಕ್ಕದು ಮಾಡಿ ಹೊಲಿದಿದ್ದ ಕಾರಣ ಮೂತ್ರ ಮಾಡುವಾಗ ಅದು ಬಿಂದು ಬಿಂದುವಾಗಿ ಮಾತ್ರ ಹೋಗುತ್ತಿತ್ತು. ಹಾಗಾಗಿ ನನಗೆ ಒಮ್ಮೆ ಮೂತ್ರ ಮಾಡಲು ಹತ್ತು ಮಿನಿಟು ಬೇಕಾಗುತ್ತಿತ್ತು. ಇದಲ್ಲದೆ ತಿಂಗಳ ಮುಟ್ಟಿನ ಸಮಯದಲ್ಲಿ ನನಗೆ ತುಂಬಾ ಕಷ್ಟವಾಗುತ್ತಿತ್ತು. ಇದರಿಂದಾಗ ಪ್ರತಿ ತಿಂಗಳಲ್ಲಿ ಕೆಲವು ದಿವಸ ಗೊತ್ತುಪಡಿಸಿದ ಕೆಲವು ಕಾರ್ಯಕ್ರಮಗಳಿಗೆ ನಾನು ಹೋಗದೆ ಹಾಸಿಗೆಯಲ್ಲಿ ಬಿದ್ದಿರಬೇಕಾಗುತ್ತಿತ್ತು. ಆ ನೋವನ್ನು ಸಹಿಸಲು ಸಾಧ್ಯವಾಗದೆ ನಾನು ಆ ದಿವಸಗಳಲ್ಲಿ ಸಾವನ್ನೇ ನಿರೀಕ್ಷಿಸುತ್ತಿದ್ದೆ.

ನನ್ನ ಮಾವನ ಮನೆಯಲ್ಲಿದ್ದಾಗಲೇ ನನಗೆ ಈ ಸಂಕಟದ ಸಮಯ ಪ್ರಾರಂಭವಾಗಿತ್ತು. ಒಂದು ದಿವಸ ನಾನು ಎಂದಿನಂತೆ ಅಡುಗೆಕೋಣೆಯಿಂದ ಚಹಾದ ಟ್ರೇಯನ್ನು ಊಟದ ಮೇಜಿನ ಮೇಲಿರಿಸಲು ತೆಗೆದುಕೊಂಡು ಹೋಗುತ್ತಿದ್ದಾಗ ನನಗೆ ಪ್ರಜ್ಞೆತಪ್ಪಿ ನನ್ನ ಕೈಯಿಂದ ಟ್ರೇ ಕೆಳಗೆ ಬಿದ್ದಿತ್ತು. ಮತ್ತು ಪಿಂಗಾಣಿ ಪಾತ್ರೆ ಪುಡಿಪುಡಿಯಾಗಿತ್ತು. ನನಗೆ ಪ್ರಜ್ಞೆ ಬಂದ ಬಳಿಕ ನನ್ನ ಅತ್ತೆ ಮರಿಯಂ ನನ್ನನ್ನು ಡಾಕ್ಟರರ ಬಳಿ ಕರೆದುಕೊಂಡು ಹೋಗಿದ್ದಳು.

ಆದರೆ ಡಾಕ್ಟರರಿಗೆ ಹಿಂದೆ ನನ್ನ ದೇಹದ ಮೇಲಾಗಿದ್ದ ಗಾಯದ ವಿಷಯವಾಗಿ ನಾನು ಏನೂ ಹೇಳಿರಲಿಲ್ಲ. ಅವರು ನನ್ನ ದೇಹವನ್ನು ಪರೀಕ್ಷಿಸಿ ನೋವಿನ ನಿವಾರಣೆಗಾಗಿ ಗರ್ಭನಿರೋಧಕ ಮಾತ್ರೆಗಳನ್ನು ಕೊಟ್ಟಿದ್ದರು. ಆದರೆ ಅವನ್ನು ತೆಗೆದುಕೊಳ್ಳಲು ಪ್ರಾರಂಭಿಸಿದಾಗ ನನ್ನ ದೇಹದಲ್ಲಿ ತೀವ್ರವಾದ ಮತ್ತು ವಿಕಾರವಾದ ಬದಲಾವಣೆಗಳುಂಟಾದುವು. ಅನಂತರ ನಾನು ಆ ಮಾತ್ರೆಗಳನ್ನು ನಿಲ್ಲಿಸಿದ್ದೆ.

ಮುಂದೆ ನೋವು ಇನ್ನಷ್ಟು ಜಾಸ್ತಿಯಾದಾಗ ನನ್ನ ಚಿಕಿತ್ಸೆಗಾಗಿ ಬೇರೊಬ್ಬ ಡಾಕ್ಟರರ ಆವಶ್ಯಕತೆಯಿದೆಯೆಂದು ನಾನು ಅತ್ತೆ ಬಳಿ ಹೇಳಿದ್ದೆ. ಆದರೆ ಆಕೆ ''ಬೇಡ, ಇನ್ನೊಬ್ಬರಲ್ಲಿಗೆ ಹೋದರೂ ನಿನಗಾಗಿರುವ ತೊಂದರೆಯನ್ನು ಹೇಳಲು ಸಾಧ್ಯವಿದೆಯೇ? ಎಂದು ಆಕೆ ಕೇಳಿದ್ದಳು.

''ಇಲ್ಲ. ಆದರೆ ನನಗೆ ಈ ನೋವು ನಿಲ್ಲುವಂತಾಗಬೇಕು'' ಎಂದು ನಾನು ಹೇಳಿದ್ದೆ.

ಈ ಬಿಳಿ ಜನರ ಹತ್ತಿರ ಆಫ್ರಿಕದ ಹುಡುಗಿಯರ ಮೇಲೆ ನಡೆಸುವ ಕ್ರೂರ ಪದ್ಧತಿಯನ್ನು ವಿವರಿಸಿ ಹೇಳಲು ಸಾಧ್ಯವಿಲ್ಲವೆಂದು ಅತ್ತೆಗೆ ತಿಳಿದಿತ್ತು. ಅಂತೂ ಪ್ರತಿ ತಿಂಗಳೂ ಆ ಒಂದು ಅವಧಿಯಲ್ಲಿ ಕಷ್ಟವನ್ನು 'ಸಹಿಸುತ್ತಾ ತಿಂಗಳಲ್ಲಿ ೮ ದಿವಸ ಯಾವ ಕೆಲಸಕ್ಕೂ ಪ್ರಯೋಜನವಿಲ್ಲದಂತಿರಬೇಕು ಎಂದೇ ಅಭಿಪ್ರಾಯಪಟ್ಟಿದ್ದೆ.

ಆದರೆ ಈಗ ಆ ರೀತಿ ಕಷ್ಟಪಡುವುದು ಅವಶ್ಯವಿಲ್ಲವೆಂದು ನನಗೆ ಅನಿಸತೊಡಗಿತು. ಹಾಗಾಗಿ ಡಾಕ್ಟರ್ ಮೈಕಲ್ ಮಾಕ್ರಸ್ ಎಂಬುವರ ಆಫೀಸಿಗೆ ಹೋಗಿ ಹೇಳಿದೆ ''ಒಂದು ವಿಷಯ ನನಗೆ ನಿಮ್ಮ ಬಳಿ ಹೇಳಲು ಸಾಧ್ಯವಾಗುತ್ತಿಲ್ಲ. ನಾನು ಆಫ್ರಿಕದ ಸೋಮಾಲಿಯಾ ಹೆಂಗಸು. ಅಲ್ಲಿ ನನಗೆ..'' ನನ್ನ ಮಾತು ಪೂರ್ತಿಯಾಗುವ ಮೊದಲೇ ಅವರು ಹೇಳಿದರು'' ನೀನು ಏನೂ ಭಯಪಡಬೇಡ. ನಾನು ನಿನ್ನನ್ನು ಪರೀಕ್ಷಿಸುತ್ತೇನೆ''.

ನರ್ಸು ನನ್ನನ್ನು ಕರೆದು ನನ್ನ ಬಟ್ಟೆಯನ್ನು ತೆಗೆದು ಒಂದು ಗೌನು ತೊಡಿಸಿದಳು. ನಂತರ ಡಾಕ್ಟರ್ ಹೇಳಿದಂತೆ ನರ್ಸು ಒಬ್ಬ ಸೋಮಾಲಿಯಾ ಭಾಷೆ ತಿಳಿದಿದ್ದವನನ್ನು ಕರೆದುಕೊಂಡು ಬಂದಳು. ಡಾಕ್ಟರ್ ಮಾಕ್ರಸ್ ಅವನೊಡನೆ ಹೇಳಿದರು.''ಅವಳನ್ನು ಈ ರೀತಿಯಾಗಿ ಯಾಕೆ ಮಾಡಿದ್ದಾರೆ? ಇಷ್ಟು ದಿವಸ ಅವಳು ಇದನ್ನು ಹೇಗೆ ಸಹಿಸಿಕೊಂಡಿದ್ದಳು? ನಾನು ಇದನ್ನು ಶಸ್ತ್ರಚಿಕಿತ್ಸೆಯಿಂದ ಸರಿಪಡಿಸುತ್ತೇನೆ''.

ಇದನ್ನು ಕೇಳಿ ಆ ಸೋಮಾಲಿ ಮನುಷ್ಯನಿಗೆ ಬೇಸರವಾಯಿತು. ''ಇದನ್ನು ತೆಗೆದರೆ ನಮ್ಮ ಪದ್ಧತಿಗೆ ವಿರೋಧವಾಗುತ್ತದೆ. ನಿನ್ನ ಕುಟುಂಬದವರಿಗೆ ನೀನು ಈ ರೀತಿ ಮಾಡಿಸುತ್ತಿರುವಿಯೆಂದು ತಿಳಿದಿದೆಯೇ?'' ಎಂದು ಅವನು ನನ್ನನ್ನು ಕೇಳಿದ. ಅವನು ಹೇಳಿದ ''ಮೊದಲು ನಾನು ಈ ವಿಚಾರವನ್ನು ಅವರೊಡನೆ ಚರ್ಚೆ ಮಾಡಿ ಅನಂತರ ನನ್ನ ಅಭಿಪ್ರಾಯ ತಿಳಿಸುತ್ತೇನೆ''

ಅದೇನೂ ಬೇಕಾಗಿಲ್ಲವೆಂದು ನಾನು ಹೇಳಿದೆ. ಈ ಆಫ್ರಿಕದ ಮನುಷ್ಯನಿಂದ ಯಾವ ಪ್ರಯೋಜನವೂ ಇಲ್ಲವೆಂದು ನನಗನಿಸಿತು. ಹೀಗಿದ್ದರೂ ಅನಂತರ ಡಾಕ್ಟರ್ ಮಾಕ್ರಸ್‌ರಿಂದ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ನನಗೆ ಒಂದು ವರ್ಷವೇ ಹಿಡಿಯಿತು. ಆದರೆ ಈ ಶಸ್ತ್ರಚಿಕಿತ್ಸೆಯಿಂದ ನನಗೆ ತುಂಬಾ ಉಪಕಾರವಾಯಿತು. ''ಈ ರೀತಿ ತೊಂದರೆಗೊಳಗಾಗಿರುವಳು ನೀನು ಮಾತ್ರವಲ್ಲ. ಸುಡಾನ್, ಈಜಿಪ್ಟ್ ಮತ್ತು ಸೋಮಾಲಿಯಾದಿಂದ ಬಂದ ತುಂಬಾ ಮಂದಿ ಹೆಂಗಸರು ಈ ತೊಂದರೆಗೆ ಒಳಗಾಗಿದ್ದಾರೆ. ಕೆಲವು ಹೆಂಗಸರು ಗರ್ಭಿಣಿಯರಾದ ಮೇಲೆ ಇನ್ನೂ ಹೆಚ್ಚು ಕಷ್ಟಪಡಬೇಕಾಗುತ್ತದೆ. ಅವರಲ್ಲಿ ಬಹಳ ಮಂದಿ ಅವರ ಗಂಡಂದಿರ ಒಪ್ಪಿಗೆ ಪಡೆಯದೇನೇ ನನ್ನ ಬಳಿ ಬಂದಿದ್ದರು. ನನ್ನಿಂದಾದ ಸಹಾಯವನ್ನು ನಾನು ಅವರಿಗೆ ಮಾಡಿದ್ದೆ'' ಎಂದು ಡಾಕ್ಟರ್ ಮಾಕ್ರಸ್ ಹೇಳಿದರು.

ಶಸ್ತ್ರಚಿಕಿತ್ಸೆಯಾದ ೩ ವಾರಗಳ ನಂತರ ಟಾಯ್ಲೆಟ್‌ನಲ್ಲಿ ಕುಳಿತ ನನಗೆ ಸರಾಗವಾಗಿ ಆದ ಕ್ರಿಯೆಯಿಂದ ತುಂಬಾ ಸಂತೋಷವಾಯಿತು. ಇದರಿಂದಾಗಿ ನನಗೆ ಎಷ್ಟು ಸ್ವಾತಂತ್ರ್ಯ ಸಿಕ್ಕಿತೆಂದು ವಿವರಿಸಲು ಸಾಧ್ಯವಿಲ್ಲ.

ಮರಳಿ ಸೋಮಾಲಿಯಾಕ್ಕೆ : ೧೯೯೫ರಲ್ಲಿ ಬಿಬಿಸಿಯವರು ನನ್ನ ಜೀವನದ ಮೇಲೆ ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಲು ನಿಶ್ಚಯಿಸಿದರು. ನನ್ನ ಮೇಲೆ ಚಿತ್ರ ತಯಾರಿಸುವ ಮೊದಲು ನನ್ನನ್ನು ನೀವು ಒಮ್ಮೆ ಸೋಮಾಲಿಯಾಕ್ಕೆ ಕರೆದುಕೊಂಡು ಹೋಗಿ ನನ್ನ ತಾಯಿಯನ್ನು ಕಂಡುಹಿಡಿಯಲು ಸಹಾಯಮಾಡಬೇಕೆಂದು ನಾನು ನಿರ್ದೇಶಕ ಗೆರ್ರಿಪೊಮರೊಗೆ ಹೇಳಿದೆ. ಇದಕ್ಕೆ ಅವರು ಒಪ್ಪಿಗೆಯಿತ್ತರು.

ಬಿಬಿಸಿಯ ಕೆಲಸಗಾರರು ಆಫ್ರಿಕದಲ್ಲಿ ನನ್ನ ತಾಯಿಯನ್ನು ಹುಡುಕತೊಡಗಿದರು. ನನ್ನ ಕುಟುಂಬ ಸಾಮಾನ್ಯವಾಗಿ ಯಾವ ಯಾವ ಜಾಗದಲ್ಲೆಲ್ಲ ವಾಸಿಸಲು ಹೋಗುತ್ತಿರುತ್ತಾರೆಂದು ನಾನು ಭೂಪಟದಲ್ಲಿ ತೋರಿಸಿದೆ. ಅಲ್ಲದೆ ನನ್ನ ಕುಟುಂಬದವರ ಹೆಸರನ್ನೂ ಹೇಳಿದೆ.

ಮರುಭೂಮಿಯಲ್ಲಿ ವಾಸಿಸುತ್ತಿದ್ದ ತುಂಬಾ ಮಂದಿ ಹೆಂಗಸರು ನಾನು ಅವಳ ತಾಯಿ ಎಂದು ಹೇಳತೊಡಗಿದರು. ನಿನ್ನನ್ನು ನಿನ್ನ ತಾಯಿ ಏನಾದರೂ ಬೇರೆ ಹೆಸರಿನಲ್ಲಿ ಕರೆಯುತ್ತಿದ್ದಲ್ಲಿ ಆ ಹೆಸರನ್ನು ತಿಳಿದವರು ನಿನ್ನ ತಾಯಿ ಎಂದು ಸಮ್ಮತಿಸಬಹುದು ಎಂದು ಗೆರ್ರಿ ಹೇಳಿದರು. ನನ್ನ ತಾಯಿ ನನ್ನನ್ನು ಅವದೊಲ್ ಎಂದು ಕರೆಯುತ್ತಿದ್ದಳು ಎಂಬುದನ್ನು ನಾನು ಅವರಿಗೆ ತಿಳಿಸಿದೆ. ಆ ಹೆಸರನ್ನು ಅಲ್ಲಿ ಬೇರೆ ಯಾರೂ ತಿಳಿದಿರಲಿಲ್ಲ. ಕೆಲವು ದಿವಸದ ತರುವಾಯ ನಾವು ವಿಮಾನದಲ್ಲಿ ಸೋಮಾಲಿಯಾ ಮತ್ತು ಇಥಿಯೋಪಿಯಾದ ಗಡಿ ಪ್ರದೇಶದಲ್ಲಿರುವ ಗಲಡಿ ಎಂಬಲ್ಲಿಗೆ ಬಂದೆವು. ಅಲ್ಲಿಯ ಮರಳನ್ನು ಕಂಡು ನನಗೆ ನನ್ನ ಬಾಲ್ಯ ಜೀವನದ ನೆನಪಾಯಿತು. ನಾನು ಸಂತೋಷದಿಂದ ಆ ಮರಳಿನಲ್ಲಿ ಓಡಾಡಿದೆ. ಅಲ್ಲೆಲ್ಲಾ ನನ್ನ ತಾಯಿಗಾಗಿ ಹುಡುಕಾಡಿದೆವು. ಇಸ್ಮಾಯಿಲ್ ಎಂಬುವನು ನಮ್ಮ ಬಳಿ ಬಂದು ತಾನು ನನ್ನ ತಂದೆಯ ಸ್ನೇಹಿತನೆಂದು ಹೇಳಿದ. ಆಗ ನನಗೆ ಚಿಕ್ಕವಳಾಗಿದ್ದಾಗ ಆತನನ್ನು ನೋಡಿದ ನೆನಪಾಯಿತು. ಅವನಿಗೆ ಬಿಬಿಸಿಯವರು ಹಣ ಕೊಟ್ಟು ನನ್ನ ತಾಯಿಯಿರುವ ಜಾಗವನ್ನು

ತೋರಿಸಬೇಕೆಂದು ಹೇಳಿದರು.

೩ ದಿವಸಗಳ ಬಳಿಕ ಅವನು ಒಬ್ಬ ಹೆಂಗಸನ್ನು ಕರೆದುಕೊಂಡು ಬಂದು ಇವಳೇ ನಿನ್ನ ಅಮ್ಮ ಎಂದು ಹೇಳಿದನು. ಇಸ್ಮಾಯಿಲ್‌ನ ವಾಹನದಿಂದ ಆ ಹೆಂಗಸು ಕೆಳಗಿಳಿದು ಬಂದಳು. "ಅಮ್ಮಾ" ಎನ್ನುತ್ತಾ ನಾನು ಅವಳ ಬಳಿಗೆ ಹೋದೆ. ನನ್ನ ತಮ್ಮ ಅಲ್ಲಿಯೂ ಆಕೆಯ ಜತೆಯಲ್ಲಿದ್ದ. ಆ ರಾತ್ರಿ ನಾವು ಗಲಡಿಯಲ್ಲಿದ್ದೆವು. ನನ್ನ ತಾಯಿ ಮತ್ತು ತಮ್ಮನೊಡನೆ ನಾನು ತುಂಬಾ ಹೊತ್ತು ಮಾತನಾಡಿದೆ.

ಗೆರ್ರಿ ನಾನು ನನ್ನ ತಾಯಿಯ ಜತೆಯಲ್ಲಿ ಸಂಭ್ರಮದಿಂದಿದ್ದ ಆ ಕ್ಷಣವನ್ನು ಫೋಟೊದಲ್ಲಿ ಸೆರೆಹಿಡಿದ. ನನ್ನ ತಾಯಿಗೆ ಕೆಮರಾದವರು ಫೋಟೊ ತೆಗೆಯುತ್ತಿರುವುದು ಇಷ್ಟವಾಗದೆ ಅವರನ್ನು ಆಕೆ ತಡೆಯುತ್ತಿದ್ದಳು.

ಮಾರನೆಯ ದಿವಸ ನಾವು ವಿಮಾನದಲ್ಲಿ ಹೊರಡಲು ತಯಾರಾದಾಗ ನನ್ನ ಅಮ್ಮನನ್ನು ಇಂಗ್ಲೆಂಡಿಗೆ ಅಥವಾ ಅಮೇರಿಕಕ್ಕೆ ಬಾ ಎಂದು ಕರೆದೆ. "ನಿನ್ನ ತಂದೆಗೆ ತುಂಬಾ ವಯಸ್ಸಾಗಿದೆ. ನಾನು ಅವರ ಬಳಿಯಲ್ಲಿ ಇರಬೇಕು. ಸಾಧ್ಯವಾದರೆ ನೀನು ನನಗಾಗಿ ಒಂದು ಜಾಗ ಕೊಡಿಸು. ನಾನು ಈ ಊರಲ್ಲೇ ಇರುತ್ತೇನೆ" ಎಂದು ಹೇಳಿದಳು.

ನಾನು ಅವಳನ್ನು ಬಿಗಿಯಾಗಿ ಅಪ್ಪಿಕೊಂಡು "ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ಅಮ್ಮಾ, ಇನ್ನೊಮ್ಮೆ ಇಲ್ಲಿಗೆ ಬರುತ್ತೇನೆ" ಎಂದು ಹೇಳಿದೆ.

ನನ್ನ ಜೀವನದ ಮುಖ್ಯ ಕೆಲಸ : ಒಂದು ದಿವಸ ೧೯೯೫ರಲ್ಲಿ ನನಗೆ ನ್ಯೂಯಾರ್ಕ್‌ನಲ್ಲಿ ಒಂದು ಚಿಕ್ಕ ಜಾಸ್‌ಕ್ಲಬ್‌ನಲ್ಲಿ ಡಾನಾ ಮರೆ ಎಂಬವನ ಭೇಟಿಯಾಯಿತು. ನಾನು ಅವನನ್ನು ಪ್ರೀತಿಸತೊಡಗಿದೆ. ಅನಂತರ ಅವನನ್ನು ಮದುವೆಯಾಗಿ ೧೯೯೭ ಜೂನ್ ೧೩ನೇ ತಾರೀಕಿಗೆ ನಮಗೊಬ್ಬ ಮಗ ಹುಟ್ಟಿದ. ನಾನು ಅವನಿಗೆ ಅಲೀಕ್ ಎಂದು ಹೆಸರಿಟ್ಟೆ. ಅವನು ಹುಟ್ಟಿದ ತರುವಾಯ ನನ್ನ ಜೀವನ ಕ್ರಮ ಪೂರ್ತಿ ಬದಲಾಯಿತು.

ಐದನೇ ವರ್ಷದಲ್ಲಿ ಜಿಪ್ಸಿ ಹೆಂಗಸಿನ ಕೈಗೆ ಸಿಕ್ಕಿದಲ್ಲಿಂದ ೩೦ನೇ ವರ್ಷದ ತನಕವೂ ನಾನು ತುಂಬಾ ಕಷ್ಟಪಟ್ಟಿದ್ದೆ ಮತ್ತು ಅಸಾಧ್ಯ ನೋವನ್ನು ಅನುಭವಿಸಿದ್ದೆ. ಸೋಮಾಲಿಯಾದಲ್ಲಿ ನನ್ನ ಹಾಗೆ ಈಗಲೂ ಎಷ್ಟು ಮಂದಿ ಹುಡುಗಿಯರು ಕಷ್ಟಪಡುತ್ತಿದ್ದಾರೆ ಎಂಬುದನ್ನು ನೆನೆಸಿಕೊಂಡೆ. ತಮ್ಮ ತಿಂಗಳ ಮುಟ್ಟಿನ ದಿನಗಳಲ್ಲಿ ಅವರು ಬಹಳಷ್ಟು ಕಷ್ಟವನ್ನು ಸಹಿಸುತ್ತಾ ಆಡುಗಳನ್ನು ಮೇಯಿಸಲು ತುಂಬಾ ದೂರದ ತನಕ ಕಾಲಲ್ಲಿ ಚಪ್ಪಲಿಯೂ ಇಲ್ಲದೆ ನಡೆಯುತ್ತಾ ಹೋಗುತ್ತಿರಬೇಕು. ಗರ್ಭಿಣಿ ಹೆಂಗಸರು ೯ ತಿಂಗಳಾಗುವ ತನಕವೂ ಹಸಿವಿನಿಂದ ಬಳಲುತ್ತಿರುವ ತಮ್ಮ ಮಕ್ಕಳಿಗಾಗಿ ಆಹಾರ ಸಂಗ್ರಹಿಸಲು ತುಂಬಾ ದೂರ ನಡೆದು ಹೋಗುತ್ತಿರಬೇಕು.

ಅಲ್ಲದೆ ಇವತ್ತಿಗೂ ಹೆಂಗಸಿನ ಹೆರಿಗೆಯಾದೊಡನೆ ಅವಳ ಜನನೇಂದ್ರಿಯವನ್ನು ಅವಳ ಪತಿಗೆ ಸಂಭೋಗ ನಡೆಸಲು ಬಿಗಿಯಾಗಿರಬೇಕೆಂದು ಪುನಃ ಸ್ವಲ್ಪವೇ ದ್ವಾರ ಬಿಟ್ಟು ಹೊಲಿಯುತ್ತಿರಬೇಕು. ಈ ಪದ್ಧತಿಯಿಂದಾಗಿ ಹೆಂಗಸಿಗೆ ಹೊಸದಾಗಿ ಮದುವೆಯಾದಾಗ ಮತ್ತು ಮಗುವಿನ ಜನನದ ವೇಳೆ ಎಷ್ಟು ಕಷ್ಟಪಡಬೇಕಾಗಬಹುದೆಂದು ನನಗೆ ತಿಳಿದಿತ್ತು. ಈಗ ನಾನು ಇತರ ಹೆಂಗಸರಂತೆ ಜೀವಿಸುತ್ತಿದ್ದೇನೆ. ನಮ್ಮೂರಿನ ಇತರ ಹೆಂಗಸರೂ ನನ್ನಂತೆ ಈ ಕಷ್ಟದಿಂದ ಪಾರಾಗಬೇಕು ಮತ್ತು ಇದಕ್ಕಾಗಿ ಈ ಕೆಟ್ಟ ಪದ್ಧತಿಯನ್ನು ನಿಲ್ಲಿಸುವಂತೆ ಪ್ರಯತ್ನ ಮಾಡಬೇಕೆಂದು ನಾನು ಇಚ್ಛಿಸುತ್ತಿದ್ದೆ.

ಕೆಲವು ದಿವಸಗಳ ಹಿಂದೆ ಒಂದು ಫೇಷನ್ ಪತ್ರಿಕೆ ಬರೆಯುಲು ಲಾರಾ ದ್ವಿವ್ ಎಂಬುವಳು ನನ್ನನ್ನು ಇಂಟರ್ ವ್ಯೂ ಮಾಡಲು ಬಂದಿದ್ದಳು. ನಾನು ಆಕೆಗೆ ನನ್ನ ಬಾಲ್ಯದ ದಿನ

ಗಳಿಂದ ಆ ತನಕ ನಡೆದ ಘಟನೆಗಳನ್ನೆಲ್ಲ ವಿವರವಾಗಿ ಹೇಳಿದೆ. ಅದುವರೆಗೆ ಯಾರಿಗೂ ತಿಳಿಸದೆ ಗುಟ್ಟಾಗಿಟ್ಟಿದ್ದ ಆ ಸಂಗತಿಯನ್ನು ಆ ರೀತಿ ಪತ್ರಿಕೆಯಲ್ಲಿ ಬರೆಯುವಂತೆ ಹೇಳಲು ಮೊದಲಿಗೆ ನನಗೆ ಬಹಳ ನಾಚಿಕೆಯಾಯಿತು. ಆದರೆ ಆ ವಿಷಯವನ್ನು ಗುಟ್ಟಾಗಿಟ್ಟಲ್ಲಿ ಅದರ ಹಿಂದಿರುವ ಪದ್ಧತಿಯನ್ನು ನಿಲ್ಲಿಸುವುದು ಹೇಗೆ?

ಲಾರಾ ದ್ವಿವ್ ನಾನು ಹೇಳಿದ್ದನ್ನೆಲ್ಲ ರೆಕಾರ್ಡ್ ಮಾಡಿದಳು. ''ಇದೊಂದು ಅಸಹ್ಯ ಮತ್ತು ಕ್ರೂರ ಪದ್ಧತಿಯಾಗಿದೆ. ಜಗತ್ತಿನಲ್ಲಿ ಈ ರೀತಿ ನಡೆಯುತ್ತದೆಂದು ನನಗೆ ತಿಳಿದಿರಲೇ ಇಲ್ಲ'' ಎಂದು ಅವಳು ಹೇಳಿದಳು.

ಅವಳು ಬರೆದ ಲೇಖನ ಪತ್ರಿಕೆಗಳಲ್ಲಿ ಪ್ರಕಟವಾದಾಗ ಮಿಲಿಯಗಟ್ಟಲೆ ಜನರಿಗೆ ಇಂಥ ಕ್ರೂರ ಪದ್ಧತಿ ಬಳಕೆಯಲ್ಲಿರುವುದು ಗೊತ್ತಾಯಿತು. ಬಹಳ ಮಂದಿ ಓದುಗರು ನನಗೆ ಕಾಗದ ಬರೆದರು. ನನ್ನ ಆತ್ಮೀಯ ಸ್ನೇಹಿತರಿಗೂ ನನ್ನ ಮೇಲೆ ಇಂತಹ ಅಮಾನುಷ ಕೃತ್ಯ ನಡೆದಿತ್ತೆಂದು ತಿಳಿದಿರಲಿಲ್ಲ.

೧೯೯೭ರಲ್ಲಿ ಯುನೈಟೆಡ್ ನೇಶನ್ಸ್ ಪೊಪ್ಯುಲೇಶನ್ ಫಂಡ್‌ನವರು ನನ್ನನ್ನು ಕರೆದು ಅವರ ಸಂಸ್ಥೆಗೆ ಸೇರಿಸಿ ಹುಡುಗಿಯರ ಜನನೇಂದ್ರಿಯದ ಮೇಲೆ ನಡೆಸುವ ಈ ಕ್ರೂರ ಪದ್ಧತಿಯನ್ನು ನಿಲ್ಲಿಸಲು ಹೋರಾಡಬೇಕೆಂದು ತಿಳಿಸಿದರು. ತನಿಖೆ ನಡೆಸಿದಾಗ ಆಫ್ರಿಕದ ೨೮ ದೇಶಗಳಲ್ಲಿರುವ ಹುಡುಗಿಯರಿಗೆ ಮಾತ್ರವಲ್ಲದೆ ಅಮೆರಿಕಾ ಮತ್ತು ಯುರೋಪುಗಳಿಗೆ ಆಫ್ರಿಕಾದಿಂದ ವಲಸೆಬಂದ ಹುಡುಗಿಯರಿಗೂ ಈ ರೀತಿ ಮಾಡಲಾಗುತ್ತದೆಯೆಂದು ತಿಳಿದುಬಂತು.

ಜಗತ್ತಿನಲ್ಲಿ ಒಟ್ಟು ೧೩ಕೋಟಿ ಹುಡುಗಿಯರು ಮತ್ತು ಹೆಂಗಸರು ಈ ಪದ್ಧತಿಯಿಂದಾಗಿ ಅಪಾರವಾದ ನೋವನ್ನನುಭವಿಸುತ್ತಿದ್ದಾರೆ. ಪ್ರತಿದಿನ ಸಾಮಾನ್ಯ ೬೦೦೦ ಹುಡುಗಿಯರು ಈ ಪದ್ಧತಿಗೆ ಬಲಿಯಾಗುತ್ತಿದ್ದರು. ವರ್ಷದಲ್ಲಿ ಸುಮಾರು ೨೦ಲಕ್ಷ ದಷ್ಟು ಹುಡುಗಿಯರು ಇದರಿಂದಾಗಿ ಸಾವನ್ನಪ್ಪುವ ಸಾಧ್ಯತೆಯಿತ್ತು.

ಪ್ರಜ್ಞೆ ತಪ್ಪಿಸದೆ ಚೂರಿ, ಕತ್ತರಿ ಮತ್ತು ಚೂಪಾದ ಕಲ್ಲುಗಳಿಂದ ಹಳ್ಳಿಯ ಹೆಂಗಸರು ಈ ಆಪರೇಷನನ್ನು ಮಾಡುತ್ತಿದ್ದರು. ಇದರಿಂದಾಗಿ ಹುಡುಗಿಯರ ಜನನೇಂದ್ರಿಯಕ್ಕೆ ತುಂಬಾ ಹಾನಿಯಾಗುತ್ತಿತ್ತು. ಅಲ್ಲದೆ ಅವರಿಗೆ ಸಂಭೋಗದಲ್ಲಿ ಯಾವ ಸಂತೋಷವೂ ಇಲ್ಲದಂತಾಗುತ್ತಿತ್ತು. ಈ ಕ್ರೂರ ಪದ್ಧತಿಯನ್ನು ನಿಲ್ಲಿಸಲು ಹೋರಾಡಬೇಕೆಂದು ನಾನು ಯು ಎನ್ ಪೊಪ್ಯುಲೇಶನ್ ಸಂಸ್ಥೆಗೆ ಸೇರಿದೆ. ಮತ್ತು ಆಫ್ರಿಕಕ್ಕೆ ಹಿಂದಿರುಗಿ ನನ್ನ ಕತೆಯನ್ನು ಎಲ್ಲಾ ಜನರಿಗೂ ತಿಳಿಸಬೇಕೆಂದು ಆಲೋಚಿಸಿದೆ. ಆ ಕೆಲಸದಲ್ಲಿ ತುಂಬಾ ಅಪಾಯವಿದೆಯೆಂದು ನನಗೆ ತಿಳಿದಿದೆ. ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ಹೇಳುವವರು ಹಲವರ ವೈರವನ್ನು ಕಟ್ಟಿಕೊಳ್ಳಬೇಕಾದೀತು. ಇದನ್ನು ನೆನಸಿದಾಗ ನನಗೆ ಹೆದರಿಕೆಯಾಗುತ್ತದೆ. ಆದರೂ ಈ ಒಂದು ಅವಕಾಶವನ್ನು ಬಿಡಬಾರದು. ಅದೇ ರೀತಿ ನಾನೀಗ ಪ್ರಯತ್ನಿಸುತ್ತಿದ್ದೇನೆ.

ಪರಿಶುಭ್ರ ಕಾಂತಿಯುತ ರತ್ನಗಳು ಸಾಗರದ
ಗಹನ ಗಹ್ವರಗಳಲಿ ಮರೆಯಾಗಿ ಮಸಲುತಿವೆ
ಸುಂದರ ಸುಪುಷ್ಪಗಳು ಕಾಂತಾರದೇಕಾಂತ
ದೊಳಗರಳಿ ಪರಿಮಳಿಸಿ ನಲುಗುತಿವೆ ಅತ್ರಿಸೂನು

ತಲೆ ತುಂಬ ಚಿಂತೆಗಳು ಚೆಲ್ಲಾಡಿದಾಗ....

ನಿಮ್ಮ ಮನಸ್ಸು ಹಗುರಗೊಳಿಸಲು ಸಲಹೆಗಳು

ಎಸ್. ಶ್ರೀಧರ ಮೂರ್ತಿ
ಮುಕ್ತ ವಿಶ್ವವಿದ್ಯಾನಿಲಯ
ಮೈಸೂರು

ನಾನೊಬ್ಬ ಮನೋವೈದ್ಯ. ಪೌಲಾ ವಾಕ್‌ಲೂರ್ ಎಂಬ ಅಮೇರಿಕನ್ ಟೆಲಿವಿಷನ್ ಸಂಸ್ಥೆಯಲ್ಲಿ ಕೆಲಸಮಾಡುವವಳು . ನನ್ನನ್ನು ಒಮ್ಮೆ ಹುಡುಕಿಕೊಂಡು ಬಂದಳು. ಬೆಳಗಿನ ಜಾವ ಮೂರು ಗಂಟೆಗೆ ಎಚ್ಚರವಾಗಿ ಕಾಡುವ ಚಿಂತೆಗಳ ಬಗ್ಗೆ ದುಃಖ ತೋಡಿಕೊಂಡಳು.

"ಯಾವುದರ ಬಗ್ಗೆ ಚಿಂತೆ ಮಾಡುತ್ತೀರಿ" ಎಂದು ನಾನು ಕೇಳಿದೆ. "ನೂರಾರು ಚಿಂತೆಗಳು ಮುತ್ತಿಕೊಳ್ಳುತ್ತವೆ. ಏನೆಲ್ಲ ಮಾಡಬೇಕು ಏನೆಲ್ಲ ಮಾಡಬಹುದು ಏನೆಲ್ಲ ಮಾಡಲೇ ಬೇಕುಹಾಗೆ ಮಾಡಿದರೆ ಏನಾಗುತ್ತದೋ ಇತ್ಯಾದಿ. ಹಗಲೆಲ್ಲ ಸಣ್ಣಪುಟ್ಟ ಚಿಂತೆಗಳು ಕಾಡುತ್ತವೆ. ಆದರೆ ರಾತ್ರಿ ಹೊತ್ತು ದೊಡ್ಡ ದೊಡ್ಡ ಚಿಂತೆಗಳು ತಲೆತುಂಬಿಕೊಳ್ಳುತ್ತವೆ" ಎಂದಳು.

'ನಿಮಗೇನಾದರೂ ಕೆಡಕು ಸಂಭವಿಸಿದೆಯೆ" "ಇಲ್ಲ. ನಮ್ಮ ಜೀವನದಲ್ಲಿ ಕಷ್ಟಕರ ಸಮಸ್ಯೆಗಳೇ ಇಲ್ಲ. ಆದರೂ ಚಿಂತೆಗಳು ಕಾಡುತ್ತವೆ. ಸುಸ್ತಾಗಿ ಬಿಟ್ಟಿದ್ದೇನೆ".

ಈ ಬಗ್ಗೆ ಚಿಂತೆಗಳ ಆಧಿಕ್ಯ ಲಕ್ಷಾಂತರ ಜನರ ದಿನ ನಿತ್ಯದ ಆಯಾಸಕರ ಸಮಸ್ಯೆಯಾಗಿದೆ. ಎಲ್ಲ ಚಿಂತೆಗಳು ಕೆಡುಕುಂಟು ಮಾಡುವವು ಎಂದು ಭಾವಿಸ ಬಾರದು. ನಿರೀಕ್ಷಿತ ತೊಂದರೆಗಳ ಬಗ್ಗೆ ಪರಿಣಾಮಕಾರಿಯಾಗಿ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಬೇಕು. ಆದ್ದರಿಂದ ಎಲ್ಲರೂ ಯೋಚಿಸಲೇಬೇಕು . ಆದರೆ ಆರ್ಥಿಕ ಚಿಂತೆ, ದೇಹ ಘಾತಕ ಚಿಂತೆ ಅನಗತ್ಯವಾದುದು ಹಾಗೂ ಅಪ್ರಯೋಜಕವಾದುದು. ಕೆಟ್ಟ ಚಿಂತೆಗಳು ನಿಮ್ಮ ಕಲ್ಪನೆಯ ರೋಗಗಳು. ಇವುಗಳಿಂದ ನಿಮ್ಮ ಸಂಸಾರದೊಡನೆ, ಸ್ನೇಹಿತರೊಡನೆ ಸುಖವಾಗಿ ಬದುಕಲು ಸಾಧ್ಯವಿಲ್ಲ, ನಿಮ್ಮ ಆರೋಗ್ಯ ಹಾಗೂ ಸಾಧನೆ ಕುಂಠಿತಗೊಳ್ಳುತ್ತದೆ. ಏಕೆಂದರೆ ಏನೋ ತಪ್ಪಾಗಿಬಿಡಬಹುದು ಎಂಬ ಭಯದೊಡನೆ ನೀವು ಬದುಕುತ್ತಿರುತ್ತೀರಿ.

ಇಂಥ ಚಿಂತೆಗಳು ಯಾವಾಗಲೂ ವಾಸ್ತವಿಕತೆಯನ್ನು ತಪ್ಪಾಗಿ ಗ್ರಹಿಸುವುದರಿಂದ ಮೂಡುತ್ತವೆ. ಇದರಿಂದ ಎಲ್ಲವನ್ನು ಇಡಿಯಾಗಿ ಒಟ್ಟಾರೆಯಾಗಿ ಗ್ರಹಿಸಲು ಧಕ್ಕೆಯಾಗುತ್ತದೆ. ಉದಾಹರಣೆಗೆ, ಒಂದು ಕಂಪನಿಯಲ್ಲಿ ಉದ್ಯೋಗ ಮಾಡುತ್ತಿರುವ ಫ್ರಾಂಕನಿಗೆ ತನ್ನ ಕಂಪನಿ ಇನ್ನೊಂದು ಕಂಪನಿಯ ಜೊತೆ ಮಿಳಿತವಾಗುತ್ತದೆ ಎಂಬ ಸುದ್ದಿ ಗೊತ್ತಾಗುತ್ತದೆ. ತಕ್ಷಣವೇ ಆತ "ಅಯ್ಯೋ ನಮ್ಮ ಕೆಲಸ ಹೋಯಿತು" ಎಂದು ಚಿಂತಿಸುತ್ತಾನೆ.. ತನ್ನನ್ನು ಕೆಲಸದಿಂದ ವಜಾ ಮಾಡುತ್ತಾರೆ ಎಂದು ಕಲ್ಪಿಸಿಕೊಂಡು ಬಿಡುತ್ತಾನೆ ತನಗೆ ಕೆಟ್ಟದ್ದೇ ಆಗುತ್ತದೆ ಎಂಬ ತೀರ್ಮಾನಕ್ಕೆ ಬಂದು ಅದರ ಬಗ್ಗೆಯೇ ಚಿಂತಿಸತೊಡಗುತ್ತಾನೆ.

ಯಾವುದೆ ವ್ಯಕ್ತಿ ಸಮಗ್ರ ಚಿತ್ರ ವೀಕ್ಷಿಸುವ ದೃಷ್ಟಿಯನ್ನು ಕಳೆದು ಕಂಡಾಗ ಆತನಿಗೆ ಕೆಲವು ವಿಚಾರಗಳ ಮೇಲೆ ಹತೋಟಿ ಇರುವುದಿಲ್ಲ. ಅವು ಕೈಮೀರಿದ ವಿಚಾರಗಳು ಎಂಬ ಅರಿವು ಇರುವುದಿಲ್ಲ. ಯಾವುದೋ ತುರ್ತು ಕೆಲಸಕ್ಕೆ ನೀವು ಹೋಗುತ್ತಿರುತ್ತೀರಿ ಎಂದಿಟ್ಟುಕೊಳ್ಳಿ. ರಸ್ತೆಯಲ್ಲಿ ವಾಹನದಿಂದಾಗಿ ಹೆಚ್ಚಾಗಿ ನಿಮಗೆ ಶೀಘ್ರವಾಗಿ ಹೋಗಲಸಾಧ್ಯವಾದರೆ ನೀವು ಎಲ್ಲ ವಾಹನ ಸವಾರರನ್ನು ದೂಷಿಸುತ್ತ ಸಂದಿ ಸಂದಿಯಲ್ಲಿ ತೂರಿ ಹೋಗಲು ವಿಫಲ ಪ್ರಯತ್ನ ನಡೆಸಿ ಚಿಂತೆಗೀಡಾಗುತ್ತೀರಿ. ನಿಮಗೆ ಸಮಗ್ರ ದೃಷ್ಟಿ ಶಕ್ತಿಯೇ ಇಲ್ಲ. ನಿಮಗೆ ನಿಯಂತ್ರಿಸಲು ಸಾಧ್ಯವಾಗದ ವಿಚಾರಗಳನ್ನು ನೀವು ನಿಯಂತ್ರಿಸ ಬಲ್ಲಿರಿ ಎಂದು ಭಾವಿಸಿಕೊಂಡಿರುವುದೇ ನಿಮ್ಮ ತಪ್ಪು. ನೀವು ದೇವರಲ್ಲ!

ಜುಲೈ 2000 ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾಗಿರುವ ಡಾ ಎಡ್ವರ್ಡ್ ಎಂ. ಹಾಲ್ಲೊವೆಲ್ ಅವರ 'ವೆನ್ ವರೀಸ್ ಗೊ ಹೇವೈರ್' ಎಂಬ ಲೇಖನದ ಅನುವಾದ

ಸಮಗ್ರ ದೃಷ್ಟಿ ಸಾಮರ್ಥ್ಯವನ್ನು ಅನೇಕ ವಿಧದಲ್ಲಿ ಬೆಳೆಸಿಕೊಳ್ಳಬಹುದು. ನನ್ನ ಗುರುಗಳಾದ ಡಾ. ಥಾಮಸ್ ಗುಥ್ರೈಲ್ ಚಿಂತೆಯ ನಿವಾರಣೆಗೆ ಅತ್ಯಂತ ಉಪಯುಕ್ತ ಸಲಹೆ ನೀಡಿದ್ದರು. ''ಏಕಾಂಗಿಯಾಗಿ ಚಿಂತಿಸಬೇಡ''.

ಒಂಟಿಯಾಗಿ ಚಿಂತಿಸಿದಾಗ ಚಿಂತೆಯ ತೀವ್ರತೆ ಅತೀವವಾಗುತ್ತದೆ. ಯಾವುದೆ ಚಿಂತೆಯನ್ನು ಇನ್ನೊಬ್ಬ ವ್ಯಕ್ತಿಗೆ ವಿವರಿಸಿದರಷ್ಟೆ ಸಾಕು ಆ ಚಿಂತೆಯ ಬಗ್ಗೆ ಸಮಗ್ರ ಅರಿವು ನಿಮಗೆ ಮೂಡಿ ಸಮಾಧಾನ ಉಂಟಾಗುತ್ತದೆ.

ಚಿಂತೆಗಳನ್ನು ಹೇಳಿಕೊಳ್ಳಲು ಸಹಾನುಭೂತಿ ಇರುವ ಗೆಳೆಯನನ್ನು ಹುಡುಕುವುದಕ್ಕಿಂತ ಉತ್ತಮವಾದ ಇನ್ನೊಂದು ಮಾರ್ಗವೆಂದರೆ ನಿಮಗೆ ನೀವೇ ಮಾತಾಡಿಕೊಳ್ಳುವುದನ್ನು ಕಲಿಯುವುದು.

ಆರನ್ ಬೆಕ್ ಎಂಬ ನವ್ಯತಂತ್ರಶೀಲ ಮನೋವಿಜ್ಞಾನಿ 'ಸ್ವಯಂ ಅವಲೋಕನ ಚಿಕಿತ್ಸೆ' ಎಂಬ ತಂತ್ರವನ್ನು ರೂಪಿಸಿದ್ದಾರೆ. ಯಾವುದೆ ವ್ಯಕ್ತಿ ತನ್ನ ಚಿಂತನ ಧಾಟಿಯನ್ನು ಉಳಿಸಿಕೊಳ್ಳಬೇಕು. ಆದರೆ ಚಿಂತೆ ಮುತ್ತಿದಾಗ ''ಅಯ್ಯೋ ನಾನು ಹಾಳಾದೆ'' ಎಂಬ ನಕಾರಾತ್ಮಕ ನಿಟ್ಟಿನಲ್ಲಿ ಸಾಗಬಾರದು ಕಾಡಿದ ಚಿಂತೆಯನ್ನು ಅರ್ಥೈಸಲು ಹೆಚ್ಚು ಪ್ರಯೋಜನಕಾರಿ ನಿಟ್ಟುಗಳನ್ನು ಹುಡುಕಬೇಕು.

ಇದು ಹೇಗೆ ಸಾಧ್ಯವಾದೀತು ? ನಿಮಗೆ ಯಾವುದೆ ಕೆಟ್ಟಸುದ್ದಿ ಬಂದರೆ ತಕ್ಷಣವೇ ಉದ್ಭವಿಸುವ ಚಿಂತನಗಳನ್ನು ಗಮನಿಸಿ. ಈ ಚಿಂತನಗಳಲ್ಲಿ ಯಾವುದೆ ತಾರ್ಕಿಕ ದೋಷವಿದೆಯೇ ಎಂದು ಒಂದು ಕ್ಷಣ ವಿಶ್ಲೇಷಿಸಿ. ಅನಂತರ ಹೆಚ್ಚು ತಾರ್ಕಿಕವಾಗಿರುವ ಪರ್ಯಾಯ ವಿಚಾರಗಳನ್ನು ರೂಪಿಸಲು ಪ್ರಯತ್ನಿಸಿ. ನಿಮ್ಮನ್ನೆ ನೀವು ಕೇಳಿಕೊಳ್ಳಿ ''ಈ ತೀರ್ಮಾನಕ್ಕೆ ಬರಲು ನನಗೆ ಆಧಾರಗಳೇನು? ತೃಪ್ತಿಕರವಾದ ಸಮಾಧಾನ ಮೂಡುವ ಇನ್ನೊಂದು ದೃಷ್ಟಿಕೋನವಿದೆಯೆ? ಅನುಕೂಲ ನಿರ್ಣಯಕ್ಕೆ ಬರಲು ನಾನು ಏನು ಮಾಡಬೇಕು''. ಒಟ್ಟಿನಲ್ಲಿ ಎಲ್ಲ ಅಂಶಗಳನ್ನು ಗ್ರಹಿಸಿಕೊಳ್ಳಿ. ಯಾವಾಗಲೂ ವಾಸ್ತವಿಕತೆಯನ್ನು ಅರಿತು ಚಿಂತೆ ಮಾಡಬೇಕು. ಭ್ರಮೆಗೆ ಒಳಗಾಗಿ ಚಿಂತೆ ಮಾಡಬಾರದು.

ಮೂರನೆಯ ಹೆಜ್ಜೆ ಎಂದರೆ, ಈ ಧಿಡೀರ್ ಚಿಂತೆಗಳು , ತಾರ್ಕಿಕ ದೋಷಗಳು ನೀವು ನಿಮ್ಮನ್ನು ಮತ್ತು ನಿಮ್ಮ ಜೀವನವನ್ನು ನೋಡುವ ದೃಷ್ಟಿಯ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಮನದಟ್ಟು ಮಾಡಿಕೊಳ್ಳಲು ಯತ್ನಿಸಿ. ''ನನಗೆ ಎಲ್ಲಿಯೂ ಬೆಲೆ ಇಲ್ಲ.'' ''ನನಗೆ ಏನನ್ನೂ ಸಾಧಿಸಲೇ ಆಗಿಲ್ಲ' ಎಂದು ಅನ್ನಿಸುತ್ತಿರುತ್ತದೆಯೆ ?

ತಕ್ಷಣವೆ ಹೊರಹೊಮ್ಮುವ ಚಿಂತೆಗಳನ್ನು ನೀವು ಪರಿಶೀಲಿಸುತ್ತ ಹೋಗಲು ನೀವು ಆರಂಭಿಸಿದರೆ, ಚಿಂತೆಯನ್ನು ಬೆನ್ನಿಗೆ ಕಟ್ಟಿಕೊಂಡೇ ಬದುಕುವ ನಿಮ್ಮ ಜೀವನ ಕ್ರಮವನ್ನು ಬದಲಿಸ ಬಲ್ಲಿರಿ. ನೀವು ಇದಕ್ಕೆ ಸತತ ಪ್ರಯತ್ನ ಮಾಡಬೇಕು. ನಿಮಗೆ ಗೆಲುವು ಖಚಿತ. ಏಕೆಂದರೆ ''ಸ್ವಯಂ ಅವಲೋಕನ'' ದಿಂದ ನಿಮಗೆ ಸತ್ಯದ ಅರಿವಾಗುತ್ತದೆ, ಸ್ವಯಂಕೃತ ಭ್ರಮೆಗಳಿಂದ ಬಿಡುಗಡೆಯಾಗುತ್ತದೆ.

ಪೌಲಾ ಮಾಕ್‌ಲ್ಯೂರ್ ಈ ವಿಧಾನವನ್ನು ಅಳವಡಿಸಿಕೊಂಡಳು; ಜೀವನ ಶೈಲಿಯನ್ನು ಬದಲಿಸಿಕೊಡಳು. ಈಗ ಅವಳು ತನ್ನ ಹಾಸಿಗೆಯ ಮಗ್ಗುಲಲ್ಲಿ ಡೈರಿ ಇಟ್ಟುಕೊಂಡಿರುತ್ತಾಳೆ. ಯಾವುದೆ ಚಿಂತೆ ಕಾಡಿದರೆ ತಕ್ಷಣವೆ ಅದನ್ನು ಬರೆದಿಡುತ್ತಾಳೆ . ಎಲ್ಲವನ್ನು ಪಟ್ಟಿ ಮಾಡಿಕೊಂಡು ಮಾರನೆ ಬೆಳಿಗ್ಗೆ ನಿಧಾನವಾಗಿ ಒಂದೊಂದಾಗಿ ವಿಶ್ಲೇಷಿಸುತ್ತಾಳೆ. ಈಗ ಅವಳಿಗೆ ಆತಂಕವಿಲ್ಲ , ನಿದ್ದೆ ಗೆಡುವುದಿಲ್ಲ. ವಿಚಾರಗಳನ್ನು ಸಮಗ್ರವಾಗಿ ಅವಲೋಕಿಸುವ ದಾರಿಯನ್ನು ಅವಳು ಕಂಡುಕೊಂಡಳು.

ಚಿಕ್ಕಳಿಕೆ ಬಂದಾಗ ಅದನ್ನು ನಿಲ್ಲಿಸಲು ಜನ ಅನೇಕ ಸಲಹೆಗಳನ್ನು ನೀಡುತ್ತಾರೆ. ಅದೇ ರೀತಿ ಚಿಂತೆ ಬಿಡಲೂ ಅನೇಕ ಸಲಹೆಗಳನ್ನು ನೀಡಬಹುದು. ಆದರೆ ಇನ್ನು ಇದ್ದೆ ಇರುತ್ತದೆ. ಇಲ್ಲಿ ಕೆಲವು ಸಲಹೆಗಳಿವೆ:

ವ್ಯಾಯಾಮ: ಒಂದು ಕಿಲೋಮೀಟರ್ ಓಡಿ, ಇಲ್ಲವೆ ಟೆನ್ನಿಸ್ ಆಡಿ. ತದನಂತರ ನಿಮಗೆ ಚಿಂತೆ ಕಡಿಮೆಯಾದಂತೆ ಭಾಸವಾಗುತ್ತದೆ. ಇದು ಖಂಡಿತವಾಗಿ ಸತ್ಯ. ವ್ಯಾಯಾಮದಿಂದ ಆತಂಕ ಕಡಿಮೆಯಾಗುತ್ತದೆ; ಸಿಟ್ಟು ಮತ್ತು ಹತಾಶೆಗಳನ್ನು ನಿವಾರಿಸುತ್ತದೆ, ಖುಷಿ ಮನೋಭಾವವನ್ನ ಉಂಟುಮಾಡುತ್ತದೆ, ನಿದ್ದೆ ಬರುತ್ತದೆ, ಗ್ರಹಣ ಶಕ್ತಿಯನ್ನು ಹೆಚ್ಚಿಸುತ್ತದೆ. ಅತ್ಯಂತ ಉತ್ತಮವಾದ ನೈಸರ್ಗಿಕ ಚಿಂತಾ ನಿವಾರಕ ಮದ್ದು ಎಂದರೆ ವ್ಯಾಯಾಮವೇ ಸರಿ.

ಪ್ರಾಣಾಯಾಮ : ನಿಯಂತ್ರಿತ ಉಸಿರಾಟ ಚಿಂತೆಯನ್ನು ಕಡಿಮೆ ಮಾಡುತ್ತದೆ. ಉದಾಹರಣೆಗೆ, ದೀರ್ಘ ಶ್ವಾಸವನ್ನು ಎಳೆದುಕೊಂಡು ನಿಧಾನವಾಗಿ ಉಸಿರು ಬಿಟ್ಟಾಗ ತತ್ಕಾಲಿಕ ಹುರುಪು ದೊರೆಯುತ್ತದೆ. ಹಲವು ದೀರ್ಘ ಶ್ವಾಸಗಳನ್ನು ಮಾಡಿದಾಗ ಇನ್ನು ಉತ್ತಮ ಫಲ ದೊರೆಯುತ್ತದೆ. ಪ್ರೌಢ ಉಸಿರಾಟ ತಂತ್ರಗಳ ಬಗ್ಗೆ ತರಬೇತಿ ಪಡೆದರೆ ನಿಮಗೆ ಚಿಂತೆಗಳನ್ನು ನಿಭಾಯಿಸಲು ಸಹಕಾರಿಯಾಗುತ್ತದೆ.

ಸ್ನೇಹ ಸಂಪರ್ಕ : ನಿಮ್ಮ ವ್ಯಕ್ತಿತ್ವದ ವಲಯದಾಚೆಗೆ ದೊಡ್ಡವಲಯದಲ್ಲಿ ಸಂಚರಿಸಿ. ಕುಟುಂಬ ಸದಸ್ಯರು, ಸ್ನೇಹಿತರು, ಸಂಘಸಂಸ್ಥೆಗಳು, ನೆರೆಹೊರೆ, ದೇಗುಲ ಮತ್ತು ಕಚೇರಿ ಎಲ್ಲ ಕಡೆ ಸ್ನೇಹ ಸೇತುಗಳನ್ನು ನಿರ್ಮಿಸಿಕೊಳ್ಳಿ, ಬದುಕಿನಲ್ಲಿ ನಿಮ್ಮ ಸ್ನೇಹ ಸಂಪರ್ಕಗಳು ಹೆಚ್ಚು ಹೆಚ್ಚಿದಂತೆಲ್ಲ ನಿಮ್ಮ ಬಲಿಷ್ಠತೆಯ ಬಗ್ಗೆ ನಿಮಗೆ ಹೆಮ್ಮೆಯಾಗ ತೊಡಗುತ್ತದೆ. ನಿಮ್ಮ ಅಸಹಾಯಕಭಾವ ಕಡಿಮೆಯಾಗತೊಡಗುತ್ತದೆ.

ನಿಮ್ಮ ಕುಟುಂಬ ಸದಸ್ಯರೊಡನೆ ಸಹಭೋಜನ ಮಾಡುವ ಅಭ್ಯಾಸ ಬೆಳಸಿಕೊಳ್ಳಿ, ನೆರೆಹೊರೆಯವರ ಬಳಿ ಸೌಹಾರ್ದದಿಂದ ಮಾತನಾಡಿ. ಚಿಂತೆಯನ್ನು ನಿವಾರಿಸಲು ನಾನು ಶಿಫಾರಸ್ಸು ಮಾಡುವ ಮೊದಲ ಮದ್ದು ಎಂದರೆ ಸ್ನೇಹ ಜೀವನವನ್ನು ಮಾತ್ರ.

ದೇವರು : ದಿನವೂ ಪ್ರಾರ್ಥನೆ ಮಾಡಿ. ದೇವರನ್ನು ನಂಬುವ ಜನರಲ್ಲಿ ಯಾವಾಗಲೂ ಹತಾಶೆ-ನಿರಾಶೆಗಳು ಕಡಿಮೆ ಎಂದು ಅಧ್ಯಯನಗಳು ಸಾರುತ್ತಿವೆ. ''ದೇವರ ಮೇಲೆ ಭಾರ ಹಾಕು'' ಎಂಬ ಸಾಮಾನ್ಯ ಉಕ್ತಿಯನ್ನು ಕೇಳಿಲ್ಲವೆ? ದೇವರ ಶಕ್ತಿಯನ್ನು ದೇವರಿಗೇ ಬಿಡಿ. ಎಲ್ಲವನ್ನು ತಾನೇ ನಿಯಂತ್ರಿಸುತ್ತೇನೆ ಎಂಬ ಅಸಾಧ್ಯ ಮೌಢ್ಯ ನಿಮಗೆ ಬೇಡ. ನೀವು ನಾಸ್ತಿಕರಾದರೆ ಸರಿ. ಧ್ಯಾನಮಾಡಿ. ಪ್ರಾರ್ಥನೆ ಮತ್ತು ಧ್ಯಾನ ಇವು ಸಮಗ್ರ ದೃಷ್ಟಿಯನ್ನು ನೀಡುತ್ತವೆ, ನಮ್ಮ ಮನಸ್ಸನ್ನು ಶಾಂತಗೊಳಿಸುತ್ತವೆ.

ಬದುಕಿನ ಶಿಸ್ತು: ದಿನನಿತ್ಯದ ಅನೇಕ ಚಿಂತೆಗಳು ನಿಮ್ಮ ಜೀವನದಲ್ಲಿ ಶಿಸ್ತು ಕಾಪಾಡದೆ ಇರುವುದರಿಂದಲೇ ಉಂಟಾಗುತ್ತವೆ. ''ಏನನ್ನೊ ಮರೆತೆ'', ಇದೆಲ್ಲೊ ಕಳೆದೆನಲ್ಲಾ'', ಅದನ್ನು ಅಲ್ಲಿ ಬಿಟ್ಟೆನೆ'' ಇತ್ಯಾದಿ. ಇವನ್ನು ನಿವಾರಿಸಬೇಕಾದರೆ ಪಟ್ಟಿ ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳಿ. ವಾಹನದ ಕೀಲಿಗಳನ್ನು ಯಾವಾಗಲೂ ಒಂದೇ ಜಾಗದಲ್ಲಿಡುವುದನ್ನು ಅಭ್ಯಾಸಮಾಡಿಕೊಳ್ಳಿ, ಪ್ರತಿನಿತ್ಯ ಬೆಳಗ್ಗೆ ತಡಕಾಡುವುದು ತಪ್ಪುತ್ತದೆ. ನಿಮ್ಮ ಕೀಲಿಕೈಯನ್ನು ಮತ್ತೆ ಮತ್ತೆ ಕಳೆದು ಮತ್ತೆ ಮತ್ತೆ ಹುಡುಕಿ ಆತಂಕಕ್ಕೆ ಒಳಗಾಗುವುದನ್ನು ತಪ್ಪಿಸಿಕೊಂಡರೆ ಅನೇಕ ಅನಾಸಿನ್ ಮಾತ್ರೆಗಳು ಉಳಿತಾಯವಾದಂತೆ ಆಗುತ್ತದೆ. ಶಿಸ್ತನ್ನು ಕಾಪಾಡಿಕೊಂಡರೆ ಪ್ರತಿದಿನ ಅಪ್ರಯೋಜಕ ಹಾಗೂ ಘಾತಕ ಚಿಂತೆಯಲ್ಲಿ ವ್ಯಯವಾಗುವ ಕಾಲ ಉಳಿತಾಯವಾಗುತ್ತದೆ.

ಇಷ್ಟಪಡುವ ಕೆಲಸ : ನಿಮ್ಮನ್ನು ಖುಷಿ

ಯಾಗಿಡುವ ಕೆಲಸದಲ್ಲಿ ನೀವು ತೊಡಗಿಕೊಂಡರೆ ಯಾವ ಕಾರಣಕ್ಕೂ ಚಿಂತೆ ನಿಮ್ಮನ್ನು ಬಾಧಿಸಲಾರದು.

ಮಾಧ್ಯಮ ಸುದ್ದಿ : ಪ್ರಸಾರ ಮಾಧ್ಯಮಗಳು ಕೆಟ್ಟ ಸುದ್ದಿಗಳು ನಾಶಕಾರಕ ಅಪ್ರಿಯಕತೆಗಳನ್ನು ಹೆಚ್ಚಾಗಿ ಪ್ರಕಟಿಸುತ್ತ ನಮ್ಮ ಮನಸ್ಸನ್ನು ಹದಗೆಡಿಸುತ್ತವೆ. ಇಂತ ವಾರ್ತೆಗಳನ್ನು ಹೆಚ್ಚು ಹೆಚ್ಚಾಗಿ ಗ್ರಹಿಸಲು ಹೋಗಬೇಡಿ. ಇವು ನಿಮ್ಮ ಚಿಂತೆಗಳನ್ನು ಉಲ್ಬಣಗೊಳಿಸುತ್ತವೆ.

ಅತಿ ಕುಡಿತ : ಅತಿಯಾಗಿ ಮದ್ಯಪಾನ ಬೇಡ. ಆಲ್ಕೊಹಾಲ್ ಮತ್ತಿತರ ಮಾದಕ ವಸ್ತುಗಳು ನಿಮ್ಮನ್ನು ದುರ್ಬಲಗೊಳಿಸಿ ಹತಾಶೆಗೆ ಒಳಗಾಗುವಂತೆ ಮಾಡಿ ನಿಮ್ಮ ಚಿಂತೆಯನ್ನು ಮತ್ತಷ್ಟು ತೀವ್ರಗೊಳಿಸುತ್ತವೆ. ಜೊತೆಗೆ ಇವನ್ನು ಸೇವಿಸಿದ ಮೇಲೆ ನೀವು ಅವುಗಳ ಅಮಲಿನಲ್ಲಿ ಮಾಡುವ ಅನೇಕ ಕ್ರಿಯೆಗಳಿಂದಾಗಿ ತದನಂತರ ನೀವು ಮತ್ತಷ್ಟು ಚಿಂತೆಗಳಿಗೆ ಈಡಾಗ ಬೇಕಾಗುತ್ತದೆ.

ಸ್ಪರ್ಶಸಾಂತ್ವನ : ವ್ಯಕ್ತಿಗಳ ಮೈ ಮುಟ್ಟುವುದರಿಂದ ತಬ್ಬಿಕೊಳ್ಳುವುದರಿಂದ ಅವರು ಹೆಚ್ಚು ಹುರುಪುಗೊಳ್ಳುತ್ತಾರೆ. ನಾವು ಸಾಮಾಜಿಕ ಜೀವಿಗಳು. ಒಂಟಿಯಾಗಿ ನಾವು ಚೆನ್ನಾಗಿ ಬದುಕಲಾರೆವು. ನಿಮಗೆ ಪ್ರಿಯವಾದವರನ್ನು ಆಗಾಗ ಆಲಂಗಿಸುತ್ತಿರಿ. ಮುದ್ದು ಮಾಡಲು ನಿಮ್ಮ ಮಕ್ಕಳಿಗಿಂತ ಬೇರೆ ಬೇಕೆ ?

ಸಂಕೋಲೆ : ಘಾತಕವಾದ ಚಿಂತೆ ಎಂಬ ಸಂಕೋಲೆ ನಿಮ್ಮನ್ನು ಸುತ್ತುವರಿಯುತ್ತಿದೆ ಎಂದು ಭಾಸವಾಗುತ್ತಿದ್ದಂತೆ ಅದನ್ನು ಮುರಿಯಲು ಯತ್ನಿಸಿ. ಇದನ್ನು ನೀವು ಸ್ವಪ್ರಜ್ಞೆಯಿಂದಲೇ ಮಾಡಬೇಕು. ಇದ್ದ ಜಾಗವನ್ನು ಬಿಟ್ಟು ಹೊರಡಿ. ಹೊರಗೆ ಸುತ್ತಾಡಿ ಸ್ನೇಹಿತನೊಂದಿಗೆ ಮಾತಾಡಿ. ಚಿಂತೆಯ ಆಳಕ್ಕೆ ಇಳಿಯಲೇ ಬೇಡಿ. ಚಿಂತೆಗೆ ನಿಮ್ಮನ್ನು ಕಾಡಲು ಹೆಚ್ಚು ಹೆಚ್ಚು ಕಾಲ ಬಿಟ್ಟರೆ, ಅದರಿಂದ ಬಿಡುಗಡೆಯಾಗಲು ಹೆಚ್ಚು ಹೆಚ್ಚು ಕಷ್ಟವಾಗುತ್ತದೆ.

ಸಂಗೀತ : ಸಂಗೀತವನ್ನು ಆಲಿಸಿದರೆ ಆತಂಕ ಹಾಗೂ ಸೆಡೆತ ಕಡಿಮೆಯಾಗುತ್ತದೆ, ನಿಮ್ಮ ಕಾರ್ಯಚಟುವಟಿಕೆ ಬಿರುಸುಗೊಳ್ಳುತ್ತದೆ. ಇದು ಏಕೆ ಎಂದು ಯಾರಿಗೂ ಇನ್ನೂ ಗೊತ್ತಿಲ್ಲ. ನಿಮ್ಮ ಮನೆಯನ್ನು ಸಂಗೀತ ಕುಟೀರವಾಗಿಸಿ ನೀವೆ ಹಾಡಿ. ಏಕಕಾಲಕ್ಕೆ ಹಾಡುತ್ತಲೆ ಚಿಂತಿಸುವುದು ಯಾವನಿಗೂ ಸಾಧ್ಯವಿಲ್ಲ.

ಅಳು : ಕೆಲವು ಸಂದರ್ಭಗಳಲ್ಲಿ ಕಟ್ಟಿಟ್ಟ ದುಃಖದ ರೂಪವೇ ಚಿಂತೆಯಾಗಿರುತ್ತದೆ. ಆಗ ನಿಮಗೆ ನಿಜವಾಗಿಯೂ ಅಗತ್ಯವಾದುದೆಂದರೆ ಮಾಡಬೇಕೆಂದಿರುವುದೇನೆಂದರೆ ಕಣ್ಣೀರ ಹೊಳೆಯಲ್ಲಿ ಆ ಚಿಂತೆಯನ್ನು ಕೊಚ್ಚಿ ಹಾಕುವುದೇ ಆಗಿರುತ್ತದೆ. ಒಂದು ಒಳ್ಳೆಯ ಅಳುವಿನಿಂದ ಒಂದು ಕೆಟ್ಟ ಚಿಂತೆ ತೊಳೆದು ಹೋಗಬಹುದು.

ನಗು : ಎಷ್ಟು ಬೇಕಾದರೂ ನಗಿ. ಬದುಕಿನಲ್ಲಿ ಚಿಂತೆ ಅಥವಾ ಒತ್ತಡವನ್ನು ನಿಭಾಯಿಸಲು ಹಾಸ್ಯವು ಒಂದು ಉತ್ತಮ ಮಾರ್ಗ. ಅತ್ಯಂತ ದುಷ್ಕರ ಸಮಯದಲ್ಲಿಯೂ ನಗುವುದು ತಪ್ಪೇನಿಲ್ಲ. ಘಾತಕ ಚಿಂತೆಯಿಂದ ಸಮಗ್ರ ಅವಲೋಕನ ಸಾಮರ್ಥ್ಯ ಕುಗ್ಗಿದರೆ, ಹಾಸ್ಯದಿಂದ ಆ ಸಾಮರ್ಥ್ಯ ಹಿಗ್ಗುತ್ತದೆ.

ಯಾವಾಗಲೂ ನೆನಪಿಡಿ. ವ್ಯಾಪಕ ಸಮಗ್ರ ದೃಷ್ಟಿಯಲ್ಲಿ ಎಲ್ಲವೂ ತೃಣಸಮಾನ.

ಪ್ರಪಂಚದಲ್ಲಿ ಷಂಡರ ಸಂಖ್ಯೆ ಹೆಚ್ಚುತ್ತಿದೆಯೇ ?

ಡಾ: ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ,
ಬಾದಾಮಿ-೫೮೭ ೨೦೧

'ದಿ ಚಿಲ್ಡ್ರನ್ ಆಫ್ ಮೆನ್' ಪುಸ್ತಕವನ್ನು ೧೯೯೨ರಲ್ಲಿ ಪಿ. ಡಿ. ಜೇಮ್ಸ್ ಬರೆದು ಪ್ರಕಟಿಸಿದರು. ಇದೊಂದು ಕಾಲ್ಪನಿಕ ಕಾದಂಬರಿ. ಹೊಸ ವಸ್ತುವಿನ ಸುತ್ತ ಹೆಣೆದ ನಿರೂಪಣೆಯಲ್ಲಿಯ ವೈವಿಧ್ಯಗಳಿಂದಾಗಿ ಕಾದಂಬರಿ ಪ್ರಪಂಚಾದ್ಯಂತ ಪ್ರಸಿದ್ಧವಾಯಿತು. ಓದುಗರ ಕುತೂಹಲ ಕೆರಳಿಸುವ ವಿಷಯ ಅದರಲ್ಲಿತ್ತು. ಪ್ರಪಂಚದಲ್ಲಿಯ ಪುರುಷರಲ್ಲಿ ವೀರ್ಯಾಣುಗಳ ಸಂಖ್ಯೆ ಕುಸಿಯತೊಡಗಿತ್ತು. ಅದು ಎಷ್ಟೊಂದು ಕುಸಿದಿತ್ತೆಂದರೆ ಇನ್ನು ಮುಂದೆಂದೂ ಫಲವಂತಿಕೆ ನೀಡದಷ್ಟು ಶಕ್ತಿ ಸಾಮರ್ಥ್ಯ ಕಳೆದುಕೊಳ್ಳುವ ಮಟ್ಟಕ್ಕೆ ಪುರುಷರಲ್ಲಿ ವೀರ್ಯಾಣುಗಳ ಸಂಖ್ಯೆ ಇಳಿದಿತ್ತು. ಶತಪ್ರಯತ್ನಗಳ ಫಲವಾಗಿ ಪ್ರಪಂಚದಲ್ಲಿಯ ಕೊನೆಯ ಮಗುವಿನ ಜನನವಾಗಿತ್ತು. ಇಂಥ ಸ್ಥಿತಿ ತಲೆದೋರಿದ ಕಲ್ಪನೆ ಮಾಡಿಕೊಂಡು ಜೇಮ್ಸ್ ಕಾದಂಬರಿ ರಚಿಸಿದ್ದರು. ಓದುಗರಲ್ಲಿ ಭಯ ಭೀತಿ ಹುಟ್ಟಿಸಿದ್ದರು.

'ಹುಣಸೆಗಿಡ ಮುಪ್ಪಾದರೆ ಹುಳಿ ಮುಪ್ಪೆ?'' ಎಂಬ ತತ್ವಕ್ಕೆ ಜೋತು ಬಿದ್ದ ತತ್ವವಿಜ್ಞಾನಿಗಳು ಲೇಖಕರ ಕಲ್ಪನೆಯ ಬಗ್ಗೆ ಅಪಹಾಸ್ಯ ಮಾಡಿದ್ದರು. ಇದು ಅಸಾಧ್ಯ ಎಂದು ಒಕ್ಕೊರಲಿನಿಂದ ಸಭೆ ಸಮಾರಂಭಗಳಲ್ಲಿ ಚೀರಾಡಿದ್ದರು. ಸದ್ದಿಲ್ಲದಂತೆ ವೈದ್ಯ ವಿಜ್ಞಾನಿಗಳಿಗೆ ಬಿಸಿ ತಟ್ಟಿಸಿ ನಿದ್ದೆಗೆ ಭಂಗ ತಂದಿದ್ದರು. ವಿಜ್ಞಾನಿಗಳು ತರ್ಕಿಸಿದರು; ಕಂಡ ಕಂಡಲ್ಲಿ ಚರ್ಚಿಸಿದರು. ಈ ಸಾಧ್ಯ ಸಾಧ್ಯತೆಗಳ ಒರೆಗೆ ಹಚ್ಚುವ ಸಲುವಾಗಿ ಪ್ರಪಂಚದಲ್ಲ ಆಯ್ದ ೬೧ ಸ್ಥಳಗಳಲ್ಲಿ ಬೇರೆ ಬೇರೆ ವಿಜ್ಞಾನಿಗಳು ಅಧ್ಯಯನ ನಡೆಸಿದರು.

'ಬ್ರಿಟಿಷ್ ಮೆಡಿಕಲ್ ಜರ್ನಲ್'ನಲ್ಲಿ ಅದೇ ವರ್ಷ ಡೇನಿಶ್ ಮಕ್ಕಳ ತಜ್ಞ ನೀಲ್ಸ್ ಸ್ಕಕ್ಕೆಬೇಕ್ ಮುಖಪುಟ ಲೇಖನವೊಂದನ್ನು ಪ್ರಕಟಿಸಿದರು. ''ಆರೋಗ್ಯವಂತ ಪುರುಷನ ವೀರ್ಯಾಣುಗಳ ಸಂಖ್ಯೆ ಕಳೆದ ೫೦ ವರ್ಷಗಳಲ್ಲಿ ಶೇಕಡಾ ೪೦ಕ್ಕೂ ಹೆಚ್ಚು ಕುಸಿದಿದೆ. ವೀರ್ಯಾಣುಗಳ ಸಾಂದ್ರತೆ ೧೯೩೮-೯೦ರಲ್ಲಿ ಬಹಳಷ್ಟು ಇಳಿಮುಖವಾಗಿದ್ದು, ಈ ಇಳಿಮುಖ ಮುಂದುವರಿಯುತ್ತಿರುವುದನ್ನು ನಿರ್ಧರಿಸಲು ನನಗೆ ಸಾಧ್ಯವಾಗಲಿಲ್ಲ... ಎಂಬ ಅಸಹಾಯಕತೆಯನ್ನು ಸ್ಕಕ್ಕೆಬೇಕ್ ವರದಿಯಲ್ಲಿ ತಿಳಿಸಿದ್ದರು. ವೀರ್ಯಾಣುಗಳ ಸಂಖ್ಯೆಯು ಇಳಿಮುಖದ ಜೊತೆಗೆ ಈಗಿರುವ ವೀರ್ಯಾಣುಗಳ ಸಂಖ್ಯೆಯಲ್ಲಿ ಅಸಾಮಾನ್ಯ ವೀರ್ಯಾಣಗಳು ಹೇರಳ-ತಲೆಯಿಲ್ಲದ, ಬಾಲವಿಲ್ಲದ ಅಥವಾ ಎರಡೆರಡು ತಲೆಯ ವೀರ್ಯಾಣುಗಳು, ಚಲಿಸದ ವೀರ್ಯಾಣುಗಳ ಸಂಖ್ಯೆ ವೀರ್ಯದಲ್ಲಿ ಹೆಚ್ಚುತ್ತಿರುವುದನ್ನು ಗಮನಿಸಿರುವ ಆಂಡ್ರಾಲಾಜಿಸ್ಟರು ದಂಗಾಗಿದ್ದಾರೆ. ಕಳವೆ ಮಟ್ಟದ ವೀರ್ಯಾಣುಗಳು ಹೆಚ್ಚುತ್ತಿರುವುದಕ್ಕೆ ಚಿಂತಿಸುತ್ತಿದ್ದಾರೆ. ೧೯೫೦ರ ದಶಕದಲ್ಲಿ ಇಂತಹ ಅನಾರೋಗ್ಯಕರ, ವೀರ್ಯಾಣುಗಳು ಶೇಕಡಾ ೩೦ಕ್ಕಿಂತ ಕಡಿಮೆಯಿದ್ದರೆ, ಈಗ ಶೇಕಡಾ ೬೦-೭೦ರಷ್ಟಾಗಿವೆ. ಇತ್ತೀಚಿನ ಕೆಲವು ಸಂಶೋಧನೆಗಳ ಪ್ರಕಾರ ವೀರ್ಯದಲ್ಲಿ ಅನಾರೋಗ್ಯಕರ ವೀರ್ಯಾಣುಗಳಿಗಿಂತ ಹೆಚ್ಚಾಗಿ ಸಾಯುತ್ತಿರುವ ವೀರ್ಯಾಣುಗಳ ಸಂಖ್ಯೆಯೇ ಹೆಚ್ಚಾಗಿವೆಯಂತೆ.

ಪ್ರಪಂಚದಲ್ಲಿ ಜನಸಂಖ್ಯಾಸ್ಫೋಟ ಅಥವಾ ಶಾಸ್ತ್ರಜ್ಞರನ್ನು ಆವರಿಸಿ ಆಗು

ಪೋಗುಗಳ ಬಗ್ಗೆ, ಅನಾಹುತಗಳ ಬಗ್ಗೆ, ಅಭಿವೃದ್ಧಿ ಕುಂಠಿತವಾಗುತ್ತಿರುವ ಬಗ್ಗೆ, ಕುಂದು ಕೊರತೆಗಳ ಬಗ್ಗೆ ತಲೆಕೆಡಿಸಿಕೊಳ್ಳದಂತೆ ಮಾಡುತ್ತಿದ್ದಂತೆ, ಪುರುಷರಲ್ಲಿಯ ಪುರುಷತ್ವ ಗಮನಾರ್ಹವಾಗಿ ಇಳಿಮುಖವಾಗುತ್ತಿದ್ದು, ಜನಸಂಖ್ಯಾ ನಿಯಂತ್ರಣಕ್ಕೆ ನಿಸರ್ಗ ಕಂಡು ಕೊಂಡ ಹೊಸ ಮಾರ್ಗವೇನೋ ಎಂಬ ಊಹಾಪೋಹಗಳಿಗೆ ಎಡೆಮಾಡಿಕೊಟ್ಟಿದೆ.

ಜನನ ತಜ್ಞ ಲೂಯಿ ಗಿಲೆಟ್ ಅಮೆರಿಕದ ಕಾಂಗ್ರೆಸ್ ಸಮಾವೇಶದಲ್ಲಿ ಸೇರಿದವರನ್ನು ಉದ್ದೇಶಿಸಿ ಮಾತನಾಡುತ್ತ-"ಈ ಕೋಣೆಯಲ್ಲಿರುವ ಪ್ರತಿಯೊಬ್ಬ ಗಂಡಸು ತನ್ನ ತಾತನ ಅರ್ಧದಷ್ಟು ಗಂಡಸಾಗಿ ಉಳಿದಿಲ್ಲ" ಎಂದಿರುವುದು ಅಪಹಾಸ್ಯಮಾಡಲು ಅಲ್ಲ. ಅಜ್ಜ ಮುತ್ತಜ್ಜರಿಗೆ ವರ್ಷಕ್ಕೊಂದು ಮಗುವಾಗುತ್ತಿತ್ತಂತೆ. ಹೀಗಾಗಿ ನೈಸರ್ಗಿಕ ಪ್ರಕೋಪಕ್ಕೇ, ಸಾಂಕ್ರಾಮಿಕ ರೋಗಗಳ ಸುಳಿಯಲ್ಲಿ ಸಿಕ್ಕು ಅಳಿದು ಉಳಿದವರ ಸಂಖ್ಯೆ ಕ್ರಿಕೆಟ್ ಟೀಮುಗಳಷ್ಟು ಇರುತ್ತಿತ್ತು. ಆದರೆ ಈಗಿನವರು ಮಕ್ಕಳಾಗಲಿಲ್ಲ ಎಂಬ ಕಾರಣದಿಂದ ವೈದ್ಯರ ಹತ್ತಿರ ತಪಾಸಣೆಗೆ ಬರುತ್ತಿರುವವರ ಸಂಖ್ಯೆ ಹೆಚ್ಚುತ್ತಿರುವುದು ಷಂಡರ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ಪುಷ್ಟಿ ನೀಡುತ್ತಿದೆ.

೧೯೪೦ರಲ್ಲಿ ಪುರುಷರಲ್ಲಿಯ ವೀರ್ಯಾಣುಗಳ ಸಂಖ್ಯೆ ಮಿಲಿಲೀಟರ್ ವೀರ್ಯದಲ್ಲಿ ಸರಾಸರಿ ೧೧೩.ದಶಲಕ್ಷವಿತ್ತು.೧೯೯೨ರಲ್ಲಿ ಅದು ಕೇವಲ ೬೬ದಶಲಕ್ಷಕ್ಕೆ ಕುಸಿದಿದೆ. ಅಂಡ್ರಾ ಲಾಜಿಸ್ಟರ ಪ್ರಕಾರ ಈ ಸ್ಥಿತಿಗೆ 'ಓಲಿಗೋಸ್ಪರ್ಮಿಯಾ' ಎನ್ನುವರು. ಇಂಥವರಲ್ಲಿ ಮಕ್ಕಳಾಗುವ ಪ್ರಮಾಣ ಕಡಿಮೆ. ಇದು ಅಸಾಮಾನ್ಯಸ್ಥಿತಿ. ಆದರೆ ಇಂದಿನ ಪುರುಷರಲ್ಲಿ ಇದೇ ಹೆಚ್ಚು ಕಡಿಮೆ ಸಾಮಾನ್ಯ ಸ್ಥಿತಿಯಾಗಿಬಿಟ್ಟಿದೆ. ಇದರ ಬಗ್ಗೆ ಅನುಮಾನ ಬೇಡ ಎನ್ನುತ್ತಾರೆ. ಪ್ರಜನನ ತಜ್ಞರು.

ಪಾಶ್ಚಾತ್ಯ ರಾಷ್ಟ್ರಗಳ ಪುರುಷರಲ್ಲಿ ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗುತ್ತಿರುವ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ವರದಿಗಳು ಬಂದಿದ್ದರೂ, ಕೆಲವು ವಿಜ್ಞಾನಿಗಳು ಇದೊಂದು ಹಾಸ್ಯಾಸ್ಪದ ಸಂಶೋಧನೆಯೆಂದೇ ಗೇಲಿ ಮಾಡುತ್ತಿದ್ದರು. ಎರಡು ವಾರಗಳ ಹಿಂದೆ ಫಿನ್‌ಲೆಂಡಿನ ವಿಜ್ಞಾನಿಗಳು ಪ್ರಕಟಿಸಿದ ವರದಿಗಳಿಂದ ವೀರ್ಯಾಣುಗಳ ಸಮಸ್ಯೆ ನಿಜಕ್ಕೂ ಗಂಭೀರವಾಗುತ್ತಿದೆಯೆಂದು 'ನ್ಯೂಸೈಂಟಿಸ್ಟ್' ಬರೆದಿದೆ. ಇದಕ್ಕೆ ಪೂರಕ, ಪೋಷಕ, ಪರಿಪೂರಕವಾಗಿ ಇದೇ ವೇಳೆಗೆ ಅಮೆರಿಕದ ವಿಜ್ಞಾನಿಗಳ ಒಂದು ತಂಡವು ಇಲಿಗಳ ಮೇಲೆ ಪ್ರಯೋಗ ನಡೆಸಿ, ಫ್ಯಾಕ್ಟರಿಗಳ ಮಾಲಿನ್ಯದಿಂದಾಗಿ ವೀರ್ಯಾಣುಗಳ ಸಂಖ್ಯೆ ಇಳಿಮುಖವಾಗುತ್ತಿರುವುದು ನಿಜವೆಂದು ಘೋಷಿಸಿ ಜಗದ ಜನರನ್ನು ದಂಗುಗೊಳಿಸಿದ್ದಾರೆ.

ಕಾರ್ಖಾನೆಗಳಿಂದ ಹೊರಹೊಮ್ಮುವ ಮಾಲಿನ್ಯಕಾರಕ ರಾಸಾಯನಿಕಗಳು ಸ್ತ್ರೀಯರ ದೇಹದಲ್ಲಿ ಸ್ರವಿಸುವ 'ಈಸ್ಟ್ರೋಜೆನ್' ಎಂಬ ಬೆದೆ ಜನಕವನ್ನೇ ಹೋಲುತ್ತಿದ್ದು, ಇವು ಗಂಡಸರ ವೃಷಣದ ಮೇಲೆ ದಾಳಿ ಮಾಡಿ ಷಂಡರ ಸಂಖ್ಯೆಯು ಹೆಚ್ಚಳಕ್ಕೆ ಶಕ್ತಿಯು ಸರಬರಾಜು ಮಾಡುತ್ತಿವೆಯೆಂದು ಪತ್ತೆ ಹಚ್ಚಲಾಗಿದೆ. ಔದ್ಯಮಿಕ ರಾಷ್ಟ್ರಗಳಲ್ಲಿ ತಾನೆ ಹೀಗಾಗುತ್ತಿರುವುದು, ನಮಗೇಕೆ ಅದರ ಚಿಂತೆ? 'ಮಾಡಿದ್ದುಣ್ಣೋ ಮಾರಾಯ' ಎಂದು ಅನೇಕರು ನಕ್ಕಿದ್ದರು. ಗರ್ಭ ತಡೆಯುವ ಮಾತ್ರೆಗಳು, ಕೆಲವು ಶಾಂಪುಗಳು ಮತ್ತು ಚರ್ಮದ ಕ್ರೀಮುಗಳ ತಯಾರಿಕೆಯಲ್ಲಿ ಕೃತಕ ಬೆದೆಜನಕಗಳನ್ನು ಬಳಸುತ್ತಾರೆ. ಪೆಟ್ರೋಲ್ ಸಂಸ್ಕರಣೆಯಿಂದ ಲಭಿಸುವ ಬಗೆ ಬಗೆಯ ರಾಸಾಯನಿಕಗಳು, ಡಿಡಿಟಿ ಮುಂತಾದ ಕೀಟ ನಾಶಕಗಳು, ಪ್ಲಾಸ್ಟಿಕ್ ಸಾಮಗ್ರಿಗಳು, ಎನಾಮೆಲ್ ಪೇಂಟ್, ಕೂದಲಿಗೆ ಹಚ್ಚುವ ಹೇರ್ ಡೈಗಳಲ್ಲಿ ಬೆದೆಜನಕಗಳು ಪತ್ತೆಯಾಗಿವೆ.

ವಾಸ್ತವಿಕವಾಗಿ ಈ ಬೆದೆಜನಕಗಳ ಉಪ

ಯೋಗ ಎಷ್ಟು ಹರಡಿದೆಯೆಂದರೆ, ಚರಂಡಿಯ ಹೊಲಸಿನಲ್ಲೂ ಅವುಗಳ ಕುರುಹುಗಳನ್ನು ಪತ್ತೆ ಹಚ್ಚಬಹುದಾಗಿದೆ. ಬ್ರಿಟನ್ನಿನಲ್ಲಿ ಚರಂಡಿ ನೀರು ಸೇರುವಂಥ ಕೆರೆ, ಕಟ್ಟೆ ಮತ್ತು ಹಳ್ಳ,ಹೊಳೆಗಳ ಪುರುಷ ಮೀನುಗಳು ಎರಡು ಲಿಂಗಗಳ ಜನನಾಂಗಗಳನ್ನ ವಿಕಸಿಸಿಕೊಂಡಿದ್ದುವು. ಈ ಸ್ಥಿತಿಯನ್ನು 'ಇಂಟರ್‌ಸೆಕ್ಸ್' ಅಂತರಲಿಂಗ ಎನ್ನುತ್ತಾರೆ. ಒಬ್ಬ ಮನುಷ್ಯ ಚೆದೆಜನಕ ಒಂದು ಅಂಶಕ್ಕೆ ತುತ್ತಾದರೂ, ತಾತ್ವಿಕವಾಗಿ ಫಲವತ್ತತೆಯಲ್ಲಿ ಕ್ಷೀಣಿಸತೊಡಗುತ್ತಾನೆ. ಡೆನ್ಮಾರ್ಕ್, ಎಡಿನ್‌ಬರೋ ಮತ್ತು ಪ್ಯಾರಿಸ್‌ನಲ್ಲಿಯ ಅಧ್ಯಯನಗಳು ಇದನ್ನೇ ಸಾಬೀತು ಮಾಡಿವೆ. ಜನವರಿ ೯೭ರ ಬ್ರಿಟಿಷ್ ಮೆಡಿಕಲ್ ಜರ್ನಲ್‌ನಲ್ಲಿ ಪ್ರಕಟ ವಾದ ವರದಿಯ ಪ್ರಕಾರ ಸರಾಸರಿ ವೃಷಣದ ತೂಕವೂ ಕಡಿಮೆಯಾಗಿದ್ದು, ಅಲ್ಲಿ ಬರೀ ನಾರಿನ ಅಂಶ ಹೆಚ್ಚಾಗುತ್ತಿದೆಯಂತೆ.

ಡೈ ಇಥೈಲ್ ಸ್ಟಿಲ್ ಬೆಸ್ಟ್ರೋಲ್ ಎನ್ನುವ ಕೃತಕ ಚೆದೆಜನಕವನ್ನು ಸಂಯುಕ್ತ ಅಮೆರಿಕದಲ್ಲಿ ಗರ್ಭಿಣಿ ಸ್ತ್ರೀಯರು ಗರ್ಭಪಾತ ತಡೆಯಲು ೧೯೪೦-೭೦ರ ಅವಧಿಯಲ್ಲಿ ಸೇವಿಸುತ್ತಿದ್ದರು. ೧೯೭೦ರ ಅಂತ್ಯಕ್ಕೆ ಇದರ ದುಷ್ಪರಿಣಾಮಗಳು ವೈದ್ಯರ ಗಮನಕ್ಕೆ ಬಂದವು. ಈ ಔಷಧಿ ಬಳಕೆಯನ್ನು ಬಹಿಷ್ಕರಿಸುವ ವೇಳೆಗಾಗಲೇ ಜನಿಸಿದ ಗಂಡು ಮಕ್ಕಳು ಜೋತು ಬೀಳದ ವೃಷಣ ಮತ್ತು ವಿಕೃತ ಶಿಶ್ನಗಳನ್ನು ಹೊಂದಿದ್ದರು, ವೀರ್ಯಾಣುಗಳ ಸಂಖ್ಯೆ ಸಾಕಷ್ಟು ಕಡಿಮೆಯಾಗಿತ್ತು . ಗುಣಮಟ್ಟವೂ ಕಳಪೆಯದಾಗಿತ್ತು.

ವೀರ್ಯ ಸ್ಖಲನದ ಮಾದರಿಗಳು ಅಷ್ಟೇನೂ ನಿಖರವಾಗಿರುವುದಿಲ್ಲವೆಂದು. ಅಪಸ್ವರ ಎತ್ತಿದ ಹೆಲ್ಸಿಂಕಿ ವಿಶ್ವವಿದ್ಯಾಲಯದ ತಜ್ಞರು ಮನುಷ್ಯರ ವೃಷಣಗಳ ಅಧ್ಯಯನಕ್ಕೆ ತೊಡಗಿದರು. ಕಳೆದ ಎರಡು ದಶಕಗಳಲ್ಲಿ ಆಕಸ್ಮಿಕ ಅಪಘಾತಕ್ಕೆ ತುತ್ತಾಗಿ ಸತ್ತ ೫೨೦ ವ್ಯಕ್ತಿಗಳ ಪೋಸ್ಟ್ ಮಾರ್ಟಮ್ ಮಾಡುವಾಗ ತೆಗೆದಿಟ್ಟ ವೃಷಣದ ಅಂಗಾಂಶಗಳನ್ನು ಅಧ್ಯಯನ ಮಾಡಿ ಇತ್ತೀಚಿನ ವರ್ಷಗಳಲ್ಲಿ ವೀರ್ಯಾಣುಗಳ ಸಂಖ್ಯೆ ಇಳಿಮುಖವಾಗುತ್ತಿರುವುದು ನಿಜ ಎಂದು ವರದಿ ಮಾಡಿದ್ದಾರೆ ಮತ್ತು ಉಳಿದ ತಜ್ಞರ ತಂಡದ ವರದಿಗಳನ್ನು ಒಪ್ಪಿಕೊಂಡಿದ್ದಾರೆ.

ಗರ್ಭಾದಾನಕ್ಕೆ ಒಂದೇ ಒಂದು ವೀರ್ಯಾಣು ಸಾಕು ಅಂದಾಗ ಈಗಿನ ಪುರುಷರಲ್ಲಿಯೂ ಲಕ್ಷಾಂತರ ವೀರ್ಯಾಣುಗಳಿರುವಾಗ ಫಲವತ್ತತೆಗೆ ಧಕ್ಕೆಯಾಗುವುದೆಲ್ಲಿ? ಸಂತಾನೋತ್ಪತ್ತಿ ಕ್ರಿಯೆ ನಾವು ತಿಳಿದಷ್ಟು ಸರಳವಾದುದಲ್ಲ ಸುಲಭವಾದುದೂ ಅಲ್ಲ. ಅಂಡಾಣುವಿನೊಂದಿಗೆ 'ಮಿಥುನ' ನಡೆಸಲು ಪೈಪೋಟಿಯಿದ್ದಷ್ಟೂ ಸಂತಾನೋತ್ಪತ್ತಿ ಸುಲಭ. ಇನ್ನೂ ಸರಳವಾಗಿ ಹೇಳಬೇಕೆಂದರೆ ಅತ್ಯಂತ ಬಲಿಷ್ಠವಾದ ವೀರ್ಯಾಣು ಉಳಿದ ಕೋಟ್ಯಂತರ ವೀರ್ಯಾಣುಗಳೊಡನೆ ಸ್ಪರ್ಧೆ ನಡೆಸುತ್ತದೆ. ಅತ್ಯಂತ ಬಲಿಷ್ಠ ವೀರ್ಯಾಣು ಜಯ ಗಳಿಸುತ್ತದೆ. ಸುಂದರ ಮಗುವಿನ ಸೃಷ್ಟಿಗೆ ನಾಂದಿ ಹಾಡುತ್ತದೆ. ಈ ಪೈಪೋಟಿ ತಪ್ಪಿಹೋದಲ್ಲಿ ಬಲಹೀನ ವೀರ್ಯಾಣು ಅಂಡಾಣುವಿನ ಹೊರಾವರಣ ಛೇದಿಸಿ ಮಿಲನ ಹೊಂದಬಹುದು. ಆದರೆ, ಬಲಹೀನ ವೀರ್ಯಾಣುವಿನ ಸಂತತಿ ಅಂಗವಿಕಲ ಮಕ್ಕಳ ಜನನಕ್ಕೆ ಕಾರಣವಾಗಬಹುದು. ಇಲ್ಲವೆ ಅಂಡದಿಂದ ಪಿಂಡವಾಗುವ ಸಾಧ್ಯತೆಗಳೇ ಕಡಿಮೆಯಿರುವುದರಿಂದ ಬಂಜೆತನ ಗಟ್ಟಿಗೊಳ್ಳಬಹುದು.

ವಿಜ್ಞಾನಿಗಳಲ್ಲಿ ವೀರ್ಯನಾಶ ಮತ್ತು ಸಂತಾನೋತ್ಪತ್ತಿ ಬಗ್ಗೆ ಒಮ್ಮತದ ಅಭಿಪ್ರಾಯ ಎಲ್ಲ. ಸಂತಾನೋತ್ಪತ್ತಿ ಅರ್ಥಮಾಡಿಕೊಳ್ಳಲು ಅಂಡಾಣು ವೀರ್ಯಾಣುಗಳ ಕೂಡಿಕೆಯ ಪರಿಜ್ಞಾನ ಅಗತ್ಯ. ಅಂಡಾಣು ಒಂದು ಗುಂಡಗಿನ ಬೀಜದಂತಿದೆ. ಇದಕ್ಕೆ ಗಡಸು ಹೊರಕವಚ ಎದೆ. ವೀರ್ಯಾಣು ಕಪ್ಪೆಮರಿಯಂತೆ ಕಾಣುತ್ತದೆ.

ಮತ್ತು ಅದರಂತೆಯೇ ಈಜುತ್ತದೆ. ತಲೆ ಮತ್ತು ಬಾಲವಿದ್ದು ಮುಂದಿನ ಪೀಳಿಗೆಗೆ ಹಸ್ತಾಂತರಿಸುವಂತಹ ವಂಶವಾಹಿ ವಸ್ತುವಾದ ಡಿ.ಎನ್.ಎ. ತಲೆಯ ಭಾಗದಲ್ಲಿರುತ್ತದೆ.ಇದನ್ನು ಸ್ತ್ರೀ ಅಂಡಾಣುವಿನ ಹೊರಕವಚ ಭೇದಿಸಲು ಸಹಾಯ ಮಾಡುವ ಕಿಣ್ವಗಳ ಒಂದು ಗೋಡೆ ಸುತ್ತುವರೆದಿರುತ್ತದೆ. ಅಂಡಾಣುವಿನ ಹೊಸ ಕವಚ ಜೀರ್ಣವಾದ ಮೇಲೆ ವೀರ್ಯಾಣು ಪ್ರವೇಶಿಸಲು ಸಾಧ್ಯ. ಅಂಡಾಣುವಿನ ಹೊರ ಕವಚ ಎಷ್ಟು ಕಠಿಣವಾಗಿರುತ್ತದೆಂದರೆ, ಅದು ಜೀರ್ಣವಾಗಲು ಸಾವಿರಾರು ಆರೋಗ್ಯವಂತ ವೀರ್ಯಾಣುಗಳ ಕಿಣ್ವಗಳು ಬೇಕು.

ಹೀಗಾಗಿ ಅಂಡಾಣುವಿನ 'ಮೈಥುನ'ಕ್ಕೆ ವೀರ್ಯಾಣುಗಳು ಪೈಪೋಟಿ ನಡೆಸಿದರೂ, ಸಾವಿರಾರು ಆರೋಗ್ಯವಂತ ವೀರ್ಯಾಣುಗಳ ಬಲಿದಾನದ ಅನಂತರ ಒಂದು ವೀರ್ಯಾಣು ಅಂಡಾಣುವನ್ನು ಸೇರಲು ಸಾಧ್ಯವಾಗುವುದು. ಫಲಪ್ರದವಾದ ಕೂಡಲೇ ಅಂಡಾಣುವಿನ ಹೊರಕವಚ ಮತ್ತಷ್ಟು ಕಠಿಣವಾಗುವುದು. ವೀರ್ಯಾಣುವಿನ ಒಳಪ್ರದೇಶವನ್ನು ಸಂಪೂರ್ಣ ನಿಷೇಧಿಸುವುದು. ವೀರ್ಯಾಣುಗಳಲ್ಲಿಯ ಕಿಣ್ವಗಳ ಪ್ರಭಾವದಿಂದಲೂ ಅದು ಜೀರ್ಣಗೊಳ್ಳದಷ್ಟು ಬಲಿಷ್ಠವಾಗುವುದು. ಇದರಿಂದಾಗಿ ಕೋಟ್ಯಂತರ ವೀರ್ಯಾಣುಗಳು ಅಂಡಾಣುವಿನ ಸುತ್ತಗಸ್ತು ಹೊಡೆದು ಸುಸ್ತಾಗಿ ಸತ್ತು ಹೋಗುವುವು. ಪ್ರತಿ ಅಂಡಾಣು ಬಿಡುಗಡೆಯಾದ ಅನಂತರ ಸುಮಾರು ಎರಡು ದಿನಗಳ ಕಾಲ ಬದುಕಿರಬಲ್ಲದು.

ಹೆಂಗಸರ ಮತ್ತು ಗಂಡಸರ ಸಂತಾನ ಪ್ರಕ್ರಿಯೆಯಲ್ಲಿ ಹಲವಾರು ವ್ಯತ್ಯಾಸಗಳಿವೆ. ಒಂದು ಹೆಣ್ಣು ಮಗು ಹುಟ್ಟಿದಾಗ ಅದು ಸುಮಾರು ಹತ್ತು ಲಕ್ಷ ಅಂಡಾಣುಗಳನ್ನು ಹೊಂದಿದ್ದು, ಮಗು ಬೆಳೆದಂತೆ ಅಂಡಾಣುಗಳ ಸಂಖ್ಯೆ ಕಡಿಮೆಯಾಗುತ್ತ ಬಂದು ಋತುಮತಿಯಾಗುವ ಹೊತ್ತಿಗೆ ಕೆಲವು ಸಾವಿರ ಅಂಡಾಣುಗಳನ್ನು ಮಾತ್ರ ಹೊಂದಿರುತ್ತದೆ. ಪ್ರತಿ ಋತುಸ್ರಾವದ ಅನಂತರ ಸ್ತ್ರೀದೇಹ ಒಂದೇ ಒಂದು ಅಂಡಾಣುವನ್ನು ಗುರುತಿಸಿ ಆರೋಗ್ಯವಾಗಿ ಬೆಳೆಸಿ ಗರ್ಭಕೋಶದತ್ತ ತಳ್ಳುತ್ತದೆ. ಒಂದು ವೇಳೆ ಈ ಅಂಡಾಣು ವೀರ್ಯಾಣುವಿನೊಡನೆ ಕೂಡುವಲ್ಲಿ ವಿಫಲವಾದಲ್ಲಿ ಋತುಸ್ರಾವವಾಗಿ ಮತ್ತೊಂದು ಅಂಡಾಣುವಿನ ಪೋಷಣೆ ಪ್ರಾರಂಭವಾಗುತ್ತದೆ.

ಒಬ್ಬ ಆರೋಗ್ಯವಂತ ಮಹಿಳೆ ಸರಾಸರಿ ಮೂವತ್ತು ವರ್ಷಗಳ ಕಾಲ ಗರ್ಭವತಿಯಾಗುವ ಸಾಧ್ಯತೆಗಳಿದ್ದರೆ, ಆಕೆಯ ಜೀವನದಲ್ಲಿ ೩೦೦-೪೦೦ ಅಂಡಾಣು ಉತ್ಪತ್ತಿಯಾಗುತ್ತದೆ. ಸಾಮಾನ್ಯವಾಗಿ ಮಹಿಳೆ ನಲವತ್ತೈದು ವಸಂತಗಳನ್ನು ಕಂಡ ಮೇಲೆ ಮುಟ್ಟು ನಿಂತು ಹೋಗುವುದರಿಂದ ಉಳಿದ ಅಂಡಾಣುಗಳು ವಿಕಸಿತಗೊಳ್ಳದೆ ನಾಶವಾಗುವುವು.

ಗಂಡಸರ ಸಂತಾನ ಕ್ರಿಯೆ ಇದಕ್ಕೆ ತದ್ವಿರುದ್ಧ. ಇವರಲ್ಲಿ ವೀರ್ಯಾಣು ಉತ್ಪತ್ತಿ ಒಂದು ನಿರಂತರ ಕ್ರಿಯೆ. ಹುಡುಗ ಯೌವನಾವಸ್ಥೆಗೆ ಕಾಲಿಟ್ಟ ಮೇಲೆ ಪ್ರಾರಂಭಗೊಳ್ಳುವ ವೀರ್ಯಾಣು ಉತ್ಪಾದನೆ ಕೊನೆಯ ಉಸಿರಿರುವವರೆಗೂ ಮುಂದುವರೆಯುವುದು. ಈ ನಿರಂತರ ಕ್ರಿಯೆಗೆ ಅಡ್ಡಿ ಆತಂಕಗಳನ್ನು ಒಡ್ಡುವ ಕೆಲವು ರಾಸಾಯನಿಕಗಳು ಪತ್ತೆಯಾಗಿವೆ. ಅವುಗಳಲ್ಲಿ ಡಿ.ಡಿ.ಟಿ. ಮತ್ತು ಕ್ಲೋರೀನ್ ಪ್ರಮುಖವಾಗಿದ್ದು, ಇವು ಇಡೀ ವೀರ್ಯ ತಳಿಯನ್ನೇ ನಾಶಮಾಡುವ ಶಕ್ತಿಯನ್ನು ಹೊಂದಿವೆ. ಈ ರಾಸಾಯನಿಕಗಳು ಗಂಡಸರ ದೇಹವನ್ನು ಸೇರಿದ ಮೇಲೆ ಹೆಂಗಸರ ಹಾರ್ಮೋನ್ ಆದ 'ಈಸ್ಟ್ರೋಜೆನ್' ಉತ್ಪಾದನೆಗೆ ಪ್ರಚೋದನೆ ನೀಡುತ್ತವೆ. ಈಸ್ಟ್ರೋಜೆನ್ ರಕ್ತ ಸಂಚಾರದ ಮೂಲಕ ಮೆದುಳಿಗೆ ಮುತ್ತಿಗೆ ಹಾಕುವುದು ಮೆದುಳಲ್ಲಿ ಉತ್ಪಾದನೆಯಾಗುವ ವೀರ್ಯೋತ್ಪಾದನೆ ಚೋದಕಗಳ ಬೆಳವಣಿಗೆ, ಬಿಡುಗಡೆಯಾಗದಂತೆ ಅಡ್ಡಿಯೊಡ್ಡುವುವು. ಈ

ಎಲ್ಲಿ ಕ್ರೋಡೀಕೃತ ಪರಿಣಾಮದಿಂದಾಗಿ ವ್ಯಕ್ತಿ ಷಂಡನಾಗುವನು.

ಡಿಡಿಟಿಯಂತಹ ವಿಷ ರಾಸಾಯನಿಕಗಳು ನಾಶವಾಗವುದೇ ಇಲ್ಲ. ಸಸ್ಯಗಳಿಂದ ಮಾಂಸಾಹಾರಿಗಳಿಗೂ ಈ ಡಿಡಿಟಿ ನಿರಂತರವಾಗಿ ಆಹಾರ ಸರಪಳಿಯಲ್ಲಿ ಬದಲಾವಣೆಯಾಗದೇ ಸಾಗುತ್ತಲೇ ಇರುತ್ತದೆ. ಆದ್ದರಿಂದ ಡಿಡಿಟಿಯಿಂದ ಮುಕ್ತಿಯೇ ಇಲ್ಲ. ಶ್ರೀಮಂತ ರಾಷ್ಟ್ರಗಳಲ್ಲಿ ಡಿಡಿಟಿ ಬಳಕೆಯನ್ನು ಬಹಿಷ್ಕರಿಸಿದ್ದರೂ, ಭಾರತದಂಥ ಬಡರಾಷ್ಟ್ರಗಳಲ್ಲಿ ಈ ರಾಸಾಯನಿಕಗಳ ಬಳಕೆ ಮುಂದುವರಿಯುತ್ತಲೇ ಇದೆ. ಹೀಗಾಗಿ ನಮಗೆ ಅರಿವಿಲ್ಲದಂತೆ ಷಂಡರ ದಂಡು ಹೆಚ್ಚುತ್ತಲೇ ಇದೆ. ಧೂಮಪಾನ, ಮದ್ಯಪಾನ ಹಾಗೂ ಹೆಚ್ಚುತ್ತಿರುವ ವಾಯುಮಾಲಿನ್ಯವೂ ವೀರ್ಯನಾಶದಲ್ಲಿ ಡಿಡಿಟಿಯಷ್ಟೇ ಪರಿಣಾಮಕಾರಿಯಾಗಿರುವಂತಹವು.

ಆಂಧ್ರಪ್ರದೇಶ ಮತ್ತು ಗುಜರಾತಿನ ಗ್ರಾಮೀಣ ಪ್ರದೇಶಗಳಿಂದ ವೀರ್ಯನಾಶದ ವರದಿಗಳು ನಿರಂತರವಾಗಿ ಸುದ್ದಿಮಾಧ್ಯಮಗಳಲ್ಲಿ ಗೋಚರಿಸುತ್ತಲೇ ಇವೆ. ಆದರೆ ಯಾವುದೇ ವೈಜ್ಞಾನಿಕ ಸಂಶೋಧನೆಗಳ ಸಹಾಯವಿಲ್ಲದೆ ಅದರ ಪರಿಣಾಮವನ್ನು ಅಳೆಯುವುದು ಅಸಾಧ್ಯ. ಮುಂಬೈನ ಡಾ. ಅನಿರುದ್ಧ ಮಾಲಪಾನಿ ಮತ್ತು ಡಾ. ಅಂಜಲಿ ಮಾಲಪಾನಿ ''ನಮ್ಮ ಬಂಜೆತನದ ಕ್ಲಿನಿಕ್‌ಗೆ ಬರುವ ದಂಪತಿಗಳ ಸಂಖ್ಯೆ ದಿನದಿಂದ ದಿನಕ್ಕೆ ಏರುತ್ತಲೆ ಇದೆ'' ಎನ್ನುತ್ತಾರೆ. ಕಲೋಬದಲ್ಲಿರುವ ಅವರ ವೀರ್ಯಾಣುಗಳ ನಿಧಿಯಲ್ಲಿ ಆರೋಗ್ಯವಂತ ದಾನಿಗಳನ್ನು ತಿರಸ್ಕರಿಸುವ ಪ್ರಮಾಣ ಶೇಕಡಾ ೮೦ ರಿಂದ ೯೦ರಷ್ಟೆನ್ನುತ್ತಾರೆ. ಇದನ್ನು ಸರಳೀಕರಿಸಿ ಹೇಳುವುದಾದರೆ, ೧೦ರಲ್ಲಿ ಒಬ್ಬ ದಾನಿಯ ವೀರ್ಯಾಣುಗಳನ್ನು ಮಾತ್ರ ಉಪಯೋಗಿಸಬಹುದು. ಮುಂಬೈಯಲ್ಲಿ ವೀರ್ಯಾಣು ಪರೀಕ್ಷೆ ನಡೆಸುವ ರೋಗ ತಜ್ಞ ಡಾ. ಅವಿನಾಶ್ ಫಾಡ್ಕೆಯವರ ಪ್ರಕಾರ ಹೆಂಡತಿಯರು ಗರ್ಭಿಣಿಯರಾಗದಿದ್ದಾಗ ಮಾತ್ರ ವೀರ್ಯಾಣು ಪರೀಕ್ಷೆಗೆ ಪುರುಷರು ಬರುವುದರಿಂದ, ವೀರ್ಯಾಣುಗಳ ಸರಿಯಾದ ಸರಾಸರಿ ಸಂಖ್ಯೆ ನೀಡಲಾಗುತ್ತಿಲ್ಲ ಬಹಳ ವರ್ಷಗಳ ಹಿಂದೆ ವೀರ್ಯಾಣುಗಳ ಸಾಮಾನ್ಯ ಸಂಖ್ಯೆ ೧೦೦ ದಶಲಕ್ಷ ಅಥವಾ ಅದಕ್ಕೂ ಹೆಚ್ಚು ಇದ್ದದ್ದು. ಇಂದು ಅಂಥ ಸಂಖ್ಯೆಗಳು ಬಲು ಅಪರೂಪ ಎನ್ನುವುದನ್ನು ನೋಡಿದರೆ ಸಮಸ್ಯೆ ಎಷ್ಟೊಂದು ತೀವ್ರವಾಗಿ ಬೆಳೆಯುತ್ತಿದೆ ಎಂಬುದರ ಅರಿವು ಯಾರಿಗಾದರೂ ಆದೀತು.

ಇತ್ತೀಚಿನ ದಿನಗಳಲ್ಲಿ ತಲೆದೋರುತ್ತಿರುವ ಬಂಜೆತನಕ್ಕೆ ಶೇಕಡಾ ೬೦ರಷ್ಟು ಗಂಡಸರೆ ಕಾರಣರಾಗಿರುತ್ತಾರೆ ಎನ್ನುತ್ತಾರೆ ಬೆಂಗಳೂರಿನ ಪ್ರಜನನ ತಜ್ಞ ಡಾ. ಕಿಣಿ, ''ಐವತ್ತು ವರ್ಷಗಳ ಹಿಂದೆ ಮಕ್ಕಳಾಗದಿರಲು ಮಹಿಳೆಯರೇ ಹೆಚ್ಚಿನ ಮಟ್ಟಿಗೆ ಕಾರಣರಾಗಿದ್ದರು. ಆದರೆ ಈಗ ಹೆಚ್ಚೂ ಕಡಿಮೆ ವಂಶಾವಿಹೀನತೆಗೆ ಗಂಡಸರೇ ಕಾರಣ'' ಎನ್ನುವುದು ವಿಶ್ವದ ಪ್ರಜನನ ತಜ್ಞರ ಒಮ್ಮತದ ಅಭಿಪ್ರಾಯವಾಗಿದೆ. ಬಂಜೆಯರ ಬಾಳಲ್ಲಿ ಬೆಳಕನ್ನು ಚೆಲ್ಲಲು ಕೆಲವು ವರ್ಷಗಳ ಹಿಂದೆ ಪ್ರನಾಳ ಶಿಶುಗಳು ಸಾಕಷ್ಟು ಭರವಸೆ ನೀಡಿದ್ದವು. ಆದರೆ ವೀರ್ಯಮಾಲಿನ್ಯದಿಂದಾಗಿ ಇದು ಗಗನಕುಸುಮವಾಗುತ್ತಿದೆ.

ಭೂಮಿಯ ಮೇಲೆ ಮನುಷ್ಯನ ಸಂತತಿಯ ಅಳಿವು, ಉಳಿವಿನ ಪ್ರಶ್ನೆ ಈಗ ಕೊಂಚ ಗಂಭೀರವಾಗುತ್ತಿದೆ. ಗಂಡಸರಲ್ಲಿ ವೀರ್ಯಾಣುಗಳ ಸಂಖ್ಯೆ ಕಡಿಮೆಯಾಗುತ್ತಿರುವುದೂ, ವೃಷಣಗಳ ಕ್ಯಾನ್ಸರ್ ವಿಶೇಷವಾಗಿ ಪಾಶ್ಚಾತ್ಯರಲ್ಲಿ, ಹಾವಳಿ ಹೆಚ್ಚುತ್ತಿರುವುದೂ ಎಲ್ಲರಲ್ಲೂ ದುಗುಡ, ದುಮ್ಮಾನಗಳನ್ನು ಹೆಚ್ಚಿಸಿವೆ. ಸಾಸ್ಟ್ರೋಡಾಮಸ್‌ನಂತಹ ಭವಿಷ್ಯಕಾರರು ಹೇಳಿದ ಪ್ರಳಯದ ಮೊದಲೇ ವೀರ್ಯ ನಾಶದಿಂದ ಮನುಕುಲ ನಾಶವಾಗಬಹುದೇ ? ಎಂಬ ಭಯ ಭೂತಾಕಾರವಾಗಿ ದಿನೇ ದಿನೇ ಬೆಳೆಯುತ್ತಲೇ ಇದೆ.

ಮೂವತ್ತರ ಅನಂತರವೂ ಸುಟಿಯಾಗಿ ಇರುವುದು ಹೇಗೆ?

ಗಂಗಾ ಬಿ. ರಾಜಪುರೋಹಿತ
೭೧೬, ೧೬ನೇ ಮುಖ್ಯರಸ್ತೆ
ಸರಸ್ವತೀ ಪುರ, ಮೈಸೂರು-೯

ಹೆಣ್ಣುಮಕ್ಕಳು ೨೦ ರಿಂದ ೨೯ ವಯಸ್ಸಿನ ವರೆಗೆ ಏನು ಬೇಕಾದರೂ ತಿಂದು, ಉಂಡು ಗಟ್ಟಿಮುಟ್ಟಾಗಿ ಬೆಟ್ಟದಂತೆ ಇರುತ್ತಾರೆ. ಮೂವತ್ತು ವಯಸ್ಸು ಮುಟ್ಟಿದ ಕೂಡಲೇ ಅವರ ಅವಯುವಗಳು 'ಉಪಯೋಗಿಸಿರಿ ಇಲ್ಲವೇ ಕಳೆದುಕೊಳ್ಳಿರಿ' ಎಂಬ ಸ್ಥಿತಿಯನ್ನು ತಲಪುತ್ತವೆ. ಮೊದಲಿನಂತೆ ಅವರು ತಿಂದುಂಡುಕೊಂಡು ಇರಲು ಸಾಧ್ಯವಾಗುವುದಿಲ್ಲ. ಇನ್ನು ೪೦-೫೦ ವಯಸ್ಸು ಮುಟ್ಟಿದ ಮೇಲಂತೂ ಕಾಯಿಲೆಗಳು ಬರುವ ಸಂಭವ ಹೆಚ್ಚು ಇರುತ್ತದೆ. ಸುದೈವದಿಂದ ೩೦ ವಯಸ್ಸಿನ ಅನಂತರವೂ ಆರೋಗ್ಯವಂತರಾಗಿ ಉಳಿಯಲು ಒಂದು ದಾರಿಯಿದೆ. ದಿನಾಲು ಬೆಳಗ್ಗೆ ಮತ್ತು ಸಂಜೆ ಎರಡೆರಡು ಕಿಲೋಮೀಟರ್ ನಡೆಯುವುದು. ದಿನ ನಿತ್ಯದ ಕೆಲಸಗಳಲ್ಲಿ ಇದೂ ಒಂದು ಕೆಲಸವೆಂದು ತಿಳಿದುಬಿಡಬೇಕು. ಯಾವ ವಯಸ್ಸಿನವರಿಗೂ ನಡೆಯುವುದು ಲಾಭದಾಯಕವೇ. ಏನಿದ್ದರೂ ೩೦-೪೦-೫೦ರ ವಯೋಮಿತಿಯಲ್ಲಿರುವ ಸ್ತ್ರೀಯರಿಗಂತೂ ನಡೆಯುವುದು ಅತ್ಯಂತ ಉಪಯುಕ್ತ. ಅಲ್ಲದೆ, ನಡೆಯುವುದನ್ನು ಯಾವಾಗ ಬೇಕಾದರೂ ಶುರು ಮಾಡಬಹುದು ಮತ್ತು ತಪ್ಪದೇ ಪಾಲಿಸಿಕೊಂಡು ಬರಬಹುದು. ನಡೆಯುವುದರಿಂದ ಕೀಲುಗಳು ಸಡಿಲವಾಗುತ್ತವೆ. ಓಡುವ ವ್ಯಾಯಾಮದಿಂದ ದೇಹದ ಮೇಲೆ ಆಗುವ ಪರಿಣಾಮಕ್ಕಿಂತ ಮೂರು ಪಟ್ಟು ಹೆಚ್ಚು ಒಳ್ಳೆಯ ಪರಿಣಾಮ ನಡೆಯುವುದರಿಂದ ಆಗುತ್ತದೆ ಎಂದು ಅಮೆರಿಕೆಯ ಡಾಕ್ಟರ್ ಡೇವಿಡ್ ಕೆ. ಬ್ರೆನ್ನನ್ ಕಂಡುಹಿಡಿದ್ದಿದ್ದಾರೆ. ನಡೆಯುವುದು ಮತ್ತು ವ್ಯಾಯಾಮ ಮಾಡುವುದು ಹೆಣ್ಣುಮಕ್ಕಳನ್ನು ಘೋರ ಕಾಯಿಲೆಗಳಿಂದ ರಕ್ಷಿಸುತ್ತವೆ.

೩೦ರ ದಶಕದ ವಯಸ್ಸಿನಲ್ಲಿ: ಅನೇಕ ಹೆಣ್ಣುಮಕ್ಕಳು ೩೦ನೇ ವಯಸ್ಸಿನವರೆಗೆ ತಮ್ಮ ಪ್ರಕೃತಿಯನ್ನು ಒಳ್ಳೆಯ ಹಿಡಿತದಲ್ಲಿ ಇಟ್ಟುಕೊಂಡಿರುತ್ತಾರೆ. ಆಮೇಲೆ ಶುರುವಾಗುತ್ತದೆ, ಮಕ್ಕಳು ಮತ್ತು ಮನೆತನದ ಜವಾಬ್ದಾರಿ ಮೊದಲಾದ ತಾಪತ್ರಯ. ತಾಪತ್ರಯದಿಂದಾಗಿ ಅವರ ದೈಹಿಕ ಚಟುವಟಿಕೆಗಳು ತುಂಬ ಕಡಿಮೆಯಾಗುತ್ತವೆ. ಇದರಿಂದಾಗಿ ಅವರ ಮೈ ತೂಕವೂ ಹೆಚ್ಚುತ್ತದೆ. ಇದನ್ನು ತಪ್ಪಿಸಲು ೩೦ನೆಯ ವಯಸ್ಸಿನಲ್ಲಿಯೇ ನಡೆಯುವುದು ಮತ್ತು ವ್ಯಾಯಾಮ ಮಾಡುವುದನ್ನು ಪ್ರಾರಂಭಿಸುವುದು ಯುಕ್ತ. ಬಿರುಸಾಗಿ ನಡೆಯುವುದರಿಂದ ಮೈಯಲ್ಲಿಯ ಕೊಬ್ಬನ್ನು ಕರಗಿಸಬಹುದು. ನಡೆಯುವಾಗ ಮಾತ್ರವಲ್ಲದೇ ವ್ಯಾಯಾಮ ಮಾಡುವಾಗಲೂ ಈ ಕ್ರಿಯೆ ನಡೆಯುತ್ತಿರುತ್ತದೆ. ಕಡಿಮೆ ಊಟ ಮಾಡಿದರೆ ಮೈ ಕರಗುತ್ತದೆ ಎಂಬುದು ತಪ್ಪು. ಅದರಿಂದ ನಿಶ್ಶಕ್ತಿ ಮಾತ್ರ ಆಗುತ್ತದೆ. ಆದರೆ ನಡೆಯುವುದರಿಂದ ಉಂಡದ್ದೆಲ್ಲ ಪಚನವಾಗಿ ಶಕ್ತಿಯೂ ಬರುತ್ತದೆ. ಒಮ್ಮೊಮ್ಮೆ ಕಾರಣಾಂತರದಿಂದ ಹೊರಗೆ ಹೋಗಿ ನಡೆಯುವುದು ಆಗದಿದ್ದಲ್ಲಿ ಮನೆಯಲ್ಲಿಯೇ ೩೦-೪೦ ನಿಮಿಷ ವ್ಯಾಯಾಮ ಮಾಡಿದರೂ ಅಷ್ಟೇ ಒಳ್ಳೆಯ ಪರಿಣಾಮವಾಗುತ್ತದೆ. ನಡೆಯುವುದರಿಂದ ಇನ್ನೊಂದು ಲಾಭವಿದೆ. ದಿನವಿಡೀ

೨೦೦೦ ಮೇ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಅಲೀಸ್ ಲೀಶ್ಮ ಕೆಲ್ಲೀ ಅವರ ''ದಿ ವೇ ಟು ಸ್ಟೇ ಫಿಟ್ ಆಫ್ಟರ್ ಥರ್ಟಿ' ಎಂಬ ಲೇಖನದ ಭಾವಾನುವಾದ.

ಚೈತನ್ಯವಿರುತ್ತದೆ. ವ್ಯಾಯಾಮ ಮಾಡುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಪ್ರಾಣವಾಯುವು ದೇಹದಲ್ಲಿ ಸೇರುತ್ತದೆ. ಒಳಗೆ ತೆಗೆದುಕೊಂಡ ಪ್ರಾಣವಾಯುವು ದೇಹದಲ್ಲಿ ಸರಿಯಾಗಿ ವಿನಿಯೋಗವಾಗುತ್ತದೆ. ಅಂಥ ಮರಿಗೆಸುಸ್ತು ಎಂಬುದು ಇರದೆ ಯಾವಾಗಲೂ ಲವಲವಿಕೆ ಇರುತ್ತದೆ. ಹೀಗೆಂದು ಅಮೆರಿಕನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಬರ್ಟ್ ಮುಫಾತ್ ಎನ್ನುವವರು ಹೇಳಿದ್ದಾರೆ.

೪೦ರ ದಶಕದ ವಯಸ್ಸಿನಲ್ಲಿ: ೪೦ರ ದಶಕದಲ್ಲಿರುವ ಹೆಣ್ಣುಮಕ್ಕಳು ತಮ್ಮ ಜೀವನದ ಬಗ್ಗೆ ಮತ್ತು ತಮ್ಮ ಕುಟುಂಬದ ಬಗ್ಗೆ ಹೆಚ್ಚಿನ ಜವಾಬ್ದಾರಿಯಿಂದಾಗಿ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಈ ಸಮಯದಲ್ಲೇ ಘೋರ ಕಾಯಿಲೆಗಳು ಬರುವ ಸಾಧ್ಯತೆ ಇರುತ್ತದೆ. ಆದ್ದರಿಂದ ದಿನಾಲು ನಡೆಯುವುದರಿಂದ ಅದನ್ನು ತಡೆಗಟ್ಟಬಹುದು.

ಒತ್ತಡಕ್ಕೆ ಪರಿಹಾರ: ಸೂಸನ್ ಜಾನ್‌ಸನ್ ಎಂಬ ಅಮೆರಿಕೆಯ ಸಂಶೋಧಕಿಯೊಬ್ಬಳು ಹೇಳುವಂತೆ ನೀವು ಮಾನಸಿಕ ಒತ್ತಡಕ್ಕೆ ಒಳಗಾದಾಗ ನಿಮ್ಮ ರಕ್ತದ ಒತ್ತಡವೂ ಹೆಚ್ಚಾಗುತ್ತದೆ, ಹೃದಯದ ಬಡಿತವೂ ಹೆಚ್ಚುತ್ತದೆ. ಒತ್ತಡವನ್ನು ಉಂಟುಮಾಡುವ ಹಾರ್ಮೋನುಗಳು ರಕ್ತದಲ್ಲಿ ಬಂದು ಸೇರಿಕೊಳ್ಳುತ್ತವೆ. ಸತತವಾದ ಮಾನಸಿಕ ಒತ್ತಡದಿಂದ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ. ನೆಗಡಿ ಬಂದರೂ ಬೇಗ ವಾಸಿಯಾಗುವುದಿಲ್ಲ. ನಡೆಯುವುದರಿಂದ ಮಿದುಳಿನಲ್ಲಿ ಶಕ್ತಿದಾಯಕ ದ್ರವಗಳು ಉತ್ಪನ್ನವಾಗಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಅಲ್ಲದೇ ಮಾನಸಿಕ ಒತ್ತಡವೂ ಕಡಿಮೆಯಾಗುತ್ತದೆ.

ರೋಗ ತಡೆಯುವಿಕೆ: ಯಾವುದೇ ಕಾರಣದಿಂದ ಘೋರ ಕಾಯಿಲೆಗಳಿಗೆ ತುತ್ತಾಗುವುದನ್ನು, ಅಕಾಲ ಮೃತ್ಯುವಿಗೆ ಈಡಾಗುವುದನ್ನು ವ್ಯಾಯಾಮದಿಂದ ನೂರಕ್ಕೆ ಐವತ್ತರಷ್ಟು ಕಡಿಮೆ ಮಾಡಬಹುದೆಂದು ಜಾನ್‌ಸನ್ ಹೇಳುತ್ತಾಳೆ. ೧೯೯೮ರಲ್ಲಿ ಅಮೆರಿಕೆಯಲ್ಲಿ ನಡೆದ ಇನ್ನೊಂದು ಸಂಶೋಧನೆಯ ಪ್ರಕಾರ ಪಾರ್ಶ್ವವಾಯು ರೋಗ ಬರುವ ಸಾಧ್ಯತೆ ಕೂಡ ವ್ಯಾಯಾಮ ಮಾಡುವವರಿಗೆ ತೀರಾ ಕಡಿಮೆಯಂತೆ. ವ್ಯಾಯಾಮ ಎಂದರೆ ತಾಲೀಮಿನಂಥ ಒಂದು ಕಷ್ಟವಾದ ಕ್ರಿಯೆಯಲ್ಲಿ ನಡೆಯುವಂಥ ಒಂದು ಸುಲಭ ಕ್ರಿಯೆಯೂ ವ್ಯಾಯಾಮವೇ.

ಸ್ನಾಯುಗಳು ಕ್ಷೀಣಿಸುವಿಕೆ : ವಯಸ್ಸಾದಂತೆ ಸ್ನಾಯುಗಳು ಕ್ಷೀಣಿಸುತ್ತವೆ, ನಡೆಯುವುದು ಮತ್ತು ವ್ಯಾಯಾಮ ಮಾಡುವುದರಿಂದ ಸ್ನಾಯುಗಳು ಕ್ಷೀಣಿಸದಂತೆ ತಡೆಗಟ್ಟಬಹುದು. ಅಷ್ಟೇ ಅಲ್ಲದೇ ಅವನ್ನು ಬಲಗೊಳಿಸಲೂ ಬಹುದು.

೫೦ರ ದಶಕದ ವಯಸ್ಸಿನಲ್ಲಿ : ೫೦ ವರ್ಷ ವಯಸ್ಸಾದಂತೆ ಹೆಣ್ಣುಮಕ್ಕಳಿಗೆ ಮುಟ್ಟು ನಿಲ್ಲುತ್ತದೆ. ಆಗ ಆರೋಗ್ಯದ ಬಗ್ಗೆ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಯಾಕೆಂದರೆ, ದೇಹದಲ್ಲಿ ಆಸ್ಟ್ರೋಜನ್ ಎಂಬ ದ್ರವದ ಉತ್ಪತ್ತಿ ಕಡಿಮೆಯಾಗುತ್ತದೆ ಹೆಣ್ಣುಮಕ್ಕಳಿಗೆ ೫೦ ವರ್ಷವಾದಂತೆ ವಯಸ್ಸಾಯಿತು ಎಂಬ ಅನುಭವ ಹೆಚ್ಚು ಹೆಚ್ಚು ಬರತೊಡಗುತ್ತದೆ. ಆದರೆ ನಿಯಮಿತವಾಗಿ ವ್ಯಾಯಾಮ ಮಾಡುತ್ತಿರುವ ಹೆಣ್ಣುಮಕ್ಕಳಿಗೆ ತಾವು ವ್ಯಾಯಾಮ ಮಾಡದಿರುವವರಿಗಿಂತ ಸುದೃಢರಾಗಿದ್ದೇವೆ ಎಂದೆನಿಸುತ್ತದೆ. ವಯಸ್ಸಾಗದಂತೆ ನೋಡಿ ಕೊಳ್ಳುವ ಔಷಧಿ ಯಾವುದಾದರೂ ಇದ್ದರೆ ಅದು ವ್ಯಾಯಾಮ ಮಾತ್ರ.

ಮುಟ್ಟು ನಿಲ್ಲುವಿಕೆ : ಮುಟ್ಟು ನಿಂತವರಿಗೆ ನಡೆಯುವ ವ್ಯಾಯಾಮ ಅನೇಕ ವಿಧದಲ್ಲಿ ಸಹಾಯ ಮಾಡುತ್ತದೆ. ಕೆಲವನ್ನು ಇಲ್ಲಿ

ನೋಡೋಣ :

ಹೃದಯವನ್ನು ರಕ್ಷಿಸುವಂಥ ಆಸ್ಟ್ರೋಜನ್ನಿನ ಉತ್ಪತ್ತಿ ಕಡಿಮೆಯಾಗುವುದರಿಂದ ಹೃದಯಾಘಾತದಂಥ ಗಂಡಾಂತರ ಹೆಚ್ಚಿಗೆ ಇರುತ್ತದೆ. ಅದಕ್ಕಾಗಿ ನಡೆಯುವಂಥ ವ್ಯಾಯಾಮದಿಂದ ಈ ಗಂಡಾಂತರವನ್ನು ಬಹಳಷ್ಟು ಕಡಿಮೆ ಮಾಡಬಹುದು. ಅಲ್ಲದೇ ರಕ್ತದ ಒತ್ತಡವನ್ನೂ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು.

ವ್ಯಾಯಾಮದಿಂದ ಮಿದುಳು ಉತ್ಪನ್ನ ಮಾಡುವ ದ್ರವಗಳು ಮುಟ್ಟುನಿಂತಾಗ ಉಂಟಾಗುವ ಅಸಹನ ಪ್ರವೃತ್ತಿಯನ್ನು ಕಡಿಮೆ ಮಾಡುತ್ತವೆ.

ಆಸ್ಟ್ರೋಜನ್ ದ್ರವದ ಉತ್ಪತ್ತಿ ಕಡಿಮೆಯಾಗುವುದರಿಂದ ನಿದ್ರಾಹೀನತೆ ಉಂಟಾಗುತ್ತದೆ. ವ್ಯಾಯಾಮದಿಂದ ಸುಖವಾದ ನಿದ್ರೆ ಕೂಡ ಬರುತ್ತದೆ.

ಆರೋಗ್ಯದ ಸಮಸ್ಯೆ ಬಂದಾಗ ಔಷಧದ ಮೊರೆ ಹೋಗುವ ಬದಲು ವ್ಯಾಯಾಮ ಮಾಡುವುದರಿಂದ ಎಷ್ಟೋ ಕಾಯಿಲೆಗಳು ಕಡಿಮೆಯಾಗುತ್ತವೆ.

ಸಂಧಿವಾತ: ಜಗತ್ತಿನಾದ್ಯಂತ ಎಷ್ಟೋ ಜನ ಕಾಲು, ಕೈ, ಬೆನ್ನು, ಸೊಂಟ ನೋವು ಎಂದು ಬಳಲುತ್ತಿದ್ದಾರೆ. ಈ ನೋವು ವಿಶ್ರಾಂತಿಯಿಂದ ಕಡಿಮೆಯಾಗುತ್ತದೆ ಎಂಬ ತಪ್ಪು ತಿಳುವಳಿಕೆ ಇಷ್ಟು ದಿವಸ ಇತ್ತು. ಆದರೆ ಅದು ವ್ಯಾಯಾಮದಿಂದಲೇ ಕಡಿಮೆಯಾಗುತ್ತದೆ ಎಂದು ಇತ್ತೀಚಿನ ಸಂಶೋಧನೆಗಳಿಂದ ದೃಢಪಟ್ಟಿದೆ. ಆದರೆ ಒಂದು ಮಾತು : ಸಂಧಿವಾತದಿಂದ ಬಳಲುತ್ತಿರುವವರು ವ್ಯಾಯಾಮ ಪ್ರಾರಂಭಿಸುವ ಮುನ್ನ ಡಾಕ್ಟರರ ಸಲಹೆ ಪಡೆದು ಪ್ರಾರಂಭಿಸುವುದು ಒಳ್ಳೆಯದು.

ಮೂಳೆಗಳು ಪೊಳ್ಳಾಗುವುದು : ೫೦ ವರ್ಷ ದಾಟಿದ ಹೆಣ್ಣುಮಕ್ಕಳಿಗೆ ಮೂಳೆಗಳು ಪೊಳ್ಳಾಗಿ ಸ್ವಲ್ಪ ಏಟು ಬಿದ್ದರೂ ಮೂಳೆ ಮುರಿಯುವ ಸಂಭವವಿರುತ್ತದೆ. ಮುಟ್ಟು ನಿಲ್ಲುವ ಮೊದಲು ದೇಹದಲ್ಲಿ ಉತ್ಪತ್ತಿಯಾಗುವ ಆಸ್ಟ್ರೋಜನ್ನಿನಿಂದ ಮೂಳೆಗಳ ರಕ್ಷಣೆಯಾಗುತ್ತಿರುತ್ತದೆ. ಹೇಗೆಂದರೆ ಅದು ಕ್ಯಾಲ್ಸಿಯಮ್ ಮತ್ತು ಇತರ ಲೋಹದ ಕಣಗಳನ್ನು ಅಂಟಿನಂತೆ ಬಂಧಿಸಿ ಇಡುತ್ತದೆ. ಆಸ್ಟ್ರೋಜನ್ನಿನ ಉತ್ಪತ್ತಿ ಕಡಿಮೆಯಾದಾಗ ಮೂಳೆಗಳು ದುರ್ಬಲವಾಗುತ್ತವೆ. ಆದರೆ ವ್ಯಾಯಾಮದಿಂದ ಮೂಳೆಗಳು ಗಟ್ಟಿಯಾಗಿ ಅವುಗಳ ಭಾರಹೊರುವ ಶಕ್ತಿ ಹೆಚ್ಚುತ್ತದೆ.

ಇವೆಲ್ಲಕ್ಕಿಂತ ಮಿಗಿಲಾಗಿ ನಡೆಯುವುದರಿಂದ ಜೀವನದ ಗುಣಮಟ್ಟ ಸುಧಾರಿಸುತ್ತದೆ. ಆತ್ಮಾಭಿಮಾನ, ಆತ್ಮವಿಶ್ವಾಸ ಮತ್ತು ಬಂದದ್ದನ್ನೆಲ್ಲ ಎದುರಿಸುವ ಧೈರ್ಯ ಹೆಚ್ಚುತ್ತದೆ. ಆದ್ದರಿಂದ ಎಲ್ಲರೂ ನಡೆಯುವ ಮತ್ತು ವ್ಯಾಯಾಮ ಮಾಡುವ ಅಭ್ಯಾಸವನ್ನು ಇಟ್ಟುಕೊಂಡು ತಮ್ಮ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಒಳ್ಳೆಯದು.

ಆರೋಗ್ಯವೇ ಭಾಗ್ಯ!!

ಆಸ್ಟಿನ್‌ಗೆ ಜೀವದಾನ

ಜಿ. ವೈದೇಹಿ
೩೫೮ ಪುನರ್ವಸು
ನವಿಲು ಮುಖ್ಯ ರಸ್ತೆ
ಕುವೆಂಪುನಗರ
ಮೈಸೂರು-೫೭೦ ೦೨೩

[ಕರುಳ ಕುಡಿಯನ್ನು ಯಾವ ತಾಯಿತಾನೇ ನೋಡಬಯಸುವುದಿಲ್ಲ? ಈ ಬಸಿರಿನಿಂದ ತನ್ನ ಜೀವಕ್ಕೇ ಅಪಾಯವೆಂದು ತಿಳಿದಿದ್ದರೂ ಮಗುವಿಗಾಗಿ ತನ್ನ ಜೀವವನ್ನು ಒತ್ತೆ ಇಡಲು ಸಿದ್ಧಳಾದ ಒಬ್ಬ ತಾಯಿಯ ಕಥೆ ಇಲ್ಲಿದೆ]

ಕ್ಯಾಲಿಫೋರ್ನಿಯದ ವ್ಯಾಯಾಮ ಶಾಲೆಯಲ್ಲಿ ರಿಚರ್ಡ್‌ರೊಸೆಟ್‌ನನ್ನು ಮೊತ್ತ ಮೊದಲು ಭೇಟಿಯಾದ ಕಂದು ಕೂದಲಿನ ಏಂಜೆಲ ಗ್ಯಾಲೆರಾನಿ ಆತನ ಎತ್ತರ ಮತ್ತು ಕಪ್ಪುಕೂದಲಿಗೆ ಮರುಳಾದಳು. ಉದ್ಯೋಗದ ವಿಷಯವಾಗಿ ಪರಸ್ಪರ ಮಾತನಾಡಿದರು. ಅವಳು ಒಂದು ಜೀವವಿಮಾ ಕಂಪೆನಿಯಲ್ಲಿದ್ದಳು. ಇವನು ತೊಂದರೆಗೊಳಗಾದ ಹುಡುಗರ ವಸತಿಯೊಂದರಲ್ಲಿದ್ದನು. ಅವರ ಮಾತುಕತೆಗಳು ಕ್ರಮೇಣ ಮಕ್ಕಳ ಕಡೆ ತೇಲಿತು. ೨೯ ವಯಸ್ಸಿನ ರಿಚ್ ತನಗೆ ಮೂರುಮಕ್ಕಳು ಬೇಕೆಂದನು. ೨೪ ವಯಸ್ಸಿನ ಏಂಜೆ ಇಬ್ಬರು ಹುಡುಗರು ಒಬ್ಬ ಹುಡುಗಿಯನ್ನು ಬಯಸಿದಳು. 'ಹೌದು ಹುಡುಗಿ ಕಡೆಯವಳಾಗಿರಬೇಕು' ಎಂದು ಮುಗುಳ್ನಗುತ್ತಾ ರಿಚ್ ನುಡಿದನು.

ಇಬ್ಬರೂ ಪರಸ್ಪರ ಪ್ರೀತಿಸತೊಡಗಿದರು. ಅವರ ಕುಟುಂಬಗಳಿಗೂ ಒಪ್ಪಿಗೆಯಾಯಿತು. ಏಂಜೆಲಗೆ ಲಾಸ್ ಆಂಜಲೀಸ್‌ನಲ್ಲಿ ಹೊಸ ಕೆಲಸ ಸಿಕ್ಕಾಗ ರಿಚ್ ಕೂಡ ಅಲ್ಲಿಗೆ ಹೋದನು.

೧೯೯೨ರ ಸೆಪ್ಟೆಂಬರ್ ೨೬ರಂದು ಅವರ ಮದುವೆಯಾಯಿತು. ಏಂಜೆಲ ಗರ್ಭಿಣಿಯಾದಳು. ಆದರೆ ಗರ್ಭಪಾತವಾಯಿತು. ಒಂದು ವರ್ಷದ ನಂತರ ಎರಡನೇ ಸಲವೂ ಗರ್ಭಪಾತವಾಗಿ ಏಂಜೆಲಳಿಗೆ ಆತಂಕವಾಯಿತು. 'ಕೆಲವರಿಗೆ ಮಕ್ಕಳಾಗುವುದೇ ಇಲ್ಲ, ಬಹುಶಃ ನಾವೂ ಇದೇ ಗುಂಪಿನವರಾಗಿರಬಹುದು' ಎಂದು ರಿಚ್‌ಗೆ ನಿರಾಸೆಯಿಂದ ಹೇಳಿದಳು.

೧೯೯೬ರ ಆಗಸ್ಟ್ ತಿಂಗಳಲ್ಲಿ ಏಂಜೆಲಗೆ ತಾನು ಮತ್ತೆ ಗರ್ಭಿಣಿಯಾಗಿರುವುದು ತಿಳಿಯಿತು. ಆದರೆ ಅವರ ಉತ್ಸಾಹಕ್ಕೆ ಮತ್ತೆ ತಣ್ಣೀರೆರಚಿದಂತೆ ಆಯಿತು. ಅವಳಿಗೆ ರಕ್ತಸ್ರಾವ ಪ್ರಾರಂಭವಾಯಿತು. ಶ್ರವಣಾತೀತ ಧ್ವನಿ ತರಂಗದ ಪರೀಕ್ಷೆಯಾದ ನಂತರ ಏಂಜೆಲಳಿಗೆ ಒಬ್ಬ ತಜ್ಞನ ಸಲಹೆ ತೆಗೆದುಕೊಳ್ಳುವಂತೆ ಸೂಚಿಸಲಾಯಿತು. ಸಂಪೂರ್ಣ ವಿಶ್ರಾಂತಿಗಾಗಿ ಮನೆಯಲ್ಲಿ ಒರಗು ಮಂಚದ ಮೇಲೆ ಮಲಗಿ ಏಂಜೆಲ ಕಿಟಕಿಯ ಮೂಲಕ ಗಾಳಿಗೆ ತೂಗಾಡುತ್ತಿರುವ ಮರಗಳನ್ನು ನೋಡುತ್ತಿದ್ದಳು ಕನಿಷ್ಠ ಒಂದು ಮಗುವನ್ನಾದರೂ ಪಡೆಯುವ ಅವರ ಕನಸು ಶರದೃತುವಿನ ಎಲೆಗಳಂತೆ ಕಳಚಿಕೊಳ್ಳತೊಡಗಿತು.

ಡಾ. ವ್ಯಾಲೀಡ್ ಡೋನಿ ಅಕ್ಟೋಬರ್ ೨೧ರಂದು ರೊಸೆಟ ದಂಪತಿಗಳನ್ನು ತನ್ನ ಕೊಠಡಿಗೆ ಕರೆಸಿದನು. ಆಗತಾನೇ ಏಂಜೆಲ ಗರ್ಭದ ಶ್ರವಣಾತೀತ ಧ್ವನಿತರಂಗ ಪರೀಕ್ಷೆಯನ್ನು ಎರಡನೇ ಸಲ ಕೂಲಂಕಷವಾಗಿ ಮಾಡಿ ಮುಗಿಸಿದ್ದನು. ಫಲಿತಾಂಶವು ಅಷ್ಟು ತೃಪ್ತಿದಾಯಕವಾಗಿರಲಿಲ್ಲ.

''ಗರ್ಭಕೋಶದಲ್ಲಿರುವ ಪ್ಲಾಸೆಂಟದ (ಭ್ರೂಣಕ್ಕೆ ಆಹಾರ ಮತ್ತು ಆಕ್ಸಿಜನ್ ಅನ್ನು ಒದಗಿಸುವ ಭಾಗ ಒಂದು ಪಕ್ಕದಲ್ಲಿ ಒಂದು ಗಡ್ಡೆಯಂತಿರುವ ಅಂಗಾಂಶವಿದೆ. '' ಎಂದು

ಮಾರ್ಚ್ ೨೦೦೦ದ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ 'ಲೈಫ್ ಫಾರ್ ಆಸ್ಟಿನ್' ಬರ್ಬರ ಸಂಡೆ ಡಿಮಿಟ್ ಲೇಖನದ ಸಂಗ್ರಹಾನುವಾದ

ಒಂದು ಪಠ್ಯಪುಸ್ತಕದ ಚಿತ್ರವನ್ನು ತೋರಿಸುತ್ತಾ ಡೋನಿ ಹೇಳಿದನು. "ಅದು ಹೇಗೆ ಬೆಳೆಯುತ್ತದೆಂದು ಹೇಳಲಾಗುವುದಿಲ್ಲ. ಆದರೆ ಅದರಿಂದ ಬಸಿರಿಗೆ ತೊಂದರೆಯಾಗಬಹುದು. ಅದು ಕ್ಯಾನ್ಸರಿನ ಗಡ್ಡೆಯಾಗಿ ಪರಿಣಮಿಸಬಹುದು. ಅದನ್ನು ಶಸ್ತ್ರಕ್ರಿಯೆ ಮಾಡಿ ತೆಗೆದುಹಾಕಿದರೂ ಕ್ಯಾನ್ಸರಿನ ಅಪಾಯ ಇದ್ದೇ ಇರುತ್ತದೆ" ಎಂದು ವಿವರಿಸಿದನು.

'ಮಗು ಆರೋಗ್ಯವಾಗಿದೆಯೇ?' ಎಂದು ಏಂಜೆಲ ಮಾತಿನ ಮಧ್ಯೆ ಕೇಳಿದಳು. 'ಅದನ್ನು ದೃಢಪಡಿಸಿಕೊಳ್ಳಲು ಭ್ರೂಣಪೊರೆಯ ಪರೀಕ್ಷೆ ಮಾಡಬೇಕು' ಎಂದು ಡೋನಿ ಉತ್ತರಿಸಿದನು. ಒಂದು ವೇಳೆ ಭ್ರೂಣವು ಗಡ್ಡೆ ಇರುವ ಭಾಗದಲ್ಲಿದ್ದಿದ್ದರೆ ಅನುವಂಶೀಯ ಅಸಾಮಾನ್ಯತೆಗೆ ಒಳಗಾಗಿ ಹೆರಿಗೆಗೆ ಮೊದಲು ಅಥವಾ ಆದ ಕ್ಷಣ ಸಾಯುತ್ತಿತ್ತು. ಇನ್ನೊಂದು ಸಾಧ್ಯತೆ ಎಂದರೆ ಆರೋಗ್ಯವಾದ ಭ್ರೂಣದ ಬೆಳವಣಿಗೆ ಮತ್ತು ಅದಕ್ಕೆ ಪ್ರತ್ಯೇಕವಾಗಿರುವ ಗಡ್ಡೆಯುಂತಿರುವ ಅಂಗಾಂಶದ (ಜೀವಕೋಶಗಳ ಸಮೂಹ) ಹತೋಟಿ ಮೀರಿದ ಬೆಳವಣಿಗೆ.

ಏಂಜೆಲ ಮೌನವಾಗಿ ದುಃಖಿಸುತ್ತಿದ್ದಳು. ರಿಚ್‌ನ ದವಡೆ ಸ್ನಾಯುಗಳು ಆತಂಕದಿಂದ ಅದಿರುತ್ತಿದ್ದುದನ್ನು ಡೋನಿ ಗಮನಿಸಿದನು. ವೈದ್ಯನಿಂದ ಇನ್ನೂ ಕೇಳಿಸಿಕೊಳ್ಳುವುದು ಅವರ ದೌರ್ಭಾಗ್ಯವಾಗಿತ್ತು.

ವೈದ್ಯನು ಎದೆಗುಂದಿಸುವ ಸ್ಥಿತಿಗಳನ್ನೂ ವಿವಿಧ ಅಪಾಯುಗಳ ಸಾಧ್ಯತೆಯನ್ನೂ ವಿವರಿಸತೊಡಗಿದನು.

'ಗಡ್ಡೆಯನ್ನು ಮಾತ್ರ ತೆಗೆಯಬಲ್ಲೆಯಾ?' ಏಂಜೆಲ ಗೋಗರೆದಳು.

'ಬಸಿರನ್ನು ಅಂತ್ಯಗೊಳಿಸದೆ ಅದು ಸಾಧ್ಯವಿಲ್ಲ. ತಾಯಿಗಾಗುವ ಅಲ್ಪ ಕಾಲದ ಮತ್ತು ದೀರ್ಘ ಕಾಲದ ಅಪಾಯುಗಳನ್ನು ತಡೆಗಟ್ಟಲು ಬಸಿರನ್ನು ಅಂತ್ಯಗೊಳಿಸುವುದು ಅನಿವಾರ್ಯ. ಮಗುವಿನ ಸ್ಥಿತಿಯಂತೂ ನಿರಾಶಾದಾಯಕ' ಎಂದು ಡೋನಿ ಹೇಳಿದನು.

ರಿಚ್ ತನ್ನ ಗಂಟಲನ್ನು ಸರಿಪಡಿಸಿಕೊಳ್ಳುತ್ತಾ 'ಏಂಜೆಲ ನಿನ್ನ ಸಹೋದರಿಯೇ ಆಗಿದ್ದರೆ ಆಗ ನೀನೇನು ಮಾಡುತ್ತಿದ್ದೆ ? ಎಂದು ಡೋನಿಯನ್ನು ಕೇಳಿದನು.

'ಈ ರೀತಿಯ ವೈಯಕ್ತಿಕ ಪ್ರಶ್ನೆಗಳನ್ನು ಉತ್ತರಿಸಲು ನನಗಿಷ್ಟವಿಲ್ಲ. ಆದರೆ ಸ್ವಾರ್ಥದ ದೃಷ್ಟಿಯಿಂದ ಅಪಾಯದ ರೇಖೆಯ ಮೇಲಿರಲು ನನ್ನ ತಂಗಿಯನ್ನು ನಾನು ಬಿಡುತ್ತಿರಲಿಲ್ಲ.' ಎಂದು ಡೋನಿ ಮುಂದುವರಿಸುತ್ತಾ 'ಏಂಜೆಲ ನನಗೆ ಮೊದಲ ರೋಗಿ. ಮಗುವು ಅನಂತರದ ರೋಗಿ. ಆದರೆ ನಿಮ್ಮ ಇಷ್ಟದಂತೆ ಮಾಡುವುದು ನನ್ನ ಕರ್ತವ್ಯ. ನೀವೇನು ನಿರ್ಧಾರ ಕೈಗೊಳ್ಳುವಿರೋ ಅದನ್ನು ನನ್ನ ಕೈಲಾದಷ್ಟು ನೆರವೇರಿಸಲು ಪ್ರಯತ್ನಿಸುತ್ತೇನೆ' ಎಂದನು.

ಆಶಾವಾದಿಯೂ ಬಿಚ್ಚುಮನಸ್ಸಿನವಳೂ ಆದ ಏಂಜೆಲಗೆ ತತ್‌ಕ್ಷಣ ನಿರ್ಧಾರ ತೆಗೆದುಕೊಳ್ಳುವ ಸ್ವಭಾವ. ಅವಳು ಮತ್ತು ರಿಚ್, ಮಗುವಿಗೆ ಆಸ್ಟಿನ್ ಎಂಬ ಹೆಸರನ್ನು ಆಯ್ಕೆ ಮಾಡಿದ್ದರು. ಆದರೆ ಆ ರಾತ್ರಿ ಅವಳ ನೆನಪಿನಲ್ಲಿ ಉಳಿದಿದ್ದು ಕೇವಲ ಭಯ ತರಿಸುವ ಚಿತ್ರಗಳು ಮತ್ತು ಬಸಿರನ್ನು ಅಂತ್ಯಗೊಳಿಸಬೇಕೆಂಬ ಮಾತು. ನಿರ್ದಿಷ್ಟ ಫಲಿತಾಂಶ ಬರಲೆಂದು ಪ್ರಾರ್ಥಿಸಿಕೊಳ್ಳದೆ ಏನೇ ಬರಲಿ ಅದನ್ನು ಒಪ್ಪಿಕೊಳ್ಳುವ ಧೈರ್ಯವನ್ನು ಕೊಡುವಂತೆ ಪ್ರಾರ್ಥಿಸಿದಳು. ಅವಳು ಹಿಂದೆಂದೂ ಕಾಣದಂತಹ ಕ್ಲಿಷ್ಟವಾದ ಹಾಗೂ ಆತಂಕಭರಿತ ಇಳಿಜಾರಿನಲ್ಲಿ ಯಾವುದೋ ಒಂದು ಹಿಡಿತ ಸಿಕ್ಕಂತೆ ಅವಳಿಗೆ ಅನಿಸಿತು.

ರಿಚ್ ಕೆಲಸ ಮುಗಿಸಿ ಮನೆಗೆ ಹಿಂದಿರುಗಿದ ಮೇಲೆ ಅವನನ್ನು ಭೇಟಿಯಾಗಿ, 'ಏನಾದರೂ ಆಗಲಿ ನಾನು ಈ ಬಸಿರನ್ನು ಹೊರುವೆನೆಂದು ತೀರ್ಮಾನಿಸಿರುವೆ' ಎಂದಳು.

'ಭ್ರೂಣ ಪೊರೆಯ ಪರೀಕ್ಷೆಯು ಅದನ್ನು

ನಿರ್ಧರಿಸಲಿ. ಅದುವರೆಗೆ ಕಾಯೋಣ' ಎಂದನು.

'ನನಗೆ ಅದರ ಆವಶ್ಯಕತೆ ಇಲ್ಲ. ಆಸ್ಟಿನ್ ಸಾಯುವುದಾದರೆ ಅದು ದೇವರ ಇಚ್ಛೆ. ನನ್ನದಲ್ಲ' ಎಂದಳು.

ಅವಳು ಕೈಗೊಂಡ ನಿರ್ಧಾರದ ದೃಢತೆಯನ್ನು ಅವಳ ಕಣ್ಣುಗಳೇ ಸಾರುತ್ತಿದ್ದವು. ಆದರೆ ಏಂಜಿಯನ್ನು ಕಳೆದುಕೊಳ್ಳಲು ರಿಚ್ ಸಿದ್ಧನಿರಲಿಲ್ಲ. 'ನಮಗೆ ಹೆಚ್ಚು ವಿವರಗಳು ತಿಳಿಯುವವರೆಗೂ ಯಾವ ನಿರ್ಧಾರವನ್ನು ಒಡನೆ ತೆಗೆದುಕೊಳ್ಳುವುದು ಬೇಡ' ಎಂದನು.

ತನ್ನ ನಿರ್ಧಾರವನ್ನು ಹಿಂತೆಗೆದುಕೊಳ್ಳುವ ಯಾವ ಸೂಚನೆಯನ್ನೂ ಏಂಜೆಲ ತೋರಿಸದಿದ್ದಾಗ ಏಂಜೆಲಳನ್ನು ಪ್ರೀತಿಸುವುದೆಂದರೆ ಅವಳು ಈ ಅಪಾಯಕ್ಕೆ ಒಳಗಾಗುವುದನ್ನು ಒಪ್ಪಿಕೊಳ್ಳಬೇಕು ಎಂದು ಯೋಚಿಸಿ ಕೊನೆಗೂ 'ಆಗಲಿ' ಎಂದನು.

ಏಂಜೆಲ ತನ್ನ ನಿರ್ಧಾರವನ್ನು ಡೋನಿಗೆ ತಿಳಿಸಿದಳು. ಅದಕ್ಕೆ ಅವನು, 'ನೀನು ಪಯಣಿಸುವ ಹಾದಿ ಎಷ್ಟು ದುರ್ಗಮವೆಂದು ತಿಳಿದಿದೆಯೇ?' ಎಂದು ಕೇಳಿದನು.

'ಹೌದು ತಿಳಿದಿದೆ' ದೃಢವಾಗಿ ಹೇಳಿದಳು ಏಂಜೆಲ.

ಡಾ. ಡೋನಿ ಒಂದು ಕ್ಷಣ ಹುಬ್ಬನ್ನೇರಿಸಿ ಅನಂತರ ತಲೆಯಾಡಿಸಿದನು.

ಭ್ರೂಣಪೂರೆ ಪರೀಕ್ಷೆಯು ಎರಡು ಸಾಧ್ಯತೆಗಳಲ್ಲಿ ಎರಡನೇ ಸಾಧ್ಯತೆ ಗರ್ಭಕೋಶವನ್ನು ಹಂಚಿಕೊಂಡಿರುವುದು. ಭ್ರೂಣದಲ್ಲ ಅನುವಂಶೀಯ ಅಸಾಮಾನ್ಯತೆ ಕಂಡುಬರಲಿಲ್ಲ. ಮುಂದೆ ಉಂಟಾಗುವ ತೊಡಕುಗಳ ಬಗ್ಗೆ ಡಾ. ಡೋನಿ ಮತ್ತೆ ಮತ್ತೆ ನೀಡುತ್ತಿದ್ದ ವಿವರಣೆಗಳು ಪೂರ್ತಿಯಾಗಿ ನಿರಾಸೆಗೊಳಿಸದೆ ಮಗು ಆರೋಗ್ಯವಾಗಿದೆ ಎಂಬುದರಿಂದ ರೊಸೆಟಿ ದಂಪತಿಗಳಿಗೆ ಸ್ವಲ್ಪಮಟ್ಟಿಗೆ ನೆಮ್ಮದಿ ಸಿಕ್ಕಿತು.

'ಪ್ರತಿ ಮೂರು ವಾರಗಳಿಗೊಮ್ಮೆ ನಿನ್ನನ್ನು ನಾನು ಪರೀಕ್ಷಿಸಬೇಕು' ಎಂದು ಡೋನಿ ಹೇಳಿದನು. ಆಗ ೧೮ನೇ ವಾರ. ಸಾಮಾನ್ಯ ಗರ್ಭಾವಧಿ ೪೦ ವಾರಗಳು.

ತಪಾಸಣೆಗಳ ನಡುವಿನ ಅವಧಿಯಲ್ಲಿ ಏಂಜೆಲಳ ಭಯ ಕಡಿಮೆಯಾಗುತ್ತಿತ್ತು. ತಜ್ಞರ ಬಳಿ ಹೋದಾಗ ಬಸಿರಿನ ಬಗ್ಗೆ ಮಾತುಕತೆಗಳು ಅವಳ ನೆಮ್ಮದಿಯನ್ನು ಕೆಡಿಸುತ್ತಿದ್ದವು.

ಒಂದು ದಿನ ತಪಾಸಣೆ ಮುಗಿಸಿಕೊಂಡು ಬಂದು, 'ನಾನು ಆ ವೈದ್ಯನನ್ನು ದ್ವೇಷಿಸುತ್ತೇನೆ. ಪ್ರತಿ ಸಲ ಹೋದಾಗಲೂ ಯಾವುದಾದರೂ ಸಮಸ್ಯೆಯನ್ನು ಮುಂದಿಡುತ್ತಾನೆ. ಅವನಿಗೆ ನಮ್ಮ ಆಸ್ಟಿನ್‌ಗಿಂತ ನನ್ನ ಗಡ್ಡೆಯ ಮೇಲೇ ಹೆಚ್ಚು ಆಸಕ್ತಿ ಇದೆ.' ಎಂದು ಏಂಜೆಲ ರಿಚ್‌ಗೆ ಹೇಳಿದಳು.

'ಇರುವ ವಿಷಯನ್ನು ನಮಗೆ ತಿಳಿಸಲು ಪ್ರಯತ್ನಿಸುತ್ತಾನೆ' ಎಂದು ರಿಚ್ ಹೇಳಿದರೂ ತಪಾಸಣಾ ಭೇಟಿಯು ಆತಂಕವನ್ನು ಹೆಚ್ಚಿಸುವುದೆಂದು ಅವನಿಗೂ ತಿಳಿದಿತ್ತು.

ಹೆಚ್ಚಿನ ರಕ್ತದೊತ್ತಡ ಮತ್ತು ಕಾಲುಗಳಲ್ಲಿ ದ್ರವಸಂಗ್ರಹವಾಗಿರುವ ಕಾರಣಕ್ಕಾಗಿ ಏಂಜೆಲ ೧೯೯೭ರ ಜನವರಿ ೨೧ರಂದು ಆಸ್ಪತ್ರೆ ಸೇರಬೇಕಾಯಿತು. ಆಸ್ಟಿನ್ನಿನ ಪುಟ್ಟ ಶ್ವಾಸಕೋಶಗಳು ಬೇಗ ವಿಸ್ತರಿಸುವಂತೆ ಮಾಡಲು ಸ್ಟೀರಾಯಿಡ್ ಚುಚ್ಚುಮದ್ದನ್ನು ಕೊಡುವಂತೆ ಡೋನಿ ನರ್ಸ್‌ಗೆ ಆದೇಶಿಸಿದನು. ಏಂಜೆಲಳಿಗೂ ಅವಧಿಗೆ ಮುಂಚೆಯೇ ಆಗುವ ಹೆರಿಗೆಯನ್ನು ತಡೆಯುವುದೇ ಅಲ್ಲದೆ ಜೀವಕ್ಕೆ ಅಪಾಯ ತರುವ ಸೆಳವು, ಮೂತ್ರಕೋಶ ಮತ್ತು ಹೃದಯಾಘಾತಗಳು ಆಗುವುದನ್ನು ತಡೆಯಲು ಔಷಧೋಪಚಾರ ಪ್ರಾರಂಭವಾಯಿತು.

'ಒಂದು ವೇಳೆ ಟಾಕ್ಸೀಮಿಯಾ (ರಕ್ತದಲಿ ವಿಷಸೇರುವುದು) ಹೆಚ್ಚಾಗ ತೊಡಗಿದರೆ ತತ್‌ಕ್ಷಣವೇ ಹೆರಿಗೆ ಮಾಡಿಸಬೇಕಾಗುತ್ತದೆ. ಈ

ಟಾಕ್ಸೀಮಿಯ ೨೬ ವಾರಗಳಿಗಿಂತಲೂ ಅಧಿಕ ಸಮಯ ವಿರುವೇರಾಗದೆ ಸ್ಥಗಿತವಾಗಿರುವು ದೆಂದು ನಾನು ನಂಬಿದ್ದೆ. ಆದರೆ ಈಗ ಹಾಗಾಗಿಲ್ಲ' ಎಂದು ಡಾ. ಡೋನಿ ತಿಳಿಸಿದನು. ಅವಧಿಗೆ ಮುಂಚೆಯೇ ಹುಟ್ಟುವ ಮಕ್ಕಳಲ್ಲಿ ವಾರದಿಂದ ವಾರಕ್ಕೆ ಉಂಟಾಗುವ ಉಸಿರಾಟದ, ನರವ್ಯೂಹದ ಮತ್ತು ಜೀರ್ಣಕ್ರಿಯೆಯ ತೊಂದರೆಗಳನ್ನು ತೋರಿಸುವ ಪಟಗಳನ್ನು ಡೋನಿ ತಮಗೆ ಏಕೆ ತೋರಿಸಿದನೆಂದು ಏಂಜೆಲಗೆ ಈಗ ತಿಳಿಯಿತು. ಎರಡು ದಿನಗಳ ನಂತರ ಏಂಜೆಲಳಿಗೆ ಬಹಳ ಆಯಾಸವಾಗಿ ಕಾಲುಊತ ಹೆಚ್ಚಾಯಿತು. ಏನನ್ನೋ ತರಲು ರಿಚ್ ಮನೆಗೆ ಹೋಗಿದ್ದನು. ಆಸ್ಪತ್ರೆಗೆ ಹೊರಡುವ ಮುಂಚೆ ಅವಳಿಗೆ ದೂರವಾಣಿ ಕರೆಕೊಟ್ಟನು. 'ನೀನು ತತ್‌ಕ್ಷಣವೇ ಇಲ್ಲಿಗೆ ಬರಬೇಕು. ಏನೋ ವ್ಯತ್ಯಾಸವಾಗಿದೆ' ಎಂದು ಏಂಜೆಲ ಹೇಳಿದಳು.

ಡಾ. ಡೋನಿ ನರ್ಸ್‌ಗಳ ಕೊಠಡಿಯಲ್ಲಿ ಏಂಜೆಲಳ ಚಾರ್ಟ್(ವರದಿ) ಬರೆಯುತ್ತಿದ್ದನು. ಈ ರೀತಿ ತತ್‌ಕ್ಷಣವೇ ಕಾಲುಗಳಲ್ಲಿ ದ್ರವ ಸಂಗ್ರಹವಾಗಿರುವುದು ಮತ್ತು ಉಸಿರಾಟದ ತೊಂದರೆಯಾಗಿರಲು ಕಾರಣ ವೇನಿರಬಹುದು? ಇತರ ತಜ್ಞರಿಂದಲೂ ಸರಿಯಾದ ಉತ್ತರ ಬರಲಿಲ್ಲ. ಎಲ್ಲ ಸಾಧ್ಯತೆ ಗಳನ್ನೂ ಯೋಚಿಸತೊಡಗಿದ. ಟಾಕ್ಸೀಮಿ ಯದಿಂದಾಗಿ ಕಾಲುಗಳಲ್ಲಿ ದ್ರವಸಂಗ್ರಹಣೆ ಯಿಂದ ಹಿಡಿದು ಗಡ್ಡೆಯಲ್ಲಿನ ಹಾರ್ಮೋನ್ ಗಳಿಂದ ಪ್ರೇರಿತವಾದ ಹೃದಯಾಘಾತ ದವರೆಗೆ, ನ್ಯುಮೋನಿಯದಿಂದ ಶ್ವಾಸಕೋಶ ದಲ್ಲಿ ನಿಷ್ಕ್ರಿಯವಾಗಿರುವ ಹೆಪ್ಪುಗಟ್ಟಿದ ರಕ್ತದ ಗಡ್ಡೆಯವರೆಗೆ ಎಲ್ಲ ಸಾಧ್ಯತೆಗಳನ್ನೂ ಡಾ. ಡೋನಿ ಯೋಚಿಸತೊಡಗಿದ.

ಇದು ಒಂದು ಗಂಭೀರ ಸ್ಥಿತಿಯಲ್ಲಿರುವ ಟಾಕ್ಸೀಮಿಯ ಆದಲ್ಲಿ ತತ್‌ಕ್ಷಣವೇ ಮಗು ವನ್ನು ಹೊರತೆಗೆಯಬೇಕಾಗಿತ್ತು. ಇಪ್ಪತ್ತರಲ್ಲಿ ಹತ್ತೊಂಬತ್ತು ಜನ ಅತಿಹೆಚ್ಚು ಅಪಾಯಕಾರಿ ಬಸಿರಿನ ತಜ್ಞರು ಇದನ್ನು ಮಾಡಬಹುದು. ಟಾಕ್ಸೀಮಿಯದ ದೋಷವಿಲ್ಲದಿದ್ದಲ್ಲಿ ಸ್ಥಿತಿಯನ್ನು ಗುಣಪಡಿಸಲೂಬಹುದು.

'ಈ ರೀತಿ ಹೆರಿಗೆ ತಡಮಾಡುತ್ತಿರುವುದಕ್ಕೆ ಕಾರಣ ಅವನ ಬೇಜವಾಬ್ದಾರಿತನವೇ?' ಎಂದು ಒಂದು ಕ್ಷಣ ಏಂಜೆಲ ಯೋಚಿಸಿದಳು. ಅವಧಿಗೆ ಮುಂಚೆ ಹುಟ್ಟಿದ ಅನೇಕ ಮಕ್ಕಳು ದೀರ್ಘಕಾಲದ ಶ್ವಾಸಕೋಶ ಕಾಯಿಲೆ, ಕುರುಡುತನ, ಮೆದುಳು ಘಾತ, ಅಂಗವಿಕಲತೆ ಇವುಗಳಿಂದ ನರಳುತ್ತಿರುವುದನ್ನು ಡೋನಿ ಕಂಡಿದ್ದ. ಇದನ್ನೆಲ್ಲಾ ರೊಸೆಟಿ ದಂಪತಿಗಳಿಗೆ ವಿವರಿಸಿದ. ಆಗ ಅವರು ಇನ್ನೂ ಕೆಲವು ಗಂಟೆಗಳು ಕಾಯಲು ಒಪ್ಪಿದರು. ಇಷ್ಟರಲ್ಲಿ ಡೋನಿ ಏಂಜೆಲಗೆ ಕೆಲವು ಔಷಧೋಪಚಾರ ಮಾಡತೊಡಗಿದ. ಏಂಜೆಲ ಪರಿಸ್ಥಿತಿಯು ಉತ್ತಮಗೊಳ್ಳದಿದ್ದರೆ ತತ್‌ಕ್ಷಣವೇ ಹೆರಿಗೆ ಮಾಡುವುದೆಂದು ನಿರ್ಧರಿಸಿದ. ಡೋನಿ ಏಂಜೆಲಳ ಮುಖ ನೋಡಿದ. ಅವಳ ಮುಖವು ಉಬ್ಬಿಕೊಂಡು ಚಂದ್ರನಂತೆ ಗುಂಡಗೆ ಕಾಣುತ್ತಿತ್ತು.

ರಿಚ್ ಮತ್ತು ಕುಟುಂಬದವರಿಗೆ ಗಡಿ ಯಾರದ ಮುಳ್ಳುಗಳು ಒಂದು ಗಂಟೆಯಿಂದ ಇನ್ನೊಂದು ಗಂಟೆಗೆ ಬಹಳ ನಿಧಾನವಾಗಿ ಚಲಿಸುತ್ತಿರುವಂತೆ ಭಾಸವಾಗುತ್ತಿತ್ತು. ಊಟ ವನ್ನು ತರಿಸಿಕೊಳ್ಳುವುದೆಂದು ಕೊನೆಗೆ ತೀರ್ಮಾನಿಸಿದರು. ನಿರೀಕ್ಷಣಾ ಕೊಠಡಿಯಲ್ಲಿ ಕುಳಿತಿದ್ದಂತೆ ರಿಚ್ ಡಾ. ಡೋನಿಯ ಕಡೆ ನೋಡಿದ.

ಡೋನಿಯು ಎಂದಿಗಿಂತ ಹೆಚ್ಚು ಒರಟ ನಂತೆ ಕಂಡ. ಆದರೆ ಆತನ ಬುದ್ಧಿವಂತಿಕೆ ಯನ್ನು ಮತ್ತು ದಕ್ಷತೆಯನ್ನೂ ರಿಚ್ ಮೆಚ್ಚಲೇ ಬೇಕಾಗಿತ್ತು. ಡೋನಿಯನ್ನು ನೋಡಿದ ಹುರುಪಿನಲ್ಲಿ, 'ಹೇ ನೀನೂ ಸ್ವಲ್ಪ ಪಿಜ (ಅಮೆರಿಕದ ಒಂದು ತಿನಿಸು) ತಿನ್ನುವೆಯಾ?' ಎಂದು ಕೇಳಿದ.

ಡೋನಿ ಸ್ವಲ್ಪ ಹೊತ್ತು ಸುಮ್ಮನಿದ್ದು, 'ಓ, ಖಂಡಿತ' ಎಂದ ಪಿಜ ಬರುವತನಕ ಇಬ್ಬರೂ ಹರಟೆ ಪ್ರಾರಂಭಿಸಿದರು. ಡೋನಿ ತನ್ನ ಕುಟುಂಬದ ಬಗ್ಗೆ ಹೇಳತೊಡಗಿದ. ಅವನು ಅತ್ಯಂತ ಗೌರವಪೂರ್ವಕವಾಗಿ ಇಷ್ಟಪಡುತ್ತಿದ್ದ ಸಹೋದರಿಯ ಬಗ್ಗೆ ಹೇಳುತ್ತಿದ್ದಂತೆ ಅವನ ಕಣ್ಣುಗಳು ತೇವಗೊಂಡುವು. ಈ ಒರಟನಿಗೂ ಹೀಗಾಗುವುದೆಂದು ಏಂಜೆಲ ನಂಬಲಾರಳು ಎಂದು ರಿಚ್ ಯೋಚಿಸಿದ.

'ಎಂಜಿ ಹೇಗಿದ್ದಾಳೆ?' ರಿಚ್ ಕೇಳಿದನು.

ಇದು 'ಎಂಜೆಲ ಮತ್ತು ಮಗುವಿನ ನಡುವೆ ನಡೆಯುತ್ತಿರುವ ಸೆಣಸಾಟ. ಅದನ್ನು ಒಂದು ಮಿತಿಯವರೆಗೆ ಸಮಸ್ಥಿತಿಯಲ್ಲಿಡಲು ನಾನು ಪ್ರಯತ್ನಿಸುತ್ತಿದ್ದೇನೆ. ಸುಲಭೋಪಾಯವೆಂದರೆ ಹೆರಿಗೆ ಮಾಡಿಸುವುದು. ಆದರೆ ಮಗುವು ಬದುಕುಳಿಯುವ ಸಾಧ್ಯತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದೇನೆ. ಮಗುವಿಗೆ ತಾಯಿ ಇಲ್ಲದೇ ಇರುವುದೂ ಸರಿಯಲ್ಲ. ಜೀವಿಗಳ ವ್ಯಾಪಾರ ಇಲ್ಲಿ ಸಲ್ಲ'' ಡೋನಿ ವಿವರಿಸಿದ.

ಈತನೂ ನಮ್ಮೊಂದಿಗೆ ಸೆಣಸುತ್ತಿದ್ದಾನೆ. ಆದ್ದರಿಂದ ನಾವು ಏನೂ ಹೇಳುವ ಹಾಗಿಲ್ಲ. ಆತನ ಸ್ವಭಾವಗಳಾದ ಛಲ ಮತ್ತು ದೃಢ ನಿರ್ಧಾರಗಳ ಏಂಜಿಯ ಸ್ವಭಾವವನ್ನೇ ಹೋಲುತ್ತವೆ ಎಂದು ರಿಚ್ ಯೋಚಿಸಿದ.

ಮುಂದಿನ ದಿನಗಳಲ್ಲಿ ಏಂಜೆಲಳ ಸ್ಥಿತಿ ಒಂದೇ ಸಮನೆ ಇತ್ತು. ಈ ಅವಧಿಯಲ್ಲಿ ಅವಳಿಗೆ ಡೋನಿಯ ಬಗ್ಗೆ ಇದ್ದ ಅಭಿಪ್ರಾಯವೂ ಬದಲಾಯಿತು. ದಿನಕ್ಕೆ ಅನೇಕಬಾರಿ ಅವಳನ್ನು ಡೋನಿ ಭೇಟಿಯಾಗುತ್ತಿದ್ದನು ಮತ್ತು ಆಗಾಗ ಅವಳ ಸ್ಥಿತಿಯ ಬಗ್ಗೆ ದೂರವಾಣಿ ಮೂಲಕ ನರ್ಸ್‌ಗಳನ್ನು ವಿಚಾರಿಸುತ್ತಿದ್ದ. ಅವನ ಸದುದ್ದೇಶಗಳನ್ನು ಅವಳು ತಪ್ಪಾಗಿ ಪರಿಗಣಿಸಲು ಸಾಧ್ಯವೇ ಇಲ್ಲ. 'ನಾನು ಪ್ರತಿ ಸಲ ನಿನ್ನನ್ನು ಭೇಟಿಯಾಗಿ ಹೊರಬಂದಾಗಲೆಲ್ಲಾ ನಿನ್ನನ್ನು ದ್ವೇಷಿಸುತ್ತಿದ್ದೆ' ಎಂದು ತನ್ನ ತಪ್ಪನ್ನು ಒಪ್ಪಿಕೊಂಡಳು.

'ನನಗೆ ತಿಳಿದಿತ್ತು' ಎಂದು ಡೋನಿ ನಯವಾಗಿ ಹೇಳಿದ. ತನ್ನ ತಪ್ಪನ್ನು ಕ್ಷಮಿಸಿದ್ದೇನೆಂಬುದೇ ಈ ಮಾತಿನ ಅರ್ಥ ಎಂದುಕೊಂಡಳು ಏಂಜೆಲ. ಪರಸ್ಪರ ಅಳೆದುಕೊಂಡು ಸ್ವಭಾವದಲ್ಲಿ ಇಬ್ಬರೂ ಸಮ ಎಂದುಕೊಂಡರು.

ನಿರೀಕ್ಷೆಯ ವಾರಗಳು ನಿಧಾನವಾಗಿ ಉರುಳುತ್ತಿದ್ದಂತೆ ಮೂವರ ನಡುವೆ ಆತ್ಮೀಯತೆ ಬೆಳೆಯಿತು. ವಿನೋದದ ಮಾತುಕತೆಗಳು ಭಯವನ್ನು ದೂರಮಾಡುತ್ತಿದ್ದುವು. 'ನೀನು ಆ ಮಗುವನ್ನು ಹೆರುವವರೆಗೂ ನಾನು ಕಾಯಲಾರೆ ನಾನು ನಿಶ್ಚಿಂತೆಯಾಗಿ ಮಲಗಬೇಕು' ಎಂದು ಡೋನಿ ತಮಾಷೆ ಮಾಡುತ್ತಾ, 'ಸಂಶೋಧನೆ ಮತ್ತು ನಿನ್ನ ಬಗ್ಗೆ ಯೋಚಿಸುವುದಷ್ಟೇ ನನಗೀಗ ಉಳಿದಿರುವುದು' ಎಂದ.

ಕೊನೆಗೂ ಫೆಬ್ರವರಿ ಹದಿಮೂರರಂದು ಮಾಡಿದ ತಪಾಸಣೆಯಿಂದ ಮಗುವಿನ ಬೆಳವಣಿಗೆ ನಿಧಾನವಾಗಿರುವುದು ತಿಳಿಯಿತು. ಟಾಕ್ಸೀಮಿಯದೇ ಮೇಲುಗೈ ಆಗುತ್ತಿತ್ತು. 'ಈಗ ನಿನಗೆ ಹೆರಿಗೆ ಮಾಡಿಸುತ್ತೇನೆ' ಎಂದ ಡಾ.ಡೋನಿ. ರಿಚ್ ಮತ್ತು ಏಂಜೆಲ ಆತಂಕದಿಂದ ಪರಸ್ಪರ ಕೈಗಳನ್ನು ಭದ್ರವಾಗಿ ಹಿಡಿದುಕೊಂಡರು.

'ಒಂದು ಮಗುವಿನಲ್ಲಿ ಇಷ್ಟು ಬಲವಾದ ಹೃದಯಬಡಿತ ನಾನು ನೋಡಿರಲೇ ಇಲ್ಲ' ಡೋನಿ ಉದ್ಗರಿಸಿದನು. ಮತ್ತೊಂದು ಸಲ ಚಲನೆ ಕಾಣಿಸಿತು. ಮರುಕ್ಷಣವೇ ಆಸ್ಟಿನ್ ಹೃದಯಬಡಿತ ನಿಧಾನವಾಯಿತು. ಡೋನಿ ಕಣ್ಣುಗಳು ಆತಂಕದಿಂದ ಅರಳಿದ್ದನ್ನು ಏಂಜೆಲ ನೋಡಿದಳು. ''ನಿನ್ನ ಮಗನಿಗೆ ನಿನ್ನ ಸ್ವಭಾವವೇ ಇದ್ದ ಹಾಗಿದೆ. ಏಕೆಂದರೆ ನನ್ನನ್ನು ಸೋಲಿಸಲು ಪ್ರಯತ್ನಿಸುತ್ತಿದ್ದಾನೆ'' ಎಂದ ಡೋನಿ.

ರಾತ್ರಿ ೧೧-೪೪ಕ್ಕೆ ೧.೨ ಕಿಲೊ ತೂಕದ ಆಸ್ಟಿನ್ ಮ್ಯಾನ್ಯುಯಲ್ ರೊಸೆಟ ಡೋನಿಯ ಕೈಗಳನ್ನು ಸೇರಿದನು. ತತ್‌ಕ್ಷಣವೇ ಪುಟ್ಟ ಬೆಕ್ಕಿನ ಮರಿಯು 'ಮಿಯಾಮಿಯಾ' ಎನ್ನುವಂತೆ ಸಣ್ಣ ಧ್ವನಿ ಏಂಜೆಲಗೆ ಕೇಳಿಸಿತು. ರಿಚ್ ನಗುತ್ತಾ 'ನೀನು ಅವನನ್ನು ನೋಡಬೇಕು ತಲೆಯೆಲ್ಲಾ ತಿರುಗಿಸಿ ಧ್ವನಿಮಾಡುತ್ತಿದ್ದಾನೆ' ಎಂದು ಏಂಜೆಲಗೆ ಹೇಳಿದನು.

ಕ್ಯಾನ್ಸರ್ ಅಲ್ಲವೆಂದು ತೀರ್ಮಾನಿಸಲ್ಪಟ್ಟ ಗಡ್ಡೆಯನ್ನು ತೆಗೆಯಲು ಡೋನಿಗೆ ೨೦ ನಿಮಿಷಗಳು ಬೇಕಾಯಿತು. ಅನಂತರ ಏಂಜೆಲ ಡೋನಿಯ ಕೈಹಿಡಿದು, 'ಇನ್ನು ಮುಂದೆ ಎಂದೆಂದಿಗೂ ನೀನು ನಮ್ಮ ಕುಟುಂಬಕ್ಕೆ ಸೇರಿದವನು. ಈ ಮಗುವಿಗೆ ನೀನು ಚಿಕ್ಕಪ್ಪ' ಎಂದಳು.

ಆಸ್ಟಿನ್ ಹುಟ್ಟಿದ ಆರು ದಿನಗಳ ನಂತರ ಏಂಜೆಲಳ ಮೂವತ್ತೊಂದನೇ ಹುಟ್ಟಿದ ಹಬ್ಬ ದಂಪತಿಗಳಿಬ್ಬರೂ ಮೊದಲಬಾರಿಗೆ ಮಗುವನ್ನೆತ್ತಿಕೊಂಡರು. ಮಗುವಿನ ಮಣಿಕಟ್ಟು ಎಷ್ಟು ಪುಟ್ಟದಾಗಿತ್ತೆಂದರೆ ರಿಚ್‌ನ ಬೆರಳ ಉಂಗುರ ಅದಕ್ಕೆ ಸರಿಯಾಗಿ ಹಿಡಿಸಿತು.

ನರ್ಸ್ ಆಸ್ಟಿನ್‌ನನ್ನು ಏಂಜೆಲಳ ಎದೆಗೆ ಒರಗಿಸಿದಳು. ಮಗುವು ತಲೆಯನ್ನು ಎತ್ತಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಿರುಗಿಸುವುದನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. ಅನಂತರ ಅದು ಶಾಂತವಾಗಿ ಅಮ್ಮನ ಎದೆಗೆ ಒರಗಿ ಮಲಗಿತು.

ಏಂಜೆಲ ರಿಚ್ ಕಡೆ ಹೊಳಪು ಕಣ್ಣುಗಳಿಂದ ನೋಡುತ್ತಾ, 'ನನ್ನ ಹುಟ್ಟು ಹಬ್ಬಕ್ಕೆ ಇದು ಅತ್ಯುತ್ತಮ ಉಡುಗೊರೆ' ಎಂದಳು.

ಸ್ಪರ್ಶಕ್ಕೆ ಸ್ಪರ್ಶ, ಜೀವಕ್ಕೆ ಜೀವ, ಭವಿಷ್ಯಕ್ಕೆ ಭವಿಷ್ಯ ಬೆಸೆತಂತೆ ಆಯಿತು. ಆಸ್ಟಿನ್‌ನ ಹೃದಯಬಡಿತ ತನ್ನ ಹೃದಯಬಡಿತಕ್ಕೆ ಉತ್ತರವೇನೋ ಎಂಬಂತಿತ್ತು.

ಡಾ. ವ್ಯಾಲೀಡ್ ಡೋನಿಗೆ ರೊಸೆಟಿ ದಂಪತಿಗಳು 'ವಂದನೆಗಳು' ಎಂಬ ಫಲಕವನ್ನು ಕೊಟ್ಟರು. ಅದರಲ್ಲಿ ಹೊಸದಾಗಿ ಹುಟ್ಟಿದ ತನ್ನ 'ಸೋದರಳಿಯ'ನನ್ನು ಎತ್ತಿಕೊಂಡು ತೆಗೆಸಿದ ಡೋನಿಯ ಛಾಯಾಚಿತ್ರವಿತ್ತು. ಯಾವ ತೊಂದರೆಯೂ ಇಲ್ಲದ ಗರ್ಭಧರಿಸಿ೯ರ್ಲರ ಮೇಲರಂದು ಏಂಜೆಲ ಎರಡನೆಯ ಮಗುವಿಗೆ ಜನ್ಮವಿತ್ತಳು.

ಅಪಾಯಕ್ಕೆ ಅಂಜುತ್ತೀರಾ ? ಅದು ನಿಮ್ಮ ಜನ್ಮದೊಂದಿಗೇ ನಿಮ್ಮನ್ನು ಹೊಂದಿಕೊಂಡು ಬಂದಿದೆ. ಅಪಾಯವಿರುವಲ್ಲೆಲ್ಲ ಆನಂದವಿದೆ. ಆನಂದವಿರುವಲ್ಲೆಲ್ಲಾ ಅಪಾಯವಿದೆ ಎಂಬುದನ್ನು ಮಾತ್ರ ಮರೆಯದಿರಿ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

-ಜೆ. ಪಿ. ರಿಚಾರ್ಡ್

ಹಕ್ಕಿ ಹಾರಿಹೋಗಿದೆ ಆದರೆ ಹಾಡು ಕೇಳುತ್ತಲೇ ಇದೆ

ವಿಶ್ವದ ಜ್ಞಾನ ನಿಧಿ 'ರೀಡರ್ಸ್ ಡೈಜೆಸ್ಟ್'

ಟಿ.ಎಸ್. ಲಲಿತ
೭೦೨,೧ನೇ ಮಹಡಿ, ೧೭ನೇ ಮುಖ್ಯರಸ್ತೆ
ಸರಸ್ವತಿಪುರಂ , ಮೈಸೂರು-೫೭೦೦೦೯

ಅಕ್ಷರ ಹಾಗೂ ಮುದ್ರಣ ಪ್ರಪಂಚದೊಂದಿಗೆ ಸಂಬಂಧಪಟ್ಟವರು ನ್ಯೂಯಾರ್ಕಿನ ಸುತ್ತಲ ಆ ಹಳ್ಳಿಗಳಲ್ಲಿ ನೆಲಸುತ್ತಿದ್ದರು. ಭಾವಪರವಶತೆಯೊಂದಿಗಿನ ಆ ಹಳ್ಳಿಯ ಸಹವಾಸ ಯಶಸ್ಸಿನ ಒಂದು ಅಗತ್ಯತೆ ಎನಿಸಿರಬಹುದು. ನ್ಯೂಯಾರ್ಕಿನ ಗ್ರೀನ್‌ವಿಚ್ ಹಳ್ಳಿಯಲ್ಲಿ ಬಾಡಿಗೆ ಕಡಿಮೆ. ಅಲ್ಲಿದ್ದ ಹೆಚ್ಚು ಮಂದಿ ಕವಿಗಳು, ಕಲಾವಿದರು ಹಾಗೂ ಬರಹಗಾರರು.

ಮನೆಟ್ಟಾ ಓಣಿಯ ಉಗ್ರಾಣವೊಂದರಲ್ಲಿ ಜನವರಿಯ ಅಂತ್ಯಕ್ಕೆ ೧೯೨೨ರ ಫೆಬ್ರವರಿಯ ರೀಡರ್ಸ್ ಡೈಜೆಸ್ಟಿನ ಮೊದಲ ಸಂಚಿಕೆಯ ಕಡೆಯ ಪ್ರತಿಗಳು, ಹಡಗು ಪ್ರಯಾಣಕ್ಕೆ ಸಿದ್ಧವಾಗುತ್ತಿದ್ದುವು. ಪತ್ರಿಕೆಯ ಸಂಪಾದಕ ಹಾಗೂ ಸಂಸ್ಥಾಪಕ ಡೆವಿಟ್ ಹಾಗೂ ಲೀಲಾ ಅಚೆಸನ್ ವ್ಯಾಲೆಸ್‌ರ ಮೇಲ್ವಿಚಾರಣೆಯಲ್ಲಿ ೫೦೦೦ ಪ್ರತಿಗಳನ್ನು ಕಾಗದದಲ್ಲಿಸುತ್ತಿ ವಿಳಾಸ ಬರೆದು ಅಂಚೆ ಕಛೇರಿಯ ಮೂಲಕ ಮೊದಲ ಚಂದಾದಾರರಿಗೆ ತಲುಪಿಸಲಾಗುತ್ತಿತ್ತು. ಜಗತ್ತು ನಿರೀಕ್ಷಿಸುತ್ತಿದ್ದ ಪುಟ್ಟ ನವ ಆಗಂತುಕ ಇದೇ ಎಂದು ಮನದಟ್ಟಾಗಲು ಆತಂಕದ ನಿರೀಕ್ಷೆಯ ಆವಶ್ಯಕತೆ ಇತ್ತು.

ಇಂಗ್ಲಿಷ್ ಶಿಕ್ಷಕಿ,೩೨ರ ಲೀಲಾ ಅಚೆಸನ್ ೧೬೦ಸೆಂಮೀ ಎತ್ತರದ ನೀಲಿ ಕಂಗಳ ಚೆಲುವೆ, ಸಮಾಜ ಸೇವಕಿ, ಡೆವಿಟ್‌ನ ಪತ್ನಿ. ಡೆವಿಟ್ ವ್ಯಾಲೆಸ್ ಕೂಡ ೩೨ರ, ೧೮೩ಸೆಂಮೀ ಎತ್ತರದ ಕ್ರೀಡಾಪಟುವಿನ ಕಸುವುಳ್ಳವ. ಕೆಲಸದಿಂದ ಕೆಲಸಕ್ಕೆ ಹಾರುವ ಆತ ಮನೆಯವರ ಕಣ್ಣಲ್ಲಿ ಶುದ್ಧ ಅಪ್ರಯೋಜಕ. ಪಿಟ್ಸ್‌ಬರ್ಗ್‌ನ ಕಂಪನಿಯೊಂದರ ಕೆಲಸದಿಂದ ತೆಗೆದು ಹಾಕಲ್ಪಟ್ಟ ಡೆವಿಟ್ ತಾನೇ ಯೋಜಿಸಿದ ಪತ್ರಿಕೆಯೊಂದನ್ನು ಪ್ರಕಟಿಸಲು ನ್ಯೂಯಾರ್ಕ್‌ಗೆ ಬಂದಿದ್ದ. ಡೈಜೆಸ್ಟ್ ೧೪ x ೧೯ಸೆಂಮೀ ಅಳತೆ, ಹೊದಿಕೆಯೂ ಸೇರಿದಂತೆ, ಬಿಳಿಯ ಕಾಗದದ ಮೇಲೆ ಅಚ್ಚಾದ ೬೪ ಪುಟಗಳೊಂದಿಗೆ ಅರೆ ಕಿರುಬೆರಳ ಗಾತ್ರ. ಜೇಬಿನಲ್ಲಿಡಬಹುದಾದ ಈ ಪತ್ರಿಕೆ ವಿಖ್ಯಾತವಾಗಲಿದ್ದ ಮೊದಲ ಪ್ರತಿ. ಅಡಕವಾದ ಇದರ ಗಾತ್ರ, ಇದರಲ್ಲಡಗಿರುವುದೂ ಸಾಂದ್ರೀಕರಿಸಿದ ಸಂಕುಚಿತ ಗೊಳಿಸಿದ ವಿಷಯಗಳೆಂಬುದನ್ನು ಸೂಚಿಸುತ್ತಿತ್ತು. ಕಟ್ಟುಕಥೆ ಚಿತ್ರ, ಬಣ್ಣ, ಜಾಹಿರಾತು ಯಾವುದೂ ಇಲ್ಲದೆ ಕೇವಲ ಬೋಧಪ್ರದ ಲೇಖನಗಳನ್ನಷ್ಟೇ ಒಳಗೊಂಡಿತ್ತು.

ಈ 'Little Magazine' ಓದುಗರಿಗೆ ರುಚಿಸಬಲ್ಲುದೆ ? ಪತ್ರಿಕಾ ವ್ಯವಸಾಯದಲ್ಲಿ ತೊಡಗಿಕೊಂಡವರಿಂದಲೂ 'ಇಲ್ಲವೆನ್ನುವ ಅಭಿಪ್ರಾಯ. ಕೈಯಲ್ಲಿದ್ದ ೨೦೦೦ ಡಾಲರ್ ಹಣ ಹಾಗೂ ತನ್ನ ಮಡದಿಯ ಸಹಾಯದಿಂದ ಅಮೆರಿಕಾದ ಹಳ್ಳಿಗಾಡಿನ ಅನನುಭವಿ ತರುಣನಿಂದ, ಸ್ವಪ್ರಯತ್ನದಿಂದ ಅದನ್ನು ಮುಂದೆ ತರುವ ಯತ್ನ.

ಭವ್ಯ ಆಲೋಚನೆ : ಆತ ಹುಟ್ಟು ಓದುಗ. ಬರಹ ಅಥವಾ ಮುದ್ರಣದಲ್ಲಿದ್ದ ಯಾವುದೇ ವಿಷಯವೂ ಅವನ ತಣಿಯದ ಕುತೂಹಲಕ್ಕೆ ಉಣಿಸು. ಬಾಟಲಿಯ ಹಿಂದಿನ ಚೀಟಿ, ತಟ್ಟೆ ತಳಭಾಗದ ಬರಹವನ್ನೂ ಆತ ಓದುವ. ಹೋಟೆಲ್ ರೂಮಿನಲ್ಲಿ ಅರ್ಧಘಂಟೆ ಇದ್ದರೂ ಆ ರೂಮಿನಲ್ಲಿದ್ದ ಅಚ್ಚಾದ ಪ್ರತಿ ಅಕ್ಷರವನ್ನೂ ಓದದೆ ಆತ ಹಿಂತಿರುಗುತ್ತಿರಲಿಲ್ಲ. ಉಪಯೋಗವೆನಿಸುವ ವಿಷಯವನ್ನು ತನ್ನ ನೋಟ್‌ಪುಸ್ತಕದಲ್ಲಿ ಬರೆದುಕೊಳ್ಳುತ್ತಿದ್ದ. 'ಜ್ಞಾಪಕಶಕ್ತಿಯು ದಾಖಲೆಯ ಜಾಗವನ್ನು ತೆಗೆದುಕೊಳ್ಳುವುದಸಾಧ್ಯ' ಇದವನ

ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜಾರ್ಜ್ ಡಬ್ಲ್ಯು. ಫರ್‌ಗುಸನ್‌ರವರ 'ಅನ್‌ಫರ್‌ಗೇಟಬಲ್ ಡೆವಿಟ್ ವ್ಯಾಲೇಸ್ ' ಲೇಖನದ ಅನುವಾದ

ಅಭಿಪ್ರಾಯ. ವೇಗವಾಗಿ ಬದಲಾಗುತ್ತಿದ್ದ ವಿಶ್ವದ ಹೊಸ ಸುದ್ದಿಗಳಿಗೆ ತವಕಿಸುತ್ತಿದ್ದ ಡೆವಿಟ್, ತನ್ನಣ್ಣ ಬೆಂಜಮಿನ್- ಮೊದಲ ರೋಡ್ಸ್ ವಿದ್ವಾಂಸ-ಟಿಪ್ಪಣಿ ಬರೆವ ರೀತಿಯನ್ನು ತನ್ನ ಉದ್ದೇಶಕ್ಕೆ ಬಳಸಿಕೊಂಡ.

ಬಹಳಷ್ಟು ಓದುತ್ತಿದ್ದ ಡೆವಿಟ್, ''ನಾನೋದಿದ ವಿಷಯಗಳಲ್ಲಿ ಮುಖ್ಯವಾದುದನ್ನು, ನೆನಪಿಡಬೇಕಾದುದನ್ನು ಸಣ್ಣ ಕಾಗದದ ಚೂರುಗಳಲ್ಲಿ ಬರೆದಿಟ್ಟುಕೊಳ್ಳುತ್ತೇನೆ. ರಾತ್ರಿ ಮಲಗುವ ಮುನ್ನ, ಹಗಲು ಓದಿದ್ದನ್ನು ಮನದಲ್ಲೇ ಪರಿಶೀಲಿಸುತ್ತೇನೆ. ಕೆಲವು ಲೇಖನಗಳನ್ನು ನೆನಪಿಗೆ ತಂದುಕೊಳ್ಳುತ್ತೇನೆ. ಇದು ಸಹ ಪುಸ್ತಕಗಳನ್ನೋದುವಲ್ಲಿ ಕಳೆಯುವ ಕಾಲದಷ್ಟೇ ಲಾಭದಾಯಕ'' ಎಂದು ತಂದೆಗೆ ಹೇಳುತ್ತಿದ್ದ. ಕೆಲವೊಮ್ಮೆ ಯಾವುದೋ ಒಂದು ಸೂತ್ರ ಅಥವಾ ಸರಳ ರೂಪರೇಖೆ ಸಾಕಾಗುತ್ತಿರಲಿಲ್ಲ. ಆಗ ಇಡೀ ಲೇಖನದ ಸಾರವನ್ನು ಬರಹಗಾರನ ಸ್ವಂತ ಶಬ್ದಗಳಲ್ಲೇ ಸಂಕುಚಿತಗೊಳಿಸಿ ಸಣ್ಣ, ಆದರೆ ಸ್ಫುಟವಾದ ಬರವಣಿಗೆಯಲ್ಲಿ ಬರೆದುಕೊಳ್ಳುತ್ತಿದ್ದ.

ವಿಶ್ವಸಮರದಿಂದಾಗಿ ಟಿಪ್ಪಣಿ ಬರೆವ ಕೆಲಸಕ್ಕೆ ಅಡಚಣೆ. ೧೯೧೮ರ ಅಕ್ಟೋಬರ್‌ನಲ್ಲಿ ಸಿಡಿಗುಂಡಿನ ಚೂರುಗಳು, ಹಿಸಿನೇ ಇನ್‌ಫೆಂಟ್ರಿ ವಿಭಾಗದ ಸಾರ್ಜೆಂಟ್ ವ್ಯಾಲೆಸ್‌ನ ಮೂಗು, ಕತ್ತುಗಳನ್ನು ಘಾಸಿಗೊಳಿಸಿದುವು. ಅಮೆರಿಕಾದ ಸೇನಾ ಆಸ್ಪತ್ರೆಯಲ್ಲಿಯ ಕೆಲವು ತಿಂಗಳ ವಾಸ ಡೆವಿಟ್‌ಗೆ ವರದಾನ. ಲೇಖನದ ಮೇಲಿನ ಟಿಪ್ಪಣಿಗಳು ಸಾಮಾನ್ಯರ ಆಸಕ್ತಿ ಕೆರಳಿಸುವ ಡೈಜೆಸ್ಟ್‌ನ ಆಧಾರವಾದೀತೆಂಬ ಅನಿಸಿಕೆ. ಸಾಕಷ್ಟು ಪತ್ರಿಕೆಗಳೂ ನಿಯತಕಾಲಿಕೆಗಳೂ ಈಗ ಸಿಗುತ್ತಿದ್ದು ವೇಳೆಯೂ ಇದ್ದುದರಿಂದ ಲೇಖನಗಳನ್ನೋದಿ ಸಾರಾಂಶವನ್ನು ಬರೆದುಕೊಳ್ಳುವ.

ಮುಂದೆ ಮಿನಿಸೋಟಾದ ಸಾರ್ವಜನಿಕ ಗ್ರಂಥಾಲಯದಲ್ಲಿ ಆರು ತಿಂಗಳವರೆಗೂ, ಎರಡು ಪುಟಗಳು ಅಥವಾ ಅದಕ್ಕೂ ಕಡಿಮೆ ಇದ್ದ ಲೇಖನಗಳನ್ನು ಸಂಗ್ರಹಿಸಿ ರೀಡರ್ಸ್ ಡೈಜೆಸ್ಟ್‌ನ ಮಾದರಿಯ ನೂರಾರು ಪ್ರತಿಗಳನ್ನು ಮುದ್ರಿಸಿದ. ತನ್ನ ಯೋಜನೆಗೆ ತಂದೆಯಿಂದ ಹಣ ಸಹಾಯ ಬೇಡಿದಾಗ, ಡೆವಿಟ್ ಅಪ್ರಯೋಜಕನೆಂದು ಹಣ ಕೊಡಲು ನಿರಾಕರಿಸಿದ ತಂದೆ.

ತನ್ನ ಪತ್ರಿಕೆಯ ಮಾದರಿಯನ್ನು ಹೆಮ್ಮೆಯಿಂದ ಹಿರಿಯ ಪ್ರಕಾಶಕರಿಗೆ ತೋರಿಸಿ, ತನ್ನನ್ನು ಸಂಪಾದಕನನ್ನಾಗಿ ಮಾಡಿ ಪತ್ರಿಕೆಯನ್ನು ಮುದ್ರಿಸಿದವರಿಗೆ ತನ್ನ ಅನ್ವೇಷಣೆಯ ಫಲವಾದ 'ಡೈಜೆಸ್ಟ್'ಅನ್ನು ಒಪ್ಪಿಸಿಕೊಡುವೆನೆಂದ. ಎಲ್ಲ ಪ್ರಕಾಶಕರೂ ಅವನ ಆಲೋಚನೆ ತೀರಾ ಗಂಭೀರ ಶೈಕ್ಷಣಿಕವಾಗಿದೆ ಎಂದು ನಿರಾಕರಿಸಿದರು. ಬೇಸರಗೊಂಡ ಡೆವಿಟ್‌ನ ದುರದೃಷ್ಟದ ನಡುವೆ ಉತ್ಸಾಹಗೊಳಿಸುವ ಒಂದು ಅಂಶವಿತ್ತು.

ದಶಕದ ಹಿಂದೆ ತನ್ನ ಕಾಲೇಜಿನ ಸ್ನೇಹಿತ ಬಾರ್ಕ್ಲೇ ಅಚೆಸನ್‌ನ ಸೋದರಿ. ಲಿಲಾ ಅಚೆಸನ್‌ಳಿಂದ ಆಕರ್ಷಿತನಾದ ಡೆವಿಟ್. ಆದರೆ ಅವಳಿಗಾಗಲೇ ಮದುವೆ ನಿಷ್ಕರ್ಷೆಯಾಗಿತ್ತು. ಯುದ್ಧದ ಸಮಯದಲ್ಲವಳು ಕಾರ್ಖಾನೆಯ ಕೆಲಸಗಾರರಿಗೆ ಸಹಾಯ ಮಾಡುತ್ತ ನ್ಯೂಯಾರ್ಕಿನಲ್ಲಿದ್ದಳು. ಅವಳ ಮದುವೆ ರದ್ದಾದ್ದು ತಿಳಿದು, ''ಸೈಂಟ್‌ಪಾಲ್‌ನಲ್ಲಿ ಮಹಿಳಾ ಕೆಲಸಗಾರರ ಪರಿಸ್ಥಿತಿ ತೀರಾ ಶೋಚನೀಯ, ಕೂಡಲೇ ಅಲ್ಲಿಗೆ ಬಾ'' ಎಂದವಳಿಗೆ ತಂತಿ ಕಳಿಸಿದ. ಅವಳು ಬಂದ ಮೊದಲ ಸಂಜೆಯೇ ಡೆವಿಟ್ ಮದುವೆಯ ಬಗ್ಗೆ ಪ್ರಸ್ತಾಪಿಸಿದ. ಅವಳೊಪ್ಪಿ ಮದುವೆ ನಿಷ್ಕರ್ಷೆಯಾದಾಗ ''ಅದೊಂದು ಬೆರಗುಗೊಳಿಸುವ ಆಲೋಚನೆ'' ಎಂದಳವಳು.

ಲಿಲಾ ನ್ಯೂಯಾರ್ಕಿಗೆ ಹಿಂತಿರುಗಿದಾಗ, ಡೆವಿಟ್ ಪಿಟ್ಸ್‌ಬರ್ಗ್‌ನ ವಾಷಿಂಗ್ಟನ್ ಎಲೆಕ್ಟ್ರಿಕ್‌ನಲ್ಲಿ ಕೆಲಸಕ್ಕೆ ಸೇರಿದ. ಆದರೆ ತನ್ನ ಪತ್ರಿಕೆಯ ಬಗ್ಗೆ ಯೋಚಿಸುವುದನ್ನವನು ನಿಲ್ಲಿಸಲಿಲ್ಲ. ೧೯೨೧ರಲ್ಲಿ ಡೆವಿಟ್ ಆ ಕೆಲಸ ಕಳೆದುಕೊಂಡ. ಅದೊಂದು ತಿರುವಾಯ್ತು. ''ಓದುಗರಿಗೆ ನೇರವಾಗಿ ಅಂಚೆಯ ಮೂಲಕ ಪತ್ರಿಕೆಯನ್ನೇಕೆ ಮಾರಬಾರದು ?'' ಎಂದ

ಸಹೋದ್ಯೋಗಿಯ ಸಲಹೆಯಲ್ಲಿ ಹೊಸ ಬೆಳಕು ಕಂಡ. ದೊಡ್ಡ ದೊಡ್ಡ ಪ್ರಕಾಶಕರ ಗೊಡವೆಯೇ ಬೇಡೆಂದು, ತನ್ನ ಬಾಡಿಗೆಯ ಕೊಠಡಿಗೆ ಹಿಂತಿರುಗಿ ಶಿಕ್ಷಕರು, ಪ್ರೊಫೆಸರುಗಳು, ನರ್ಸ್ ಬೋಧಕರು ಹಾಗೂ ಮಹಿಳಾ ಕ್ಲಬ್ ಸದಸ್ಯರಿಗೆ ಚಂದಾದಾರರಾಗುವಂತೆ ಬರೆದ. ಓದುಗರಿಗೆ ತೃಪ್ತಿ ಸಿಗದಿದ್ದಲ್ಲಿ ಹಣ ಹಿಂತಿರುಗಿಸಲಾಗುವುದೆಂದ.

೧೯೨೧ರಲ್ಲಿ ನ್ಯೂಯಾರ್ಕ್‌ಗೆ ೫೦ ಕಿ.ಮಿ. ದೂರದ ಪ್ಲೆಸೆಂಟ್ ವಿಲೆಯಲ್ಲಿ ಡೆವಿಟ್, ಲಿಲಾ ವಿವಾಹ. ೫,೦೦೦ರ ಬಂಡವಾಳದೊಂದಿಗೆ 'ರೀಡರ್ಸ್ ಡೈಜೆಸ್ಟ್ ಅಸೋಸಿಯೇಷನ್' ಸ್ಥಾಪನೆ. ಬರೆದ ಪತ್ರಕ್ಕುತ್ತರವಾಗಿ ೧೫೦೦ ಚಂದಾದಾರರು ತಲಾ ೩ ಡಾಲರ್ ಚಂದಾಹಣ ಕಳಿಸಿದಾಗ ಪ್ರತಿ ಮುದ್ರಿಸುವಷ್ಟು ಬಂಡವಾಳ. ಮುದ್ರಣಕಾರನಿಗೆ ಪಗಾರ ಕೊಡುವ ಸಲುವಾಗಿ ಮನೆಯ ಕೊಠಡಿಯೊಂದನ್ನು ಬಾಡಿಗೆಗೆ ಕೊಟ್ಟು, ಅಡುಗೆ ಹಾಗೂ ಸ್ನಾನದ ಮನೆಗಳನ್ನು ಮತ್ತೊಬ್ಬ ದಂಪತಿಗಳೊಂದಿಗೆ ಹಂಚಿಕೊಳ್ಳುವ ಅನಿವಾರ್ಯತೆ.

ಪತ್ರಿಕೆಯ ಮೊದಲ ಸಂಚಿಕೆ ಅಲೆಗ್ಸಾಂಡರ್ ಗ್ರಹಾಂಬೆಲ್ ಬಗ್ಗೆ ಮುಖ್ಯ ಲೇಖನ ಪ್ರಕಟಿಸಿತ್ತು. ಮನೆಯವರೊಂದಿಗಿನ ಡೆವಿಟ್‌ನ ಸಂಬಂಧ ಸರಳವಲ್ಲದ್ದು. ಜೇಮ್ಸ್ ಹಾಗೂ ಜೆನೆಟರ ಮೂರನೆ ಮಗನಾಗಿ ಡೆವಿಟ್ ಹುಟ್ಟಿದ್ದು ೧೮೮೯ರ ನವೆಂಬರ್ ೧೨ರಂದು. ಮಗನಿಗೆ ಹೆಸರಿಡಲೂ ಒಮ್ಮತವಿಲ್ಲದ ದಂಪತಿಗಳು, ತಾಯಿ ವಿಲಿಯಮ್ ರಾಯ್ ಎಂದರೆ, ತಂದೆ ಡೆವಿಟ್ ಎಂದು ಕರೆದ.

ಸೋದರ ಸೋದರಿಯರ ಪ್ರಕಾರ ಡೆವಿಟ್ ಒಬ್ಬ ವಿಲಕ್ಷಣ ಪ್ರವೃತ್ತಿಯ ನಿರ್ದಿಷ್ಟತೆ ಇಲ್ಲದ ವ್ಯಕ್ತಿ. ತಾಯಿಯ ವಿಶೇಷ ಅಕ್ಕರೆಯಿಂದಾಗಿ ಡೆವಿಟ್ ಇತರರಿಂದ ಪ್ರತ್ಯೇಕಿತನಾದ. ಕ್ರೀಡೆಗಳತ್ತ ಆಸಕ್ತಿ. ಒಂದು ವರ್ಷ ಬ್ಯಾಂಕಿನ ದುಡಿತ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಭರ್ತಿಯಾಗಿ 'The play boy of western World' ಎನಿಸಿದ.

ಹದಗೆಟ್ಟ ಆರ್ಥಿಕ ಪರಿಸ್ಥಿತಿ. ಜೇಮ್ಸ್ ಸಾಲದಲ್ಲಿ ಮುಳುಗಿರುತ್ತಿದ್ದ. ಮನೆಯಲ್ಲಿ ಬಡತನ ಬೇಟೆಯಾಡಿದಾಗ, ಸಂಪತ್ತು ಗಳಿಸುವ ನಿರ್ಧಾರ ಡೆವಿಟ್‌ನದು. ರಜಾ ದಿನಗಳಲ್ಲಿ ಭೂಪಟ ಮಾರಲು ಮನೆ ಮನೆಗೂ ಅಲೆತ. ೧೨ ಭೂಪಟ ಮಾರಲು ೪೦ಕಿ.ಮೀ. ನಡಿಗೆ, ಮಾರಾಟದಿಂದ ಆಕರ್ಷಿತನಾಗಿ, ಹಿರಿಯ ಮಾರಾಟಗಾರರ ಅನೇಕ ಯುಕ್ತಿಗಳನ್ನು ಕರಗತ ಮಾಡಿಕೊಂಡ. ಪರಿಚಿತರ ಪರಿಸರ ಬೆಳೆದಂತೆ, ಎಲ್ಲರಿಂದಲೂ ಕಲಿಯುವ ಅಂಶಗಳಿವೆ ಎಂದು ಮನಗಂಡ. ಎಲ್ಲರೂ ತನ್ನಂತೆ ಜ್ಞಾನಾರ್ಜನೆಗಾಗಿ ಹಸಿದವರೇ. ಪದವಿ ಹೊಂದದ ವ್ಯಕ್ತಿಯ ಬುದ್ಧಿವಂತಿಕೆ ಗೌಣವೆಂದೆಣಿಸಬಾರದು, ಎಂದರಿತ.

೨೦ನೆಯ ಶತಮಾನದಲ್ಲಿ ಹಳೆಯ ಕಲ್ಪನೆಗಳು ಕಡಿಮೆಯಾಗಿ, ವೇಗಕ್ಕೆ ಒತ್ತುಕೊಟ್ಟ ಟೆಲಿಗ್ರಾಮ್ ಹಾಗೂ ವರ್ತಮಾನ ಪತ್ರಿಕೆಗಳು ಪ್ರತಿ ವಿವರವನ್ನು ಓದುಗರಿಗೆ ಒದಗಿಸುತ್ತಿದ್ದುವು. ವ್ಯಾಪಾರೀ ಜಗತ್ತು ಕೇವಲ ಗಳಿಕೆಯ ಮಾರ್ಗವಾಗದೆ ವಿದ್ಯಾಭ್ಯಾಸದ ಮತ್ತೊಂದು ಕ್ರಮವಾಗಿತ್ತದು. ಒಮ್ಮೆ ನ್ಯಾಯಾಲಯದ ವಿಚಾರಣೆ ನೋಡಲು ಹೋದಾಗ ವಕೀಲರ ನಡುವಿನ ವಾಗ್ವಾದದ ಹಾಸ್ಯದಿಂದ ಆಕರ್ಷಿತನಾದ ಡೆವಿಟ್. ಸಾಕಷ್ಟು ವಿಚಾರಣೆಗಳನ್ನು ಸ್ವತಃ ಕೇಳಲು ಸಮಯಾಭಾವ. ಮುದ್ರಿತ ಮಾಹಿತಿಗಾಗಿ, ಒಂದು ರಾತ್ರಿ, ಮಳೆಯಲ್ಲೇ ೩ ಕಿ.ಮೀ. ನಡೆದು ಮೆಡ್‌ಫೋರ್ಡ್ ಕಾರ್ನೆಗಿ ಗ್ರಂಥಾಲಯಕ್ಕೆ ಹೋಗಿ ಫ್ರಾನ್ಸಿಸ್ ವೆಲ್‌ಮ್ಯಾನ್‌ನ 'The art of cross examination' ಪುಸ್ತಕ ತಂದೋದಿದ. ಸಾಕ್ಷಿಗಳನ್ನು ಪರೀಕ್ಷಿಸುವ ತಂತ್ರ ಕೇವಲ ವ್ಯಾಪಾರದ ಅಭಿವೃದ್ಧಿಗಷ್ಟೇ ಅಲ್ಲ, ಜೀವನದ ಎಲ್ಲ ಪರಿಸ್ಥಿತಿಗಳಿಗೂ ಉಪಯುಕ್ತ ಎಂದರಿತ. ಅದ್ಭುತವಾದ ಅಂತರಂಗ ದೃಷ್ಟಿ ಎಲ್ಲರಲ್ಲೂ ಇದ್ದರೂ ಅದು ಪತ್ತೆಯಾಗದೆ ಕಡೆಗಣಿಸಲ್ಪಟ್ಟಿದೆ. ಅದು ಬೇಕೆಂದೊಡನೆ ಸಿಗುವಂತಾಗಬೇಕೆಂದುಕೊಂಡ ಡೆವಿಟ್. ವ್ಯಾಲೆಸ್‌ರಂಥ ಉನ್ನತ ಧ್ಯೇಯಗಳ ವಿದ್ಯಾವಂತ ಕುಟುಂಬದ ಕಿರಿಯ ಹುಡುಗನಿಗೆ ಹಣ ಸಂಪಾದನೆಗಾಗಿ ವ್ಯಾಪಾರ ಮಾಡುವುದೆಂದರೆ

ಅದು ನೈತಿಕ ಮೌಲ್ಯಗಳ ಪ್ರಶ್ನೆಯಾಗಿತ್ತು. ಅನೇಕರಿಗೆ ಅಭಿವೃದ್ಧಿಯ ಅರ್ಥ ಪ್ರಾಪಂಚಿಕ ಸುಖವೆಂದು. ಆದರೆ ಡೆವಿಟ್‌ಗೆ ಅದು ಹೊಸದೊಂದು ಯುಗದ ಭರವಸೆ ತರುವಂಥದಾಗಿತ್ತು.

'Rags to Riches' (ಚಿಂದಿಯಿಂದ ಶ್ರೀಮಂತಿಕೆಗೆ) ತತ್ವ ಆಂಡ್ರ್ಯೂ ಕಾರ್ನೆಗಿಯ ಕಥೆಯಿಂದ ಪುಷ್ಟಿಗೊಂಡಿತ್ತು. ವಿಶ್ವದ ಶ್ರೀಮಂತರಲ್ಲೊಬ್ಬನಾಗಿ, ಕಾರ್ನೆಗಿಗೆ ಓದುವುದರ ಬೆಲೆ ತಿಳಿದಿತ್ತು. ೬೦ ಮಿಲಿಯನ್ ಡಾಲರ್‌ಗಳನ್ನು ಗ್ರಂಥಾಲಯ ನಿರ್ಮಾಣಕ್ಕೆ ದಾನವಿತ್ತಿದ್ದನಾತ. ಡೆವಿಟ್, ಮೆಡ್‌ಫೋರ್ಡ್ ಗ್ರಂಥಾಲಯವನ್ನು ಕೊಳ್ಳುವ ಹೊತ್ತಿಗಾಗಲೇ ೨೦೦೦ಕ್ಕೂ ಹೆಚ್ಚು ಕಾರ್ನೆಗಿ ಸಾರ್ವಜನಿಕ ಗ್ರಂಥಾಲಯಗಳು ಅಸ್ತಿತ್ವದಲ್ಲಿದ್ದುವು. ಚಿಕ್ಕಂದಿನಿಂದಲೂ ಗ್ರಂಥಾಲಯವನ್ನೊಂದು ಸಂಸ್ಥೆಯಾಗಿ ಕಂಡಿದ್ದ ಡೆವಿಟ್, ಸ್ವತಃ ಅದರ ಸಂಪರ್ಕಕ್ಕೆ ಬಂದಾಗ, ಅದು ಅರಸುವವನಿಗೆ ಯಾವುದೇ ವಿಷಯದ ಬಗ್ಗೆ ಉಪಯುಕ್ತ ಮಾಹಿತಿ ನೀಡಲು ರಚಿತವಾದ ಒಂದು ಪದ್ಧತಿಯಾಗಿ ತೋರಿತು. ಸ್ವಾಧ್ಯಾಯನಿರತ ವ್ಯಕ್ತಿಗೆ ಗ್ರಂಥಾಲಯಗಳು ಆದರ್ಶಪ್ರಾಯವಾದವು.

೧೯೧೧ರಲ್ಲಿ ಕಾಲೇಜಿನಿಂದ ಹೊರಬಂದ ಡೆವಿಟ್ ಸೈಂಟ್ ಪಾಲ್‌ನ ವೆಬ್ಸ್ ಪಬ್ಲಿಷಿಂಗ್ ಕಂಪನಿ ಸೇರಿ, ವೆಬ್ಸ್‌ನ ವ್ಯವಸಾಯ ಕುರಿತ ಪತ್ರಪುಸ್ತಕಗಳ ಬಗೆಗಿನ ಕಾರ್ಯ ನಿರ್ವಹಿಸತೊಡಗಿದ. ಕಂಪನಿಯ ಕೆಲಸಗಳಿನ್ನೂ ಕರಗತವಾಗುವ ಮೊದಲೇ ಕೆಲಸದಿಂದ ಹೊರಹಾಕಲ್ಪಟ್ಟ. ಅವನಲ್ಲಿಡಗಿದ್ದ ಸಂಪಾದಕತ್ವದ ಪ್ರತಿಭೆ ಗುರುತಿಸಿದ ಅಧಿಕಾರಿ ಅವನೇನಾದರೂ ಸ್ವಂತ ಮುದ್ರಣದ ಕೆಲಸ ಪ್ರಾರಂಭಿಸಬಹುದೆಂದು, ಮುದ್ರಣದ ಸಾಲದ ರೂಪದಲ್ಲಿ ಒಂದಿಷ್ಟು ಹಣ ಅವನ ಕೈಗಿಟ್ಟ.

ಕೂಡಲೇ ಕೆಲಸದ ಕಣಕ್ಕಿಳಿದ ಡೆವಿಟ್. 'Getting the most out of the farming' (ಬೇಸಾಯದಿಂದ ಗರಿಷ್ಠ ಸಂಪಾದನೆ) ಎಂಬ ವ್ಯವಸಾಯ ಇಲಾಖೆಯ ಉಪಯುಕ್ತ ವಿಷಯಗಳನ್ನು ಸಂಗ್ರಹಿಸಿದ ೧೨೮ ಪುಟಗಳ ಕೈಪಿಡಿ ತಯಾರಿಸಿ, ೫ ರಾಜ್ಯಗಳ ಪಾದಯಾತ್ರೆ ಮಾಡಿ ೧೦೦,೦೦೦ ಪ್ರತಿಗಳನ್ನು ಮಾರಾಟ ಮಾಡಿ, ವೆಬ್ಸ್‌ನ ಸಾಲ ತೀರಿಸಿದ. ಲಾಭ ಸಿಗದಿದ್ದರೂ ಮುದ್ರಣ ಕಲೆ ಕರಗತವಾಗಿತ್ತು. ಸ್ಟೋರ್ ಕೀಪರ್‌ಗಳಿಗೆಂದೇ ತಯಾರಿಸಿದ ಡೈಜೆಸ್ಟ್ ವ್ಯಾಪಾರಕ್ಕೆ ಸಂಬಂಧಿಸಿದ ಅತ್ಯುತ್ತಮ ಲೇಖನಗಳನ್ನೊಳಗೊಂಡಿತ್ತು. ಕೇವಲ ರೈತರು, ವ್ಯಾಪಾರಿಗಳಿಗಷ್ಟೇ ಅಲ್ಲ, ಜಗತ್ತಿನಲ್ಲಿ ಮುಂದುವರಿಯಲೆತ್ನಿಸುವ ಓದುಗರೆಲ್ಲರಿಗೂ ಆಸಕ್ತಿಯುತ ನಿಯತಕಾಲಿಕೆಯೊಂದನ್ನೇಕೆ ಹೊರತರಬಾರದೆನ್ನುವುದು ಮುಂದಿನ ಆಲೋಚನೆ. ಉದರ ನಿರ್ವಹಣೆಗಾಗಿ ೧೯೧೬ರ ವರೆಗೂ ಕ್ಯಾಲೆಂಡರ್ ತಯಾರಕನೊಬ್ಬನ ಬಳಿ ದುಡಿದ.

ರೀಡರ್ಸ್ ಡೈಜೆಸ್ಟ್‌ನ ಚಂದಾದಾರರಾಗಿದ್ದವರಾರೂ ತಮ್ಮ ವಂತಿಕೆಯನ್ನು ರದ್ದುಗೊಳಿಸಿದ್ದರಿಂದ, ಎರಡನೆ ಸಂಚಿಕೆಯ ಮುದ್ರಣದ ತಯಾರಿ. ಮನೆ ಬಾಡಿಗೆ ಕಟ್ಟಲು ಲಿಲಾಗೆ ಸಮಾಜ ಕಾರ್ಯಕರ್ತೆಯಾಗಿ ಕೆಲಸ. ಪ್ರತಿದಿನ ಎಲ್ಲ ಪತ್ರಿಕೆ ಕೊಳ್ಳಲು ಹಣವಿಲ್ಲದೆ ನ್ಯೂಯಾರ್ಕ್ ಗ್ರಂಥಾಲಯಗಳಿಗೆ ಲೇಖನ ಗಳಿಗಾಗಿ ಡೆವಿಟ್ ಎಡತಾಕುತ್ತಿದ್ದ. ಆಸಕ್ತಿ ಕೆರಳಿಸುವ ಲೇಖನಗಳಿಗಾಗಿ ಹಳೆಯ ಸಂಚಿಕೆಗಳಲ್ಲಿ ಹುಡುಕಾಟ. ಅದರ ಸಾರ ಸಂಗ್ರಹಿಸಿ, ನೇರ ವಿಷಯಕ್ಕೆ ಸರಿಯುತ್ತಿದ್ದ.

೧೯೨೨ರಲ್ಲಿ ಪ್ಲೆಸೆಂಟ್‌ವಿಲೆಯಲ್ಲಿ ತಿಂಗಳಿಗೆ ೨೫ಡಾಲರ್‌ಗಳ ಬಾಡಿಗೆ ಮನೆ ಪಡೆದ. ಹೆಚ್ಚುತ್ತಿದ್ದ ಬೇಡಿಕೆಯೊಂದಿಗೆ ಡೈಜೆಸ್ಟ್‌ನ ಚಲಾವಣೆ ೭೦೦೦ ಪ್ರತಿಗಳಿಗೇರಿತು. ಹೆಚ್ಚಿನ ಜಾಗದ ಆವಶ್ಯಕತೆ ಭರಿಸಲು ಪಕ್ಕದ ಕುದುರೆ ಲಾಯವನ್ನು ತಿಂಗಳಿಗೆ ೧೦ಡಾಲರ್‌ಗಳ ಬಾಡಿಗೆಗೆ ಪಡೆದ. ಟೈಪ್‌ರೈಟರ್ ಹಾಗೂ ಸ್ಟೆನ್ಸಿಲ್ ಕತ್ತರಿಸುವ ಯಂತ್ರ ಕೊಂಡ. ತಾನೇ ಬರೆಯುತ್ತಿದ್ದ ಪ್ರಮೋಷನ್

ಸರ್ಕ್ಯುಲರ್ ಹಾಗೂ ವಿಳಾಸಗಳಲ್ಲಿ ಆತ್ಮೀಯತೆಯ ಎಳೆ ಇತ್ತು. ಈ ನೇರ ಸಂಪರ್ಕ, ಸಂಪಾದಕ ಹಾಗೂ ಓದುಗರ ನಡುವೆ ಒಂದು ಸೌಹಾರ್ದಯುತ ಬಾಂಧವ್ಯ ಬೆಸೆದಿತ್ತು.

ಮೊದಲಿಗೆ ೫೦೦೦ ಮಂದಿ ಚಂದಾದಾರರನ್ನು ಹೊಂದಿಸುವುದು ಡೆವಿಟ್‌ನ ಗುರಿ. ಆದರಿಂದ ಬರುವ ೧೫೦೦೦ ಡಾಲರ್ ಖರ್ಚು ವೆಚ್ಚಗಳನ್ನು ತೂಗಿಸಿ ಆರಾಮ ಜೀವನಕ್ಕೆ ಸಾಲುವಷ್ಟಿತ್ತು. ಜೊತೆ ಜೊತೆಗೇ ಸ್ವಲ್ಪ ಪ್ರವಾಸ ಕೈಗೊಳ್ಳಬಹುದಿತ್ತು. ನಾಲ್ಕು ವರ್ಷಗಳಲ್ಲಿ ಚಲಾವಣೆ ೨೦,೦೦೦ ಮುಟ್ಟಿತು. ಮುಂದಿನ ಮೂರು ವರ್ಷಗಳಲ್ಲಿ ಗಗನ ಮುಟ್ಟಿದ ಡೈಜೆಸ್ಟ್‌ನ ಚಲಾವಣೆ ೨,೧೬,೦೦೦ ಪ್ರತಿಗಳಿಗೇರಿತು. ಹಂತಹಂತವಾಗಿ ತನಗೆ ಸಿಕ್ಕ ಯಶಸ್ಸು ಹಾಗೂ ಅದು ತನ್ನೊಂದಿಗೆ ತರುತ್ತಿದ್ದ ವಿಶೇಷ ಸಮಸ್ಯೆಗಳಿಗೆ ತನ್ನನ್ನು ಹೊಂದಿಸಿಕೊಂಡ ಡೆವಿಟ್.

ಡೈಜೆಸ್ಟ್ ಬೆಳೆದಂತೆ ವ್ಯಾಲೆಸ್ ದಂಪತಿಗಳು ಪ್ಲೆಸೆಂಟ್ ವಿಲೆಯ ಕಛೇರಿಗಾಗಿ ಇಡೀ ಕಟ್ಟಡಗಳನ್ನೇ ಬಾಡಿಗೆಗೆ ಪಡೆಯಲಾರಂಭಿಸಿದರು. ಸಂಪಾದಕನ ಕೆಲಸ ಹುಡುಕುತ್ತ ಡೆವಿಟ್‌ನ ಕುದುರೆಲಾಯದ ಕಛೇರಿಗೆ ಬಂದ ೨೬ರ ತರುಣ ರಾಲ್ಫ್ ಹೆಂಡರ್‌ಸನ್ ಡೆವಿಟ್‌ನ ಬಗ್ಗೆ ಬರೆದದ್ದು. "ಆರಡಿ ಎತ್ತರದ ಡೆವಿಟ್‌ನ ಪ್ರಮುಖವಾಗಿ ಕಾಣುವ ಮೂಗು ಅವನ ಸಹಜ ಸೌಂದರ್ಯವನ್ನು ಹೆಚ್ಚಿಸಿದೆ. ಆತ ಆಡುವುದಕ್ಕಿಂತ ಆಲಿಸುವುದೇ ಹೆಚ್ಚು. ಚುರುಕು ಚಲನೆಯ ಕಣ್ಣುಗಳು ಅವನ ಚಡಪಡಿಕೆ ಅವನ ಕುತೂಹಲದ ಸ್ವಭಾವಕ್ಕೆ ನಿದರ್ಶನ. ಸಂಪಾದಕೀಯದ ಕೆಲಸವೆಲ್ಲ ಡೆವಿಟ್‌ನ ಮನೆಯ ಮೇಜಿನ ಮೇಲೆ ನಡೆದರೆ, ಪ್ರತಿಗಳನ್ನು ತಾನೇ ಸ್ವತಃ ಟೈಪ್ ಮಾಡುತ್ತಿದ್ದ. ಜೊತೆಗೇ ಲಿಲಾಳ ಪಿಯಾನೋ ವಾದನ. ಆಕರ್ಷಕ ತರುಣ. ತರುಣಿಯರಿಬ್ಬರು ಅಚ್ಚರಿಗೊಳಿಸುವ ಯಶಸ್ಸಿನತ್ತ ಧಾವಿಸುತ್ತಿದ್ದರು.

ಅದೃಷ್ಟ ನಕ್ಷಾಗ : ಡೈಜೆಸ್ಟ್‌ಗಾಗಿ ನೇರವಾಗಿ ಲೇಖನಗಳನ್ನು ಸಿದ್ಧಪಡಿಸುತ್ತಾ ಡೆವಿಟ್ ಗಮನ. ೧೯೩೪ರಲ್ಲಿ ೬ ಮೂಲ ಲೇಖನಗಳು ಸಿದ್ಧ. ಬ್ಯಾಂಕ್ ಕಟ್ಟಡವೊಂದರ ಮೇಲಿನ ಇಕ್ಕಟ್ಟಾದ ಮನೆಯೊಂದರಲ್ಲಿದ್ದುದು ಸಂಪಾದಕೀಯ ತಂಡದ ೧೨ ಮಂದಿ. ಕೆಳಗೆ ರೈಲ್ವೇ ಹಳಿ. ನಡು,ನಡುವೆ ಶಾಂತ ವಾತಾವರಣವನ್ನು ಕಲಕುವಂತೆ ಧಡ ಧಡನೆ ಹಾದು ಹೋಗುವ ಉಗಿ ಬಂಡಿಗಳು.

೧೯೩೫ರ ಒಂದು ಶನಿವಾರ ಮಧ್ಯಾಹ್ನ ಡೆವಿಟ್‌ನ ಕಾರು ಅಪಘಾತಕ್ಕೆ ಸಿಲುಕಿತು. ಟ್ರಕ್ ಆಪರೇಟರ್ ಅಪಘಾತಗಳಲ್ಲಿ ನಜ್ಜುಗುಜ್ಜಾದ ಶರೀರಗಳ ಬಗ್ಗೆ ವರ್ಣಿಸಿದ. ವರ್ಣನೆಯ ಆಧಾರದ ಮೇಲೆ ಕಾಗದದಂತೆ ಮುದುಡಿಬಿದ್ದ ಕಾರುಗಳನ್ನು ಕುರಿತು ಅಪಘಾತದ ಬಗ್ಗೆ ವಿವರವಾಗಿ ಬರೆದಲ್ಲಿ ಅದನ್ನೋದಿದ ಓದುಗರು ವಾಹನ ಚಾಲನೆಯಲ್ಲಿ ಎಚ್ಚರಿಕೆ ವಹಿಸಬಹುದೆಂದುಕೊಂಡ. ಅಪಘಾತದ ಬಗ್ಗೆ ಬರೆಯಲು ಜೋ ಫರ್ನಾಸ್ ಎಂಬ ತರುಣನನ್ನು ಕಳಿಸಿದ. ಆದರೆ ಪ್ರಬಂಧದಂತಿದ್ದ ಆ ಲೇಖನ ಡೆವಿಟ್‌ಗೆ ತೃಪ್ತಿ ತರಲಿಲ್ಲ. ಅವನ ಪ್ರಕಾರ ಲೇಖನ ಓದಿದ ಓದುಗರು ಭೀತಿಯಿಂದ ತತ್ತರಿಸುವಂತಿರಬೇಕಿತ್ತು. ಲೇಖನವನ್ನು ಐದು ಬಾರಿ ತಿದ್ದಿ ಬರೆಸಿದ. ೧೯೩೫ರ ಆಗಸ್ಟ್ ಸಂಚಿಕೆಯಲ್ಲಿ ಲೇಖನ ಅದ್ಭುತವಾಗಿ ಮೂಡಿ ಬಂತು. ಅದರಲ್ಲಿ ಸ್ಥೈರ್ಯ ಹಾಗೂ ಬೀಭತ್ಸತೆಯೊಂದಿಗೆ ಗಾಂಭೀರ್ಯವಿತ್ತು. 'Book of common prayer' ನಿಂದಾಯ್ದ ' And sudden death' ಎಂಬ ಶೀರ್ಷಿಕೆ ಕೊಡಲಾಗಿತ್ತು ಲೇಖನಕ್ಕೆ.

ಮರು ಮುದ್ರಿಸುವ ಅನುಮತಿಯೊಂದಿಗೆ, ವಾರಾಂತ್ಯದ ಕಾರ್ಮಿಕ ದಿನಾ ಚರಣೆಗೆ ಮೊದಲೇ ಸಾಧ್ಯವಾದಷ್ಟು ಹೆಚ್ಚು ಮಂದಿ ಚಾಲಕರನ್ನು ತಲಪುವಂತೆ ಲೇಖನದ ೫೦೦೦ ಪ್ರತಿಗಳನ್ನು ವಿವಿಧ ಪತ್ರಿಕೆಗಳಿಗೆ ಕಳಿಸಿದ ಡೆವಿಟ್. ಶಾಲೆ, ಕಾಲೇಜು, ಚರ್ಚು, ಕ್ಲಬ್ಬು, ರೇಡಿಯೋಗಳಲ್ಲಿ ಅದರ ಬಗ್ಗೆ ಚರ್ಚೆ ನಡೆಯಿತು. ಮುಂದಿನೆರಡು ದಶಕಗಳವರೆಗೂ ಅದರ ಮರು ಮುದ್ರಣದ ಬೇಡಿಕೆ ಮುಂದುವರೆಯಿತು. ಅತಿ ಶ್ರೇಷ್ಠ ಸಾಹಿತ್ಯವೆನಿಸಿ, ಅತಿ

ಹೆಚ್ಚು ಓದುಗರಿಂದ ಓದಿಸಿಕೊಂಡ ಮುದ್ರಿತ ಲೇಖನವೆನಿಸಿತು.'And sudden death' ((ಹಠಾತ್ ಮರಣ).

ಡೆವಿಟ್ ತೀರಾ ಸಾಮಾನ್ಯ ಸಂಪಾದಕನೆಂದು ತಿಳಿದಿದ್ದರು ಜನ. ಆದರೆ ಈ ಅಪ್ರಸಿದ್ಧ ಮೌನಿ, ಇಡೀ ರಾಷ್ಟ್ರವನ್ನೇ ದಿಙ್ಮೂಢಗೊಳಿಸುವಂಥ ಸಾಹಿತ್ಯ ಸೃಷ್ಟಿಸಿದ್ದ. ಮುಂದಿನ ದಿನಗಳಲ್ಲಿ ಮೂಲ ಲೇಖನಗಳು ಡೈಜೆಸ್ಟ್‌ನ ವಿಷಯ ಸೂಚಿಗಳ ಪಟ್ಟ ಸೇರಿದುವು. ಫ್ಯಾಸಿಸಮ್ ಹಾಗೂ ಕಮ್ಯೂನಿಸಮ್‌ನ ಆಪತ್ತಿನ ಕಥೆಗಳು, ಸಿಗರೇಟು ಹಾಗೂ ಮಾದಕವಸ್ತುಗಳ ಅಪಾಯ ಕುಡಿದು ವಾಹನವೋಡಿಸುವ, ಸರ್ಕಾರದ ಅಪವ್ಯಯದ ಬಗೆಗಿನ ಲೇಖನಗಳು 'ಡೈಜೆಸ್ಟ್' ತಪಾಸಣಾ ಪತ್ರಿಕೋದ್ಯಮದ ಮುದ್ರೆ ಎನಿಸಿತು.

ಹಬ್ಬುತ್ತಿದ್ದ ವದಂತಿಗಳನ್ನು ತಡೆಯಲು ವ್ಯಾಲೆಸ್ ದಂಪತಿಗಳು , ತಮ್ಮ ವ್ಯವಹಾರದ ಆರ್ಥಿಕ ರೀತಿ ನೀತಿಗಳನ್ನು ಹೊರಗೆಡವಿದರು. ೧೯೩೧ರಲ್ಲಿ'Fortune'ಪತ್ರಿಕೆ ಆ ವಿವರಗಳನ್ನು ಮುದ್ರಿಸಿತು. ಡೈಜೆಸ್ಟ್ ಚಲಾವಣೆ ೧೮,೦೦,೦೦೦ಕ್ಕೇರಿತ್ತು. 'Good House Keeping' ಪತ್ರಿಕೆ ಬಿಟ್ಟಂತೆ ೨೫ ಸೆಂಟ್‌ಗಳ ಮೌಲ್ಯದ ಪತ್ರಿಕೆಗಳಲ್ಲಿಯೇ ಇದರ ಸಾಧನೆ ಅಪೂರ್ವ. ಜಾಹಿರಾತುಗಳಿಂದ ಆದಾಯ ಗಳಿಸದೆಯೇ ಈ ಪುಟ್ಟ ಕಿಸೆ ವಿಶ್ವ ವಿದ್ಯಾಲಯ ವ್ಯಾಲೆಸ್ ದಂಪತಿಗಳಿಗೆ ೪.೧೮,೦೦೦ ಡಾಲರ್ ಗಳಿಸಿಕೊಟ್ಟಿತ್ತು. ಡೆವಿಟ್ ಕೇವಲ ಸೃಜನಾತ್ಮಕ ಸಂಪಾದಕ ಮಾತ್ರವಲ್ಲದೆ, ಆರ್ಥಿಕ ಐಂದ್ರಜಾಲಿಕನೂ ಆಗಿದ್ದ. ಅವನ ಸಂಪತ್ತಿನ ಬಗ್ಗೆ ತಿಳಿದ ತಂದೆ ನಿಬ್ಬೆರಗಾದ. ಸಂಬಂಧಿಗಳೊಂದಿಗಿನ ಡೆವಿಟ್‌ನ ಸಂಬಂಧ ಮತ್ತಷ್ಟು ದೂರವಾಯ್ತು.

ಜಾಹಿರಾತು ವಿಭಾಗಕ್ಕೆ ಸಂಪಾದಕಳೆಂದು ಲಿಲಾಳ ಹೆಸರು ಹಾಕಿದ್ದರೂ ಆ ಕೆಲಸದಲ್ಲವಳಿಗೆ ಅಷ್ಟೇನು ಆಸಕ್ತಿ ಇರಲಿಲ್ಲ. ಕಲೆ ಹಾಗೂ ಗೃಹಾಲಂಕಾರದ ಬಗ್ಗೆ ಪರಿಣತೆ ಇತ್ತು. ಕುದುರೆಲಾಯದಿಂದಾಚೆ ಹೋಗುವ ಸಲುವಾಗಿ ೧೯೩೭ರಲ್ಲಿ ೨೨ ಕೊಠಡಿಗಳ ಭವ್ಯ ಭವನ ನಾರ್ಮನ್ ಶೈಲಿಯಲ್ಲಿ ಕಟ್ಟಲ್ಪಟ್ಟಿತು. ಅವಳ ನೇತೃತ್ವದಲ್ಲಿಯೇ ಬೆಲೆಬಾಳುವ ಪ್ರಾಚೀನ ವಸ್ತುಗಳು, ಅಪೂರ್ವ ಕಲಾಕೃತಿಗಳೊಂದಿಗೆ ಅಲಂಕೃತಗೊಂಡ ಮನೆ 'High winds' ಎಂದು ಹೆಸರಾಯ್ತು. ೪೨ ಹೆಕ್ಟೇರ್ ವಿಸ್ತೀರ್ಣ ತೋಟದಲ್ಲೊಂದು ಹೆಲಿಪಾಡ್ ನಿರ್ಮಾಣ. ನಾಲ್ಕು ಆಸನಗಳುಳ್ಳ ಮಾನೋಪ್ಲೇನ್ ಒಂದನ್ನು ಖರೀದಿಸಿ ತಾನೇ ನಡೆಸುತ್ತಿದ್ದ ಡೆವಿಟ್, ೧೯೪೦ರಲ್ಲಿ ಬ್ರಿಟನ್ನಿನ ಯುದ್ಧ ಬೆಂಬಲಿಸಿ, ವಿಮಾನವನ್ನು ಕೆನಡಾಕ್ಕೆ ಕೊಟ್ಟ.

ಡೈಜೆಸ್ಟ್‌ನ ಕೆಲಸಗಳು ಪ್ಲೆಸೆಂಟ್‌ವಿಲೆಯ ಸುತ್ತಮುತ್ತ ಬಾಡಿಗೆಯ ಹದಿನಾಲ್ಕು ಸ್ಥಳಗಳಲ್ಲಿ ನಡೆಯುತ್ತಿದ್ದು ಗೊಂದಲಮಯವಾಗಿತ್ತು. ಲಿಲಾಳ ನಿರ್ದೇಶನದ ಮೇರೆಗೆ ಶಿಲ್ಪಿಗಳು ವರ್ಜೀನಿಯಾದ ವಿಲಿಯಂಸ್ ಬರ್ಗ್ ಕಟ್ಟಡಗಳ ಮಾದರಿಯಲ್ಲೇ ೧೯೩೭ ರಲ್ಲಿ ಪ್ರಾರಂಭಿಸಿದ ಕಟ್ಟಡದ ಕೆಲಸ ೧೯೩೯ ರಲ್ಲಿ ಪೂರ್ಣ ಗೊಂಡಿತು.

'ಹೈವಿಂಡ್ಸ್'ನ ಗೋಪುರದಲ್ಲಿ ಡೆವಿಟ್‌ನ ವಾಸ. ಸಂಜೆ ಊಟದನಂತರ ತನ್ನ ಕೊಠಡಿ ಸೇರುತ್ತಿದ್ದ ಡೆವಿಟ್. ರಾತ್ರಿ ಮಲಗುತ್ತಿದ್ದನೋ ಅಥವಾ ಮಲಗುತ್ತಲೇ ಇರಲಿಲ್ಲವೋ ತಿಳಿಯದು. ಬೇಸರಗೊಂಡ ಲಿಲಾ ಕೆಲಸದ ಕವಚದಿಂದಾಚೆ ಡೆವಿಟ್‌ನನ್ನು ಎಳೆಯಲು ಅವನು ನೃತ್ಯ ತರಗತಿಗೆ ಸೇರಲು ಒತ್ತಾಯಿಸಿದಳು. ಡೈಜೆಸ್ಟ್‌ನ ಚಲಾವಣೆ ಏರುತ್ತಿತ್ತು. ಒಂದು ರಾತ್ರಿ ತಾನು ಕೆಲಸ ಮಾಡದಿದ್ದರೂ ಡೈಜೆಸ್ಟ್‌ನ ಕೆಲಸ ಮುಂದುವರಿಯುವುದೆಂದು ಮನಗಂಡ ಡೆವಿಟ್ ನೃತ್ಯ ತರಗತಿಗೆ ಸೇರಿದ.

ಸಂಪತ್ತಿನ ಹಂಚಿಕೆ : ೧೯೩೮ರಲ್ಲಿ ಡೈಜೆಸ್ಟ್‌ನ ಬ್ರಿಟಿಷ್ ಮುದ್ರಣದ ಪ್ರಾರಂಭ. ಇಂದು ೧೯ ಭಾಷೆಗಳಲ್ಲಿ ೪೧ ಮುದ್ರಣದೊಂದಿಗೆ ೨೫ ಮಿಲಿಯನ್ ಪ್ರತಿಗಳು ಪ್ರತಿ ತಿಂಗಳೂ ಮುದ್ರಿತ. ೧೯೫೦ರಲ್ಲಿ ಡೈಜೆಸ್ಟ್‌ನ 'Condensed book club' (ಸಂಕ್ಷಿಪ್ತ ಪುಸ್ತಕ ಸಂಘ) ಪ್ರಾರಂಭ. ೧೯೫೫ರಲ್ಲಿ ಏರುವ

ಚಂದಾದರವನ್ನು ತಡೆಗಟ್ಟಲು ಜಾಹಿರಾತು ಮುದ್ರಣ. ಲಾಭ ಹೆಚ್ಚಿತು. ೧೯೮೦ರ ವೇಳೆಗೆ ಡೆವಿಟ್‌ನ ಸಂಪತ್ತು ೫೦,೦೦೦ ಮಿಲಿಯನ್ ಡಾಲರ್‌ಗಳಾಗಿತ್ತು!

ಮಕ್ಕಳಿಲ್ಲದ ಡೆವಿಟ್ ದಂಪತಿಗಳು ಕೊಡುಗೈ ದಾನಿಗಳೆನಿಸಿದರು. ೧೯೪೧ರ ಮೇನಲ್ಲಿ, ಡೈಜೆಸ್ಟ್ ಕವಿತಾ ಸಂಗ್ರಹದ ಪ್ರಕಟಣೆಯಿಂದ ೭೧೦೪೦ ಡಾಲರ್ ಲಾಭ ಬಂದಾಗ, ತಿಂಗಳಿಗೆ ೨೫೦ ಡಾಲರ್‌ಗೂ ಕಡಿಮೆ ಸಂಬಳ ಪಡೆಯುತ್ತಿದ್ದ ತನ್ನ ೩೪೮ ಕೆಲಸಗಾರರಿಗೆ ಆ ಹಣ ಹಂಚಿದ. ಡೆವಿಟ್ ಬದುಕಿದ್ದಾಗಲೇ ಮೆಕಾಲೆಸ್ಟರ್ ಕಾಲೇಜು ೫೦ ಮಿಲಿಯನ್ ಡಾಲರ್ ದಾನ ಪಡೆಯಿತು. ತಾನು ಓದಿದ ಮೌಂಟ್ ಹರ್ಮನ್ ಕಾಲೇಜಿಗಿತ್ತ ಕೊಡುಗೆ ೫ ಮಿಲಿಯನ್. ಪತ್ರಿಕೋದ್ಯಮ ವಿದ್ಯಾರ್ಥಿಗಳ ಸಂಶೋಧನಾ ನಿಧಿಯೊಂದನ್ನು ಸ್ಥಾಪಿಸಿದ. ತಾನು ಮೊದ ಮೊದಲು ಲೇಖನಗಳ ಸಂಗ್ರಹಣೆಗಾಗಿ ಹೋಗುತ್ತಿದ್ದ ನ್ಯೂಯಾರ್ಕ್‌ನ ಪಬ್ಲಿಕ್ ಲೈಬ್ರರಿಯ ಕೊಠಡಿಯನ್ನು ಉತ್ತಮಪಡಿಸಲು ೧.೮ ಮಿಲಿಯನ್ ಡಾಲರ್ ಕೊಡುಗೆ, ಕೃತಜ್ಞತಾ ಪೂರ್ವಕವಾಗಿ, ಗ್ರಂಥಾಲಯ ಆ ಕೊಠಡಿಗೆ ಡೆವಿಟ್‌ನ ಹೆಸರಿಟ್ಟಿತು. ಅಮೆರಿಕಾದ ಸಾಹಸಿ ಸಂಸ್ಥೆ 'Out ward bound'ಗೆ ಡೆವಿಟ್ ನೀಡಿದ್ದು ೧ ಮಿಲಿಯನ್ ಡಾಲರ್.

ಅಮೆರಿಕಾದ ಕಲಾ ಪ್ರಪಂಚದಲ್ಲಿ ಪ್ರಖ್ಯಾತಳಾದ ಲಿಲಾ, ಸ್ಥಾಪಿಸಿದ ನಿಧಿಯಲ್ಲಿ ನ್ಯೂಯಾರ್ಕ್‌ನ ಮೆಟ್ರೊಪಾಲಿಟನ್ ಕಲಾ ಪ್ರದರ್ಶನ ಶಾಲೆ ೫೦ ಮಿಲಿಯನ್ ಡಾಲರ್ ಪಡೆಯಿತು. ೧೦,೨೨೦ ಚದರ ಮೀಟರ್ ಅಳತೆಯ ಕಲಾಶಾಲೆ ೧೯೮೭ರಲ್ಲಿ ಅವಳ ಹೆಸರಲ್ಲಿ ಸ್ಥಾಪಿತವಾಯ್ತು. ಫ್ರಾನ್ಸ್‌ನ ಕಲಾಕಾರ ಕ್ಲಾಡ್ ಮಾನೆಯ ಸ್ಟುಡಿಯೋ ಹಾಗೂ ತೋಟ ನವೀಕರಣಗೊಂಡುವು.

೧೯೭೩ರಲ್ಲಿ, ತನ್ನ ೮೪ನೆ ವಯಸ್ಸಿನಲ್ಲಿ ಡೆವಿಟ್ ಹಾಗೂ ಲಿಲಾ ನಿವೃತ್ತರಾದರು. ಕ್ರಮೇಣ ಸಂಪಾದಕತ್ವದ ಹುದ್ದೆಯನ್ನು ಇತರರಿಗೆ ವಹಿಸಿಕೊಟ್ಟರೂ ಮಾಲೀಕನಾಗಿ ಪ್ರತಿಯೊಂದು ವಿಷಯದೊಂದಿಗೂ ಸಂಬಂಧ ಹೊಂದಿ 'ಹೈವಿಂಡ್'ನ ತನ್ನ ಕೊಠಡಿಯಲ್ಲಿ ಕುಳಿತೇ ಕೆಲಸ ನಿರ್ವಹಿಸುತಿದ್ದ. ೧೯೭೬ರಲ್ಲಿ ಪತ್ರಿಕೆಯೊಂದು ಡೆವಿಟ್ ಸತ್ತ ಸುಳ್ಳು ಸುದ್ದಿಯನ್ನು ಪ್ರಕಟಿಸಿತು. "ನಾನು ಲಿಲಾ ಉತ್ತಮ ಆರೋಗ್ಯದಿಂದಿದ್ದು, ಹಿಂದಿನ ಜನ್ಮದಲ್ಲಿದ್ದಂತೆ ಈಗಲೂ ನಿಮ್ಮ ಕೆಲಸಗಳನ್ನು ಕಂಡು ಮೆಚ್ಚುತ್ತಿದ್ದೇವೆಂದು ಹಾಸ್ಯವಾಗಿ ಉತ್ತರಿಸಿದ ಡೆವಿಟ್.

೧೯೭೮ರ ಕ್ರಿಸ್‌ಮಸ್ ಕಾರ್ಡ್ ಡೆವಿಟ್‌ನ ಮುದ್ರಿತ ಹೆಸರಿನೊಂದಿಗೆ ಬಂತು. ಅದರೊಂದಿಗೆ ತನ್ನ ಕಣ್ಣ ದೃಷ್ಟಿ ಸರಿಯಿಲ್ಲವಾದ್ದರಿಂದ ವೈಯುಕ್ತಿಕವಾಗಿ ನಿಮಗೆ ಬರೆಯಲಾರೆ ಎಂದು ಮುದ್ರಿಸಿದ ಪತ್ರ. ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ ಎಂದು ನಂಬುತ್ತಿದ್ದ ಡೆವಿಟ್ ಈಗ ಪರಿಹಾರ ಕಾಣದ ಸಮಸ್ಯೆಯನ್ನೆ ದುರಿಸಬೇಕಾಯ್ತು.

ಡೆವಿಟ್ ತನ್ನ ೮೮ನೆಯ ವಯಸ್ಸಿನಲ್ಲೂ ಡೈಜೆಸ್ಟ್ ತಂಡದವರೊಂದಿಗೆ ದೋಣಿ ವಿಹಾರ ನಡೆಸಿದ. ಆಗಾಗ್ಗೆ ಕಛೇರಿಯ ಓಣಿಗಳಲ್ಲಿ ನಡೆಯುತ್ತ ಇತರರ ಕೆಲಸದ ಬಗ್ಗೆ ಮೆಚ್ಚುಗೆ ಸೂಚಿಸುತ್ತಿದ್ದ. ಆದರೆ ಕ್ರಮೇಣ ಇತರರೊಂದಿಗೆ ಮಾತಾಡುತ್ತಿದ್ದಂತೇ ತನ್ನ ಆಲೋಚನೆಗಳಲ್ಲಿ ಮುಳುಗಿ ಬಿಡುತ್ತಿದ್ದ.

೧೯೮೧ರ ಮಾರ್ಚ್ ೩೦ರಂದು ತನ್ನ ೯೧ನೇ ವಯಸ್ಸಿನಲ್ಲಿ ಡೆವಿಟ್ ಇಹಲೋಕ ತೋರೆದರೆ ಲಿಲಾ ಸತ್ತದ್ದು ಮುಂದಿನ ಮೂರು ವರ್ಷಗಳ ನಂತರ. ಡೆವಿಟ್‌ಸೃಷ್ಟಿಸಿದ ಈ ಮ್ಯಾಗಜೀನ್, ವಿಶ್ವದಲ್ಲೇ ಅತಿ ಹೆಚ್ಚು ಓದುಗರನ್ನು ಹೊಂದಿದ್ದು ನೂರಕ್ಕೂ ಮೇಲ್ಪಟ್ಟ ದೇಶಗಳ ಮಿಲಿಯಗಟ್ಟಲೆ ಜನ ಅದರಿಂದ ಸ್ಫೂರ್ತಿ ಪಡೆಯುತ್ತಿದ್ದಾರೆ.

ಹಕ್ಕಿ ಹಾರಿಹೋಗಿದೆ, ಆದರೆ ಹಾಡು ಕೇಳುತ್ತಲೇ ಇದೆ!

ಪುಸ್ತಕ ವಿಮರ್ಶೆ

ಶಂಬಾ ಜೋಶಿಯವರ ಆಯ್ದ ಲೇಖನಗಳು: ಸಂಪಾದಕ: ಮಲ್ಲೇಪುರಂ ಜಿ. ವೆಂಕಟೇಶ, ಪ್ರಕಾಶಕರು: ಕನ್ನಡ ಪುಸ್ತಕಪ್ರಾಧಿಕಾರ, ಕರ್ನಾಟಕ ಸರ್ಕಾರ, ಪುಟಗಳು-೩೪೦, ಬೆಲೆ-ರೂ ೫೫.

೧೯೯೬ರಲ್ಲಿ ಶಂಬಾ ಜೋಶಿಯವರ ಜನ್ಮ ಶತಮಾನೋತ್ಸವ. ಈ ಸಂದರ್ಭದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಕೋರಿಕೆಯ ಮೇರೆಗೆ ಮಲ್ಲೇಪುರಂ.ಜಿ. ವೆಂಕಟೇಶರವರು ಶಂಬಾರವರ ಆಯ್ದ ಲೇಖನಗಳನ್ನು ಗ್ರಂಥ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಶಂಬಾರವರ ಆಯ್ದ ಲೇಖನಗಳನ್ನು ಅಳವಡಿಸಲಾಗಿದ್ದು, ಇವುಗಳನ್ನು ಮೂರು ಭಾಗಗಳಾಗಿ ವಿಗಂಡಿಸಲಾಗಿದೆ. ಮೊದಲ ಭಾಗವಾದ 'ಸಮಾಜ'ದಲ್ಲಿ ಪ್ರಸ್ತುತ ಸಮಾಜವನ್ನು ಪ್ರತಿಬಿಂಬಿಸುವ ಹನ್ನೊಂದು ಲೇಖನಗಳಿವೆ. ಎರಡನೆಯದು 'ಸಂಸ್ಕೃತಿ'. ಇದರಲ್ಲಿ ಹದಿಮೂರು ಲೇಖನಗಳಿವೆ. ಮೂರನೆಯ ಭಾಗ 'ತತ್ವಜ್ಞಾನ'. ಈ ವಿಭಾಗದಲ್ಲಿ ನಾಲ್ಕು ಲೇಖನಗಳಿವೆ.

'ಸಮಾಜ'ದಲ್ಲಿ ಬರುವ ಮೊದಲ ಲೇಖನ 'ಪ್ರಜ್ಞೋದ್ಧಾರವಾಯಿತೇ?' ಎಂಬುದು. ನಮ್ಮ ದೇಶದ ಹೆಸರು ಭಾರತ. ಅದನ್ನು ಹಿಂದೂ ವೆಂದು ಕರೆಯಬಾರದೆಂದು, ಅಲ್ಪಸಂಖ್ಯಾತರನ್ನು ಮೆಚ್ಚಿಸುವ ನೀತಿ ಸಲ್ಲದೆಂದು, ದೇಶಿಯರೇ ಹೊರಗಿನವರಿಗೆ ಆಮಂತ್ರಣವಿತ್ತರೆಂದು ಸತ್ಯವನ್ನು ಬಯಲು ಮಾಡಿ ನಮ್ಮ ಜನರಿಗೆ ಈಗಲಾದರೂ ಅರಿವು ಮೂಡಿತೇ ಎಂದು ಮೊದಲನೆಯ ಪ್ರಬಂಧದಲ್ಲಿ ಶಂಬಾರವರು ಪ್ರಶ್ನಿಸುತ್ತಾರೆ.

''ಹಿಂದೂ ಮುಸಲ್ಮಾನರ ತೊಡಕು'' ಎಂಬ ಪ್ರಬಂಧದಲ್ಲಿ ಶಂಬಾರವರು ಬ್ರಿಟಿಷರು ಬಿತ್ತಿದ ವಿಷದ ಬೀಜದಿಂದ ಭಾರತ, ಪಾಕಿಸ್ತಾನಗಳ ವಿಭಾಗವಾಯಿತು; ಬ್ರಿಟಿಷರಿಗೆ ಅಖಂಡ ಹಿಂದೂಸ್ಥಾನ ಬೇಕಿರಲಿಲ್ಲ. ಇಂದು ಭಾರತ ಪಾಕಿಸ್ತಾನಗಳ ಸಮಸ್ಯೆ ಜಟಿಲವಾಗಿದ್ದು ಬಿಡಿಸಲಾರದ ಕಗ್ಗಂಟಾಗಿದೆ ಎಂದಿದ್ದಾರೆ. ಮಹಾತ್ಮಾಜಿಯವರು ಕಂಡ ಕನಸಿನ ಭಾರತ ೧೯೪೭ರ ಆಗಸ್ಟ್ ೧೫ರ ನಂತರ ಇರಲಿಲ್ಲ. ಮತಾಂತರಕ್ಕೆ ಸಂಬಂಧಿಸಿದ ಶಂಬಾರವರ ಕೆಲವು ಅಭಿಪ್ರಾಯಗಳು ಸ್ವೀಕಾರಾರ್ಹವಲ್ಲ.

''ಹಿಂದೂ ಎಂಬ ಸಮಾಜ ಇದೆಯೆ? ಆಗಬೇಕೆ?'' ಪ್ರಬಂಧದಲ್ಲಿ ಲೇಖಕರು ಹಿಂದೂಗಳೆಂದರೆ ಯಾರು ಎಂದು ವಿವರಿಸುತ್ತಾ, ಹಿಂದೂ ಎಂಬ ಪದ ಗಟ್ಟಿಯಾಗಿ ನೆಲೆಗೊಂಡಿದ್ದು ಮುಸಲ್ಮಾನರ ಭೀತಿಯಿಂದ ಎಂದಿದ್ದಾರೆ. ಇದನ್ನು ಒಪ್ಪಲಸಾಧ್ಯ. ಏಕೆಂದರೆ ಮುಸ್ಲಿಂರು ಭಾರತಕ್ಕೆ ಬರುವುದಕ್ಕಿಂತ ಹಿಂದೆಯೇ 'ಹಿಂದೂ' ಎಂಬ ರಾಷ್ಟ್ರ ಇತ್ತು. ಮುಸಲ್ಮಾನರ ದಬ್ಬಾಳಿಕೆ ಅತಿಯಾದಾಗ ಅವರು ಒಂದಾಗಲು ಪ್ರಯತ್ನಿಸಿದರು. 'ಹಿಂದೂ' ಎಂಬ ಪದದ ಬಗ್ಗೆ ಸ್ವಾಮಿ ವಿವೇಕಾನಂದರು ನೀಡಿರುವ ವಿವರಣೆಯನ್ನು ನೋಡಿದರೆ ಶಂಬಾರವರ ಅಭಿಪ್ರಾಯ ಹುಸಿಯಾಗುತ್ತದೆ.

''ಪ್ರಜಾಪ್ರಭುತ್ವ ನಮ್ಮ ಗುರಿಯೇ'' ಪ್ರಬಂಧ ಅಖಿಲ ಭಾರತೀಯ ಘಟನಾ ಸಮಿತಿಯಲ್ಲಿ ನೆಹರುರವರು ಪ್ರಜಾ ಪ್ರಭುತ್ವಕ್ಕೆ ಸಂಬಂಧಿಸಿದಂತೆ ಮಂಡಿಸಿದ ಗೊತ್ತುವಳಿಯನ್ನು ಕುರಿತದ್ದು. ಪ್ರಜಾ ಪ್ರಭುತ್ವದ ಹೆಸರು ಸಾರ್ಥಕವಾಗ ಬೇಕಾದರೆ ನಾಡಿನ ಎಲ್ಲಾ ಪ್ರಜೆಗಳು ಸಮಾನ ಸ್ವಂಥರಾಗಿರಬೇಕು. ಇಂದು ಅಸಮಾನತೆಗೆ ಕಾರಣವಾದ ಜಾತಿ, ಧರ್ಮ, ಹುಟ್ಟುಗಳು ಪ್ರಜಾಪ್ರಭುತ್ವದ ಮೂಲತತ್ವಕ್ಕೆ ವಿರುದ್ಧವಾಗಿವೆ. ಅಸಹಕಾರ ಚಳುವಳಿ ಖಿಲಾಫತ್ ಚಳುವಳಿಯಲ್ಲಿ ಗಾಂಧೀಜಿ ಮತ್ತು ಶೆಲ್ಲೀ ಬಂಧುಗಳು ಪರಿಣಾಮಕ ಕಾರ್ಯ ಮಾಡಿದರು. ಆದರೆ ಮಹಮ್ಮದ್ ಆಲಿಯವರು ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿದ್ದರೂ ತಮ್ಮ ಜಾತಿ, ಮತ, ಧರ್ಮದಿಂದ ಹೊರ ಬಂದಿರಲಿಲ್ಲ. ಪ್ರಜಾಪ್ರಭುತ್ವ ಸರ್ಕಾರದ ಉದ್ದೇಶವಾಗಿದ್ದರೆ

ಮೊದಲು ಅದು ಜಾತಿ, ಮತ, ಧರ್ಮಗಳನ್ನು ಸೃಷ್ಟಿ ಮಾಡುವ ಸಂಘ ಸಂಸ್ಥೆಗಳಿಗೆ ವಿದ್ಯಾ ಸಂಸ್ಥೆಗಳಿಗೆ ಕಡಿವಾಣವನ್ನು ಹಾಕಿ, ಇವುಗಳಿಗೆ ಸರಿಯಾದ ಮಾರ್ಗ ದರ್ಶಕ ಮಾಡ ಬೇಕೆಂದು ಶಂಬಾರವರು ಸಲಹೆ ಮಾಡು ತ್ತಾರೆ.

''ಕರ್ನಾಟಕದಲ್ಲಿ ಪ್ರಜಾಪ್ರಭುತ್ವ'' ಎಂಬ ಲೇಖನದಲ್ಲಿ ಪ್ರಜಾಪ್ರಭುತ್ವದ ಪ್ರಾಚೀನತೆಯನ್ನು ವಿವರಿಸಲಾಗಿದೆ. ''ರಾಜಾ ಪ್ರತ್ಯಕ್ಷ ದೇವತಾ'' ಎಂದು ಬಗೆದು, ಅವರ ಸಾನಿಧ್ಯದಲ್ಲಿ ಚಿರಕಾಲವೂ ಬಾಳಬೇಕೆಂಬ ಹಂಬಲವುಳ್ಳ ನಮ್ಮ ನಾಡಿನಲ್ಲಿ ಪ್ರಜಾ ಪ್ರಭುತ್ವ ಸಾಧ್ಯವೇ ? ಬುದ್ಧ ಜನ್ಮತಾಳಿದ ಶಾಕ್ಯ ಕುಲದ ನಾಡಿನಲ್ಲಿ ಪ್ರಜಾಪ್ರಭುತ್ವವಿತ್ತು.

ಇಂತಹ ಗಣರಾಜ್ಯಗಳನ್ನು ರಾಜರುಗಳು ನಾಶ ಮಾಡಿದ್ದರೂ ಸಹ ಪ್ರಜೆಗಳು ಹಳ್ಳಿ ಗಳಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡಿ ದ್ದರು. ಲೇಖಕರು ಅಂದಿನ ಪ್ರಜಾಪ್ರಭುತ್ವಕ್ಕೂ, ಇಂದಿನ ಪ್ರಜಾಪ್ರಭುತ್ವಕ್ಕೂ ವ್ಯತ್ಯಾಸವಿದೆ ಎಂದು ಹೇಳಿ ''ಉದ್ಧರೋತ್ ಆತ್ಮನಾತ್ಮಾ ನಾಮ್'' ಎಂಬ ಭಗವದ್ಗೀತೆಯ ಸಂದೇಶ ವನ್ನು ಉದ್ಧರಿಸಿ ಭಾರತದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದು ಹೇಳಿದ್ದಾರೆ.

''ಗಾಂಧಿ ಆರ್ವಿನ್ ಸಂಧಿ ರಹಸ್ಯ'': 'ನೆತ್ತರಿಲ್ಲದೆ ಸ್ವರಾಜ್ಯವೆಲ್ಲಿ' ಎಂದು ಕೂಗು ಹಾಕುತ್ತಿದ್ದ ಕಾಲದಲ್ಲಿ ಗಾಂಧೀಜಿ ಸತ್ಯಾಗ್ರಹ ಮಾಡಿದ್ದು ಕೆಲವರಿಗೆ ಇರುಸು ಮುರುಸು ಮಾಡಿತು. ಆದರೆ ಗಾಂಧೀಜಿಯವರ ವಿಚಾರಗಳೇ ಅಗಮ್ಯ. ಸತ್ಯಾಗ್ರಹ ಫಲವಾಗಿ ಬ್ರಿಟಿಷರು ಗಾಂಧೀಜಿಯವರ ಜೊತೆ ಐತಿಹಾಸಿಕ ಒಪ್ಪಂದ ಮಾಡಿಕೊಂಡು, ಇಂಗ್ಲೆಂಡಿನ ದುಂಡು ಮೇಜಿನ ಸಮ್ಮೇಳನಕ್ಕೆ ಆಹ್ವಾನವಿತ್ತರು. ಮಿ.ಬೆಲ್ಲಫರ್ಡ್ ಎಂಬು ವರು ತಮ್ಮ ಉಪನ್ಯಾಸವೊಂದರಲ್ಲಿ ''ಮಹಾತ್ಮ ಗಾಂಧೀಜಿಯವರು ತನ್ನ ತಪಃ ಪ್ರಭಾವದಿಂದ ಹಿಂದೂ, ಮುಸಲ್ಮಾನ, ಸೀಖ ಮೊದಲಾದ ಪಂಥದವರನ್ನು ಏಕೀಕರಿಸು ತ್ತಿದ್ದಾರೆ'' ಎಂದಿದ್ದರು. ಗಾಂಧೀಜಿಯವರ ಮನಸ್ಸು ಬ್ರಿಟಿಷರಿಗೆ ಅರ್ಥವಾಗಿತ್ತು. ಆದರೆ ಭಾರತೀಯರು ಅವರ ಮನಸ್ಸನ್ನು ಇಂದಿಗೂ ಅರಿಯಲು ಸಾಧ್ಯವಾಗದಿದ್ದುದು ವಿಪರ್ಯಾಸ ವೆಂಬ ಮಾತಿನಲ್ಲಿ ಯಥಾರ್ಥತೆಯಿದೆ.

''ಕೈಗೆ ಬಂದ ಭಾರತ ಸ್ವಾತಂತ್ರ್ಯವು ಈಗಲೇ ಕೈಗೂಡಬಹುದೇ'' ಲೇಖನ ಅರ್ಥ ವತ್ತಾಗಿದೆ. ಸ್ವತಂತ್ರ ರಾಷ್ಟ್ರವೆಂದೊಡನೆ ಅದಕ್ಕೆ ಸ್ವಂತ ಸೈನ್ಯಬೇಕು. ಬ್ರಿಟಿಷರ ದಂಡನ್ನು ಭಾರತೀಯ ದಂಡನ್ನಾಗಿ ಪರಿವರ್ತಿಸುವು ದುಂಟೆ? ಬ್ರಿಟಿಷರು ಭಾರತದ ಸಂಪತ್ತನ್ನು ಲೂಟಿ ಮಾಡಿದ ನಂತರ ಇಲ್ಲಿಂದ ಕಾಲ್ತೆ ಗೆದರು. ಗಾಂಧಿ, ನೆಹರು ಮುಂತಾದವರು ಹಿಂದೂ ಮುಸಲ್ಮಾನರನ್ನು ಒಂದುಗೂಡಿಸಲು ಪ್ರಯತ್ನಿಸಿದರು. ಜಾತಿ, ಧರ್ಮದ ಅಭಿಮಾನ ವಿರುವ ವ್ಯಕ್ತಿಯನ್ನು ಸೈನ್ಯಕ್ಕೆ ಸೇರಿಸಬಾರ ದೆಂದು ಶಂಬಾರವರು ಕಿವಿ ಮಾತು ಹೇಳಿದ್ದಾರೆ. ಏಕೆಂದರೆ ಆ ವ್ಯಕ್ತಿ ತನ್ನ ಕರ್ತವ್ಯವನ್ನು ನಿರ್ವಂ ಚನೆಯಿಂದ ನಿಭಾಯಿಸಲಾರ. ಹಲವಾರು ವರ್ಷಗಳ ಕಾಲ ಆಂಗ್ಲರು ಭಾರತವನ್ನು ಆಳ್ವಿಕೆ ಮಾಡಬೇಕಾದರೆ ಹಿಂದೂ ಮುಸ್ಲಿಂರ ಕಚ್ಚಾಟವೇ ಕಾರಣವೆಂಬ ಅವರ ಅಭಿಪ್ರಾಯ ವಿವಾದಾತೀತ.

''ಇಂದಿನ ನಮ್ಮ ಸಂಕಲ್ಪ ಮತ್ತು ಕೃತಿ.'' ಲೇಖನ ಸಾರಾಂಶವಿಷ್ಟು : ಸ್ವಾತಂತ್ರ್ಯ ಬಂದ ಮೇಲೆ ಸುಖದಿಂದ ಕಾಲ ಕಳೆಯಬೇಕೆಂಬ ವ್ಯಕ್ತಿಗಳಿಗೆ ತುಂಬಾ ನಿರಾಸೆಯಾಯಿತು. ಕೆಲವೊಂದು ವೈದಿಕರು ಗಾಂಧೀಜಿ ನಮ್ಮ ಪುರಾತನ ಧರ್ಮ ಸಂಪ್ರದಾಯಗಳನ್ನು ನಾಶ ಮಾಡಲು ಬಂದ ಅಸುರ ಎಂದರು. ಆದರೆ 'ಗಾಂಧೀ' ಎಂಬ ಮೋಹಕ ಹೆಸರಿನ ಶಾಂತಿ ಮಂತ್ರ ಅವರಿಗೆ ಅರ್ಥವಾಗಲಿಲ್ಲ. ಇನ್ನೊಬ್ಬರ ಹಂಗಿನಲ್ಲಿ ಬಾಳುವ ವ್ಯಕ್ತಿಗೆ ಸ್ವಾಭಿಮಾನದ ವಿಚಾರ ತಿಳಿಯದು. ಗಾಂಧೀಜಿಯವರು ''ಸ್ಮಶಾನ ಶಾಂತಿಯ ಪರಿಕೀಯ ರಾಜ್ಯ ಕ್ಕಿಂತಲೂ ಅಶಾಂತಿಯ ರಾಜ್ಯವೇ ಲೇಸು ಎಂದಿ ದ್ದಾರೆ. ಇನ್ನಾದರೂ ಭಾರತೀಯರು ಇಂದಿ

ನಿಂದಲೇ ದಿವ್ಯ ಆದರ್ಶ ಜೀವನಕ್ಕೆ ಸಂಕಲ್ಪ ಮಾಡುವುದು ಅತ್ಯವಶ್ಯಕವಾಗಿದ್ದು ಅದಕ್ಕಾಗಿ ಬೇಕಾಗಿರುವ ಉತ್ತಮ ಕೃತಿಗಳನ್ನು ಅಧ್ಯಯನ ಮಾಡಬೇಕೆಂಬುದು ಲೇಖಕರ ಸಲಹೆಯಾಗಿದೆ.

''ವಿಚಾರ ಕಲ್ಪನಾ ಮತ್ತು ಆದರ್ಶ'' ಲೇಖನದಲ್ಲಿ ಈಗ ಸಿಕ್ಕಿರುವ ಸ್ವಾತಂತ್ರ್ಯವನ್ನು ಉಳಿಸಿಕೊಂಡು ಅದನ್ನು ವೃಗೂಡಿಸಿಕೊಳ್ಳಬೇಕಾದರೆ ಜನರಲ್ಲಿ ಮಾನಸಿಕ ಕ್ರಾಂತಿ ಉಂಟಾಗಬೇಕು ಎಂದಿದ್ದಾರೆ. ಮಾನವನಿಗೆ ಜ್ಞಾನ ವಿಚಾರಗಳ ಮೂಲಕ ಉಂಟಾಗುತ್ತದೆ. ಕಲ್ಪನೆ ವಾಸ್ತವವಲ್ಲ. ವಿಚಾರಕ್ಕೂ ಕಲ್ಪನೆಗೂ ತುಂಬಾ ವ್ಯತ್ಯಾಸವಿದೆ. ಕಲ್ಪನಾವಾದದಿಂದ ಬೇರೆಯಾಗಿದ್ದು ತಾನು ಕಂಡು ಕೊಂಡಿದ್ದನ್ನು ಪಾಲಿಸುವುದೇ ಆದರ್ಶವಾದ. ಮಾರ್ಕ್ಸ್‌ವಾದದಿಂದ ತಲೆಕೆಡಿಸಿಕೊಂಡ ವ್ಯಕ್ತಿಗಳು ಜನತೆಯನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಜನತೆ ಎಚ್ಚರವಾಗಿರಬೇಕೆಂದು ಲೇಖಕರು ಕಿವಿ ಮಾತು ಹೇಳುತ್ತಾರೆ.

''ರೂಢಿ ಹಾಗೂ ಭಾವಿಕ ಕಲ್ಪನೆಗಳು'' ರೂಢಿ ಸಂಪ್ರದಾಯಗಳು ಏಕೆ ? ಹೇಗೆ ? ಉಂಟಾದವು ಎಂಬುದು ಗೊತ್ತಿಲ್ಲ. ಇವೆಲ್ಲವೂ ಕೂಡ ಭಾವನೆಗಳ ಮೂಲಕ ಪಡಿ ಮೂಡುವಂತಹವು. ವಿಚಾರ ವಿಮರ್ಶೆಗಳ ಪ್ರಾಬಲ್ಯ ಹೆಚ್ಚಾದಂತೆ ರೂಢಿ ಸಂಪ್ರದಾಯಗಳ ಆರ್ಭಟ ಕಡಿಮೆ ಆಗುತ್ತದೆ. ಮಾನವನು ರೂಢಿ ಸಂಪ್ರದಾಯಗಳನ್ನು ಬದಲಾಯಿಸಲು ಸಿದ್ಧವಾದರೂ ಭಾವನೆಗಳು ಆತನಿಗೆ ಅಡ್ಡ ಬಂದು ಸಂಪ್ರದಾಯದ ಚೌಕಟ್ಟಿನಲ್ಲಿ ಆತ ವಿಲವಿಲನೆ ಒದ್ದಾಡುತ್ತಿರುತ್ತಾನೆ. ಈ ಲೇಖನದಲ್ಲಿ ಶಂಬಾರವರು ಸಮಾಜದಲ್ಲಿ ಕಂಡು ಬರುವ ರೂಢಿ ಸಂಪ್ರದಾಯಗಳ ಮೌಢ್ಯಗಳನ್ನು ಖಂಡಿಸಿದ್ದಾರೆ.

''ಅಡುಗೆಯ ಮನೆ ಕೆಡುಹಿದರೆ ನೀವೇ ನಿರಾಧಾರಿಗಳಾಗುವಿರಿ'': ಓರ್ವ ಯುವತಿ ಅಡುಗೆ ಮನೆಗಳು ಇರಲೇ ಕೂಡದೆಂದು ಬರೆದ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಶಂಬಾರವರು ಬರೆದ ಪ್ರತಿ ಲೇಖನವಿದು. ಹೆಣ್ಣಿಗೆ ತಪಃ ಸಾಮರ್ಥ್ಯವಿದೆ. ಆಕೆ ಮಕ್ಕಳನ್ನು ಹೆತ್ತು ಲಾಲಿಸಿ ಪೋಷಿಸುತ್ತಾಳೆ. ಮನೆಯ ಪೂರ್ಣ ಅಧಿಕಾರ ಅವಳಿಗಿರುತ್ತದೆ.

ಇದನ್ನೇ ಗಂಡಸು ಬಂಡವಾಳವನ್ನಾಗಿ ಮಾಡಿಕೊಂಡು ಅಡುಗೆ ಮನೆಯಲ್ಲಿ ಆಕೆಯನ್ನು ಕೂಡಿ ಹಾಕಲು ಪ್ರಯತ್ನಿಸಿದ್ದು ಸರಿಯಲ್ಲ. ''ನಸ್ತ್ರೀ ಸ್ವಾತಂತ್ರ್ಯ ಮರ್ಹತಿ'' ಎಂಬ ಮನುಸ್ಮೃತಿಯ ವಾಕ್ಯವನ್ನು ಇಂದಿನ ಸ್ತ್ರೀಯರನ್ನು ನೋಡಿದಾಗ ಮರೆಯುವುದೇ ವಾಸಿಯೆಂಬುದು ಅವರ ಅಭಿಪ್ರಾಯ. .

''ಸಂಸ್ಕೃತಿ'' ಈ ಭಾಗದಲ್ಲಿ ಬರುವ ಮೊದಲ ಲೇಖನ ''ಬಿನ್ನಹಪತ್ರ''ಎಂಬುದು ಇದರಲ್ಲಿ ಕನ್ನಡಭಾಷೆ ಮತ್ತು ಅನ್ಯ ಭಾಷೆಗಳಿಗಿರುವ ಸಂಬಂಧವನ್ನು ಶಂಬಾರವರು ಕುರಿತು ಚರ್ಚಿಸಿದ್ದಾರೆ. ಕನ್ನಡಿಗರಿಗೆ ತಮ್ಮತನದ ಅರಿವು ಉಂಟಾಗಬೇಕು. ಇಲ್ಲದಿದ್ದರೆ ಕನ್ನಡ ನಾಡಿನಲ್ಲಿ ಕನ್ನಡ ಬಾಳುವುದಿಲ್ಲ. ಕನ್ನಡ ಭಾಷೆಗೆ ಐದುಸಾವಿರ ವರ್ಷಗಳ ಇತಿಹಾಸ ಇದೆ. ಒಂದು ಭಾಷೆಯಿಂದ ಸ್ವೀಕರಿಸಿದಾಕ್ಷಣ ಸ್ವೀಕರಿಸಿದ ಭಾಷೆ ಹಾಳಾಗುವುದಿಲ್ಲ. ಕನ್ನಡ ಭಾಷೆ ದ್ರಾವಿಡ ವರ್ಗಕ್ಕೆ ಸೇರಿದ್ದರೂ ಅದನ್ನು ಕೈಹಿಡಿದು ಬೆಳೆಸಿದ್ದು ಸಂಸ್ಕೃತ ಭಾಷೆ. ಕಿರುತಿಳಿವಿನಿಂದ, ಮೈಗಳ್ಳತನದಿಂದ, ಪಾಂಡಿತ್ಯಕ್ಕಾಗಿ ಅನ್ಯಭಾಷೆಯಿಂದ ವಿದ್ವಾಂಸರು ಪದ ಸ್ವೀಕಾರ ಮಾಡುತ್ತಾರೆ ಎಂದು ಶಂಬಾರವರ ಅಭಿಪ್ರಾಯ. ಇದು ತಪ್ಪು ಕಲ್ಪನೆ. ಸಾಹಿತಿ ಅನಿವಾರ್ಯವಾದರೆ ಮಾತ್ರ ಅವು ಭಾಷೆಗಳಿಂದ ಪದಗಳನ್ನು ಎರವಲು ಪಡೆಯುವುದು ತಪ್ಪಲ್ಲ.

''ಮರಾಠಿ ಸಾಹಿತ್ಯದ ವಿಹಂಗಮಾವಲೋಕನ''ಲೇಖನದಲ್ಲಿ ಶಂಬಾರವರು ಮರಾಠಿ ಸಾಹಿತ್ಯದ ಉಗಮ, ವಿಕಾಸಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಪ್ರಾರಂಭದಲ್ಲಿ ಮರಾಠಿ ಭಾಷೆ ಬೆಳೆಯಲು ಕನ್ನಡ ಸಹಾಯ ಮಾಡಿತೆನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಕರ್ನಾಟ ಮತ್ತು ಮರಾಠಿ ಭಾಷೆಗಳ ಸಂಬಂಧ ತೀರ ಇತ್ತೀಚಿನದು ಎಂದು ಹೇಳುವ ಕೆಲವೊಂದು ವಿದ್ವಾಂಸರುಗಳಿಗೆ ಉತ್ತರವಾಗಿ ಕರ್ನಾಟ ಮತ್ತು ಮರಾಠಿ ಎಂಬ ಈ ಲೇಖನ ಮೂಡಿ

ಬಂದಿದೆ. ಶಂಬಾರವರು ಮರಾಠಿ ಮತ್ತು ಕನ್ನಡ ಭಾಷೆಗಳ ಸಂಬಂಧ ಅತ್ಯಂತ ಪ್ರಾಚೀನವಾದದ್ದು ಎಂದು ಹೇಳಿ, ಮರಾಠಿಯಲ್ಲಿರುವ ಅನೇಕ ಕನ್ನಡ ಶಬ್ದಗಳನ್ನು ಉದಾಹರಿಸಿದ್ದಾರೆ. ಮರಾಠಿ ಸಾಹಿತ್ಯದ ಆದಿ ಕವಿಯಾದ ಜ್ಞಾನೇಶ್ವರನಲ್ಲಿ ಕನ್ನಡದ ಪ್ರಭಾವವಿದೆಯೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ''ಕಂನುಡಿಯ ಪೂರ್ವಚರಿತ್ರೆ ಮತ್ತು ಮರಾಠಿಯ ಬುಡಕಟ್ಟು'' ಎಂಬ ಲೇಖನದಲ್ಲಿ ಈ ಎರಡು ಭಾಷೆಗಳ ನಡುವಣ ಸಾಂಸ್ಕೃತಿಕ ಸಂಬಂಧವನ್ನು ವಿವರಿಸಿದ್ದಾರೆ.

''ಕಣ್ಣರ ನಾಡು-ಕಂನಾಡು'' ಲೇಖನದಲ್ಲಿ ಶಂಬಾರವರು ಕನ್ನಡ ಎಂಬ ಶಬ್ದದ ನಿಷ್ಪತ್ತಿಯ ಬಗ್ಗೆ ವಿವರಣೆ ನೀಡಿದ್ದಾರೆ. 'ಕನ್ನಡ' ಎಂಬ ಶಬ್ದದ ಬಗ್ಗೆ ಗುಂಡರ್ಟ್, ಕಾಲ್ಡವೆಲ್ ಮುಂತಾದ ಪಾಶ್ಚಾತ್ಯ ವಿದ್ವಾಂಸರು ನೀಡಿದ್ದ ವಿವರಣೆಯನ್ನು ಶಂಬಾರವರು ತಿರಸ್ಕಾರ ಮಾಡಿ ತಮ್ಮದೇ ಆದ ವಿವರಣೆಯನ್ನು ಕೊಟ್ಟಿದ್ದಾರೆ. ಕರುನಾಡು, ನಿಷ್ಪತ್ತಿಯನ್ನು ತಿರಸ್ಕರಿಸಿ 'ಕಂನಾಡು' ಎಂಬುದೇ ಸರಿಯಾದ ರೂಪವೆಂದಿದ್ದಾರೆ. ಕಂನಾಡನ್ನು ಬಿಡಿಸಿದಾಗ ಕಂ+ ನಾಡು ಎಂಬಲ್ಲಿ ಪೂರ್ವಪದ 'ಕಂ' ಎಂಬುದು ಜನಾಂಗ ಸೂಚಕವಾಗಿದ್ದು 'ಕಣ್ಣರೇ' ಕಂನಾಡಿನ ಮೂಲ ಜನಾಂಗವೆಂದು ಹೇಳಿರುವುದು ವಿವಾದಾಸ್ಪದ ವಿಚಾರವಾಗಿದೆ.

''ಕಂನಾಡು-ಕಂನುಡಿ'' ಎಂಬ ಲೇಖನದಲ್ಲಿ ಕನ್‌ರನಾಡು ಕಂನಾಡು ಎಂದಾಗಿರುವಂತೆ ಕನ್‌ರನುಡಿ ಕಂನುಡಿ ಏಕಾಗಿರಬಾರದು ಎಂದು ಶಂಬಾ ವಾದಿಸಿದ್ದಾರೆ.

''ಇಂದಿನ ಉಭಯ ಭಾಷಾ ಚಕ್ರವರ್ತಿಗಳು'' ಲೇಖನದಲ್ಲಿ 'ಕನ್ನಡ ಕವಿಚರಿತೆ'ಯ ಸಂಪುಟಗಳನ್ನು ತಿರುವಿಹಾಕಿದರೆ 'ಉಭಯ ಭಾಷಾ ಚಕ್ರವರ್ತಿಗಳು' ಸಿಕ್ಕುವುದು ತೀರ ವಿರಳ ಎಂದಿದ್ದಾರೆ, ಲೇಖಕರು. ಕನ್ನಡ ನಾಡಿನಲ್ಲಿ ಉಭಯ ಭಾಷಾ ಚಕ್ರವರ್ತಿಗಳು ಇಂದು ಇದ್ದು ಅವರು ತಮ್ಮ ಮನೆಯ ಮಾತನ್ನೇ ಮರೆಯುತ್ತಿದ್ದಾರೆಂದು ಶಂಬಾರವರು ವಿಷಾದದಿಂದ ಹೇಳಿದ್ದಾರೆ. ಬೇರೆ ಭಾಷೆ ಅಭ್ಯಾಸಮಾಡುವವರು ದೇಶದ್ರೋಹಿಗಳು, ಕನ್ನಡನುಡಿ ನಮ್ಮ ನಾಡಿನ ಉಸಿರು ಎಂದಿದ್ದಾರೆ. ಶಂಬಾರವರ ಈ ವಾದ ಸರಿಯಲ್ಲ. ಕುವೆಂಪು, ಬೇಂದ್ರೆ, ಮಾಸ್ತಿ ಮತ್ತು ಕಾರಂತರು ಇಂಗ್ಲಿಷ್ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿಕೊಂಡೇ ಕನ್ನಡ ಭಾಷೆ ಬೆಳೆಸಿದರು. ಇವರು ದೇಶದ್ರೋಹಿಗಳಾಗಲು ಸಾಧ್ಯವಿಲ್ಲ; ಶಂಬಾರವರಿಗೆ ಮರಾಠಿ ಮತ್ತು ಕನ್ನಡ ಭಾಷೆ ಬರುತ್ತಿತ್ತು ಎಂಬುದನ್ನು ಮರೆಯಬಾರದು.

''ನಡೆವಳಿ-ನುಡಿವಳಿ''ಗಳ ಸಂಬಂಧವನ್ನು ಅದೇ ಹೆಸರಿನ ಈ ಲೇಖನ ಚಿತ್ರಿಸುತ್ತದೆ. ನಡೆಯಲ್ಲಿ ಬಂದ ಅನುಭವ ನುಡಿಯಲ್ಲಿ ಹೊರಹೊಮ್ಮುತ್ತದೆ. ಇಂದ್ರಿಯಗಳಿಗೆ ಹೊರಗಿನ ಸಂಸ್ಪರ್ಶ ಉಂಟಾದಾಗ ಅಂತರ್ಯದ ಭಾವ ಬುದ್ಧಿ ಪ್ರಚೋದಿತವಾಗಿ ಅದು ಅಂಗಾಂಗಗಳಲ್ಲಿ ಸಂಚರಿಸಿ ಶಬ್ದ ಉತ್ಪತ್ತಿಯಾಗುತ್ತದೆ. ಭಾಷಾ ವಿಜ್ಞಾನವನ್ನು ಆಧಾರವಾಗಿಟ್ಟುಕೊಂಡು ಶಬ್ದ ಅರ್ಥಗಳ ಬಗ್ಗೆ ವಿವರಣೆ ನೀಡಲು ಲೇಖಕರು ಪ್ರಯತ್ನಿಸಿದ್ದಾರೆ. ನಡೆನುಡಿಯಲ್ಲಿ ಇರುವ ಅನ್ಯೋನ್ಯ ಸಂಬಂಧವನ್ನು ಗಮನಿಸಿದೆ, ಕೇವಲ ಶಾಸನಾದಿ ಲಿಖಿತ ಆಧಾರಗಳನ್ನೇ ನಂಬಿಕೊಂಡು ಇತಿಹಾಸ ಬರೆದರೆ ಅದು ಅಪೂರ್ಣವಾಗಿ ಉಳಿಯುತ್ತದೆ.

''ಸಂಸ್ಕೃತಿ ಅಂಗ ತ್ರಯಗಳ ವಿಚಾರ' ಈ ಲೇಖನದಲ್ಲಿ ಸಂಸ್ಕೃತಿ ಮತ್ತು ಪ್ರಕೃತಿ ಇವೆರಡರ ಅಂತರವೇನು ಎಂಬುದನ್ನು ಕಂಡು ಹಿಡಿಯುವ ಪ್ರಯತ್ನ ಮಾಡಲಾಗಿದೆ. ಜಗತ್ತಿನ ಪ್ರತಿಯೊಂದು ಜನಾಂಗವೂ ಒಂದೊಂದು ಧರ್ಮ ಸ್ಥಾಪಿಸಿಕೊಂಡು ತನ್ನದೇ ಆದ ವಿಶ್ವಕೋಶವನ್ನು ಸಿದ್ಧಪಡಿಸಿಕೊಂಡು, ತಮ್ಮ ಧರ್ಮ ಹೆಚ್ಚು ಎಂದು ಮೆರೆಯುವುದು ಸರಿಯಲ್ಲ. ಮಾನವನಿಗೆ ಸಾವಿಗಿಂತ ಬದುಕು ಹೆಚ್ಚು ಬೆಲೆ ಬಾಳುವಂಥದ್ದಾಗಿದ್ದು, ಅದನ್ನು

ಧರ್ಮ, ಜಾತಿ, ಮತ ಮಂದಿರಗಳಿಂದ ದೂರ ವಿಟ್ಟು ಬದುಕನ್ನು ಸಾರ್ಥಕ ಮಾಡಿಕೊಳ್ಳ ಬೇಕೆಂದು ಶಂಬಾರವರು ಕರೆ ಇತ್ತಿದ್ದಾರೆ.

''ಸಾಹಿತ್ಯ , ಜೀವನ ಮತ್ತು ಸಂಸ್ಕೃತಿ'' ೪೨ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷಸ್ಥಾನದಿಂದ ಶಂಬಾರವರು ಮಾಡಿದ ಭಾಷಣ. ಇಂದು ಸಾಹಿತ್ಯ ಜೀವನ ಮತ್ತು ಸಂಸ್ಕೃತಿಗಳ ನಡುವೆ ಸಂಬಂಧ ವಿಕೃತಗೊಂಡಿದೆ ಯೆಂದವರು ನೊಂದು ನುಡಿಯುತ್ತಾರೆ ಎಂದು ಶಂಬಾ ಹೇಳಿದ್ದಾರೆ. ಜೀವಿತ ಮತ್ತು ಜೀವನ ಇವುಗಳ ಮೌಲಿಕ ಭೇದ ಅರಿಯ ದಿದ್ದರೆ ಸಾಹಿತ್ಯ ಸಂಸ್ಕೃತಿಗಳ ನಿಜವಾದ ಅರ್ಥ ತಿಳಿಯಲು ಅಸಾಧ್ಯ.

''ಒಡಪುಗಳ ಅಭ್ಯಾಸ'' ಕೆಲವೊಂದು ಜನ ಪೋಷಕರು ತಮ್ಮ ಮಕ್ಕಳು ಪ್ರಬಂಧಗಳನ್ನು ಬರೆಯಲು ಶಕ್ತರೇ ಎಂದು ಗೊಣಗಾಡು ವುದನ್ನು ಕಂಡು ಮಕ್ಕಳಿಗೆ ಬಾಲ್ಯದಲ್ಲಿಯೇ ಒಡಪುಗಳ ಅಭ್ಯಾಸ ಮಾಡಿಸಬೇಕೆಂಬುದು ಲೇಖಕರ ಅಭಿಮತ. ಒಡಪುಗಳು ಮಕ್ಕಳ ಮನಸ್ಸನ್ನು ಸೆಳೆಯುವ ಶಕ್ತಿ ಹೊಂದಿದ್ದು ಇದರಿಂದ ಅವರ ಬುದ್ಧಿ ವಿಕಾಸವಾಗುತ್ತ ದೆಂದು ಹೇಳಿದ್ದಾರೆ.ಶಂಬಾರವರು ಶರಣರು ಮತ್ತು ದಾಸರ ವಚನ, ಹಾಡುಗಳಲ್ಲಿ ಒಡಪುಗಳ ಇರುವಿಕೆಯನ್ನು ಸ್ಪಷ್ಟಪಡಿಸಿ ಅಭಿನವ ಪಂಪ ಮತ್ತು ಕಂತಿಯರ ನಡುವೆ ಒಡಪುಗಳ ಸ್ಪರ್ಧೆ ನಡೆಯುತ್ತಿತ್ತು ಎಂದಿ ದ್ದಾರೆ. ಆಧುನಿಕ ಕಾಲದಲ್ಲಿ ಒಡಪುಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತಿವೆ ಎನ್ನುವವರಿಗೆ ಶಂಬಾರವರು ಆಧುನಿಕ ಕಾಲಕ್ಕೆ ತಕ್ಕಂತೆ ಒಡಪುಗಳು ಸೃಷ್ಟಿ ಆಗುತ್ತಿವೆ ಎಂದು ಉತ್ತರ ನೀಡಿದ್ದಾರೆ.

''ಕರ್ಣನ ಮೂರು ಚಿತ್ರಗಳು'' ಕುಮಾರ ವ್ಯಾಸ ಭಾರತ''ದಲ್ಲಿ ಬರುವ ಕರ್ಣನ ಪಾತ್ರವನ್ನು ಆಧಾರವಾಗಿಟ್ಟುಕೊಂಡು ಶಂಬಾ ರವರು ಪಂಪ ಭಾರತ, ವ್ಯಾಸ ಭಾರತದ ಕರ್ಣರನ್ನು ತೌಲನಿಕವಾಗಿ ವಿವೇಚಿಸಿದ್ದಾರೆ. ಕರ್ಣ ತನ್ನ ದೊರೆಯಾದ ಸುಯೋಧನನಿಗೆ ಮೋಸ ಮಾಡಿದ್ದಾನೆಂದು ಶಂಬಾರವರ ಅಭಿಪ್ರಾಯವನ್ನು ಒಪ್ಪಲಾಗದು.

''ಬೇಂದ್ರೆಯವರ ತಪಸ್ಸು'' ಲೇಖನದಲ್ಲಿ ಬೇಂದ್ರೆಯವರ ಜೀವನ ವಿಚಾರಗಳನ್ನು ವಿವೇಚಿಸಿದ್ದಾರೆ.

'ತತ್ವಜ್ಞಾನ'ದಲ್ಲಿ ಬರುವ ಮೊದಲ ಲೇಖನ 'ಮಾನವನ ವಿಚಾರ' ಎಂಬುದು. ಜಗತ್ತಿನ ಜೀವ ರಾಶಿಗಳ ಬಗ್ಗೆ ಅಧ್ಯಯನ ಮಾಡಿದ ಮಾನವ ಇಂದು ಅಧ್ಯಯನದ ವಸ್ತುವಾಗಿರು ವುದು ತೀರ ವಿಪರ್ಯಾಸಕರ. ಸಂಸಾರ ಎಂಬುದು ಒಂದು ರಂಗಸ್ಥಳ. ಅಲ್ಲಿ ಮಾನವ ನಾಲ್ಕಾರು ದಿನಗಳು ಮಾತ್ರ ಕುಣಿತ ಮಾಡುತ್ತಾನೆ. ನಿನ್ನೆ ಬಿತ್ತಿದ ಬೆಳೆ ನಮ್ಮ ಇಂದಿನ ಅನ್ನ, ಅದನ್ನು ತಿನ್ನುವುದು ದೈವಲಿಖಿತವಾಗಿದೆ ಎಂದಿದ್ದಾರೆ, ಲೇಖನಕಾರರು. .

''ಸಾಂಸಾರಿಕ ಹಾಗೂ ಸಾಮರಸ್ಯಕ್ಕಾಗಿ ಮಂತ್ರ'' ಲೇಖನದಲ್ಲಿ ಮಾನವನ ಜೀವನದ ಅವಿಭಾಜ್ಯ ಅಂಗವಾಗಿ ಸ್ಪರ್ಧೆ, ಈರ್ಷೆ, ಭಿನ್ನ ದೃಷ್ಟಿಗಳು ಬೆಳೆದು ಬಂದಿದ್ದು ಇವುಗಳಿಂದ ಸಾಮಾಜಿಕ ಸಾಮರಸ್ಯ ಹಾಳಾಗಿ ಅಶಾಂತಿ ತಲೆದೋರುತ್ತದೆಂಬುದು ಶಂಬಾರವರ ಅಭಿಪ್ರಾಯ. ಇಂತಹ ಸಂದರ್ಭದಲ್ಲಿ ಸ್ನೇಹ, ಪ್ರೀತಿ, ಶಾಂತಿ ಪಾಠಗಳ ಅವಶ್ಯಕತೆ ಇದ್ದು, ಸಾಂಸಾರಿಕ ಹಾಗೂ ಸಾಮರಸ್ಯಕ್ಕಾಗಿ ಪ್ರಯತ್ನ ಮಾಡಬೇಕೆಂದಿದ್ದಾರೆ.

''ತತ್ವದ ಹಾದಿಗಳು'' ಲೇಖನದಲ್ಲಿ ಶಂಬಾರವರು ತತ್ವಜ್ಞಾನವೆಂದರೇನು? ಅದರ ಮೂಲ, ವ್ಯಾಪ್ತಿ ಇತ್ಯಾದಿಗಳನ್ನು ಏಳು ಅಧ್ಯಾಯಗಳಲ್ಲಿ ದೀರ್ಘ ವಿವರಣೆಯನ್ನು ನೀಡಿದ್ದಾರೆ. ವಾಸ್ತವ-ಅವಾಸ್ತವ. ತತ್ವಜ್ಞಾನದ ಶಾಕ್ತಪಂಥ, ಪ್ರಕೃತಿವಾದ ಅದರ ವಿಚಾರ ಸರಣಿ, ಪ್ರಕೃತಿವಾದದ ನೀತಿ ಪದ್ಧತಿ ಮತ್ತು ಅದರ ವಿಮರ್ಶೆ, ತತ್ವಜ್ಞಾನವನ್ನು ಕುರಿತು

ಇತ್ತೀಚಿನ ದೃಷ್ಟಿಕೋನಗಳ ಬಗ್ಗೆ ಕೂಲಂಕುಷವಾದ ಚರ್ಚೆ ನಡೆಸಿದ್ದಾರೆ. ಈ ಎಲ್ಲ ಅಂಶಗಳಿಂದ ನಮಗೆ ತಿಳಿದು ಬರುವ ವಿಚಾರವೇನೆಂದರೆ ಮಾನವನ ಕೈಮೀರಿದ ಶಕ್ತಿಯೊಂದಿದೆ, ಆ ಶಕ್ತಿಯನ್ನು ಮೀರಲು ಮಾನವನಿಂದ ಸಾಧ್ಯವಿಲ್ಲ ಎಂಬುದು.

''ಸಿದ್ಧರು ಮತ್ತು ನಾಥರು'' ಲೇಖನದಲ್ಲಿ ಶಂಬಾರವರು ಗುರುವಿನ ಸ್ಥಾನಮಾನವನ್ನು ಎತ್ತಿ ಹಿಡಿಯುತ್ತಾ ಆತ್ಮಸಿದ್ಧಿ ಅವರಿಗೆ ಲಭಿಸಿತ್ತೆಂದಿದ್ದಾರೆ. ವೇದಗಳಲ್ಲಿ ಪ್ರಾಚೀನ ಪುರಾತನ ಗ್ರಂಥಗಳಲ್ಲಿ ಕಂಡುಬರುವ ವಿಚಾರಗಳ ಮೂಲಕ ದೈವತ್ವದ ಕಲ್ಪನೆ ಬಗ್ಗೆ ಬೆಳಕನ್ನು ಚೆಲ್ಲುತ್ತಾ ಬುದ್ಧನಿಗೂ ಕೂಡ ದೇವರಲ್ಲಿ ಶ್ರದ್ಧೆ ಇತ್ತೆಂದು ಹೇಳಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಸಮಾಜಶಾಸ್ತ್ರದ ದೃಷ್ಟಿಯಿಂದ ನೋಡುವುದು ಅತ್ಯಾವಶ್ಯಕವಾಗಿದೆ.

ಡಾ. ಮಲ್ಲೇಪುರಂ ಜಿ. ವೆಂಕಟೇಶ ಅವರು ಚದುರಿ ಹೋಗಿದ್ದ, ಅಜ್ಞಾತವಾಗಿದ್ದ ಶಂಬಾರವರ ಅನೇಕ ಲೇಖನಗಳನ್ನು ಒಟ್ಟುಗೂಡಿಸಿ, ಮುಖ್ಯವಾದವುಗಳನ್ನು ಆರಿಸಿ, ಆಯ್ದ ಲೇಖನಗಳ ಗ್ರಂಥವನ್ನು ಪ್ರಕಟಿಸಿದ್ದಾರೆ. ಇದು ಸ್ವಾಗತಾರ್ಹ ಮತ್ತು ಪ್ರಶಂಸನೀಯವಾದ ಕೆಲಸವಾಗಿದೆ. ವೆಂಕಟೇಶ ಅವರು ಶಂಬಾರವರ ಬಗ್ಗೆ ತಮ್ಮ ಕೃತಿ ಪ್ರವೇಶದಲ್ಲಿ ಬರೆಯುತ್ತಾ ''ಶಂಬಾ ತಮ್ಮ ಜೀವನದ ಕೊನೆ ಕೊನೆಯವರೆಗೂ ಕನ್ನಡನಾಡು -ನುಡಿ ಚಿಂತನೆಯಲ್ಲೇ ಮುಳುಗಿದ್ದರು. ತಮ್ಮ ವೈಯಕ್ತಿಕ ನೆಲೆ-ಬೆಲೆಗೆ ಪ್ರಾಧಾನ್ಯ ಕೊಡದೆ ಸಮಷ್ಟಿ ಜೀವನದ ನೆಲೆ ಬೆಲೆಯನ್ನು ನಡದೇ ನಡೆದರು. ಆಚಾರ-ವಿಚಾರ ಎರಡರಲ್ಲೂ ಅಂತರವಿರದೆ ಬಾಳುವ ಪ್ರಯತ್ನದ ಕಡೆ ದೃಢವಾಗಿ ಹೆಜ್ಜೆಯನ್ನು ಹಾಕಿದರು. ಶಂಬಾ ಅವರು ದಿನಾಂಕ ೨೮.೯.೯೧ರಂದು ವೈವಸ್ವತ ಮನು ಮಾನವನಲ್ಲಿ ಸೇರಿಕೊಂಡರು. ತಮ್ಮ ಉಸಿರಿನ ಕೊನೆಯವರೆಗೂ ನಂಬಿಕೊಂಡು ಬಂದಿದ್ದ 'ಅಮಾನವರಾಗದೆ ಮಾನವರಾಗಿ' ಎನ್ನುವ ಮಾತು ಅವರ ಬದುಕಿಗೆ ಅತ್ಯಂತ ಸಾರ್ಥಕವಾದ 'ರೂಪಕ' ವಾಗಿ ಕಾಣುತ್ತದೆ''

ವೆಂಕಟೇಶ. ಎಂ.
ವಿವೇಕಾನಂದ ಸಂಯುಕ್ತ
ಪದವಿ ಪೂರ್ವ ಕಾಲೇಜು,
ಜಯಲಕ್ಷ್ಮೀಪುರ, ಮೈಸೂರು-೫೭೦ ೦೧



...ರ್ಯಕಾರಿ ಸಮಿತಿ ಸದಸ್ಯರುಗಳು :

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ|| ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

ಸಂಪಾದಕೀಯ ಸಂಕಲನ
(ಬೆಲೆ : ರೂ. ೫೦–೦೦)

ನಾಡಿನ ಖ್ಯಾತ ಕಲಾವಿದರಾದ ದಿ|| ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್‌ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:
ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬
ದೂರವಾಣಿ : 511875

Licence No 21, Reg. No. KA/SK/Mys–56
Licenced to Post with payment at Mysore, R. M. S/II





71 ಶ್ರೀ ಚಂದ್ರಶೇಖರ
ನಂ. 1 ಮಹೇಶ್ವರಮ್ಮ
ಗುಡಿರಸ್ತೆ, ಮುನಿರೆಡ್ಡಿ ಪಾಳ್ಯ
ಜೆ. ಸಿ. ನಗರ, ಬೆಂಗಳೂರು–560006

If undelivered please return to:
CHIEF EDITOR
KARNATAKA STATE ADULT EDUCATION COUNCIL
5/1, Vinoba Road, P.B. No. 15
Manasagangothri Campus, Mysore-570 006
Phone: 511875